ಉಷಾ ನವರತ್ನರಾಮ್ ಅವರ

ಮೈ ನವಿರೇಳಿಸುವ ವಿನೂತನ ಬಗೆಯ ಕಾದಂಬರಿ

# ಮನವೆಂಬ ಮರ್ಕಟ

# ಮನವೆಂಬ ಮರ್ಕಟ

( ಕಾದಂಬರಿ )

ಉಷಾ ನವರತ್ನರಾವ್

ಹಂಸಧ್ವನಿ ಪ್ರಕಾಶನ

ರಾಜಾಜಿನಗರ, ಬೆಂಗಳೂರು-೧೦

MANAVEMBHA MARKATA a novel by Smt. Usha Navarathnaram. Published by S. Rangaswamy far Hamsa Dhwani Prakashana 599 6th Block, Rajajinagar Bangalore-560010.

Ph : 352363

First Edition : 1989

ಪ್ರಥಮ ಮುದ್ರಣ : 1989

ಹಕ್ಕು : ಲೇಖಕಿಯದು

**ಮುದ್ರಣ :**

**ಜೈಗೌರಿ ಮುದ್ರಣಾಲಯ**

ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ,

ಬಸವೇಶ್ವರನಗರ, ೨ನೇ ಹಂತ (ಪಾಪಣ್ಣನ ತೋಟ)

**ಬೆಂಗಳೂರು-೫೬೦೦೭೯.**

# ನಮ್ಮ ಮಾತು

ಹೊಸ ವರ್ಷದ ಶುಭಾಶಯಗಳೊಂದಿಗೆ ಶ್ರೀಮತಿ ಉಷಾ ನವರತ್ನರಾಮ್ ಅವರ ಮತ್ತೊಂದು ವಿನೂತನ ಬಗೆಯ ಸಾಮಾಜಿಕ ಕಾದಂಬರಿಯನ್ನು ಓದುಗರಿಗೆ ನೀಡುತ್ತಿದ್ದೇವೆ. ರೋಮಾಂಚಕಾರಿ ಘಟನೆಗಳೊಂದಿಗೆ ವೈನವಿರೇಳಿಸುವ ಕಥೆಯನ್ನು ಹೊಂದಿರುವ ಶ್ರೀಮತಿ ಉಷಾ ನವರತ್ನರಾಮ್ ಅವರ 'ಮನವೆಂಬ ಮರ್ಕಟ' ನಮ್ಮ ನೆಚ್ಚಿನ ಓದುಗರಿಗೆ ಮೆಚ್ಚಿಗೆಯಾದೀತೆಂದು ನಂಬಿದ್ದೇವೆ.

ಈ ಕಾದಂಬರಿಯನ್ನು ನಮ್ಮ 'ಹಂಸಧ್ವನಿ ಪ್ರಕಾಶನ' ದ ಮೂಲಕ ಪ್ರಕಟಿಸಲು ಅವಕಾಶ ಮಾಡಿಕೊಟ್ಟ ಲೇಖಕಿಗೆ ನಮ್ಮ ವಂದನೆಗಳು.

ಶ್ರೀ ನವರತ್ನರಾಮ್ ಅವರ ಪ್ರೋತ್ಸಾಹವನ್ನು ಮರೆಯುವಂತಿಲ್ಲ.

— ಪ್ರಕಾಶಕರು.

## : ನಮ್ಮ ಪ್ರಕಟಣೆಗಳು :

## ಶ್ರೀಮತಿ ಉಷಾ ನವರತ್ನರಾವ್ ಅವರ

1. ಕೊನೆಯ ರಾತ್ರಿ
2. ಇರುಳು ಹಗಲು
3. ವಧು ಬೇಕಾಗಿದೆ
4. ಪೇಯಿಂಗ್ ಗೆಸ್ಟ್
5. ನನ್ನ ಮರಿ ! ಮುದ್ದುಮರಿ ! !
6. ಸೌಂದರ್ಯ ಸಂಕಿರಣ
7. ಹರಿದ ಹೊನಲು
8. ತನುವು ನಿನ್ನದು ಮನವು ನಿನ್ನದು
9. ಹರಸು ಬಾ ನನ್ನನು
10. ಅತಿಕ್ರಮಣ
11. ಹೊಟ್ಟೆಗಾಗಿ ಗೇಣುಬಟ್ಟೆಗಾಗಿ
12. ಮನವೆಂಬ ಮರ್ಕಟ
13. ಕಳೆದುಹೋದುದು

ಮುಂದೆ :

ಮಾತೃದೇವೋಭವ
ಸುಲಗ್ನಾ ಸಾವಧಾನ
ಸೌಂದರ್ಯ ಸಂಕಿರಣ 2
ಸಾವಿರ ಸುಳ್ಳು

# ಮನವೆಂಬ ಮರ್ಕಟ

# ಮನವೆಂಬ ಮರ್ಕಟ

ವರದಾಚಾರಿಯು ಮನೆಬಿಟ್ಟು ಹೊರಟಾಗ ಮುಸ್ಸಂಜೆಯ ಮಸುಗತ್ತಲಾಗಿತ್ತು. ಆದೇ ತಾನೆ ರಸ್ತೆಯ ಇಕ್ಕೆಲದಲ್ಲಿದ್ದ ದೀಪಗಳು ಹೊತ್ತಿಕೊಂಡಿದ್ದವು. ಕೆಲಸದಿಂದ ಮರಳಿದ್ದ ಮನೆಯ ಗಂಡಸರು ಸಧ್ಯಕ್ಕೆ ಹೊರಬರುವಂತಿರಲಿಲ್ಲವೆಂದು ಅವನಿಗೆ ಗೊತ್ತಿತ್ತು. ಮನೆ ಸೇರಿ ಹೆಂಡತಿ ಮಕ್ಕಳೊಂದಿಗೆ ಒಂದಿಷ್ಟು ಸಮಯ ಕಳೆದು ಹೊಟ್ಟೆಗೇನಾದರೂ ತುಂಬಿಸಿ ಕೊಂಡೇ ಅವರೆಲ್ಲ ಹೊರಬರುವರೆಂದು ಅವನಿಗೆ ಮನವರಿಕೆಯಾಗಿತ್ತು. ವರದಾಚಾರಿಯೆಂದರೆ ಎಲ್ಲರಿಗೂ ತಿಳಿದಿರುವುದು, ಅವನೊಬ್ಬ ಕಾರ್ಮಿಕ. ಫ್ಯಾಕ್ಟರಿಯಲ್ಲಿ ಕೆಲಸ ಮಾಡುವವನು. ಸಣ್ಣ ಮನೆಯೊಂದರಲ್ಲಿ ವಾಸಿಸುವ ಕೆಳಮಧ್ಯಮವರ್ಗದ ವ್ಯಕ್ತಿಯೆಂದೇ ಎಲ್ಲರ ಭಾವನೆ. ಈಗ ಒಂದು ತಿಂಗಳಿಂದ ಸಂಜೆ ಫ್ಯಾಕ್ಟರಿಯಿಂದ ಮರಳಿದ ನಂತರ ತಣ್ಣೀರಿನಲ್ಲಿ ಸ್ನಾನ ಮಾಡಿ ವಿಭೂತಿ ಕುಂಕುಮ ಧರಿಸಿ, ಭುಜಕ್ಕೆ ಉದ್ದನೆಯ ಚೀಲ ನೇತು ಹಾಕಿಕೊಂಡು ಎಲ್ಲಿಗೆ ಹೊರಡುವನೆಂದು ಅಕ್ಕಪಕ್ಕದವರಿಗೆಲ್ಲಾ ಕುತೂಹಲವಿದ್ದರೂ ಯಾರೂ ಅವನನ್ನು ನೇರವಾಗಿ ಪ್ರಶ್ನಿಸಿರಲಿಲ್ಲ. ಅವನು ಹೊರಟಾಗ ಬಾಗಿಲ ಹಿಂದೆ ನಿಂತೋ ಅಥವಾ ಕಿಟಕಿಗಳಲ್ಲಿ ಇಣುಕಿ ನೋಡುತ್ತಿದ್ದರಷ್ಟೆ. ಮನೆಯ ಹೆಂಗಸರು ಅವನ ಮಕ್ಕಳು ರಸ್ತೆಯಲ್ಲಿ ಆಡ ಬಂದಾಗ ಕೇಳುತ್ತಿದ್ದರು.

"ಲೋ, ರಂಗಾ, ನಿಮ್ತಂದೆ ಸಾಯಂಕಾಲ ಆದ್ಮೇಲೆ ಎಲ್ಲಿಗೆ ಹೋಗ್ತಾರೋ ?"

"ನಂಗೊತ್ತಿಲ್ಲ" ರಂಗಾಚಾರಿ ತನ್ನ ಗೆಳೆಯರೊಂದಿಗೆ ಗೋಲಿ ಆಡುವುದರಲ್ಲಿ ಆಸಕ್ತಿ ತೋರುತ್ತಿದ್ದ. ಮಗಳು ಮಾಲಕ್ಷ್ಮಿಯನ್ನು ಕೇಳಿ ತಿಳಿದುಕೊಳ್ಳಲು ಅವಳಿಗೆ ಮುಡಿಯಲು ಹೂವ್ರೋ, ತಿನ್ನಲು ತಿಂಡಿಯನ್ನೋ ಕೊಟ್ಟು ಕೇಳಿದರೆ ಅವಳೂ ಅದೇ ಉತ್ತರ ಕೊಡುತ್ತಿದ್ದಳು.

"ನಂಗೊತ್ತಿಲ್ಲ. ಅಪ್ಪಯ್ಯನ್ನ ನ್ಯಾವರೂ ಕೇಳಲಿಲ್ಲ. ಕೇಳಿದ್ರೆ ಒದೀತಾರೆ ಅಷ್ಟೆ" ಎನ್ನುತ್ತಿದ್ದಳು. ಇನ್ನು ವರದಾಚಾರಿಯ ಹೆಂಡತಿ

ಮೂಕಮ್ಮನನ್ನು ಕೇಳಿದ ಹಾಗೆಯೇ! ಅವಳು ಹೆಸರಿಗೆ ತಕ್ಕಂತೆ ಮಹಾ ಮೌನಿ. ಯಾರೊಂದಿಗೂ ಹೆಚ್ಚು ಬೆರೆಯುತ್ತಿರಲಿಲ್ಲ. ತಾನಾಯಿತು ತನ್ನ ಮನೆ ಮನೆಯ ಕೆಲಸವಾಯಿತು. ಮಕ್ಕಳೊಂದಿಗೂ ಅವಳು ಮಾತಾಡಿದ್ದನ್ನು ನೋಡುತ್ತಿದ್ದುದೇ ವಿರಳ, ಆ ಪಾರ್ವತಿಪುರ ಕಾಲೋನಿಗೆ ಅವಳು ಮೊದಲು ಬಂದಾಗ ಎಲ್ಲರೂ ಅವಳು ಮೂಕಿಯೆಂದೇ ತಿಳಿದಿದ್ದರು. ಆದರೆ ತರಕಾರಿ ಮಾರುವವರೊಂದಿಗೆ, ಹಾಲು ಮೊಸರು ಮಾರುವವರೊಂದಿಗೆ ಅವಳು ಒಂದೆರಡು ಮಾತಾಡಿದ್ದು ಕಂಡಾಗ ಅವಳು ಮೂಕಿಯಲ್ಲ ಮೌನಿಯೆಂದು ಅರಿವಾಗಿತ್ತು. ಮೂಕಮ್ಮ ನೋಡಲು ತೆಳ್ಳಗೆ-ಬೆಳ್ಳಗೆ ಲಕ್ಷಣವಾಗಿದ್ದಳು. ತಲೆತುಂಬ ಬಿರುಮುಡಿ ಹೊತ್ತ ಅವಳು ರಸ್ತೆಯ ಮೂಲೆಯಲ್ಲಿದ್ದ ನಲ್ಲಿಯ ನೀರಿಗೆ ಬಂದರೆ ಸಾಕು. ಆಚೆ ಈಚೆ ಮನೆಯ ಹೆಂಗಸರು ತಮ್ಮ ಮನೆಯ ಗಂಡಸರನ್ನು ರಸ್ತೆಗೆ ಹೋಗದಂತೆ ಎಚ್ಚರ ವಹಿಸುತ್ತಿದ್ದರು. ಅವಳಲ್ಲಿ ಏನೋ ಆಕರ್ಷಣೆ! ಯಾರು ಅವಳನ್ನು ನೋಡಿದರೂ ಅವಳನ್ನೇ ನೋಡುತ್ತಾ ನಿಲ್ಲಬೇಕೆಂಬ ಆಸೆಯಾಗುತ್ತಿತ್ತು. ಎಷ್ಟೋ ಬಾರಿ ಅಕ್ಕಪಕ್ಕದ ಮನೆಯವರು ಅವಳನ್ನು ತಮ್ಮ ಮನೆ ಗಂಡಸರು ಎಲ್ಲಿ ನೋಡಿ ಮೋಡಿಗೆ ಸಿಕ್ಕಿಹಾಕಿ ಕೊಳ್ಳುವರೋ ಎಂಬ ಭಯವಿತ್ತು!

"ಅವ್ಳು ಗರತೀನೇ! ಒಬ್ಬರತ್ತ ಕಣ್ಣೆತ್ತಿ ನೋಡೋಲ್ಲ. ಆದ್ರೆ ಈ ಗಂಡಸರ ನಾಯಿ ಬುದ್ಧಿ ಹೇಗ್ರಿ ನಂಬೋದೂ? ಯಾಕಾದ್ರೂ ಈ ವರದಾಚಾರಿ ನಮ್ಮ ಕಾಲೋನಿಗೆ ಬಂದನೋ! ಅವ್ನೂ ವಿಚಿತ್ರವಾದ ಮನುಷ್ಯನೇ! ಅವನೆಲ್ಲಿಗೆ ಹೋಗ್ತಾನೆ. ಏನ್ಮಾಡ್ತಾನೆ ಗೊತ್ತಾಗೋಲ್ಲ. ಕಾಲೋನಿಗೇ ಬಾಯಿಯಂತಿದ್ದ ಪುಟ್ಟಮ್ಮ ಹೇಳಿದಾಗ ಮಿಕ್ಕ ಹೆಂಗಸರೂ ಅವಳ ಮಾತು ಒಪ್ಪಿದ್ದರು. ಅವ್ನು ವಾಮಾಚಾರಿಯಂತ್ರೀ, ಅವನ್ಗೆ ಮಾಟ ಮಾಡೋಕ್ಕೇ, ತೆಗೆಯೋಕ್ಕೆ ಬರುತಂತ್ರೀ, ದೆವ್ವ ಬಿಡಿಸೋದು, ಭೂತ ಚೇಷ್ಟೆ ನಿಲ್ಲಿಸೋದು ಎಲ್ಲಾ ಮಾಡ್ತಾನಂತೆ" ಪುಟ್ಟಮ್ಮ ಹೇಳಿದಾಗ ಎಲ್ಲರ ಕಿವಿ ನಿಮಿರಿ ನಿಂತಿತ್ತು.

"ಅವ್ನು ಇಲ್ಲಿ ಮನೇಲೇನೂ ಮಾಡೊಲ್ವಂತೆ. ಅಲ್ಲಿ ಆ ದೊಡ್ಡ ಮೋರಿ ಆಚೆಗಿರೋ ಗುಡ್ಡದಲ್ಲಿರೋ ಮಂಟಪದಲ್ಲಿ ಕೂತ್ಕೊಂಡು ಪೂಜೆ ಮಾಡ್ತಾನಂತೆ. ಯಾರು ಹೇಳಿ ಕಳಿಸ್ತಾರೋ ಅವರ ಮನೆಗೆ ಹೋಗಿ ಪೂಜೆ ಮಾಡ್ತಾನಂತೆ-"

"ಹೌದಾ ಪುಟ್ಟಮ್ಮ, ನಮ್ಮ ಮಕ್ಳು ಮರೀನ್ನ ಹುಷಾರಾಗಿ ನೋಡ್ಕೋಬೇಕ್ರಿ, ಇಂತಹ ವಾಮಾಚಾರದವ್ರು ಮಕ್ಕಳ್ನ ಎತ್ಕೊಂಡು

ಹೋಗಿ ದೇವ್ರಿಗೆ ಬಲಿ ಕೊಟ್ಬಿಡ್ತಾರಂತೆ” ಜಯಮ್ಮ ಬೆದರಿ ಹೇಳಿದ್ಳು.

“ನಾವು ಹೆಂಗಸ್ರು ಅಷ್ಟೆ ಅವನ ಕಣ್ಣಿಗೆ ಬೀಳ್ಬ್ಯಾರ್ದು ರೀ, ವಶೀಕರಣ ಗೊತ್ತಿರೋರು ಹೆಂಗಸ್ರ್ನ ಬುಗುರಿ ಆಡಸ್ದಂಗೆ ಆಡಿಸಿಬಿಡ್ತಾರಂತೆ, ನಮ್ಮಜ್ಜಿ ಹೇಳ್ತಾ ಇದ್ರು–!” ಗಿರಿಜಮ್ಮ ದನಿ ಸೇರಿಸಿದಳು.

“ಅವನ ಮನೆಯವ್ರ ತಂಟೇಗೇ ಹೋಗ್ಬ್ಯಾರ್ದು. ಆಮೇಲೆ ಕೋಪ್ದಲ್ಲಿ ನಮ್ಗೆಲ್ಲಾ ಮಾಟಾಗೀಟಾ ಮಾಡಿಸ್ಬಿಟ್ಟಾನೂ.” ಕಾಮಾಕ್ಷಮ್ಮ ಹೇಳಿದ್ಳು.

ಹೀಗೆ ಎಲ್ಲರ ಕುತೂಹಲ ಕೆರಳಿಸಿದ್ದ ವರದಾಚಾರಿ ಮಾತ್ರ ಎಂದಿನಂತೆ ಸ್ಥಿತಪ್ರಜ್ಞನಾಗಿದ್ದ. ಶಿಲೆಯಲ್ಲಿ ಕಡೆದಂತಿದ್ದ ಅವನ ಮಿರಮಿರನೆ ಮಿಂಚುವ ಮುಖದಲ್ಲಿ ಉಜ್ವಲವಾದ ಕಿಡಿಗಣ್ಣುಗಳು, ನೇರವಾದ ಮೂಗು, ತೆಳುತುಟಿಗಳಿದ್ದ ದೊಡ್ಡ ಬಾಯಿ, ತುಟಿಬಿರಿದರೆ ಫಳಚ್ಚನೇ ಹೊಳೆಯುವ ಹಲ್ಲುಗಳು, ಕೂಡು ಹುಬ್ಬಿನ ಮಧ್ಯವಿರುತ್ತಿದ್ದ ಕುಂಕುಮ, ಮೇಲ್ತುಟಿಯನ್ನು ಆವರಿಸಿ, ಕಿವಿಗಳ ಹಿಂದೆ ಹರಡಿಕೊಂಡು ಭುಜದವರೆಗಿದ್ದ ಗುಂಗುರು ಕೂದಲು, ಕಿವಿಗಳಲ್ಲಿದ್ದ ಬಿಳಿಯ ಹರಳಿನ ಕಡುಕೆಗಳು, ಕತ್ತಿನಲ್ಲಿದ್ದ ಬೆಳ್ಳಿಯಲ್ಲಿ ಸುತ್ತಿದ್ದ ತುಳಸೀಮಾಲೆ, ಅದಕ್ಕೆ ಇದ್ದ ದೊಡ್ಡ ತಾಯಿತ. ಹುರಿಮೀಸೆಯೊಂದಿಗೆ ಒಮ್ಮೆ ತಿಂಗಳು ಗಟ್ಟಲೆ ಬಿಡುತ್ತಿದ್ದ ಗಡ್ಡ ! ಕಾಲೋನಿಗೆ ಬಂದು ಒಂದು ವರ್ಷದ ಮೇಲಾದರೂ ಅವನ ಬಗ್ಗೆ ಯಾರಿಗೂ ಏನೂ ಸ್ಪಷ್ಟವಾಗಿ ತಿಳಿದಿರಲಿಲ್ಲ.

ವರದಾಚಾರಿ ರಸ್ತೆ ದಾಟಿ ಚೌಕಕ್ಕೆ ಬಂದು, ಸಣ್ಣ ಮಾರ್ಕೆಟ್ಟಿಗೆ ಬಂದ, ಐದಾರು ಬಗೆಯ ಹೂವು ಕೊಂಡುಕೊಂಡ. ಏಳೆಂಟು ಸಿಂಬೆ ಹಣ್ಣುಗಳನ್ನು ಕೊಂಡುಕೊಂಡ. ಅನಂತರ ಕೊಳಚೆ ನಿವಾಸಿಗಳಿದ್ದಲ್ಲಿಗೆ ಹೋಗಿ ಎರಡು ಕೋಳಿಗಳನ್ನು ಕೊಂಡು ಚೀಲಕ್ಕೆ ಸೇರಿಸಿದ. ಅಷ್ಟು ಹೊತ್ತಿಗೆ ಮುಬ್ಬುಗತ್ತಲು ಕರಗಿ ಕತ್ತಲಾಗಿತ್ತು. ಅವನು ಸರಸರನೆ ದೊಡ್ಡ ಮೋರಿಯ ಮೇಲಿದ್ದ ಸಣ್ಣ ಸೇತುವೆ ದಾಟಿ, ಗುಡ್ಡದತ್ತ ಹೆಜ್ಜೆ ಹಾಕಿದ ಹಾಳು ಮಂಟಪಕ್ಕೆ ಬಂದು ಉತ್ತರಾಭಿಮುಖನಾಗಿ ಕುಳಿತು ತನ್ನ ಚೀಲ ತೆಗೆದು ಕೆಳಗಿಟ್ಟು ಸುತ್ತಲೂ ನೋಡಿದ. ಎಲ್ಲಾ ಚಿರಮೌನ ! ಹಾಕಿಕೊಂಡಿದ್ದ ಷರಟು, ತೊಟ್ಟಿದ್ದ ಪ್ಯಾಂಟು ಕಳಚಿ ದೂರ ಇಟ್ಟು ಚೀಲದಿಂದ ಕಾವೀ ಪಂಚೆಯೊಂದನ್ನು ತೆಗೆದು ಮೋಟುಗಚ್ಚೆ ಹಾಕಿ ಉಟ್ಟುಕೊಂಡ. ತಂದಿದ್ದ ಚಿಮುಣಿ ದೀಪ ಹೊತ್ತಿಸಿಕೊಂಡು ಗುಡ್ಡ ಇಳಿದು ಪಾಚಿಗಟ್ಟಿದ್ದ ಪುಷ್ಕರಣಿಯಲ್ಲಿ ಕೈಕಾಲು ತೊಳೆದುಕೊಂಡ. ಆ ನೀರನ್ನು ಮೂರು ಬಾರಿ

ತಲೆಯ ಮೇಲೆ ಪ್ರೋಕ್ಷಿಸಿಕೊಂಡು ಮತ್ತೆ ಗುಡ್ಡ ಏರಿ ಹಾಳು ಮಂಟಪಕ್ಕೆ ಬಂದು ತಂದಿದ್ದ ಈಚಲು ಪೊರಕೆಯಲ್ಲಿ ಮಂಟಪದ ಒಂದು ಮೂಲೆಯನ್ನು ಸ್ವಚ್ಛವಾಗಿ ಗುಡಿಸಿದ. ಆ ಜಾಗದಲ್ಲಿ ಅರಸಿನ ಕುಂಕುಮದಿಂದ ಮಂಡಲ ಬರೆದ, ಚೀಲದಿಂದ ಪೂಜಾ ಸಾಮಾಗ್ರಿಗಳನ್ನು ತೆಗೆದಿಟ್ಟುಕೊಂಡ. ಕೆಂಪು ದಾಸವಾಳ, ಚೆಂಡು ಹೂವು, ಕಣಗಿಲೆಹೂವು ಇವುಗಳನ್ನು ಮಂಡಲದ ಮೂಲೆಗಳಿಗಿಟ್ಟ. ಹೆಣ್ಣು ಅಸ್ಥಿಪಂಜರದಿಂದ ತೆಗೆದುಕೊಂಡಿದ್ದ ಎದೆಗೂಡಿನ ಎರಡು ಎಲುಬುಗಳನ್ನೂ ಪೃಷ್ಠ ಪ್ರದೇಶದಿಂದ ತೆಗೆದು ತಂದಿದ್ದ ಎರಡು ಮೂಳೆಗಳನ್ನೂ ಆಕಾರದಲ್ಲಿಟ್ಟು ಅವುಗಳಿಗೆ ಅರಿಸಿನ-ಕುಂಕುಮ, ಹೂವು ಇಟ್ಟು ಪೂಜೆ ಮಾಡಿದ. ಬಾಯಿಯಲ್ಲಿ ಮಣ ಮಂತ್ರ ಬರುತ್ತಿದ್ದರೂ ಅವನ ಗಮನವೆಲ್ಲಾ ಮಂಡಲದ ಮೇಲೇ ಕೇಂದ್ರೀಕೃತವಾಗಿತ್ತು. ಪೂಜಾ ಸಾಮಾಗ್ರಿಗಳನ್ನೆಲ್ಲಾ ವಿಧಿವತ್ತಾಗಿ ಮಂಡಲಕ್ಕೆ ಪೂಜೆ ಸಲ್ಲಿಸಿ ಕೋಳಿಯೊಂದನ್ನು ತೆಗೆದು ಮಂಡಲಕ್ಕೆ ಮೂಲೆಗಳಿಗೆ ನಿವಾಳಿಸಿ ಚಾಕುವಿನಿಂದ ಅದರ ಕತ್ತನ್ನು ಕತ್ತರಿಸಿ ಒಸರುತ್ತಿದ್ದ ರಕ್ತವನ್ನು ಮೂಳೆಗಳ ಮೇಲೆ ಚೆಲ್ಲಿ ರುಂಡ-ಮುಂಡ ಬೇರೆ ಮಾಡಿ ಕೋಳಿಯನ್ನತ್ತ ಎಸೆದ. ಬಸರಿ ಮರದಿಂದ ಮಾಡಿದ್ದ ಹೆಣ್ಣು ಬೊಂಬೆಯೊಂದನ್ನು ಕೈಗೆತ್ತಿಕೊಂಡ. ಸಂಗ್ರಹಿಸಿದ್ದ ಹೆಣ್ಣಿನ ಋತುಸ್ರಾವದ ಬಟ್ಟೆ ತುಂಡನ್ನು ಆ ಬೊಂಬೆಗೆ ಕಟ್ಟಿದ, ಗೇರು ಬೀಜದಲ್ಲಿ ಚುಚ್ಚಿದ್ದ ದೊಡ್ಡ ಸೂಜಿಯನ್ನು ತೆಗೆದುಕೊಂಡ. ಬೊಂಬೆಯನ್ನು ಮಂಡಲದ ಮಧ್ಯ ಇಟ್ಟು ಅದರ ಹೊಟ್ಟೆಗೆ ಗೇರು ಬೀಜದಲ್ಲಿದ್ದ ಸೂಜಿಯಿಂದ ಚುಚ್ಚಿದ. ಮತ್ತೊಂದು ಕೋಳಿಯನ್ನು ಕೊಂದು ಅದರ ರಕ್ತವನ್ನು ಬೊಂಬೆಗೆ ನಿವಾಳಿಸಿ ಅತ್ತ ಎಸೆದ. ದೂರದ ಮರದಲ್ಲಿದ್ದ ಪಕ್ಷಿಗಳು ಇದ್ದಕ್ಕಿದ್ದಂತೆ ಎಚ್ಚೆತ್ತು, ರೆಕ್ಕೆಗಳನ್ನು ಬಡಿಯುತ್ತಾ ಚೀರಾಡತೊಡಗಿದವು. ವರದಾಚಾರಿ ಎದ್ದು ನಿಂತು ಮಂಡಲವನ್ನು ಸುತ್ತಿ ಬಂದು ವಿಜಯೋತ್ಸಾಹದಿಂದ ಆವರಿಸಿದ್ದ ಕತ್ತಲತ್ತ ನೋಡಿ ಉರಿಯುತ್ತಿದ್ದ ಚಿಮಣಿ ಆರಿಸಿದ.

* * * *

ಪಾಂಡುರಂಗಯ್ಯನ ಮನೆಯಲ್ಲಿ ಮಕ್ಕಳೆಲ್ಲಾ ಮಲಗಿ ನಿದ್ರಿಸುತ್ತಿದ್ದರು, ತಾಯಿ ಚಿಕ್ಕಮ್ಮ, ಅಜ್ಜಿ ದೇವಮ್ಮ ಇಬ್ಬರೂ ತೂಕಡಿಸುತ್ತಿದ್ದರು. ಮನೆಯಲ್ಲಿನ ಎಲ್ಲಾ ಕೆಲಸ ಮುಗಿಸಿ, ಅಡಿಗೆ ಮನೆಯನ್ನು ತೊಳೆದು ಒರೆಸಿ ಮುಸುರೆ

ಹೊರಗೆ ಹಾಕಿ, ಸೆರಗಿನಂಚಿನಿಂದ ಬೆವೆತುಹೋಗಿದ್ದ ಮುಖ ಕತ್ತು ಒರೆಸಿಕೊಂಡು ಪಂಚಪಾತ್ರೆಯಲ್ಲಿದ್ದ ತಣ್ಣಗಿನ ನೀರು ಕುಡಿದು ಗಂಗೆ ಎದ್ದು ನಿಂತಳು. ಹೊಟ್ಟೆಯಲ್ಲಿದ್ದ ಮಗು ಹೊರಳಾಡದ ತಾಯಿತು. ಒಡಲು ತುಂಬಿದ್ದರು ಹೊಟ್ಟೆ ತುಂಬಾ ಊಟವಿಲ್ಲದ ಅವಳಿಗೆ ಮೈಮುರಿಯುವಷ್ಟು ದಿನತುಂಬಿದ ಬಸುರಿಯಾದರೂ ವಿಶ್ರಾಂತಿಯಿಲ್ಲದ ದುಡಿಮೆ. ದುಡಿಮೆ ಸಾಲದ್ದಕ್ಕೆ ಅತ್ತೆ, ಅತ್ತೆಯ ತಾಯಿ ಇಬ್ಬರ ಕೈಯ್ಯಲ್ಲೂ ಮಾತು ಮಾತಿಗೆ ಛೀಮಾರಿ ಬೈಗುಳ! ಅವರಿಂದ ಚಾಡಿಮಾತು ಕೇಳಿ ಗಂಡನಿಂದ ಹೊಡೆತ ತಿಂದು ಸಾಕಾಗಿಹೋಗಿತ್ತು. ಹಡೆದಿದ್ದ ಎರಡು ಮಕ್ಕಳಿಗೂ ಪ್ರೀತಿ ಆದರಗಳಿಲ್ಲದೇ ಮೈ ತುಂಬಾ ಬಟ್ಟೆ, ಹೊಟ್ಟೆ ತುಂಬಾ ಊಟವಿಲ್ಲದೇ ಸೊರಗಿಹೋಗಿರುವಾಗ ಈ ಮೂರನೆಯದು ತನಗೇಕೆ ಬೇಕಿತ್ತು? ಹೊಡೆದು ಬಡಿದರೂ, ತನ್ನ ಮೇಲೆ ಪ್ರೀತಿ ಪ್ರೇಮವಿಲ್ಲದಿದ್ದರೂ ತನ್ನ ಗಂಡನಿಗೆ ತನ್ನ ಬಯಕೆ ತೀರಿಸಿಕೊಳ್ಳಲು ತಾನೊಂದು ಬಲಿಪಶು ಮಾತ್ರ!

"ಎರಡು ಹೆಣ್ಣು ಹೆತ್ಬಿಟ್ಲು, ಈ ಮನೆ ತೊಳೆದು ಸಾರಿಸೋಕ್ಕೆ ತಂದಿದ್ದೀ ನೋಡು ಸೇರು ಸೇರು ಬಂಗಾರಾ, ಬೆಳ್ಳಿ ತವರ್ನಿಂದ! ನಾವು ಕೇಳಿದ ಹತ್ತು ಸಾವಿರ ಕೊಡೋಕ್ಕೆ ಯೋಗ್ಯತೆಯಿಲ್ಲ ನಿಮ್ಮಪ್ಪನಿಗೆ ಕಳಿಸಿಕೊಡಿ ಮಗಳ್ನ. ಅಂತಾ ಕೇಳೋಕ್ಕೆ ಬರ್ತಾನೆ ಮರ್ಯಾದೆಗೆಟ್ಟವರು. ಪಾಪಾ ಗಂಗೆ ತುಂಬಾ ತೆವೆದುಹೋಗಿದ್ದಾಳೆ. ಆರೈಕೆ ಸಾಲ್ದೂಂತಾ ನಿಮ್ಮಮ್ಮ ಹೇಳ್ತಾಳೆ! ಹಡೆದಿದ್ದಾಳೆ ನೋಡು ನಿನ್ನಂತಹ ರಾಜಕುಮಾರೀನ್ನ! ನನ್ನ ಹಾಳು ಮುಖ ಯಾವಾಗ ನೋಡಿದ್ನೋ ಪಾಂಡು ಸುಮ್ಮನೆ ಹಾಳಾಗಿಹೋಯ್ತು!" ಅವಳ ಮುಖಕ್ಕೆ ತಿವಿದು ಅತ್ತ ನೂಕುತ್ತಿದ್ದ ಅತ್ತೆಯನ್ನು ನೆನೆದಾಗ ಗಂಗೆಗೆ ಕಣ್ಣಲ್ಲಿ ನೀರು ಬರುವಂತಾಯಿತು.

"ಕೆಲ್ಸ ಇನ್ನೂ ಮುಗಿಲಿಲ್ವೇನೆ ಮೂದೇವಿ? ಅಡ್ಗೆ ಮನೇಲಿ ಕೂತ್ಕೊಂಡು ಬಚ್ಚಿಟ್ಕೊಂಡು ಏನು ಮೈಯ್ಯಾತ್ತಾ ಇದ್ದಾಳೋ ಏನೋ ಬೇಗ ಬಾರೇ ಜಿನ್ನಾಣಗಿತ್ತಿ. ಊರ ಸೂಳೆ ಹಾಗೆ ವಯ್ಯಾರ ನಡೆದ್ರೆ ಭೂಮಿ ಸವೆದುಹೋಗುತ್ತೇಂತಾ ಹೆಜ್ಜೆ ಇಟ್ಕೊಂಡು ಮನೇಲಿ ಓಡಾಡಿದ ಮನೆಲಕ್ಷ್ಮಿ ಓಡಿ ಹೋಗ್ಬಿಡ್ತಾಳೆ! ಬಾರೇ ಹೊರ್ಗೆ! ಕರೆಯೋ ಪಾಂಡು ನಿನ್ನ ಹೆಂಡ್ತೀನ್ನಾ! ನೋಡ್ಕೊಳ್ಳಿಲ್ಲಾ ಇವ್ಳು ಬೆಳಗಿನ ಜಾವದಿಂದ ರಾತ್ರಿ ಹತ್ತುಗಂಟೆವರ್ಗೂ ಅಡಿಗೇ ಮನೇಲಿ ದುಡೀತಾಳೇಂತಾ ಅಕ್ಕ ಪಕ್ಕದೋರು ಆಡ್ಕೊಳ್ಳೀಂತಾ ಈ ಆಟ ಎಲ್ಲಾ! ಈ ಸಲ ಏನಾದ್ರೂ ಗಂಡು ಹೆರಲಿಲ್ಲಾಂದ್ರೆ

ಮೈಮೇಲಿರೋದ್ನೆಲ್ಲಾ ಕಿತ್ಕೊಂಡು ಮನೆಯಿಂದ ಹೊರಗಟ್ಟಿಬಿಡು. ತಂದಿದ್ದಾಳೆ ನೋಡು ಹೇರಿ ಆಸ್ತಿ ! ಬಿಟ್ಟಿ ಊಟ ಹಾಕೋಕ್ಕೆ ಇವಳಿಗೆ, ಇದೇನು ಧರ್ಮಛತ್ರಾನೇ ?" ದೇವಮ್ಮ ಕೂಗಿದಳು.

ಗಂಗೆ ಕಣ್ಣೊರಸಿಕೊಂಡಳು. ತನಗೆ ಈ ಮನೆಗೆ ಬಂದಾಗಲಿಂದ ಒಂದು ದಿನವಾದರೂ ಹೊಟ್ಟೆ ತುಂಬ ಉಂಡಿದುಂಟೇ ? ಎಲ್ಲರೂ ತಿಂದು ಮಿಗಿಸಿದ್ದನ್ನು ತಿನ್ನಬೇಕು. ಹಾಲು, ಮೊಸರು, ತುಪ್ಪ ಎಲ್ಲಾ ಅತ್ತೆಯ ಕೈಯ್ಯಲ್ಲಿ ಮಿಕ್ಕರೆ ಉಂಟು, ಇಲ್ಲದಿದ್ದರೆ ಪಾತ್ರೆ ತಳದಲ್ಲಿದ್ದುದಕ್ಕೆ ನೀರು ಸುರಿದುಕೊಂಡು ಬಳಿದುಕೊಂಡು ಹಸಿವಿನ ಸಂಕಟ ತಾಳಲಾರದೇ ತಾನೂ ತಿನ್ನುತ್ತಿರಲಿಲ್ಲವೆ. ಬಯಕೆಯ ದಿನಗಳಲ್ಲೂ ತನಗೇನು ಬೇಕೆಂದು ಯಾರು ಕೇಳಿರಲಿಲ್ಲ, ತಾನೂ ಹೇಳಿರಲಿಲ್ಲ. ಕೈ ತುಂಬಾ ವರದಕ್ಷಿಣೆ ಕೊಡಲಿಲ್ಲವೆಂಬ ಒಂದೇ ಕಾರಣಕ್ಕಾಗಿ ತನ್ನನ್ನು ಒಮ್ಮೆಯಾದರೂ ತವರಿಗೆ ಕಳುಹಿಸಿರಲಿಲ್ಲ. ಅರೆ ಹೊಟ್ಟೆ ತಿಂದೇ ಮೊದಲ ಮಗುವನ್ನು ಹಡೆದಾಗ ಅದು ಹೆಣ್ಣೆಂದು ತಿಳಿದು ಹಿಡಿಶಾಪ ಹಾಕಿದ್ದರು. ಒಂದು ತಿಂಗಳ ಕಾಲ ಕತ್ತಲು ರೂಮಿನಲ್ಲಿ, ಹಾಕಿ, ನಾಯಿಗೆ ಹಾಕುವಂತೆ ತಟ್ಟೆಯಲ್ಲಿ ಒಂದಿಷ್ಟು ಊಟ ಹಾಕಿ ತನ್ನ ಮುಂದಿಡುತ್ತಿದ್ದರು. ಮೈಗೆ ನೀರಿಲ್ಲ, ಹಾಲು, ತುಪ್ಪ ಮೊಸರಿಲ್ಲ, ಆರೈಕೆಯಿಲ್ಲ. ನಳನಳಿಸುತ್ತಿದ್ದ ತುಂಬು ಯೌವ್ವನೆಯಾಗಿದ್ದ ತಾನು ಅರ್ಧ ಒಣಗಿಹೋಗಿರಲಿಲ್ಲವೇ ? ತಿಂಗಳು ತುಂಬುತ್ತಲೇ ಮತ್ತೆ ಪ್ರಾರಂಭವಾಗಿತ್ತು ತನ್ನ ಚಾಕರಿ.

"ಮಗೂನ ಮಲಗ್ಸಿ, ಕೆಲ್ಸ ನೋಡ್ಕೊ ಹೋಗು ! ಉಪಚಾರ ಮಾಡಿದ್ರೆ ಮಾಡಿಸ್ಕೊಳ್ಳೋಕ್ಕೇನು ! ಏನಾಗಿದೆ ! ಗಟ್ಟಿಮುಟ್ಟ್ಯಾಗಿದ್ದೀ ! ನಮಗಾದ್ರೆ ವಯಸ್ಸಾಯ್ತು ! ಮಗೂನ್ನ ನಾವು ನೋಡ್ಕೊಳ್ತೀವಿ !" ಎಂದು ತಿಂಗಳ ಬಾಣಂತಿಯಾದ ತಾನು ದುಡಿಯ ತೊಡಗಿರಲಿಲ್ಲವೇ ? ಬತ್ತಿದ ಮೈಯ್ಯಿಂದ ಮಗುವಿಗೆ ಏನು ಹಾಲೂಡುವುದು ? ಹಸಿವಿಗೆ ಮಗು ಅತ್ತಾಗಲೂ ಅವರ ಬಳಿಗೆ ಹೋಗಲು ಅತ್ತೆ ಬಿಡುತ್ತಿರಲಿಲ್ಲ. ಮೇಲೆ ಹಾಲು ಹಾಕಬೇಕೆಂದರೆ ಸಿಡಿದೇಳುತ್ತಿದ್ದರು.

ನಿಮ್ಮಪ್ಪಂಗೆ ಬರಿ, ಒಂದು ಹಸು ಕಳಿಸೂಂತಾ ! ನಾವೆಲ್ಲಾ ಮಕ್ಕಳ್ನ ಸಾಕ್ಲೇ ಇಲ್ವಾ ? ನೀನೊಬ್ಬೇ ಮಗೂನ್ನ ಸಾಕೋದು. ಮಕ್ಳು ಅಳದೇ ದೊಡ್ಡೋರು ಆಗ್ತಾರಾ ? ಅತ್ತಾಗ್ಲೆಲ್ಲಾ ಹಾಲ್ಯಾಕೆ ?" ಎಂದು ಮಗುವಿಗೆ ಅರೆ ಹೊಟ್ಟೆ ಮಾಡಿದ್ದಾಯಿತು. ಎರಡು ತಿಂಗಳು ತುಂಬುವುದಕ್ಕೆ ಮುಂಚೆ ಗಂಡ ಮಧ್ಯರಾತ್ರಿ ತನ್ನ ರೂಮಿಗೆ ಬಂದಿದ್ದ. ತಾನಿನ್ನೂ ಹಸೀ ಬಾಣಂತಿಯೆಂದು

ಆವನಿಗೆ ತಿಳಿದಿರಲಿಲ್ಲವೇ ? ಗಲಾಟೆ ಮಾಡಿದರೆ ಅತ್ತೆಗೆ ತಿಳಿದು ತನಗೇ ಕಾಟ ಜಾಸ್ತಿಯಾಗುವುದೆಂದು ಸುಮ್ಮನಾಗಿರಲಿಲ್ಲವೇ ? ದೊಡ್ಡ ಮಗುವಿಗೆ ಒಂದು ವರ್ಷ ತುಂಬುವುದರೊಳಗೆ ತನಗೆ ಎಂಟು ತಿಂಗಳಾಗಿತ್ತು. ಆಗಲೂ ದುಡಿಮೆಯೇ, ಮೊದಲನೇ ಮಗು ತಾಯಿ ತಂದೆಯಿದ್ದೂ ತಬ್ಬಲಿಯಾಗಿತ್ತು.

"ಇಷ್ಟು ಬೇಗ ಯಾಕೆ ಬೇಕಿತ್ತು ? ಮೊದಲ್ನೇದಿಕ್ಕೆ ಇನ್ನೂ ವರ್ಷ ತುಂಬಿಲ್ಲ. ಅದು ಪಾಪ ಕಂಗಾಲಾಗಿದೆ. ವಯ್ಯಾರ ಮಾಡ್ಕೊಂಡು ಬಾಣಂತಿ ಕೋಣೆ ಒಳಗೆ ಇರ್ದೇ ಗಂಡನ್ಮುಂದೆ ಓಡಾಡಿದ್ರೆ ಹೇಗೆ ! ಅವ್ನಂತೂ ಗಂಡ್ಸು, ಇವಳ್ಗೆ ಬುದ್ಧಿ ಬೇಡ್ವಾ ?" ಅದನ್ನೂ ತನ್ನ ಮೇಲೆ ಹೊರಿಸಿದ್ದರು, ಎರಡನೆಯ ದನ್ನು ಹಡೆಯುವಾಗ ತಾನು ಸತ್ತು ಬದುಕಿರಲಿಲ್ಲವೇ ?

"ಮೈಯ್ಯಲ್ಲಿ ರಕ್ತವಿಲ್ಲ, ಶಕ್ತಿಯಿಲ್ಲ, ಚೆನ್ನಾಗಿ ಆರೈಕೆ ಮಾಡ್ಕೊಂಡು ಮೈಗಟ್ಟಿ ಮಾಡ್ಕೊ, ಎರಡೇ ಸಾಕು, ಇನ್ನು ಬೇಡಾ"

ಸೂಲಗಿತ್ತಿ ಹೇಳಿದ್ದಳು.

"ಅದೆಲ್ಲಾ ನಮ್ಮ ಕೈಲಿದ್ಯಾ ಎಲ್ಲಾ ಆ ದೇವರ ಕೈಲಿದೆ !" ಅತ್ತೆ ಅಂದಿದ್ದರು. ಎರಡನೆಯದೂ ಹೆಣ್ಣಾದಾಗ ತನ್ನ ಗತಿ ಯಾರಿಗೂ ಬೇಡಾ ! ಮಗುವನ್ನು ಸಾಯಿಸದೇ ಉಳಿಸಿದ್ದೇ ಹೆಚ್ಚು ! ತನ್ನನ್ನು ಹೊರಗಟ್ಟದೇ ಉಳಿಸಿಕೊಂಡದ್ದೇ ಹೆಚ್ಚು. ಮಕ್ಕಳು ಹಸಿವಿನಿಂದ ಅಳುತ್ತಿದ್ದರೂ ಅತ್ತ ಕಿವಿಗೊಡದೇ ತಾನು ದುಡಿಯಬೇಕಿತ್ತು. ತನ್ನ ಒಡವೆ, ಒಳ್ಳೆಯ ಸೀರೆಗಳೆಲ್ಲಾ ಅತ್ತೆಯ ಪೆಟ್ಟಿಗೆ ಸೇರಿತ್ತು. ಕೈಯಲ್ಲಿ ಕಾಸಿಲ್ಲ. ಯಾರ ಮುಂದೆಯೂ ಕೈಯೊಡ್ಡಿ ಅಭ್ಯಾಸವಿರಲಿಲ್ಲ. ತನ್ನ ಗಂಡನಿಗಂತೂ ಹೆಂಡತಿ ಮಕ್ಕಳೂ ಯಾರೂ ಬೇಡಾ. ತಾಯಿಯ ತಾಳಕ್ಕೆ ಕುಣಿಯುವ ಗಂಡಿನ ರೂಪಿನ ಹೆಣ್ಣು ಅವನು ! ಒಂದು ದಿನ ಮಕ್ಕಳಿಗೆ ಅಕ್ಕರೆ ತೋರಿಸನಲ್ಲಾ ! ಈಗ ಈ ಮೂರನೆಯದು ! ಅದೂ ಹೆಣ್ಣಾಗುವುದಂದೇ ಎಲ್ಲರ ನಂಬಿಕೆ ! ಅವರಿಂದಲೇ ತನಗೆ ದಿನಬೆಳಗಾದರೆ ಕಾಟ. ಅದೂ ಯಾರೋ ವರದಾಚಾರಿ ಯೆಂಬುವನನ್ನು ಕರೆಸಿ ಕವಡೆ ಹಾಕಿ ಶಾಸ್ತ್ರ ಕೇಳಿದ್ದರು. "ಇದೂ ಹೆಣ್ಣೇ ಆಗೋದೂ–ಈ ತಾಯಿಗೆ ಗಂಡು ಮಗು ಲಭ್ಯವಿಲ್ಲ" ಎಂದಿದ್ದ ಅವನು. ತನಗೆ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಎಷ್ಟೋ ಬಾರಿ ಎನಿಸುತ್ತದೆ. ಆದರೆ ಮಕ್ಕಳನ್ನು ಕಂಡಾಗ ಮನಸ್ಸುಬಾರದು. ತನ್ನ ಪಾಲಿನ ಊಟವನ್ನೂ ಅವುಗಳಿಗೇ ಕೊಟ್ಟು ಉಳಿಸಿಕೊಂಡಿಷ್ಟೇನೆ ನಾನು ಹೋದರೆ ಅವು ಹಸಿವಿನಿಂದಲೇ ಸತ್ತಾವು !

"ಆಯ್ತೇನೇ ಕೆಲ್ಸಾ !"

ಪಾಂಡುರಂಗಯ್ಯ ಅಜ್ಜಿ, ತಾಯಿಯವರ ನಂತರ ಅಬ್ಬರಿ ಕೂಗು ಹಾಕಿದ.

"ಅವ್ನು ಯಾವಾಗ ಪೂಜೆ ಮಾಡ್ತಾನೋ ಏನೋ ! ಇವ್ನು ತೀರ್ಕೊಂಡ್ರೆ ನಮ್ಮ ಪಾಂಡೂಗೆ ಬೇರೆ ಹುಡ್ಗಿ ತಂದ್ಕೋಬೋದು. ಅವ್ಳಿಗಾದ್ರೂ ಗಂಡು ಮಗು ಆಗ್ಲಿ !"

ದೇವಮ್ಮ ಗೊಣಗಿದಳು.

ಗಂಗೆ ಅಡಿಗೆ ಮನೆ ಬಾಗಿಲು ಹಾಕಿ ದೀಪವಾರಿಸಿ ಹೊಸಿಲು ದಾಟಿ ಬಂದಳು. ಅವಳ ಬೆನ್ನಿನ ನರಗಳೆಲ್ಲಾ ಒಮ್ಮೆಗೇ ಬೆಂಕಿಯಾದಂತಾಯಿತು. ಹೊಟ್ಟೆಗೆ ಯಾರೋ ಹರಿತವಾದ ಆಯುಧದಿಂದ ತಿವಿದಂತಾಯಿತು. ಅವಳು ನೋವು ತಡೆಯಲಾರದೇ ಅಯ್ಯೋ ಅಯ್ಯೋ ! ಎಂದು ಕೂಗಿದಳು. ದೇವಮ್ಮ, ಚಿಕ್ಕಮ್ಮ ಇಬ್ಬರೂ ಅವಳತ್ತ ಧಾವಿಸಿದರು. ಪಾಂಡುರಂಗಯ್ಯನೂ ಬಂದ. ಅವರು ನೋಡುತ್ತಿದ್ದಂತೆಯೇ ಗಂಗೆ ನೆಲದ ಮೇಲೆ ಬಿದ್ದು ಹೊರಳಾಡ ತೊಡಗಿದಳು. ನೋವಿನಿಂದ ತಾನುಟ್ಟ ಸೀರೆಯನ್ನೇ ಹರಿದೆಸೆದಳು. ತಲೆ ತಲೆ ಚಚ್ಚಿಕೊಂಡಳು. ಮೈ ಪರಚಿಕೊಂಡಳು. ಕೈಕಾಲುಗಳು ಮುರುಟಿ ದಂತಾಯಿತು. ತೊಡೆಗಳ ಸಂದಿನಿಂದ ರಕ್ತ ಒಸರತೊಡಗಿತು. ಅವಳು ಕೆಟ್ಟದಾಗಿ ಚೀರಿದಳು. ಕಣ್ಣುಗಳು ಗಿರಗಿರ ತಿರುಗಿದವು, ಬಾಯಿಯಲ್ಲೂ ಮೂಗಿನಲ್ಲೂ ರಕ್ತ ಹರಿಯತೊಡಗಿತು. ಅವಳು ವಿಲವಿಲನೆ ಒದ್ದಾಡಿದಳು. ಒಂದೇ ಕ್ಷಣ ಎದುರಿಗೆ ನಿಂತಿದ್ದ ಮೂವರನ್ನೂ ನೋಡಿದಳು. ಏನೋ ಹೇಳಲು ಬಾಯ್ತೆರೆದವಳು ಹಾಗೇ ಕಣ್ಮುಚ್ಚಿದಳು. ದೇವಮ್ಮ, ಚಿಕ್ಕಮ್ಮ ಇಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಪಾಂಡುರಂಗಯ್ಯ ಗರಬಡಿದವನಂತೆ ನಿಂತಿದ್ದ.

"ನೋಡಿದ್ಯಾ ಆ ವರದಾಚಾರಿ ಎಂತಹವನೂಂತಾ. ಅವಳ ಬಳೆ, ಸರ ಕೊಟ್ಟಿದ್ದೆ, ಕೆಲ್ಸ ಪೂರೈಸಿದ್ಮೇಲೆ ಇನ್ನಿಷ್ಟು ಕೊಡ್ತೀನೀಂತಾ ಅಂದಿದ್ದೆ. ಇಷ್ಟು ದಿನ ಒಳಗೇ ನರಳೋಳು. ಇನ್ನು ಹೆಣ್ಣು ಮಗುವಾದ್ರೆ ಕಷ್ಟ ಅದ್ನೂ ಮುಗಿ ಸೂಂದಿದ್ದೆ. ಎಲ್ಲಾ ಆಗೋಯ್ತಲ್ಲಾ !"

ದೇವಮ್ಮ ಹೇಳಿದಳು.

"ಸಧ್ಯ ನೆಗೆದುಬಿದ್ಲಲ್ಲಾ-ಎಲ್ಲಾ ಬೇಗ ಮುಗಿಸ್ಬಿಡು. ಬೆಳಿಗ್ಗೆ ಆದ್ರೆ ಊರೋರೆಲ್ಲಾ ಸೇರ್ತಾರೆ"

"ಸೌದೆ ಆದ್ರೆ ಇನ್ನೂರು ಮುನ್ನೂರು ಆಗುತ್ತೆ. ಅವಳ್ಗೆ ಆದ್ಬೇರೆ ಕೇಡು ಹಿತ್ಲಲ್ಲಿ ಗೊಬ್ಬರದ ಗುಂಡಿ ಹತ್ರ ಅಗೆದು ಅದ್ರೊಳ್ಗೆ ಹಾಕಿದ್ರಾಯ್ತು. ಮನೆ ಬಿಟ್ಬಿಟ್ಟು ನಾಳೇನೇ ಹೊರಟ್ಹೋಗೋಣ. ಆಮೇಲೆ ಮನೆ ಮಾರಿದ್ರಾಯ್ತು, ಅವ್ಳು ರಾತ್ರೀನೇ ನೋವೂಂದ್ಲು, ಆಸ್ಪತ್ರೆಗೆ ಸಾಗ್ಸಿದ್ವಿ. ಅಲ್ಲೇ ಮಗೂನೂ, ಅವ್ಳೂ ತೀರ್ಕೊಂಡ್ರು, ಎಲ್ಲಾ ಮುಗಿಸಿ ಬಂದ್ವಿ ಅನ್ನೋಣ, ಅಷ್ಟೆ"

ಚಿಕ್ಕಮ್ಮ ಹೇಳಿದಳು.

"ಏನೋ ಪಾಂಡೂ, ಸರೀ ತಾನೆ ? ಮುಂದಿನವಾರ ಅಮಲ್ದಾರ್ ರಾಮಲಿಂಗಯ್ಯನೋರ ಕಡೇವು ಹೆಣ್ಣು ತೋರಿಸೋಕ್ಕೆ ಬರುವಂತೆ ಹೇಳ್ತೀನಿ"

ಪಾಂಡುರಂಗಯ್ಯ ತಲೆತಗ್ಗಿಸಿದ, ವರದಾಚಾರಿ ಗುಡ್ಡ ಇಳಿದು ಮನೆಗೆ ಹೊರಟ.

ಗಂಗೆ ಮಧ್ಯರಾತ್ರಿಗೆ ಮುಂಚೆ ಹಿತ್ತಲಲ್ಲಿ ಮಣ್ಣಿನಡಿಯಲ್ಲಿ ಹುಗಿದು ಹೋದಳು. ಚಿಕ್ಕಮ್ಮ ದೇವಮ್ಮನ ಕಟ್ಟುಕತೆ ಎಲ್ಲರೂ ನಂಬಲಿಲ್ಲ. ಹೆಣ್ಣು ಮಕ್ಕಳಿಬ್ಬರನ್ನೂ ಗಂಗೆಯ ತವರಿಗೆ ಕಳಿಸಿಕೊಟ್ಟು ಕೆಟ್ಟ ನಕ್ಷತ್ರದಲ್ಲಿ ಸೊಸೆ ಸತ್ತಳೆಂದು ಹೇಳಿ ಮನೆಗೆ ಬೀಗ ಹಾಕಿಕೊಂಡು ಊರು ಬಿಟ್ಟು ಹೋದರು. ಒಂದೇ ತಿಂಗಳಲ್ಲಿ ಮನೆ ಮಾರಿಬಿಟ್ಟರು. ಅದನ್ನು ಕೊಂಡವರು ಅಮಲ್ದಾರ್ ರಾಮಲಿಂಗಯ್ಯನವರೇ, ಅವರ ಕೊನೆಯ ಮಗಳು ಲಲಿತಳನ್ನೇ ಪಾಂಡುರಂಗಯ್ಯನಿಗೆ ಕೊಟ್ಟು ಮದುವೆ ಮಾಡಿದರು.

* * * *

ಇದೆಲ್ಲಾ ನಡೆದುದು ಮೂವತ್ತು ವರ್ಷಗಳ ಹಿಂದೆ. ಈಗ ಆ ಪಾಂಡುರಂಗಯ್ಯನೂ ಇಲ್ಲ, ವರದಾಚಾರಿಯೂ ಇಲ್ಲ. ದೇವಮ್ಮ ಚಿಕ್ಕಮ್ಮನೂ ಇಲ್ಲ, ಪಾಂಡುರಂಗಯ್ಯ ಹೊಲದಲ್ಲಿ ಹಾವು ಕಡಿದು ಸತ್ತಾಗ ಅವನ ಎರಡನೇ ಹೆಂಡತಿ ಲಲಿತ ಗರ್ಭಿಣಿ. ಮದುವೆಯಾಗಿ ವರ್ಷವಾಗಿತ್ತಷ್ಟೆ. ದೇವಮ್ಮ ಒಲೆ ಉರಿ ಹಾಕುತ್ತಿದ್ದಾಗ ಬೆಂಕಿ ಸೆರಗಿಗೆ ತಗಲಿ ಅವಳು ಕೂಗಿದಾಗ ಮನೆಯಲ್ಲಿ ಯಾರೂ ಇಲ್ಲದಿದ್ದುದರಿಂದ ಅವಳ ಸಹಾಯಕ್ಕೆ ಯಾರೂ ಬರಲಿಲ್ಲ. ಹತ್ತಿಕೊಂಡು ಉರಿದು ಭಸ್ಮವಾದಳು. ಚಿಕ್ಕಮ್ಮ ಹೊಳೆಯಲ್ಲಿ ಸ್ನಾನ ಮಾಡಲು ಹೋದಾಗ ಕಾಲುಜಾರಿ ಬಿದ್ದು ಕೊಚ್ಚಿಹೋದಳು. ನಾಲ್ಕು ದಿನಗಳ ಮೇಲೆ ಹೆಣ

ಸಿಕ್ಕಿತ್ತು ವರದಾಚಾರಿ ಆ ಊರೇ ಬಿಟ್ಟು ಹೊರಟುಹೋಗಿದ್ದ. 'ಅವ್ರು ಆ ಸೊಸೇನ್ನ ಹಿಂಸೆ ಮಾಡಿ ಸಾಯಿಸಿದ್ರು ಮಾಟ ಮಾಡ್ಸಿದ್ರಂತೆ-ಹಿತ್ತಲ್ಲೇ ಹೂತ್ಬಿಟ್ರಂತೆ ಸುಡೋಕೆ ದುಡ್ಡು ಯಾಕೆ ಖರ್ಚ ಮಾಡ್ಬೇಕು ಅಂತ ಸುಡಲಿಲ್ಲವಂತೆ ಮೊನ್ನೆ ದೆವ್ವ ಆಗಿ ಬಂದು ಗಂಡನ್ನೂ ನುಂಗಿದ್ಲು ಆ ಮುದ್ಕಿನ್ನೂ ಮುಗ್ಸಿದ್ಲು. ಅತ್ತೆನ್ನೂ ಸಾಯಿಸಿದ್ಲು !" ಜನ ಆಡಿಕೊಳ್ಳತೊಡಗಿದಾಗ ರಾಮಲಿಂಗಯ್ಯ ಅದಕ್ಕೆಲ್ಲಾ ಸೊಪ್ಪು ಹಾಕಲಿಲ್ಲ. ಹಳೆಯ ಮನೆ ಕೆಡವಿ, ಹೊಸ ಮನೆಯೊಂದನ್ನು ಕಟ್ಟಿಸಿದರು. ಮಗಳನ್ನು ಮನೆಯಲ್ಲೇ ಇಟ್ಟುಕೊಂಡ. ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳತೊಡಗಿದರು.

ಇಂದು ಲಲಿತಳ ಮಗ ವರ್ಧಮಾನನಿಗೆ ಮದುವೆ. ಅವನ ಹೆಂಡತಿ ನೂಪುರ ಅಪ್ರತಿಮ ಚೆಲುವೆ, ವಯಸ್ಸಾದ ತಂದೆಯ ಕಣ್ಮುಂದೆಯೇ ಮೊಮ್ಮಗನ ಮದುವೆ ನಡೆಯಲಿ ಎಂದು ಲಲಿತ ಅದೇ ಊರಿನಲ್ಲೇ ಮಾಡಿಕೊಡಬೇಕೆಂದು ಹೆಣ್ಣಿನ ಕಡೆಯವರನ್ನು ಕೇಳಿಕೊಂಡಿದ್ದಳು. ವರ್ಧಮಾನ್ ದೊಡ್ಡ ಸಂಸ್ಥೆಯೊಂದರಲ್ಲಿ ಜನರಲ್ ಮ್ಯಾನೇಜರ್, ನೋಡಲು ತಾಯಿಯಂತೆಯೇ ಲಕ್ಷಣವಾಗಿದ್ದ. ಅಜ್ಜಿ, ಮುತ್ತಜ್ಜಿ ಇಬ್ಬರೂ ಅವನನ್ನು ನೋಡಲೇ ಆಗಿರಲಿಲ್ಲ, ಅವರುಗಳ ಕಥೆ ಕೇಳಿ ನಗುತ್ತಿದ್ದ.

"ಗಾಡ್ ಫರ್‌ಬಿಡ್ ನಾನು ಅವರ್ನ ನೋಡಿಲ್ವಲ್ಲಾ ! ಪಾಪ ನನ್ನ ದೊಡ್ಡಮ್ಮ ಅವರ ಕೈಲಿ ಎಷ್ಟು ಕಷ್ಟಪಟ್ಟರೋ, ನನ್ನ ತಂದೆ ಇನ್ನೊಬ್ಬ ಬ್ಲಾಗಾರ್ಡ್ ! ಏನಮ್ಮಾ ನೀನು ನಮ್ಮಪ್ಪನ್ನ ಯಾಕೆ ಮದ್ವೆಯಾದೆ ? ನಿಂಗೊತ್ತಿರ್ಲಿಲ್ವಾ ? ಇವ್ರೊತ್ತೇನಾದ್ರು ಇಂತಹುದ್ದು ಆಗಿದ್ರೆ ಅವರೆಲ್ಲಾ ಕಂಬಿ ಎಣಿಸ್ತಾ ಇದ್ರು ! ಮುತ್ತಾತ ನಿಂಗೂ ಗೊತ್ತಾಗಲಿಲ್ವಾ ? ರಾಮಲಿಂಗಯ್ಯ ತಲೆಯಾಡಿಸಿದ್ದರು. ಆವಾಗೆಲ್ಲಾ ಬೇಡಾ ಕಾಣೋ ಮಾನೂ, ಅವರವರ ಪಾಪ ಅವರಿಗೆ, ಅದೆಲ್ಲಾ ತಿಳಿದದ್ದೂ ನಂಗೆ ನಿಮ್ಮಮ್ಮನ ಮದುವೆಯಾದ ಮೇಲೆ."

ಮನೆಯ ಮುಂದಿನ ಚಪ್ಪರದ ತುಂಬ ಬಣ್ಣ ಬಣ್ಣದ ಬಲ್ಬುಗಳು. ತೂಗುದೀಪಗಳು, ಎಲ್ಲೆಲ್ಲೂ ಸಡಗರ ಸಂಭ್ರಮ. ಸಂಜೆ ವರ್ಧಮಾನನ ಮನೆಗೆ ಅವನ ವಧು ನೂಪುರ ಬರುತ್ತಾಳೆ, ಮನೆ ತುಂಬಿಸಿಕೊಳ್ಳಲು ಎಲ್ಲರೂ ಕಾದಿದ್ದಾರೆ. ಎಂಭತ್ತರ ಅಂಚಿನಲ್ಲಿದ್ದ ರಾಮಲಿಂಗಯ್ಯನವರೂ ಹುರುಪಿನಿಂದ ಓಡಾಡುತ್ತಿದ್ದಾರೆ. ಸುಮಂಗಲೆಯರು ಅರಸಿನ, ಕುಂಕುಮ,

ಹೂವು ಆರತಿ ಹಿಡಿದು ಕಾದಿದ್ದಾರೆ, ಹೊಸ್ತಿಲ ಒಳ ಸೇರಿನಲ್ಲಿ ಅಕ್ಕಿ ಬೆಲ್ಲ ಇಡೂಗೆದೆ, ಅಷ್ಟರಲ್ಲಿ ಕರಿಯ ಕಾರೊಂದು ಬಂದು ನಿಂತಿತು.

"ಓಹೋ ಬಿಗುರು ಬಂದ್ರು, ಹುಡುಗಿ ಬಂದ್ಲು ಎಲ್ಲರೂ ಸಂಭ್ರಮದಿಂದ ಸ್ವಾಗತಿಸಲು ಬಂದರು.

ಕಾರಿನ ಬಾಗಿಲು ತೆರೆಯಿತು. ಒಳಗಿನಿಂದ ಸರ್ವಾಲಂಕಾರಭೂಷಿತಳಾದ ನೂಪುರ ಇಳಿದಳು. ಮನೆಯ ಮುಂಬಾಗಿಲ ಬಳಿ ಆರತಿ ಹಿಡಿದುಕೊಂಡು ಕಾದಿದ್ದವರು ಮುಂದೆ ಬಂದರು. ಲಲಿತಮ್ಮ ತಮ್ಮ ಮುಖ ತೋರಿದರೆ ಅವಲಕ್ಷಣ ಎಂದು ಬಾಗಿಲ ಮರೆಯಲ್ಲಿ ನಿಂತರು. ತಾವು ತಮ್ಮಗನಿಗೆ ಹುಡುಕಿದ್ದ ಹುಡುಗಿ ಎಷ್ಟು ಚೆನ್ನಾಗಿದ್ದಾಳೆ! ದಂತದ ಬೊಂಬೆ ಹಾಗಿದ್ದಾಳೆ.

"ಕಾರಿನಿಂದ ಇಳಿದ ನೂಪುರಳಿಗೆ ಇದ್ದಕ್ಕಿಂದತೆ ಮೈಯೆಲ್ಲಾ ಹಿಮದಂತೆ ತಣ್ಣಗಾದ ಹಾಗಾಯಿತು. ಸಣ್ಣಗೆ ನಡುಗಿದಳು.

"ಯಾಕೆ ಚಿನ್ನಾ ನಡುಗ್ತೀ? ಹೆದರೀಕೇನಾನೇನೂ ನಿನ್ನ ನುಂಗಿಹಾಕಿ ಬಿಡೊಲ್ಲ!" ವರ್ಧಮಾನ್ ಅವಳ ಕಿವಿಯಲ್ಲುಸುರಿದ. ಅವಳ ಕೈ ಅದುಮಿದ. ಅದು ಕೊರೆಯುತ್ತಿತ್ತು.

"ಯಾಕೆ ಕೈ ಇಷ್ಟು ತಣ್ಣಗಿದೆ? ತಾಳು, ರೂಮಿಗೆ ಹೋಗೋಣ. ಎಲ್ಲಾ ಬಿಸಿ ಮಾಡ್ತೀನಿ."

ಆದರೆ ನೂಪುರ ಅವನಿಗುತ್ತರಿಸಲಿಲ್ಲ. ಅವಳು ಮನೆಯ ಮುಂಬಾಗಿಲನ್ನೇ ಬಿರುಗಣ್ಣಿನಿಂದ ನೋಡುತ್ತಿದ್ದಳು.

"ಏನೋ ಮಾನ, ಇಲ್ಲೇ ನಿಲ್ಲಿಸ್ಕೊಂಡು ಮಾತಾಡ್ತಾ ಇದ್ದೀ, ಒಳಗೆ ಕರ್ಕೊಂಡ್ಬಾ. ಮನೆ ತುಂಬಿಸ್ಕೋಬೇಕು" ಹಿರಿಯ ಮುತ್ತೈದೆಯೊಬ್ಬಳು ಹೇಳಿದಳು.

ನೂಪುರಳ ಕೈ ಹಿಡಿದುಕೊಂಡು ವರ್ಧಮಾನ್ ಮುಂಬಾಗಿಲಿಗೆ ಬಂದ. ಅವಳು ಸಣ್ಣಗೆ ನಡುಗುತ್ತಿದ್ದುದು ಅವನಿಗೆ ಅರಿವಾಗಿತ್ತು.

"ಬಲಗಾಲು ಮುಂದಿಟ್ಟು, ಈ ಸೇರಕ್ಕಿನ್ನ ಒದೆದು ಒಳಗೆ ಬಾಮ್ಮಾ." ಅವಳಿಗಾರತಿ ಕುಂಕುಮ ಇಡುತ್ತಾ ಮುತ್ತೈದೆಯೊಬ್ಬಳು ಹೇಳಿದಳು. ತಟ್ಟೆಯಲ್ಲಿದ್ದ ಕೆಂಪು ಕಲಾರತಿ ನೋಡಿದ ನೂಪುರ ಬೆಚ್ಚಿದಳು. ಅದು ರಕ್ತ! ಆರತಿಯಲ್ಲ! ರಕ್ತ!! ಅವಳ ಒಳಗಿನಿಂದ ಚೀರಿತು. ಅವಳ ಮೈ ಹತ್ತಿಯಂತೆ ಹಗುರವಾದ ಅನುಭವವಾಯಿತು, ತಾನೆಲ್ಲೋ ತೇಲಿಹೋಗುವ ಹಾಗೆ.

"ಪಾಪ ಸಿದ್ಧೇಂತಾ ಕಾಣ್ಸತ್ತೆ. ಬೇಗಬೇಗ ಎಲ್ಲಾ ಕಲಾಪಗಳ್ನೂ ಮುಗಿಸಿಬಿಡಿ. ಅರಿಬ್ಬರಿಗೂ ಸಾಕಾಗಿರಬೇಕು" ಲಲಿತಮ್ಮ ಬಾಗಿಲ ಮರೆಯಿಂದಲೇ ಹೇಳಿದರು

ನೂಪುರ ಬಲಗಾಲಿನಿಂದ ಸೇರನ್ನು ಮೆಲ್ಲನೇ ಒದೆಯಬೇಕೆಂದು ಕಾಲು ಮುಂದಿಟ್ಟಳು. ಅವಳು ಕಾಲಿಟ್ಟ ಕೂಡಲೇ ಸೇರು ಎಗರಿ ಮೇಲೆ ಹೋದಂತಾಯಿತು.

"ಬಾಮ್ಮಾ, ಬಲಗಾಲಿನಿಂದ ಅದ್ನ ತಳ್ಳು!"

ಆದರೆ ಏನನ್ನು ತಳ್ಳುವುದು? ಸೇರು ಮೇಲಿದೆಯಲ್ಲ! ಅಷ್ಟೆತ್ತರ ಕಾಲೆತ್ತುವುದು ಹೇಗೆ? ಆ ಸೇರು ಹೋದೆಡೆಯೆಲ್ಲಾ ಕಣ್ಣಾಡಿಸಿ ನೋಡಿದಳು.

"ಹೂಂ ಬೇಗ ತಳ್ಳು ನೂಪ್ರೂ!" ವರ್ಧಮಾನ ಪಿಸುಗುಟ್ಟಿದ. "ಅದು ಮೇಲಿದೆ. ಹೇಗೆ ತಳ್ಳುವುದು?" ನೂಪುರ ಕೇಳಿದಳು. "ಮೇಲೆಲ್ಲಿದೆ? ನೋಡು ಇಲ್ಲೇ ಇದೆ." ವರ್ಧಮಾನ ತಾನೇ ಅವಳ ಕಾಲು ಹಿಡಿದು ಮೆಲ್ಲಗೆ ಸೇರನ್ನು ತಳ್ಳಿದ, ನೂಪ್ರರಳಿಗೆ ಯಾರೋ ಗಹಗಹಿಸಿ ನಕ್ಕಂತಾಯಿತು. ಯಾರೋ ತನ್ನೆತ್ತರಕ್ಕೂ ನಿಂತು ಕೈಚಾಚಿ ತನ್ನನ್ನೆಳೆದುಕೊಂಡತಾಯಿತು. ಬಾಯಿ ಮೂಗುಗಳಿಗೆ ಯಾವುದೋ ಅಸಹ್ಯ ವಾಸನೆ ಬಡಿದಂತಾಗಿ ಓಕರಿಕೆ ಬಂದಂತಾಯಿತು. ಹಿಮುಗಟ್ಟಿದಂತಿದ್ದ ಮೈ ಇದ್ದಕ್ಕಿದ್ದಂತೆ ಬೆಂಕಿಯ ಕೆನ್ನಾಲಿಗೆ.

ಬಿಸಿಯಾದ ಅನುಭವವಾಯಿತು. ಕಣ್ಣುಗಳ ದೃಷ್ಟಿಯಲ್ಲಿ ಗಿರಿಗಿರನೇ ಮನೆ ಸುತ್ತುತ್ತಿರುವಂತೆ ಭಾಸವಾಯಿತು. ಯಾರೋ ಅವಳ ಕುತ್ತಿಗೆಯನ್ನು ಅದುಮುತ್ತಿರುವಂತಾಯಿತು. ಸೂರಿನಿಂದ ಕೊಳೆತ ಹೆಣ ತೂಗಾಡುತ್ತಿದ್ದುದು ಕಂಡಿತು. ಆ ಹೆಣದ ಮೈ ಮೇಲಿನ ಬಟ್ಟೆ ಚಿಂದಿಯಾಗಿತ್ತು. ಬಾಯಿಂದ ನಾಲಿಗೆ ಹೊರಬಂದಿತ್ತು. ತುಟಿಯ ಕೊನೆಯಿಂದ ರಕ್ತ ತೊಟ್ಟಿಕ್ಕುತ್ತಿತ್ತು! ನೂಪ್ರರ ಚಿಟ್ಟನೆ ಚೀರಿದಳು.

"ಅಯ್ಯೋ, ಅಲ್ನೋಡಿ ಅಲ್ಲಿ!" ಅವಳು ಹೇಳುತ್ತಿರುವಂತೆಯೇ ದೊಪ್ಪನೇ ಹೊಸಿಲ ಮುಂದೆಯೇ ಕುಸಿದಳು.

ಲಲಿತಮ್ಮ ಮತ್ತಿತರ ಹೆಂಗಸರು ಅವಳತ್ತ ಧಾವಿಸಿದರು. ವರ್ಧಮಾನ ಅವಳನ್ನು ಹಿಡಿದೆತ್ತಲು ಯತ್ನಿಸಿದ. "ಎಲ್ಲೋ ದೃಷ್ಟಿ ಆಗೋಗಿದೆ. ಹೋಗ್ರಿ ಕಡ್ಡಿ ನಿವಾಳಿಸಿಹಾಕಿ–" ಮುದುಕಿಯೊಬ್ಬಳು ಹೇಳಿದಳು. ಲಲಿತಮ್ಮ ಒಳಗೆ ಹೋಗಿ ತಣ್ಣೀರು ತಂದು ಅವಳ ಮುಖದ ಮೇಲೆ ಚುಮುಕಿಸಿದಳು. ಕೆನ್ನೆ

ಹಿಡಿದು ಅಲುಗಿಸಿದರು. ನೂಪುರಾ, "ನೂಪುರಾ, ಇಲ್ನೋಡು" ಅವಳು ನಿಧಾನವಾಗಿ ಕಣ್ತೆರೆದಳು.

"ಏನಾಯ್ತಮ್ಮ ?"

"ಅಲ್ಲಿ ಅವಳು....ಬಾಯಿಂದ ರಕ್ತ-ನೊಣ....ಅ ಸ ಂ ಬ ದ್ಧ ವಾ ಗಿ ಬಡಬಡಿಸಿದಳು.

ಲಲಿತಮ್ಮನ ಎದೆ ಝಲ್ಲೆಂದಿತು. ನಾಳೆಯೇ ಸಭಾಪತಿ ಶಾಸ್ತ್ರಿಗಳನ್ನು ಕರೆಸಿ ಹುಡುಗಿಗೆ ತಾಯಿತ ಕಟ್ಟಿಸಿಬಿಡಬೇಕು. ಏನೋ ಎತ್ತೋ, ಹೊಸದಾಗಿ ಮನೆಗೆ ಕಾಲಿಡುತ್ತಿರುವ ತನ್ನ ಮುದ್ದು ಸೊಸೆಗೆ ಹೀಗಾಗುವುದೆಂದರೇನು ! ತಂದೆಗೂ ಇದರ ವಿಷಯ ಹೇಳಬೇಕು !

"ವರ್ಧಮಾನೂ, ಇವಳ್ನ ಎತ್ಕೊಂಡು ಹೋಗಿ ರೂಮ್ನಲ್ಲಿ ಮಲಗಿಸ್ಬಿಡಪ್ಪಾ. ಮದ್ವೆ ಮನೆ ಗಲಾಟೇಲಿ ಸಿಕ್ಕ ಸಿಕ್ಕೋರ ಕಣ್ಣು ಬಿದ್ದಿರ್ಬೇಕೂ ಇವ್ರೊತ್ತು ರಾತ್ರಿ ಸುಧಾರಿಸಿಕೊಂಡ್ರೆ ನಾಳೆಗೆ ಸರಿಹೋಗ್ತಾಳೆ !"

ವರ್ಧಮಾನನಿಗೆ ತಾಯಿಯ ಮಾತು ಅರ್ಥವಾಯಿತು ನೂಪುರಗಳನ್ನು ಎತ್ತಿಕೊಂಡು ತನ್ನ ಕೋಣೆಗೆ ಕರೆದೊಯ್ದು. ಹೂವಿನಿಂದ ಅಲಂಕೃತವಾದ ಹಾಸಿಗೆ ಮೇಲೆ ಮಲಗಿಸಿದ. ಏನೇನೋ ಕನಸುಗಳನ್ನು ಕಟ್ಟಿಕೊಂಡಿದ್ದ ಅವನಿಗೆ ನಿರಾಸೆಯಾದರೂ ಇಂದು ರಾತ್ರಿ ಅವಳು ವಿಶ್ರಾಂತಿ ತೆಗೆದುಕೊಂಡರೆ ಸರಿಹೋಗುವಳೆಂದುಕೊಂಡು ಸಮಾಧಾನ ಮಾಡಿಕೊಂಡ. ಅವಳ ಕೆನ್ನೆ ನೇವರಿಸಿದ.

"ಚಿನ್ನಾ ಮಲ್ಕೋ, ತಾಳು ಬಿಸಿಹಾಲು ತಂದ್ಕೊಡ್ತೀನಿ. ಕುಡಿದ್ಬಿಟ್ಟು ಮಲ್ಕೋ, ನಾಳೆ ಹೊತ್ಗೆ ಎಲ್ಲಾ ಸರಿಹೋಗುತ್ತೆ"

ನೂಪುರಗಳ ಕಣ್ಣುಗಳಲ್ಲಿ ಕಂಬನಿ ಇಣುಕಿತು. "ನಂಗೇನೂ ಆಗಿಲ್ಲ. ಯಾಕೋ ತುಂಬಾ ಭಯ ಆಗುತ್ತೆ ಅಷ್ಟೆ !"

"ಭಯಪಡೋಕ್ಕೇನಾಗಿದೆ ! ನಿನಗೇನೋ ಭ್ರಾಂತಿ ಅಷ್ಟೆ. ನೂಪೂ ಈ ಮನೇಲಿ ನಾವೆಲ್ಲಾ ಎಷ್ಟು ವರ್ಷಗಳಿಂದ ಇದ್ದೀವೆ. ಏನಾಗಿದೆ ಹೇಳು. ಏನೇನೋ ಕಲ್ಪನೆ ಮಾಡ್ಕೋಬೇಡಾ, ಮಲ್ಕೋ ಚಿನ್ನಾ !"

ಅವಳು ಕಣ್ಣು ಮುಚ್ಚುವವರೆಗೆ ಅವಳ ಮುಂಗುರುಳು ನೇವರಿಸುತ್ತಾ ಕುಳಿತಿದ್ದು ಕಣ್ಣಂಚಿನ ಕಂಬನಿ ಒರೆಸಿದ.

ಇದೇಕ್ಕೆ ಹೀಗಾಯಿತು ? ಅವನು ಯೋಚಿಸತೊಡಗಿದ. ನೂಪುರಳ

ಮೈ ಬಿಸಿಯಾಗಿದ್ದು ಅವನಿಗೆ ಅರಿವಾಯಿತು. ಜ್ವರವೇನಾದರೂ ಬಂದಿದೆಯೇ ? ಈ ಜ್ವರ ಬಂದಿರುವುದರಿಂದ ಅವಳು ಡಿಲಿರಿಯಸ್ ಆಗಿರಬಹುದೇ ?

"ನೂಪೂ. ತಲೇನೋಯ್ತಾ ಇದೆಯಾ ?" ಅವಳು ಮೆಲ್ಲನೇ ನರಳಿದಾಗ ಕೇಳಿದ. ಅವಳು ಅವನಿಗುತ್ತರಿಸಲಿಲ್ಲ. ಅವಳು ನಡುಗಿದಂತೆ ಕಂಡಾಗ ಅವಳಿಗೆ ಬೆಚ್ಚಗಿನ ಕಂಬಳಿ ಹೊದಿಸಿದ.

ಲಲಿತಮ್ಮ ಬಿಸಿಬಿಸಿ ಹಾಲು ಹಿಡಿದು ಬಂದರು.

"ತೋಗೋಪ್ಪಾ, ಅವಳಿಗೆ ಕುಡಿಸಿಬಿಡು. ಹೀಗಾಯ್ತೂಂತ ಬೇಜಾರು ಪಟ್ಕೋಬೇಡಾ. ವನಜಮ್ಮ ಅಮ್ಮನವರ ಕುಂಕುಮ ಪ್ರಸಾದ ತಂದ್ಕೊಟ್ಟಿದ್ದಾರೆ. ಹಚ್ಚಿಬಿಡ್ತಾಳು." ಅವರು ಮಲಗಿದ್ದ ನೂಪುರಳ ಹಣೆಗೆ ಅಮ್ಮನವರ ಕುಂಕುಮ ಹಚ್ಚಿ ಹೂವನ್ನು ತಲೆ ಕೂದಲಿಗೆ ಸಿಕ್ಕಿಸಿದಾಗ ಮಲಗಿದ್ದ ನೂಪುರ ಬೆಚ್ಚಿ ಎದ್ದು ಕುಳಿತಳು. ಅವಳ ಕಣ್ಣುಗಳು ಗಿರಿಗಿರನೇ ತಿರುಗಿದವು. ತನ್ನ ಕೂದಲನ್ನು ತಾನೇ ಕಿತ್ತುಕೊಂಡಳು. ಉಟ್ಟಿದ್ದ ಸೀರೆ ಬಿಚ್ಚಿ ಎಸೆದಳು. ವರ್ಧಮಾನನಾಗಲೀ ಲಲಿತಮ್ಮನಾಗಲೀ ಏನೂ ಮಾಡದಾದರು.

"ಏನಾಯ್ತೋ ಇವಳಿಗೆ ಮಾನೂ ? ಹೀಗ್ಯಾಕೆ ಆಡ್ತಾ ಇದ್ದಾಳೆ ?"

"ಅವಳಿಗೆ ತುಂಬಾ ಜ್ವರವಿದೇಮ್ಮ-ಚಳಿ ಹಿಡಿದಿದೆ ಬೇರೆ, ತಾಳು ಡಾಕ್ಟರಿಗೆ ಫೋನು ಮಾಡಿಬರ್ತೀನಿ. ನೀನಿಲ್ಲೇ ಇರು. ಯಾರ್ನೂ ಒಳಗೆ ಬಿಡ್ಬೇಡಾ. ಆಮೇಲೆ ಎಲ್ರೂ ಬಾಯಿಗೆ ಬಂದಂತೆ ಮಾತಾಡೋಕ್ಕೆ ಶುರು ಮಾಡ್ತಾರೆ!"

ವರ್ಧಮಾನ ರೂಮಿನ ಬಾಗಿಲು ಮುಂದೆ ಮಾಡಿಕೊಂಡು ಹೊರಗೆ ಹೋದ.

ಲಲಿತಮ್ಮನಿಗೆ ಸೊಸೆಯ ಅವತಾರ ಕಂಡು ಎದೆ ನಡುಗಿತು. ಯಾವುದೋ ಅವ್ಯಕ್ತ ಭಯ ಅವರನ್ನಾವರಿಸಿತು. ಅವರು ನೋಡುತ್ತಿದ್ದಂತೆಯೇ ನೂಪುರ ಹಾಕಿದ್ದ ಒಡವೆಗಳನ್ನು ಕಿತ್ತೆಸೆದಳು. ಲಲಿತಮ್ಮನಿಗೆ ಮುಖದ ತುಂಬಾ ಕೂದಲು ಹರಡಿಕೊಂಡ ಅವಳನ್ನು ನೋಡಲು ಭಯ ! ಅಮ್ಮನವರ ಪ್ರಸಾದ ಕುಂಕುಮ ಕೊಟ್ಟ ಮೇಲೇನಾಯಿತು ಇವಳಿಗೆ !

"ನೀವ್ಯಾರೂ ಏನೂ ಮಾಡೋ ಹಾಗಿಲ್ಲ !"

ನೂಪುರ ವಿಕಾರವಾಗಿ ನಕ್ಕಳು. ಅದು ಅವಳ ದನಿಯೇ ಅಲ್ಲ. ಆ ನಗುವೂ ಅವಳದಲ್ಲ ; ತಾನು ಮನಸ್ಸಿನಲ್ಲಿ ಅಂದುಕೊಂಡಿದ್ದು ಅವಳಿಗೆ ಹೇಗೆ ತಿಳಿಯಿತು ? ಲಲಿತಮ್ಮನ ಕೈಕಾಲುಗಳಲ್ಲಿ ನಡುಕ ಹುಟ್ಟಿತು. ಈ ರೂಮಿನಲ್ಲಿ ತಾವೊಬ್ಬರೇ ಇದ್ದರೆ ಏನಾದರೂ ಆದೀತು !

"ಎಲ್ಲಿಗೋಗ್ತಿ ? ಕೂತ್ಕೋ ಸುಮ್ನೆ ಇಲ್ಲಿ....ಆ ಹಣ್ಣೆಲ್ಲಾ ತಂದ್ಕೊಡು, ನಂಗೆ ಹಸಿವು !"

ನೂಪುರ ಆಜ್ಞಾಪಿಸಿದಳು, ಗಂಟಲು ಅವಳ ಮೇಲುದನಿಯಾಗಿರದೇ ಒರಟಾಗಿ ಗಡಸಾಗಿತ್ತು. ಲಲಿತಮ್ಮ ಬೆದರಿ ಅಲ್ಲಿಯೇ ಶೋಭನದ ಕೋಣೆಯಲ್ಲಿ ಅಲಂಕಾರವಾಗಿ ಇಟ್ಟಿದ್ದ ಹಣ್ಣಿನ ತಟ್ಟೆಯನ್ನೆ ಅವಳ ಮುಂದಿಟ್ಟರು.

ಅವರು ನೋಡುತ್ತಿದ್ದಂತೆಯೇ ಅವಳು ದ್ರಾಕ್ಷಿ ಗೊಂಚಲೊಂದನ್ನು ಹಾಗೆಯೇ ಬಾಯಿಗೆ ತುರುಕಿಕೊಂಡಳು. ಸೇಬನ್ನು ಕಚ್ಚಿ ಕಚ್ಚಿ ತಿಂದು ಮುಗಿಸಿದಳು. ಸಪೋಟದಲ್ಲಿರುವ ಬೀಜ ಕೂಡ ತೆಗೆಯದೇ ಹಾಗೇ ನುಂಗಿದಳು. 'ಹಾಲು !' ದನಿಯೆತ್ತಿ ಕೂಗಿದಳು. ನವದಂಪತಿಗಳಿಗಾಗಿ ಬೆಳ್ಳಿಯ ಚೊಂಬಿನಲ್ಲಿದ್ದ ಹಾಲನ್ನು ಲಲಿತಮ್ಮ ನಡುಗುವ ಕೈಗಳಿಂದ ಅವಳ ಮುಂದೆ ಹಿಡಿದರು. ಅವಳು ಅದನ್ನೆತ್ತಿ ಗಟಗಟನೇ ಕುಡಿದು ಕೆಳಗಿಟ್ಟು ತೇಗಿದಳು. ಆಕಳಿಸಿ ಧ್ಯೊಪ್ಪನೇ ಹಾಸಿಗೆಯ ಮೇಲೆ ಉರುಳಿಕೊಂಡಳು.

"ಸೆಕೆ ಗಾಳಿ ಬೀಸು !"

ಲಲಿತಮ್ಮ ಫ್ಯಾನು ಹಾಕಿ ದೇವರೇ ! ಇದೇನು ಬಂತು ! ಮಾನು ನೋಡಿದರೆ ಅವನ ಗತಿಯೇನು ಮೊದಲ ರಾತ್ರಿಯೇ ಹೀಗಾಗಬೇಕೇ ?

ರೂಮಿನ ಬಾಗಿಲು ತೆರೆದುಕೊಂಡು ವರ್ಧಮಾನ ಒಳಗೆ ಬಂದ. ಅವನ ಗಮನ ನೂಪುರ ಕಿತ್ತೆಸೆದಿದ್ದ ಸೀರೆ ಒಡವೆಗಳತ್ತ ಹರಿಯಿತು. ಭಯದಿಂದ ಬಿಳಚಿಕೊಂಡಿದ್ದ ತಾಯಿಯ ಮುಖದತ್ತ ನೋಡಿದ.

"ಏನಮ್ಮ ಇದೆಲ್ಲಾ ?"

"ನಂಗ್ಯಾಕೋ ಭಯವಾಗುತ್ತೇ ಹೇಗೆ ಹೇಗೋ ಆಡ್ತಾಳೆ." ತಟ್ಟೇಲಿದ್ದ ಹಣ್ಣೆಲ್ಲಾ ತಿಂದು ಮುಗಿಸಿದ್ಲು. ಚೊಂಬಿನ ಹಾಲೆಲ್ಲಾ ಕುಡಿದ್ಲು. ಬಟ್ಟೆ ಬರೆ ಒಡವೆ ಎಲ್ಲಾ ಕಿತ್ತಾಕಿ ಎಸೆದಿದ್ದಾಳೆ. ನೋಡು ಅವಳ ಗಂಟಲೂ ಏನೋ ಒಂದು ತರಹಾ ಇದೆ !"

ವರ್ಧಮಾನ ಹಾಸಿಗೆಯ ಮೇಲೆ ಅಂಗಾತಳಾಗಿ ಮಲಗಿದ್ದ ನೂಪುರಳ ಬಳಿಗೆ ಬಂದು ಬಗ್ಗಿ ನೋಡಿದ. ಅವಳು ಕಣ್ಣು ಮುಚ್ಚಿ ಮಲಗಿದ್ದಳು.

"ನೂಪುರಾ."

ಮೆಲ್ಲನೆ ಕರೆದ. "ಇದೇನು ಹೀಗೆ ಮಾಡಿದ್ದೀ ?"

"ಏನು ? ಏನುಮಾಡಿದ್ದೀನಿ ?"

ಕ್ಷೀಣವಾಗಿ ಕೇಳಿದಳು.

"ಬಟ್ಟೆ ಎಲ್ಲಾ ಬಿಚ್ಚಿ ಹಾಕಿದ್ದೀ. ತಲೆ ಕೂದಲು ಕೆದರಿಕೊಂಡಿದ್ದೀ. ಒಡವೆಗಳು ಕಿತ್ತೆಸೆದಿದ್ದೀ ."

"ಅದೆಲ್ಲಾ ತುಂಬಾ ಹಿಂಸೆಯಾಗುತ್ತೆ ಅದಕ್ಕೆ. ತಲೆಯೆಲ್ಲಾ ತುಂಬಾ ನೋಯ್ತಾ ಇದೆ. ತಲೆ ಒಳಗೆಲ್ಲಾ ಏನೋ ಆಗ್ತಾ ಇದೆ !" ಸ್ಪಷ್ಟವಾಗಿ ಸರಿಯಾಗಿ ಅವಳ ದನಿಯಲ್ಲೇ ಉತ್ತರಿಸಿದಳು. ವರ್ಧಮಾನ ತಾಯಿಯತ್ತ ಗಂಭೀರವಾಗಿ ನೋಡಿದ.

"ನೀನು ಹೋಗು ಒಳಗೆ. ಡಾಕ್ಟರ್ ಈಗ ಬರ್ತಾರೆ. ಎಲ್ಲಾ ಸರಿ ಹೋಗುತ್ತೆ !"

ಲಲಿತಮ್ಮ ಹೆದರುತ್ತಲೇ ರೂಮಿನಿಂದ ಹೊರಗೆ ಹೊರಟರು. ತನ್ನ ಮಾತು ಅವನು ನಂಬಲಾರ. ತಾನು ಹೇಳಿದ್ದು ಅವನಿಗೆ ಸುಳ್ಳು ಎನ್ನಿಸಿರಬೇಕು ! ಸದ್ಯ ಹೇಗೋ ಎಲ್ಲಾ ಸರಿಯಾದರೆ ಸಾಕು !

ಅವರತ್ತ ಹೋಗುತ್ತಲೇ ಅವನು ನೂಪುರಳನ್ನು ಹಾಸಿಗೆಯ ಮೇಲೆ ಸರಿಯಾಗಿ ಮಲಗಿಸಿ, ಅವಳ ಮೈ ಮುಚ್ಚುವಂತೆ ಹೊದಿಕೆ ಹೊದಿಸಿದ.

"ನೂಪುರಾ ನಿಂಗೆ ಹಸಿವಾಗುತ್ತಾ ? ಹಣ್ಣು ತಿಂತೀಯಾ ? ಹಾಲು ಕುಡೀತಿಯಾ ."

"ಬೇಡಾ ನಂಗೆ ಹಸಿವಿಲ್ಲ ! ಅತ್ತೆ ಹಣ್ಣು, ಹಾಲು ಕೊಟ್ರು !"

ವರ್ಧಮಾನನಿಗೆ ಅಚ್ಚರಿಯಾಯಿತು.

ಅಮ್ಮನೇ ಇವಳಿಗೆಲ್ಲಾ ಕೊಟ್ಟು ಆ ತರಹ ಹೇಳಿದ್ದೇಕೆ.

"ಈಗ ಡಾಕ್ಟರ್ ಬರ್ತಾರೆ. ನೋಡಿ ಔಷಧಿ ಕೊಡ್ತಾರೆ. ನಿನ್ನ ಜ್ವರ ನಾಳೆ ಹೊತ್ತಿಗೆ ಹೊರಟೇಹೋಗುತ್ತೆ.

ಮಗುವಿಗೆ ರಮಿಸುವಂತೆ ರಮಿಸಿ ಹೇಳಿದ. ಅವಳು ಅವನಿಗೊತ್ತರಿಸಿ ಕೊಂಡೇ ಕಣ್ಮುಚ್ಚಿ ಮಲಗಿದಳು.

ಡಾಕ್ಟರ್ ನಚಿಕೇತ್ ಬಂದಾಗ ನೂಪುರ ಒಳ್ಳೆಯ ನಿದ್ರೆಯಲ್ಲಿದ್ದಳು. ಮುಖ ಪ್ರಶಾಂತವಾಗಿತ್ತು. ಅವಳನ್ನು ಪರೀಕ್ಷಿಸಿ ನೋಡಿದ ಅವರು ನಸುನಕ್ಕರು.

"ನೀವೆಲ್ಲಾ ಹೆದರಿಬಿಟ್ಟಿದ್ದೀರಿ. ಇವಳಿಗೆ ಜ್ವರ ಬಂದಿದೆ. ಅದಕ್ಕೆ ಇವಳಲ್ಲಿ ಮನೆ ಮಾಡಿರುವ ಭಯವೂ ಆತಂಕವೂ ಕಾರಣವಿರಬಹುದು. ಇದೇ ಮೊದಲ ರಾತ್ರಿ. ಹುಡುಗಿ ಇನ್ನೂ ಚಿಕ್ಕೋಳು. ಹೊಸ ಮನೆಗೆ ಬಂದೆ,

ತಾಯಿಯನ್ನು ಬಿಟ್ಟುಬಂದಿದ್ದಾಳೆ. ನರ್ವಸ್ ಆಗಿದ್ದಾಳೆ. ಜೊತೆಗೆ ಮದ್ವೆ ಮನೇಂಪ ಮೇಲೆ ಆಯಾಸಾನೂ ಆಗಿದೆ. ನಥಿಂಗ್ ಸೀರಿಯಸ್. ಗಂಟಲು ಕ್ಲಿಯರ್ ಆಗಿದೆ. ಎನಿವೇ, ಒಂದು ಪ್ರಿಕ್‌ಕೊಟ್ಟು ಹೋಗ್ತಿನಿ. ಚೆನ್ನಾಗಿ ನಿದ್ದೆ ಮಾಡಲಿ. ಎಬ್ಬಿಸಬೇಡಿ. ಡಿಸ್ಟರ್ಬ್ ಮಾಡ್ಬೇಡಿ !"

ನೂಪುರಳ ತೋಳಿಗೆ ಇಂಜೆಕ್ಷನ್ ಇತ್ತು ಅವರು ಹೊರಟರು. ಲಲಿತಮ್ಮ ನಡೆದುದನ್ನು ಹೇಳಲು ಅವರ ಹಿಂದೆಯೇ ಹೊರಟರು. ವರ್ಧಮಾನನೂ ಅವರನ್ನೇ ಹಿಂಬಾಲಿಸಿದ. ಲಲಿತಮ್ಮ ಹೇಳಿದುದನ್ನು ಕೇಳಿ ಡಾಕ್ಟರ್ ನಚಿಕೇತ್ ನಕ್ಕುಬಿಟ್ಟರು. "ಹಸಿವ ಗಿರ್ಬೇಕು. ಹಣ್ಣು ತಿಂದಿದ್ದಾಳೆ. ಬಾಯಾರಿಕೆಯಾಗಿದೆ, ಕಾಲು ಕಾಡ್ತಿದ್ದಾಳೆ. ಜ್ವರ ಜಾಸ್ತಿ ಇದೆ. ಡಿಲಿಯಸ್ ಆಗಿ ಎಲ್ಲಾ ಕಿತ್ತೆಸೆದಿರ್ಬೇಕು. ನೀವು ಸುಮ್ನೇ ಹೆದರಿ ಬಿಟ್ಟಿದ್ದೀರಾ ! ನಥಿಂಗ್ ರಾಂಗ್ ವಿತ್ ಹರ್ ! ಬೆಳಿಗ್ಗೆ ಬಂದು ನೋಡ್ತೀನಿ" ಅವರು ವರ್ಧಮಾನನ ಕೈ ಅದುಮಿದರು.

"ಸ್ಟೇ ವಿತ್ ಹರ್–ಅವರ ಜೋತೆಲೇ ಇರು ಮಾನೂ. ಅವಳು. ಪಾಪ ಹೆದರಿರ್ಬೇಕೂ–ಕಾನ್‌ಫಿಡೆನ್ಸ್ ನಿನ್ನ ಹತ್ರ ಮಾತ್ರ ಇದೇಂತಾ ಕಾಣ್ಸತ್ತೆ ! ಸ್ವಲ್ಪ ಈ ಮನೇಗೆ ಹೊಂದ್ಕೊಳ್ಳೋವರೆಗೆ ನೀನು ಅವಳ ಜೊತೆನೇ ಇದ್ದು ನೋಡ್ಕೋ. ಷೀ ವಿಲ್ ಓವರ್ ಕಮ್ ಹರ್ ಫಿಯರ್. ಅವಳ ಹೆದರಿಕೆ ಭಯ ಎಲ್ಲಾ ಹೋಗುತ್ತೆ ಆದ್ರೆ ನೀನು ಮಾತ್ರ ತಾಳ್ಮೆ ಕಳ್ಕೋಬೇಡಾ, ಹೆಲ್ಪ್ ಹರ್ ಟು ಗೆಟ್ ಓವರ್ ದಿ ಫಿಯರ್ !"

ವರ್ಧಮಾನ ನಸುನಕ್ಕ "ಡೆಫೆನೆಟ್‌ಲೀ ! ಖಂಡಿತಾ ಅವಳ್ನ ನೋಡ್ಕೋತೀನಿ. ನಂಗೂ ಅದೇ ಅನ್ನಿಸ್ತು. ತುಂಬಾ ಹೆದರಿಬಿಟ್ಟಿದ್ದಾಳೆ. ಅವಳ ತಂದೆ, ತಾಯಿ ಜೊತೇಗೆ ಬಂದಿದ್ರೆ ಚೆನ್ನಾಗಿರ್‍ತಿತ್ತು. ಅವರ್ಗೂ ಹೇಳಿ ಕಳಿಸಿ ಕರೆಸ್ತೀನಿ !"

"ಸರಿ ಡಾಕ್ಟರ್"

* * * *

ವರ್ಧಮಾನ ಡಾಕ್ಟರನ್ನು ಬೀಳ್ಕೊಟ್ಟು ರೂಮಿಗೆ ಬಂದ. ನೂಪುರ ಹಾಯಾಗಿ ನಿದ್ರಿಸುತ್ತಿದ್ದಳು. ಅವಳ ಸೀರೆ, ಒಡವೆಗಳನ್ನೆಲ್ಲಾ ಎತ್ತಿಟ್ಟು

ತಾನು ನೋಡಿದಂದಿನಿಂದ ಏನೆಲ್ಲಾ ಕನಸು ಕಟ್ಟಿಕೊಂಡಿದ್ದೆ. ಅವಳಿಗೆ ವಿಪರೀತ ನಾಚಿಕೆ! ತನ್ನ ಬಳಿ ಮಾತೇ ಆಡುತ್ತಿರಲಿಲ್ಲ! ಕೈಗೆ ಸಿಕ್ಕದೇ ಓಡಿಹೋಗುತ್ತಿದ್ದಳು. ಅವಳು ಮನೆಯಲ್ಲಿ ಒಬ್ಬಳೇ ಸಿಕ್ಕುತ್ತಿದ್ದುದೇ ಅಪರೂಪ. ಯಾವಾಗಲೂ ಅವಳ ತಂದೆ-ತಾಯಿ ಕಾದಿರುತ್ತಿದ್ದರು. ಒಮ್ಮೆ ಒಬ್ಬಳೇ ಸಿಕ್ಕಾಗ ಅವಳ ಕೈ ಹಿಡಿದುಕೊಂಡಾಗ ಕೊಸರಿಕೊಂಡು ಓಡಿದ್ದಳು.

"ಎಲ್ಲಿಗೆ ಓಡಿಹೋಗ್ತೀಯಾ! ನನ್ಕೈಲಿ ಸಿಕ್ಕೇ ಇರ್ತೀಯಾ?" ಎಂದಾಗ ಅವಳ ಮುಖ ಓಕಳಿ ಚೆಲ್ಲಿದಂತಾಗಿತ್ತು. ಅವಳ ಚೆಲುವಿಗೆ ಮಾರು ಹೋದ ತಾನು ಮೊದಲ ರಾತ್ರಿ ಹೀಗೆ ರಸಭಂಗವಾಗುವುದೆಂದು ಅರಿತಿರಲಿಲ್ಲ.

ನೂಪುರ ನಿದ್ದೆಯಲ್ಲಿಯೇ ಹೊರಳಿ ಅವನ ತೊಡೆಯ ಮೇಲೆ ಕೈ ಹಾಕಿ ಅವನಿಗೊತ್ತರಿಸಿ ಮಲಗಿದಳು. ತನ್ನ ಮನಸ್ಸಿನ ಭಾವನೆಗಳು ಅವಳಿಗರಿವಾಗದಂತೆ ತನ್ನ ಬಳಿಗೆ ಸರಿಸಿ ಮಲಗಿಸಿದ. ಅವಳ ಕೆನ್ನೆಯನ್ನು ನೇವರಿಸಿದ. ನೂಪುರ, ನನ್ನನ್ನು ದೂರಮಾಡಬೇಡಾ.

ಪಕ್ಕದಲ್ಲಿದ್ದ ಸ್ವಿಚ್ ಒತ್ತಿ ದೀಪವಾರಿಸಿ ಬೆಡ್ ಲ್ಯಾಂಪ್ ಹತ್ತಿಸಿದ. ತಾನು ನೂಪುರಳ ಪಕ್ಕ ಈಗ ಮಲಗಬಾರದು. ಮನಸ್ಸು ಬಲಹೀನವಾಗಿರುವಾಗ ಏನಾದರೂ ಅನಾಹುತವಾದೀತು-ಡಾಕ್ಟರ್ ಎಚ್ಚರಿಕೆ ನೀಡಿರಲಿಲ್ಲವೇ? ಅವಳಿಗೆ ಪೂರ್ಣ ವಿಶ್ರಾಂತಿಯಿರಲಿ ಎಂದು! ಅವಳ ಕೈಯನ್ನು ಮೆಲ್ಲನೆ ದೂರ ಸರಿಸಿ ಅವಳನ್ನು ಪಕ್ಕಕ್ಕೆ ಹೊರಳಿಸಿ, ಬಾಗಿ ಅವಳ ಹಣೆಗೆ ಹೂಮುತ್ತನಿತ್ತು ಎದ್ದ. ಕೈಗೆ ದಿಂಬು ಹೊದಿಕೆ ತೆಗೆದುಕೊಂಡು ರೂಮಿನ ಇನ್ನೊಂದು ಪಾರ್ಶ್ವದಲ್ಲಿದ್ದ ಸೋಫಾದ ಮೇಲೆ ಹೋಗಿ ಮಲಗಿದನು. ನೂಪುರಳಗೇನೋ ಗಾಢ ನಿದ್ರೆ, ಆದರೆ ವರ್ಧಮಾನನಿಗೆ ನಿದ್ರೆ ಹತ್ತಲಿಲ್ಲ.

* * * *

ಲಲಿತಮ್ಮ ತಂದೆಯ ಕೊಠಡಿಗೆ ಬಂದರು. ರಾಮಲಿಂಗಯ್ಯನವರಿಗೆ ಎಂಭತ್ತರ ಏರು ವಯಸ್ಸು, ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ. ಆದರೆ ಬುದ್ಧಿ, ಜ್ಞಾಪಕಶಕ್ತಿ ತೀಕ್ಷ್ಣವಾಗಿತ್ತು.

"ಅಪ್ಪಯ್ಯ ಮಲಗಿಬಿಟ್ರಾ?" ಲಲಿತಮ್ಮ ಮಂಚದ ಮೇಲೆ ಕಣ್ಮುಚ್ಚಿ ಮಲಗಿದ್ದ ತಂದೆಯ ಬಳಿಗೆ ಬಂದರು.

"ಏನಮ್ಮಾ ಲಲ್ತಾ, ಅದೇನೋ ಹುಡುಗಿ ಹೆದರಿಬಿಟ್ಲಂತೆ ....! ನಂಗೆ ನಿದ್ರೆ ರಾತ್ರಿ ಹೊತ್ತು ಎಲ್ಲಿ ಬರುತ್ತೆ ಹೇಳು, ಸುಮ್ನೆ ಕಣ್ಮುಚ್ಚಿ ಮಲಗಿದ್ದೆ ಅಷ್ಟೆ!" ಕಣ್ತೆರದು ವ್ಯಾಕುಲಚಿತ್ತಳಾದ ಮಗಳತ್ತ ನೋಡಿದರು.

"ಅಪ್ಪಯ್ಯ, ನಂಗ್ಯಾಕೋ ಭಯವಾಗ್ತಾ ಇದೆ. ನಾವು ನೂಪುರನ್ನ ಈ ಮನೆಗೆ ಕರೆತರಬಾರದಿತ್ತೇನೋ ಎನಿಸುತ್ತಿದೆ. ಗಂಗೆ ಆತ್ಮ ಇಲ್ಲೇ ಓಡಾಡ್ತಾ ಇದ್ಯೋ ಏನೋ ಅನ್ನಿಸುತ್ತೆ!" ಲಲಿತಮ್ಮ ತಂದೆಯ ಬಳಿ ಕುಳಿತರು.

"ನೂಪುರ ಆಡಿದ್ದು ನೋಡಿದ್ರೆ ಭಯ ಆಗ್ಯಂಡಲ್ಲ. ಮೈಮೇಲೆ ಬಂದವಳಂತೇನೇ ಆಡಿದ್ಲು! ನಮ್ಮತ್ತೆ ಆ ಅಜ್ಜಿ ಇಬ್ರೂ ಗಂಗೇನ ತುಂಬಾ ಗೋಳು ಹಾಕಿ ಕೊಳ್ತಾ ಇದ್ರೂಂತ ಹೇಳಿದ್ವಾ? ಅವ್ಳು ಹೆರಿಗೇಲಿ ತಿರ್ಕೊಂಡ್ಳೂಂತ ನಮ್ಗೆ ಹೇಳಿದ್ದು ಅಲ್ವಾ? ಆದ್ರೆ ಊರೆಲ್ಲಾ ಮಾತಾಡ್ಕೊಳ್ಳೋದು, ಅವ್ರೇ ಅವ್ಳ ಹಿಂಸೆ ಮಾಡಿ, ಮಾಟಮಾಡ್ಸಿ ಕೊಂದುಹಾಕಿದ್ರು ಅಂತಾರೆ, ಅದ್ಯಾರೋ, ವರದಾಚಾರೀಂತ ಮಾಟಾಚಾರಿ ಇದ್ನಂತೆ, ಅವನ ಕೈಲಿ ಅವಳ್ಗೆ ಮಾಟ ಮಾಡ್ಸಿದ್ರಂತೆ, ಇದೆಲ್ಲಾ ನಿಂಗೂ ಗೊತ್ತು. ಈಗ ನಂಗೆ ಸು ಭಯವಾಗ್ತಿಲ್ಲ." "ಏನೂ ಇಲ್ಲ ಕಣೇ ತಾಯಿ, ಜನ ಏನೇನೋ ಮಾತಾಡ್ತಾರೆ ಅದ್ನೆಲ್ಲಾ ನಂಬಬೇಡಾಂದಿ ಅವಕ್ಕೆ ಸರಿಯಾಗಿ ಅತ್ತೆ ಅಜ್ಜಿ ತೀರ್ಕೊಂಡ್ಬಿಟ್ರು ಇವ್ರೂ ಹೋಗ್ಬಿಟ್ರು, ಯಾವ್ದು ನಿಜ ಯಾವ್ದು ಸುಳ್ಳೂಂತ ತಿಳ್ಕೊಳಕ್ಮುಂಚೆ ಎಲ್ಲಾ ನಡೆದುಹೋಯ್ತು. ಆದ್ರೆ ಈಗ ನಂಗೆ ಭಯವಾಗ್ತಿದೆ."

ರಾಮಲಿಂಗಯ್ಯನವರಿಗೆ ಹಿಂದಿನ ನೆನಪು ಮರುಕಳಿಸಿತು. ತನ್ನ ಮಗಳು ಲಲಿತನಿಗೆ ಇಪ್ಪತ್ತೇಳು ವರ್ಷಗಳಾಗಿದ್ದರೂ ಮದುವೆಯಾಗಿರಲಿಲ್ಲ. ಕುಜದೋಷವಿದೆಯೆಂದು ತಿಳಿದುದರಿಂದ ತಾವು ಕುಜದೋಷ ಇರುವ ವರನಿಗಾಗಿ ಹುಡುಕೀ ಸಾಕಾಗಿತ್ತು. ತಮ್ಮ ಬಳಿಯಿದ್ದ ಆಸ್ತಿಯ ಆಸೆಗಾಗಿ ಯಾರಾದರೂ ಮುಂದೆ ಬಂದು ಮದುವೆಯಾಗುವರೆಂದು ನಂಬಿದ್ದ ಅವರಿಗೆ ನಿರಾಶೆಯಾಗಿತ್ತು. ಮಗಳನ್ನೇನೋ ಹೈಸ್ಕೂಲಿನವರಿಗೆ ಓದಿಸಿ ತಮ್ಮ ಜಮೀನು, ಮನೆ, ಅಂಗಡಿಗಳೂ ತೋಟ ಇವುಗಳ ಜವಾಬ್ದಾರಿಯನ್ನು ಅವಳಿಗೆ ಒಪ್ಪಿಸಿದ್ದರು. ಕೊನೆಗೊಮ್ಮೆ ಅವಳ ಜಾತಕ ತೆಗೆದುಕೊಂಡು ಹೋಗಿ ಹೆಸರಾಂತ ಜ್ಯೋತಿಷಿಗಳಿಗೆ ತೋರಿಸಿ ಬಂದರು. ಗುರುಬಲ ಬಂದಿರುವಾಗ ಲಗ್ನ ಮಾಡಿಬಿಡಬೇಕೆಂದೂ ಇಲ್ಲದಿದ್ದರೆ ಅವಳು ಕನ್ನೆಯಾಗಿಯೇ ಉಳಿದು ಬಿಡುವಳೆಂದೂ ಸಭಾಪತಿಶಾಸ್ತ್ರಿಗಳು ಹೇಳಿಬಿಟ್ಟರು. ಇನ್ನೊಂದು ವರ್ಷ

ಅವಳ ಪಕ್ಕದಲ್ಲಿ ಒಂದು ಕುಳಿತು, ತಾನೂ ಇದೇತಾನೇ ಹಸೆಮಣೆಯಿಂದಿಳಿದ ವರ ! ಮೊದಲ ರಾತ್ರಿಯೇ ತನಗೆ ಭ್ರಮನಿರಸನವಾಗಬೇಕೆ ? ನೂಪುರನನ್ನು ಗುರುಬಲವಿದ್ದು ಕಂಕಣ ಬಲವಿದೆ ನೋಡಿ, ಎಲ್ಲಾದರೂ ಒಂದು ಕಡೆ ನೋಡಿ ತಾಳಿ ಕಟ್ಟಿಸಿಬಿಡಿ. ಅವರ ಅಂತಸ್ತು, ಹುಡುಗ ಹಾಗಿರಬೇಕು, ಹೀಗಿರಬೇಕೂಂದ್ರೆ ಆಗೋಲ್ಲ ಹಾಗೇ ನಾನು ನವಗ್ರಹ ಶಾಂತಿ ಮಾಡಿಸುತ್ತೇನೆ, ಮಾಡಿಬಿಡಿ !"

ರಾಮಲಿಂಗಯ್ಯನವರಿಗೆ ರಕ್ತದ ಒತ್ತಡವಿತ್ತು. ತಮಗೇನಾದರೂ ಆಗಿಬಿಟ್ಟರೆ ಮಗಳ ಗತಿಯೇನು ಎಂಬ ಭಯ ಆವರಿಸಿತು.

"ಶಾಸ್ತ್ರಿಗಳೇ ನೀವೇ ಎಲ್ಲಾದ್ರೂ ವರ ಇದ್ರೆ ನೋಡಿ ಹೇಳಬಾರದೇ ನಂಗೂ ಹುಡುಕೀ ಹುಡುಕೀ ಸಾಕಾಯ್ತು !"

ಶಾಸ್ತ್ರಿಗಳು ಅರೆಕ್ಷಣ ಯೋಚಿಸಿದರು ನನ್ನ ದೃಷ್ಟೀಲಿ ಒಬ್ಬ ವರ ಇದ್ದಾನೆ. ಎರಡನೆಯ ಸಂಬಂಧ ಹುಡುಗ ಲಕ್ಷಣವಾಗಿದ್ದಾನೆ. ಮೊದಲ್ನೇ ಹೆಂಡತಿಗೆ ಇಬ್ಬರು ಹೆಣ್ಣುಮಕ್ಳು ಇದ್ದಾರೆ, ಆದ್ರೆ ಅಜ್ಜಿ ತಾತನ ಮನೇಲೇ ಬೆಳೀತಿದ್ದಾರೆ. ಹೆಂಡತಿ ಹೋಗಿ ವರ್ಷ ಆಯ್ತು, ಹೆರಿಗೇಲಿ ಹೋಗಿಬಿಟ್ಟು. ತಾಯಿ, ಅಜ್ಜಿ ಇಬ್ಬರೇ ಹೆಂಗಸರು ಮನೇಲಿ. ಮನೆ ಇದೆ. ಕೈತುಂಬಾ ಸಂಬಳ ಬರುತ್ತೆ !"

"ಹುಡುಗನಿಗೆ ವಯಸ್ಸೆಷ್ಟು ? ಹುಡುಗ ಹೇಗೆ ?"

"ಹುಡುಗನಿಗೆ ಮೂವತ್ತೈದುವರ್ಷ ನೋಡೋಕ್ಕೆ ಲಕ್ಷಣವಾಗಿದ್ದಾನೆ. ತಾಯಿ. ಅಜ್ಜಿಗೆ ದುಡ್ಡಿನ ಆಸೆ ಜಾಸ್ತಿ....ಎರಡನೇ ಸಂಬಂಧ ಪರವಾಗಿಲ್ಲ ಅನ್ನೋ ಹಾಗಿದ್ರೆ ವಿಚಾರಿಸ್ತೀನಿ !"

"ಸರಿ ವಿಚಾರಿಸಿ ನೋಡಿ. ಲಲ್ತನ್ನೂ ಒಂದ್ಮಾತು ಕೇಳಿ ನೋಡ್ತೀನಿ"

ಲಲಿತನಿಗೆ ಒಂಟಿ ಬಾಳು ಸಾಕಾಗಿತ್ತು. ಯೌವನದ ಬಯಕೆಗಳೆಲ್ಲಾ ಬತ್ತಿಹೋಗುವುದೇನೋ ಎಂಬ ನಿರಾಸೆಯಿಂದ ನಿರ್ಲಿಪ್ತಳಾಗಿದ್ದ ಅವಳು ಒಪ್ಪಿದಳು. ಪಾಂಡುರಂಗಯ್ಯನನ್ನು ನೋಡಿದ ಮೇಲಂತೂ ಅವಳಿಗೆ ಸಂತಸವೇ ಆಗಿತ್ತು. ಎರಡನೆಯ ಸಂಬಂಧವಾದರೇನೂ ಒಳ್ಳೆಯ ಕಟ್ಟುಮಸ್ತಾದ ದೇಹ, ಲಕ್ಷಣವಾಗಿದ್ದ ಮುಖ, ಕಣ್ಣುಗಳಲ್ಲಿ ಮಿಂಚು, ನೋಡಿದಾಗ ತಾನೇನೂ ಮೋಸಹೋಗಿಲ್ಲವೆನಿಸಿತ್ತು.

ಲಗ್ನಪತ್ರಿಕೆ ಮಾಡಿಸುತ್ತಿರುವಾಗ ರಾಮಲಿಂಗಯ್ಯನವರಿಗೆ ಒಡಕು ಮಾತುಗಳು ಕಿವಿಗೆ ಬಿದ್ದವು.

"ಆ ತಾಯಿ, ಅಜ್ಜಿ ಇಬ್ಬರೂ ಕಿರಾತಕಿಯರು. ಮೊದಲ್ನೇ ಸೊಸೆ

ಬಂಗಾರದಂತ ಹುಡುಗಿಯಾಗಿದ್ದಳು. ಹುರಿದು ಮುಕ್ಕುತ್ತಿದ್ದರು. ಬಡವರ ಮನೆ ಹುಡುಗೀಂತಾ ಅವಳ ಕೈಲಿ ದುಡಿಸಿಕೊಂಡು ಹೊಟ್ಟೆ ತುಂಬಾ ಊಟ ಹಾಕ್ತಾ ಇರ್ಲಿಲ್ಲ. ಕೊನೆಗೆ ಮಾಟ ಮಾಡ್ಸಿ ಕೊಂದುಹಾಕಿದ್ರು ಅಂತಾರೆ. ಯಾಕಾಂದ್ರೆ ರಾತ್ರಿಯೋರಾತ್ರಿ ಎಲ್ಲಾ ಮುಗಿಸಿಬಿಟ್ಟದ್ರು .."

"ಹುಡುಗನಿಗೆ ತನ್ನದೇ ಆದ ವ್ಯಕ್ತಿತ್ವವೇ ಇಲ್ಲ. ತಾಯಿ ಅಜ್ಜಿ ಕೈ ಬೊಂಬೆ ಆಗೋಗಿದ್ದಾನೆ! ಮೊದಲ್ನೇ ಹೆಂಡತೀನೂ ಚೆನ್ನಾಗೇ ಇದ್ಲು. ಅವರ ಮಾತು ಕೇಳಿ ಅವಳ್ನ ಹಿಂಸೆ ಮಾಡ್ತಾ ಇದ್ದ. ಅದೇ ಕೆಲ್ಸ ನಿಮ್ಮ ಮಗಳ್ಗೂ ಆದ್ರೆ ...!"

"ಹಣಾಂದ್ರೆ ಆ ಹೆಂಗಸ್ರು ಬಾಯಿ ಬಾಯಿ ಬಿಡ್ತಾರೆ!"

ಆದರೆ ರಾಮಲಿಂಗಯ್ಯ ಯಾರ ಮಾತು ಕಿವಿಗೆ ಹಾಕಿಕೊಳ್ಳಲಿಲ್ಲ. ಒಂದು ಒಳ್ಳೇ ಕೆಲಸ ಆಗಬೇಕಾದರೆ ನೂರಾರು ವಿಘ್ನಗಳಿದ್ದೇ ಇರುತ್ತೆ! ಎಂದುಕೊಂಡು ಸುಮ್ಮನಾದರು. ಮಗಳ ತಲೆಯಿಂದ ಕಾಲಿನವರೆಗೆ ಚಿನ್ನ ಹಾಕಿ, ಧಾರೆಯೆರೆದುಕೊಟ್ಟರು. ಅಳಿಯನಿದ್ದ ಮನೆಯ ಮೇಲೆ ಸಾಲ ಮಾಡಿದ್ದರಿಂದ ಹರಾಜಿಗೆ ಬಂದಿದ್ದ ಆ ಮನೆಯನ್ನು ತಾವೇ ಅಳಿಯನಿಗೆ ಕೊಂಡುಕೊಟ್ಟರು. ಶಾಸ್ತ್ರಿಗಳು ಹೇಳಿದಂತೆ ಅಳಿಯನೇನೂ ಹೇಳಿ ಕೊಳ್ಳುವಷ್ಟು ಸ್ಥಿತಿವಂತನಲ್ಲ ಎಂದು ತಿಳಿದಿತ್ತು. ಚಿಕ್ಕಮ್ಮ ದೇವಮ್ಮ ಇಬ್ಬರೂ ಲಲಿತನನ್ನು ಮೆರೆಸಿದರೂ ಅವರಿಬ್ಬರ ಹಣದ ದಾಹ ಅವರಿಗೆ ಅರ್ಥವಾಗಿತ್ತು.

ಲಲಿತ ಗಂಡನ ಮನೆಗೆ ಹೋಗಿ ಒಂದು ತಿಂಗಳಲ್ಲಿ ಅವರಿಗೆ ನಿಜ ಸಂಗತಿ ತಿಳಿದಿತ್ತು. ಗೋಪಾಲಸ್ವಾಮಿ ಅವರ ದೂರದ ಸಂಬಂಧಿ. ಅವನ ಷಡ್ಡಕನ ಮಗಳೇ ಪಾಂಡುರಂಗಯ್ಯನ ಮೊದಲನೇ ಹೆಂಡತಿ ಗಂಗೇ, ಅವನಿಂದ ದೇವಮ್ಮ, ಸಾಕಮ್ಮ, ಪಾಂಡುರಂಗಯ್ಯ ಅವಳನ್ನು ಹಿಂಸಿಸುತ್ತಿದ್ದ ರೀತಿಯನ್ನೆಲ್ಲಾ ತಿಳಿದಾಗಿತ್ತು. ತನ್ನ ಮಗಳನ್ನೆಲ್ಲಿ ಅವರು ಹೀಗೆ ನಡೆಸಿ ಕೊಳ್ಳುವರೋ ಎಂಬ ಭಯ ಮೂಡಿತ್ತು. ಮೊದಲನೇ ಸೊಸೆಯನ್ನು ಮಾಟ ಮಾಡಿ ಕೊಲ್ಲಿಸಿ ಮನೆಯ ಹಿತ್ತಲಲ್ಲೇ ಹುದುಗಿಸಿದ್ದಾರೆ ಎಂದೂ ಅಲ್ಲಿ ಇಲ್ಲಿ ಕೇಳಿದ ಅವರು, ಮನೆಯಲ್ಲಿ ಶಾಂತಿ ಮಾಡಿಸಿ ಸರ್ಪೋಚ್ಚಾಟನೆ ಮಾಡಿಸಿ ಪ್ರಣ್ಯಾವರ್ತನೆ ಮಾಡಿಸಿದರು. ಮಾಟ ಮಾಡಿದವನು ವರದಾ ಚಾರಿ ಎಂಬುವನು ಅವನಿಗೆ ಬೇಕಾದಷ್ಟು ಹಣ ಕೊಡುವನೆಂದು ಹೇಳಿದ್ದರೂ, ಕೆಲಸವಾದ ಮೇಲೆ ಅವನಿಗೆ ಕೊಡಬೇಕಾದ್ದರಲ್ಲಿ ಅರ್ಧ ಹಣ ಕೊಟ್ಟು

ಮೋಸವಾಗಿದ್ದರೆಂದೂ ತಿಳಿದಿತ್ತು. ಆದರೆ ಅದಕ್ಕೂ ತಮಗೂ ಯಾವ ಸಂಬಂಧವೂ ಇಲ್ಲದಿದ್ದುದರಿಂದ ಅತ್ತ ಯೋಚಿಸಲಿಲ್ಲ. ಸಾಲದಕ್ಕೆ ಮಗಳನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದರಿಂದ ಎಲ್ಲಾ ಊಹಾಪೋಹವೆಂದೇ ನಂಬಿದರು.

ಇದ್ದಕ್ಕಿದಂತೆ ಅಳಿಯ, ಆತನ ತಾಯಿ, ಅಜ್ಜಿ ಒಬ್ಬರಾದ ಮೇಲೊಬ್ಬರು ತೀರಿಕೊಂಡಾಗ ಅವರಿಗೇನೂ ಅನಿಸಲಿಲ್ಲ. ಮಗಳು ವಿಧವೆಯಾದಳೆಂಬ ಒಂದೇ ಅವರಿಗೆ ದುಃಖದ ಸಂಗತಿಯಾಗಿತ್ತು. ಆದರೆ ಕುಜ ದೋಷವಿದ್ದ ಅವಳಿಗೆ ಪತಿವಿಯೋಗ ಬಹು ಬೇಗ ಆಗುವುದೆಂದು ತಿಳಿದಿದ್ದ ಅವರಿಗೆ ಬೇಸರ ಬಹುಕಾಲ ಉಳಿಯಲಿಲ್ಲ. ಗಂಡನ ಮನೆಯವರ ವರ್ತನೆಯ ಬಗ್ಗೆ ಅಕ್ಕಪಕ್ಕದವರಿಂದ ತಿಳಿದಿದ್ದ ಲಲಿತನಿಗೆ ತನ್ನ ಗರ್ಭದಲ್ಲಿ ಮಗು ಬೆಳೆಯುತ್ತಿದೆಯೆಂದು ತಿಳಿದಾಗಲಿಂದ ಆವರಿಸಿದ್ದ ಭಯ ಅವರೆಲ್ಲರ ಸಾವಿನಿಂದ ಕೊಂಚ ಕಡಿಮೆಯಾಗಿತ್ತು. ಗಂಡನಿಂದ ಅವಳು ಬಯಸಿದ್ದ ಪ್ರೀತಿ ಪ್ರೇಮ ದೊರೆತಿರಲಿಲ್ಲ. ಬಯಕೆಗಳು ಪೂರೈಸಿದ ನಂತರ ತನ್ನನ್ನು ನಿರ್ಜೀವ ವಸ್ತುವಿನಂತೆ ಕಾಣುತ್ತಿದ್ದ ಅವನ ಬಗೆಗೆ ಅವಳಲ್ಲಿ ಯಾವ ಒಳ್ಳೆಯ ಭಾವನೆಯೂ ಇನ್ನೂ ಮೂಡಿರಲಿಲ್ಲ. ಮಗನ ಪಾಲನೆ ಪೋಷಣೆಯಲ್ಲೇ ಎಲ್ಲಾ ಮರೆಯಬೇಕೆಂದುಕೊಂಡಳು. ತನ್ನ ಬದುಕಿಗೊಂದು ಅರ್ಥ ಸಿಕ್ಕಿತಲ್ಲಾ ಎಂದು ಸುಮ್ಮನಾದರು.

ಆ ಮನೆಯ ಬದಲು ಬೇರೆ ಮನೆಗೆ ಹೋಗಬೇಕೆಂಬುದು ಅವಳ ಮನಸ್ಸಿಗೆ ಬಂದುದನ್ನು ರಾಮಲಿಂಗಯ್ಯ ತಳ್ಳಿಹಾಕಿದರು. "ನೀನೇನೊ ಯಾರಿಗೂ ಹಿಂಸೆ ಕೊಡಲಿಲ್ಲ. ಯಾರೋ ಮಾಡಿದ ಪಾಪಕ್ಕೆ ನೀನೇಕೆ ಹೊಣೆಯಾಗುತ್ತೀ? ನವಗ್ರಹ ಶಾಂತಿ ಮಾಡಿಸಿದ್ದೇನೆ. ಪುಣ್ಯಾರ್ಜನೆ ಮಾಡಿಸಿದ್ದೇನೆ. ಬೇಕಾದರೆ ಮನೆಯೊಡಿಸಿ ದೊಡ್ಡದಾಗಿ ಕಟ್ಟಿಸುತ್ತೇನೆ" ಎಂದಿದ್ದರು.

ತಂದೆಯ ಬಳಿ ಕುಳಿತು ಅವರನ್ನೇ ಗಮನಿಸುತ್ತಿದ್ದ ಲಲಿತಮ್ಮನ ಮನದಲ್ಲೂ ಗೊಂದಲ ನಡೆದಿತ್ತು. ತಂದೆಯೇನೋ ಹಳೆಯ ಮನೆ ಕೆಡವಿಸಿ ದೊಡ್ಡ ಮನೆ ಕಟ್ಟಿಸಿದರು. ಮನೆಯ ಸುತ್ತ ಹೂದೋಟ ಮಾಡಿಸಿದ್ದರು. ಮೊದಲನೇ ಹೆಂಡತಿಯ ಇಬ್ಬರು ಹೆಣ್ಣು ಮಕ್ಕಳಿಗೆ ಏನಾದರೂ ಸಹಾಯ ಮಾಡಬೇಕೆಂದು ಯೋಚಿಸಿ ಒಂದಿಷ್ಟು ಹಣ ಅವರುಗಳ ಓದು ಬರಹಕ್ಕಾಗಿ ಕೊಡಬೇಕೆಂದೂ ಯೋಚಿಸಲಾಗಿತ್ತು.

ಅವಳಿಗೆ ತಂದೆ ಏನ್ನೋ ಯೋಚನೆಯಲ್ಲಿದ್ದುದ್ದು ಕಂಡು ತಾನು ವಿನಾಕಾರಣ ವಯಸ್ಸಾದ ತಂದೆಯ ಮನಸ್ಸನ್ನು ಕ್ಷೋಭೆಗೊಳಿಸಿದೆನಲ್ಲಾ ಎನ್ನಿಸಿತು.

"ನೀನು ಈಗ ಮಲ್ಕೋ. ಬೆಳಿಗ್ಗೆ ಯಾವುದಕ್ಕೂ ಯೋಚನೆ ಮಾಡೋಣ. ಬೇಕಾದ್ರೆ ಪೂಜೆ ಮಾಡ್ಸಿ ನೂಪುರಂಗೆ ಯಂತ್ರ ಕಟ್ಟಿಸೋಣ" ಎಂದು ತಂದೆಗೆ ಹೇಳಿ ಎದ್ದು ನಿಂತರು. ರಾಮಲಿಂಗಯ್ಯನವರು ಮಗಳತ್ತ ನೋಡಿ ಅವಳ ಕಳವಳ ತುಂಬಿದ ಕಣ್ಣುಗಳನ್ನು ನೋಡಿ "ಹೌದಮ್ಮ ಹಾಗೇ ಮಾಡೋಣ. ನಾಳೆ ಬೆಳಿಗ್ಗೆ ಅವಳ ಕೈಲಿ ಪೂಜೆ ಮಾಡಿಸೋಣ ! ಈಗ ಇಷ್ಟೊತ್ನಲ್ಲಿ ಏನೂ ಮಾಡೋದಿಕ್ಕಾಗಲ್ಲ. ನನಗೂ ನಿದ್ದೆ ಬರ್ತಾ ಇದೆ" ಎಂದೂ ಹೊರಗೆ ಕಳಿಸಿದರೂ ಅವರ ಕಣ್ಣಿಗೆ ಬೇಗ ನಿದ್ದೆ ಹತ್ತಲಿಲ್ಲ. ತಮ್ಮ ದೊಡ್ಡ ಮಗಳು ಜಯಂತಿ ಮಗ ಶಿವಶಂಭು ಇಬ್ಬರನ್ನೂ ತಾವು ಅಷ್ಟಾಗಿ ಹಚ್ಚಿಕೊಳ್ಳದೇ ಹುಟ್ಟುತ್ತಲೇ ತಾಯಿಯನ್ನು ಕಳೆದುಕೊಂಡಿದ್ದ ಲಲಿತನನ್ನು ಸಾಕಿರಲಿಲ್ಲವೇ ? ಅವಳ ಒಳಿತಿಗಾಗಿ ತಾವು ಏನೂ ಮಾಡಲು ಸಿದ್ಧನಿರಲಿಲ್ಲವೇ ? ಮಗ ಸೊಸೆ ಎಷ್ಟು ಕರೆದರೂ ಹೋಗದೇ ಲಲಿತನ ಜೊತೆಗೇ ತಾವಿದ್ದು ಬಿಡಲಿಲ್ಲವೆ ? ಅದಕ್ಕೆ ಕಾರಣ ? ಪಾಂಡುರಂಗಯ್ಯನಿಗೆ ಮಗಳನ್ನು ಕೊಡಲು ಬುದ್ಧಿಬಂದಿದಾಗಲಿನಿಂದ ಮನದಲ್ಲೇ ಅವ್ಯಕ್ತವಾಗಿ ಅಡಗಿದ್ದ ಯಾವುದೋ ಅಳುಕು ಒಳಗೇ ಕೊರೆಯುತ್ತಿರಲಿಲ್ಲವೇ ? ಅವಳು ಅತ್ತೆ, ಅಜ್ಜಿ, ಗಂಡನನ್ನು ಒಬ್ಬರಾದ ಮೇಲೊಬ್ಬರನ್ನು ಕಳೆದುಕೊಂಡಾಗ ತಾನೂ ಆ ಮನೆಯನ್ನು ಕೊಳ್ಳಬಾರದಾಗಿತ್ತು ಎನಿಸಿರಲಿಲ್ಲವೇ ? ಕೆಟ್ಟ ನಕ್ಷತ್ರದಲ್ಲಿ ಸೊಸೆ ಸತ್ತಿದ್ದಳೆಂದು ಮನೆ ಬಿಟ್ಟು ಹೋಗಿದ್ದ ಅವರು ಮನೆ ಮಾರಲು ಕಾರಣವೇನಿರಬಹುದೆಂದು ಜಿಜ್ಞಾಸೆಗೊಳಗಾದರೂ, ತಮಗೆ ಹಣದ ಕೊರತೆಯಿದೆಯೆಂದು ಹೇಳಿದ್ದ ಚಿಕ್ಕಮ್ಮನ ಮಾತು ಕೇಳಿ ಮಗಳು ಅತ್ತೆ, ಗಂಡನೊಂದಿಗೆ ಸುಖವಾಗಿದ್ದರೆ ಸಾಕೆಂದು ಅವರು ಕೇಳುವಷ್ಟು ಹಣಕೊಟ್ಟು ಕೊಂಡಿರಲಿಲ್ಲವೇ ? ಮನೆಯಲ್ಲೇ ಎಲ್ಲೋ ಹಿತ್ತಲಲ್ಲಿ ದೊಡ್ಡ ಸೊಸೆಯನ್ನು ಹೂಳಿದ್ದಾರೆಂದ ಅವರಿವರ ಮಾತು ಕೇಳಿದಾಗ ತಾವು ಮನೆಯನ್ನು ಕೆಡವಿ ದೊಡ್ಡದಾಗಿ ಕಟ್ಟಿಸುವ ನೆಪದಿಂದ ಮನೆಯ ಸೈಟನ್ನೆಲ್ಲ ಅಗಿಸಿ ಪರೀಕ್ಷಿಸಿದಾಗ ಏನೂ ಸಿಕ್ಕರಲಿಲ್ಲ. ಆಗಲೇ ಅದೆಲ್ಲಾ ಊಹಾಪೋಹವೆಂದು ನಂಬಿರಲಿಲ್ಲವೇ ? ತಾವೂ ಮಗಳು, ಮೊಮ್ಮಗ ಆ ಮನೆಯಲ್ಲಿದ್ದರೂ ಒಂದೂ ಕೆಡಕಾಗಿರಲಿಲ್ಲ. ವರ್ಧಮಾನ ವರ್ಧಿಸಿದ್ದ–ಮನೆ ಸಂತಸದಿಂದ ತುಂಬಿ ತುಳುಕುತ್ತಿತ್ತು. ಇದೇಕೆ

ಇಂದು ಹೀಗಾಯಿತು ? ಆದರೆ ಅವರಿಗೇನು ಗೊತ್ತು ? ಗಂಗೆಯನ್ನು ಮಣ್ಣು ಮಾಡಿದ ಮಾರನೆಯ ದಿನವೇ ರಾತ್ರಿ ಸರಿಹೊತ್ತಿನಲ್ಲಿ ವರದಾಚಾರಿ ಬಂದು ಆ ಶವವನ್ನೂ, ಶವದ ಸುತ್ತಲಿದ್ದ ಒಂದಿಷ್ಟು ಮಣ್ಣನ್ನು ಗೋಣಿಚೀಲದೊಳಗೆ ಹಾಕಿಕೊಂಡು ಹೋಗಿದ್ದ. ಘೀಳಿಡುತ್ತಿದ್ದ ಬೀದಿಯ ನಾಯಿಗಳನ್ನು ಲೆಕ್ಕಿಸದೇ ಗೋಣೀಚೀಲವನ್ನು ಹೆಗಲ ಮೇಲೆ ಹಾಕಿಕೊಂಡು ನಿರ್ಭೀತಿಯಿಂದ ರಸ್ತೆಗಿಳಿದಿದ್ದ. ವಾರಸುದಾರರಿಲ್ಲದ ಹೆಣ ತನಗೆ ಸಿಕ್ಕಿದೆ! ಅಲ್ಲದೇ ಚಿಕ್ಕಮ್ಮ ದೇವಮ್ಮ ಇಬ್ಬರೂ ತನಗೆ ಕೊಟ್ಟ ಒಡವೆಯನ್ನು ಮುರಿಸಿ, ಕರಗಿಸಿ ಮಾರಲು ಕೊಂಡೊಯ್ದಾಗಲೇ ಅವು ನಕಲಿ ಒಡವೆಗಳೆಂದು ತನಗೆ ತಿಳಿದದ್ದು. ಗಂಗೆಯ ಮನೆಯವರೇ ಮೋಸ ಮಾಡಿದ್ದರೋ ಅಥವಾ ಚಿಕ್ಕಮ್ಮ ದೇವಮ್ಮನೆ ತನಗೆ ಮೋಸ ಮಾಡಿದ್ದರೋ ತಿಳಿಯದಾಗಿತ್ತು. ಇವರಿಗೆ ತಕ್ಕ ಶಾಸ್ತಿ ಮಾಡಬೇಕೆಂದು ನಿರ್ಧರಿಸಿದ್ದ. ಗಂಗೆಯ ಶವವನ್ನು ಗುಡ್ಡದ ಮೇಲಿನ ಮಂಟಪಕ್ಕೆ ಕೊಂಡೊಯ್ದು, ಶವದ ತಲೆಕೂದಲು, ರಕ್ತಸಿಕ್ತವಾದ ಬಟ್ಟೆ, ಉಗುರುಗಳು ತೊಡೆಯ ಮೂಳೆಗಳು, ಯೋನಿನಾಳವನ್ನು ಕತ್ತರಿಸಿಕೊಂಡು ಚರ್ಮದ ಚೀಲದಲ್ಲಿಟ್ಟು ಅದನ್ನು ಒಂದೆಡೆ ನೆಲ ಅಗೆದು ಹೂತಿಟ್ಟು, ಅದರ ಮೇಲೆ ಬಂಡೆಯೊಂದನ್ನಿಟ್ಟು, ಶವದ ಮಿಕ್ಕ ಭಾಗವನ್ನು ಹರಕು ಗೋಣೀಚೀಲದಲ್ಲಿ ಕಟ್ಟಿದ. ತಲೆ ಬುರುಡೆಯನ್ನು ಮಾತ್ರ ಬಂಡೆಯಿಂದ ಜಜ್ಜಿ ಹಾಕಿ, ಅದಕ್ಕೆ ಸೀಮೆಎಣ್ಣೆ ಸುರಿದು ತರಗು ಒಣಗಿದ ಕಡ್ಡಿ ಕಸ ಹಾಕಿ ಸುಟ್ಟುಬಿಟ್ಟ. ಗಂಟು ಕಟ್ಟಿದ ಶವದ ಅವಶೇಷಗಳನ್ನು ಎತ್ತಿಕೊಂಡು ಹೋಗಿ ಚೀಲಕ್ಕೆ ಕಲ್ಲು ಕಟ್ಟಿ ಪಾಳು ಭಾವಿಯೊಂದರಲ್ಲಿ ಹಾಕಿ ಬಂದ. ತಾನು ಬಹಳ ದಿನಗಳಿಂದ ಅಪಾರ ಹಣಗಳಿಸಬೇಕೆಂದು ಕಾಯುತ್ತಿದ್ದ ಒಂದು ಸುಸಮಯ ಬಂದಿತ್ತೆಂದು ಸಂತಸವಾಯಿತು.

* * * *

ತನ್ನ ಗುರುಗಳು ತನಗೆ ಕಲಿಸಿದ ವಿದ್ಯೆಯಿಂದ ಒಂದಿಷ್ಟು ಮೇಲು ಸಂಪಾದನೆಯಾಗುತ್ತಿತ್ತು. ತಾನು ಕೆಲಸ ಮಾಡುತ್ತಿದ್ದ ಫ್ಯಾಕ್ಟರಿಯಲ್ಲಿ ತನಗೆ ಬರುತ್ತಿದ್ದ ಸಂಬಳ ಬಹಳ ಅಲ್ಪ. ಹೆಂಡತಿ ಮಕ್ಕಳನ್ನು ಪೋಷಿಸಲು ಸಾಧ್ಯವಿಲ್ಲ. ತಾನೂ ದೊಡ್ಡ ಬಂಗಲೆ ಕಟ್ಟಿಕೊಳ್ಳಬೇಕು ಹೆಂಡತಿಯ ಮೈ ತುಂಬಾ ಒಡವೆಗಳನ್ನು ಹಾಕಬೇಕು-ಮಕ್ಕಳನ್ನು ಓದಿಸಿ ದೊಡ್ಡ ದೊಡ್ಡ

ಹುದ್ದೆಗೆ ಬರುವಂತೆ ಮಾಡಬೇಕು-ಮಗಳನ್ನು ಶ್ರೀಮಂತರ ಮನೆಗೆ ಕೊಡಬೇಕು-ಅವನ ಬೇಕುಗಳು ಬೆಕಾದಷ್ಟು! ಆದರೆ ಗುರುಗಳು ಅವನಿಗೆ ಹೇಳಿದ್ದರು! "ನೀನು ಮಾಟ, ಶಕ್ತಿ ಆವಾಹನೆ, ವಶೀಕರಣ ಇವುಗಳಿಗೆಲ್ಲಾ ಮೊರೆ ಹೋಗುವವನಾದರೆ ನೀನು ಪ್ರೇತಾತ್ಮವನ್ನು ವಶಪಡಿಸಿಕೊಳ್ಳಬೇಕು. ಆ ಪ್ರೇತಾತ್ಮವನ್ನು ಸಂತೃಪ್ತಗೊಳಿಸಿಬೇಕು. ಚಿಕ್ಕವಯಸ್ಸಿನ ಹೆಣ್ಣು ಶವಕ್ಕಿಂತ ಕನ್ಯೆಯಾಗಿಯೇ ಇರುವ ಹರೆಯದ ಹೆಣ್ಣಿನ ಶವ ಅಥವಾ ತುಂಬು ಗರ್ಭಿಣಿಯ ಶವವಾದರೆ ನಿನ್ನ ಕೆಲಸ ಸುಲಭ!" ಅವನಿಗೆ ಏನು ಮಾಡಬೇಕೆಂದು ತಿಳಿಸಿದರು. ಅವುಗಳ ಕೂದಲು, ಉಗುರು, ತೊಡೆಯ ಮೂಳೆಗಳು, ಯೋನಿಯ ರಕ್ತ, ಯೋನಿನಾಳ, ಇವುಗಳನ್ನು ನೀನು ತೆಗೆದು ಕೊಂಡು ಬಾ-ಆಮೇಲೆ ನಾನು ನಿನಗೆ ಮಾರ್ಗದರ್ಶನ ನೀಡುತ್ತೇನೆ!"

ವರದಾಚಾರಿ ಒಂದುದಿನ ಇದ್ದಕ್ಕಿದಂತೆ ಸಂಸಾರಸಮೇತ ಮಾಯವಾದ, "ಯಾವ್ದೋ ಬೇರೆ ಕೆಲ್ಸಸಿಕ್ತಂತೆ. ಹೊರಟುಹೋಗಿದ್ದಾನೆ. ಮಾಲಕ್ಷ್ಮಿ ಹೇಳಿದ್ಲು. ದೊಡ್ಡ ಕೆಲ್ಸ ಸಿಕ್ತಂತೆ"

"ಏನೋ ಹೆಂಡ್ತಿ ಮಕ್ಕಳ್ನ ಬಿಟ್ಬಿಟ್ಟು ಸನ್ಯಾಸಿ ಆಗೋದ್ನಂತೆ-ಅವ್ನು ಮೊದ್ಲೇ ವಿಚಿತ್ರ ಮನುಷ್ಯ!"

"ಸಧ್ಯ ನಮ್ಮ ಈ ಕಾಲೋನಿಯಿಂದ ಹೊರಟುಹೋದ್ನಲ್ಲಾ ಅಷ್ಟೇ ಸಾಕು. ನಂಗ್ಯಾಕೊ ಅವನ್ನ ನೋಡಿದ್ರೆ ಭಯವಾಗ್ತಿತ್ತು; ಒಳಗೇ ಏನೋ ಮಸಲತ್ತು ಮಾಡ್ತಾ ಇದ್ದ ಅನ್ನಿಸ್ತಿತ್ತು! ಮನುಷ್ಯನ್ಹಂಗೇ ಕಾಣ್ತಾ ಇರ್ಲಿಲ್ಲ. ಒಬ್ಬೊಬ್ಬರೂ ಒಂದೊಂದು ರೀತಿ ಮಾತಾಡಿಕೊಳ್ಳುತ್ತಿದ್ದರು.

* * * *

ನೂಪುರ ಒಳ್ಳೆಯ ನಿದ್ರೆಯಲ್ಲಿದ್ದುದರಿಂದ ಬಹಳ ಹೊತ್ತಿನಿಂದ ಕಣ್ಣೆಳೆದು ಕೊಂಡುಹೋದರೂ ಬಲವಂತದಿಂದ ನಿದ್ರೆ ತಡೆಯುತ್ತಿದ್ದ ವರ್ಧಮಾನ ಪಕ್ಕಕ್ಕೆ ತಿರುಗಿ ಕಣ್ಣುಚ್ಚಿದ. ಬಹಳ ಬಳಲಿದ್ದ ಅವನಿಗೆ ಜೊಂಪು ಹತ್ತಿತ್ತು.

ಯಾರೊ ಜೋರಾಗಿ ಚೀರುತ್ತಿದ್ದುದು ಕೇಳಿ ಬೆಚ್ಚಿ ಎದು ಕುಳಿತ. ತಾನೆಲ್ಲಿರುವನೆಂದು ತಿಳಿವು ಬರುವುದಕ್ಕೆ ಅರೆಕ್ಷಣ ಬೇಕಾಯಿತು. ಕಣ್ಣುಜ್ಜಿ ನೋಡಿದ. ನೂಪುರ ಮಲಗಿ ನಿದ್ರಿಸುತ್ತಿದ್ದಳು. ಆದರೆ ಚೀರುವಿಕೆ ಹೆಣ್ಣಿನ ಚೀರುವಿಕೆ, ಎಲ್ಲಿಂದ ಕೇಳಿ ಬರುತ್ತಿದೆ! ಬಾಗಿಲು ತೆರೆದು ತಾಯಿಯ

ಕೊಠಡಿಯತ್ತ ಓಡಿ ಬಗ್ಗಿ ನೋಡಿದ. ಅವರೂ ನಿಶ್ಚಿಂತರಾಗಿ ನಿದ್ರಿಸುವಂತಿತ್ತು ! ಮನೆಯಲ್ಲಿ ಇನ್ಯಾವ ಹೆಣ್ಣು ಇದ್ದಾರೆ ! ಅವನ ಕೈಕಾಲುಗಳು ಸಣ್ಣಗೆ ನಡುಗತೊಡಗಿತು. ಕರ್ಪೂರ ಬೆವರಿನ ನೀರಿಳಿಯಿತು. ಮತ್ತೆ ಅದೇ ಚೀರಾಟ.

"ಅಯ್ಯೋ ಅಯ್ಯಯ್ಯಪ್ಪಾ ! ಅಯ್ಯೋ !" ಮನೆಯನ್ನೆಲ್ಲಾ ಒಮ್ಮೆ ಹುಡುಕಾಡಿ ಬಂದ ಎಲ್ಲೂ ಯಾವ ಬೇರೆ ಹೆಣ್ಣು ಇರಲಿಲ್ಲ. ಫ್ರಿಜ್ ತೆಗೆದು ತಣ್ಣಗಿನ ನೀರನ್ನು ಕುಡಿದು ತಲೆಯ ಮೇಲೊಂದಿಷ್ಟು ಸುರಿದುಕೊಂಡ ಎಲ್ಲೋ ಅದೆಲ್ಲಾ ತನ್ನ ಭ್ರಾಂತಿಯಿರಬೇಕು ! ಅವನು ಅರೆಕ್ಷಣ ಕಿವಿ ನಿಮಿರಿಸಿ ಕೇಳಿದ. ಮನೆಯಲ್ಲಿ ಮತ್ತೆ ಮೌನ ಆವರಿಸಿತ್ತು. ಆದರೂ ಆ ಮೌನವೇ ಯಾವುದೋ ಅವ್ಯಕ್ತ ರೀತಿಯ ಘನೀಭೂತವಾದ ಆಕಾರದಲ್ಲಿ ತನ್ನ ಸುತ್ತ ತಿರುಗುತ್ತಿದೆ. ತನ್ನನ್ನು ಆವರಿಸುತ್ತಿದೆ ಎನ್ನಿಸಿತು. ತಾನು ಧೃತಿಗೆಡಬಾರದು. ತಾನು ನೂಪುರನ ಬಗ್ಗೆಯೇ ಯೋಚಿಸುತ್ತಿದರಿಂದ ಜಾಗೃತಮನಸ್ಸಿನ ಭಯಗಳನ್ನೆಲಾ ಒತ್ತರಿಸಿದೆ. ಅವುಗಳನ್ನೆಲ್ಲಾ ಸುಷುಪ್ತವಾದ ಮನಸ್ಸಿನಲ್ಲಿ ಹೆಪ್ಪುಗಟ್ಟಿಕೊಂಡು ತನಗೆ ನಿದ್ರೆ ಹತ್ತಿದಾಗ ಅದು ಜಾಗೃತವಾಗಿ. ತನ್ನ ಭಯಗಳನ್ನೆಲ್ಲಾ ಕ್ರೋಢೀಕರಿಸಿ ಅಗ್ನಿ ಪರ್ವತದಂತೆ ಸಿಡಿದೆದ್ದಿರಬೇಕು' ಫ್ಯಾನಿನ ಸ್ವಿಚ್ಚು ಹಾಕಿದ. ಗಾಳಿ ಬರ್ರೆಂದು ಬೀಸಿದಾಗ ಅಲ್ಲಿಯೇ ಕುರ್ಚಿಯೊಂದರಲ್ಲಿ ಕುಳಿತ. ಅರ್ಧ ಗಂಟೆ ಸುಧಾರಿಸಿಕೊಂಡು ಮತ್ತೆ ತನ್ನ ರೂಮಿಗೆ ಬಂದು ನೂಪುರಳ ಮಂಚದ ಪಕ್ಕದ ಕುರ್ಚಿಯಲ್ಲಿ ಕುಳಿತು ಕಣ್ಮುಚ್ಚಿದ. ತಾನು ಮಲಗಬಾರದು. ಬೆಳಿಗ್ಗೆ ಅವ್ಮ ಎದ್ದ ಮೇಲೆ ಅವಳಿಗೆ ನೂಪುರಳನ್ನೊಪ್ಪಿಸಿ, ತಾನು ಮಲಗಬೇಕು. ಹಾಗೆಯೇ ಹಿಂದಕ್ಕೊರಗಿ ಕುಳಿತ !

"ಅಯ್ಯೋ ! ಸತ್ತೇ ! ಅಯ್ಯಯ್ಯೋ ಸತ್ತೆ !" ಮತ್ತೆ ಹೆಣ್ಣಿನ ಆಕ್ರಂದನ ಅವನ ಕಿವಿಗಪ್ಪಳಿಸಿತು, ಕಣ್ತೆರೆದು ನೋಡಿದ. ಅವನ ಜಂಘಾಬಲವೆಲ್ಲಾ ಉಡುಗಿಹೋಯಿತು. ನೂಪುರ ಮಲಗಿ ನಿದ್ರಿಸುತ್ತಿದ್ದಳು. ಮುಖ ಪ್ರಶಾಂತವಾಗಿತ್ತು. ಹೌದು. ಅವಳ ಅರೆಬಿರಿದಿದ್ದ ತುಟಿಗಳಿಂದಲೇ ಆ ಚೀರುವಿಕೆ ಬರುತ್ತಿರುವುದು ! ಹೌದು ಅವಳೇ ಚೀರುತ್ತಿರುವುದು, ಹಿಡಿದಲುಬಿಸಿ ಎಬ್ಬಿಸಲು ಮುಂದಾದವನು ತಡೆದ. ಇದು ನೂಪುರಳ ದನಿಯಲ್ಲ. ಹಿಂದೆ ಸರಿದು ನಿಂತ. ಚೀರುವಿಕೆ ಕಡಿಮೆಯಾಗಿ ಯಾವುದೋ ಹೆಣ್ಣು ನರಳುತ್ತಿರುವಂತೆ ಕೇಳಿಸಿತ್ತು. ನೋಡುತ್ತಿರುವಂತೆ ನೂ ಪು ರ ಪಕ್ಕಕ್ಕೆ ಹೊರಳಿದಳು. ನರಳಿಕೆ, ಚೀರುವಿಕೆ ಎಲ್ಲಾ ನಿಂತುಹೋದಂತಾಯಿತು. ಹೆಪ್ಪುಗಟ್ಟಿದಂತಿದ್ದ ಮನೆಯ ಮೌನವೆಲ್ಲಾ ಕರಗಿಹೋದಂತಾಗಿ ಫ್ಯಾನು

ತಿರುಗುವ ಸದ್ದು. ಕಿಟಕಿಯ ಪರದೆಗಳು ಹಾರಾಡುತ್ತಿದ್ದ ಸದ್ದು ಹೊರಗಿನ ಗಾಳಿಯಲ್ಲಿ ಅಲುಗುವ ಎಲೆಗಳ ಸದ್ದು. ಗಡಿಯಾರದ ಸದ್ದು ನೂಪುರಳ ಉಸಿರಾಟದ ಸದ್ದು. ಎಲ್ಲಾ ಮತ್ತೆ ಜೀವ ತಳೆದು ಬಂದಂತೆನಿಸಿತು. ತಾನು ಓದಿ ಬರೆದವನು ತನಗೆ ಇಂತಹ ವಿಷಯಗಳಲ್ಲಿ ನಂಬಿಕೆಯಿಲ್ಲ. ಆದರೂ ಮಲಗಿದ್ದ ನೂಪುರಳ ಬಾಯಿಂದ ಚೀರುವಿಕೆ ! ನರಳಾಟ ! ಅವನು ತನ್ನ ಕ್ರಾಪಿನಲ್ಲಿ ಕೈಯಾಡಿಸಿಕೊಂಡು ಕೂದಲನ್ನು ಮುಷ್ಟಿಯಲ್ಲಿ ಹಿಡಿದು ಜಗ್ಗಿದ. ತಾನೂ ನೂಪುರಳಂತೆ ಭ್ರಮಿತನಾಗುತ್ತಿಲ್ಲವಷ್ಟೇ !!

ಸೂರ್ಯೋದಯಕ್ಕಾಗಿ ಕಾಯುತ್ತಾ ಕುಳಿತ. ಬೆಳಕಾಗುತ್ತಲೇ ತಾಯಿಯ ಕೋಣೆಗೆ ಹೋದ. ಲಲಿತಮ್ಮ ಅದೇ ತಾನೇ ಸ್ನಾನ ಮಾಡಿ ಸೀರೆ ಬದಲಿಸುತ್ತಿದ್ದರು.

"ಅಮ್ಮ, ಇಲ್ಲಿ ಸ್ವಲ್ಪ ಬರ್ತೀಯಾ ?"

"ಯಾಕೋ ? ನೂಪುರ ಮಲ್ಕೊಂಡು ನಿದ್ದೆ ಮಾಡಿದ್ಲಾ ? ನೀನ್ಯಾಕೆ ಹೀಗೆ ಕಂಗೆಟ್ಟುಹೋಗಿದ್ದೀ ?"

ಕುತ್ಕುಹಲತೆಯಿಂದ ಕೇಳಿದರು.

"ಅವ್ಳೇನೋ ಚೆನ್ನಾಗಿ ನಿದ್ದೆ ಮಾಡಿದ್ಲು. ಆದ್ರೆ ನಂಗೇ ನಿದ್ದೆ ಬರ್ಲಿಲ್ಲ."

"ನಡೀ ಬಂದೆ. ಆಮೇಲೆ ದೇವರಿಗೆ ದೀಪ ಹಚ್ತೀನಿ–"

ಮಗನ ಹಿಂದೆಯೇ ಅವನ ರೂಮಿಗೆ ಹೋದರು. ನೂಪುರ ಇನ್ನೂ ಮಲಗೇ ಇದ್ದಳು.

"ಅಮ್ಮಾ, ಇವ್ಳಲ್ಲಿ ನಿಂಗೇನಾದ್ರೂ ಬದಲಾವಣೆ ಕಾಣ್ಸುತ್ತಾ ?"

ಲಲಿತಮ್ಮ ಅವಳನ್ನು ತೀಕ್ಷ್ಣವಾಗಿ ನೋಡಿದರು.

"ತುಂಬಾ ಸುಸ್ತಾಗಿ ಕಾಣ್ತಾಳೆ ಅಷ್ಟೆ."

"ಹಾಗಲ್ಲಮ್ಮಾ ಮುಖದ ಕಳೇನೇ ಬಡ್ಲಾಯಿಸಿಹೋಗಿದ್ಯಲ್ಲಾ !"

"ತುಂಬಾ ಹೆದರಿಬಿಟ್ಟಿದ್ದಳಲ್ಲ. ಆದಕ್ಕೆ ಹಾಗೆ ಅನ್ನಿಸುತ್ತೆ. ಒಂದೆರಡು ದಿನ ಸುಧಾರಿಸಿಕೊಂಡ್ರೆ ಎಲ್ಲಾ ಸರಿಹೋಗುತ್ತೆ. ನಡೀ, ಮುಖ ತೊಳ್ಕೊಂಡು ಕಾಫಿ ಕುಡಿಯುವಂತೆ ಬಾ. ರಂಗಮ್ಮ ಅಷ್ಟೊತ್ಗೇ ಬಂದ್ರು. ಕಾಫಿ, ತಿಂಡಿ ಮಾಡಿರ್ಬೇಕೂ ."

ವರ್ಧಮಾನನಿಗೆ ತಾಯಿಯಿಂದ ಬಂದ ಉತ್ತರ ಸಮರ್ಪಕವೆನಿಸಲಿಲ್ಲ. ರಾತ್ರಿ, ಬೆಳಗಿನ ಝಾವ ನಡೆದುದನ್ನು ತಿಳಿಸಿದಾಗ ಲಲಿತಮ್ಮ ಆತಂಕದಿಂದ ಹೇಳಿದರು.

"ಈಗ್ಲೇ ಶಾಸ್ತ್ರಿಗಳಿಗೆ ಹೇಳಿ ಕಳಿಸ್ತೀನಿ-ಅವ್ರು ಬಂದು ಅದೇನು ಹೇಳ್ತಾರೋ ಕೇಳೋಣ. ಯಂತ್ರಗಿಂತ್ರ ಕಟ್ಬಿಟ್ರೆ ಎಲ್ಲಾ ಸರಿ ಹೋಗ್ಬೋದು. ಏನೋ ನಮ್ಮ ಕರ್ಮ."

"ಅದೆಲ್ಲಾ ನಂಗೆ ಬಿಟ್ಬಿಟ್ಟು ನೀನು ನಡಿ-ಏನಾದ್ರೂ ಹೊಟ್ಟೆಗೆ ಹಾಕ್ಕೋ!"

ವರ್ಧಮಾನ ಮುಖ ತೊಳೆದು ತಾಯಿ ಕೊಟ್ಟ ಕಾಫಿ ಕುಡಿಯುತ್ತಾ ಪೇಪರೋದುತ್ತಿದ್ದಾಗ ನೂಪುರಳ ತಂದೆ ಸಂಜೀವಯ್ಯ, ತಾಯಿ ಕಾವೇರಮ್ಮ ಮಗಳನ್ನು ವಿಚಾರಿಸಿಕೊಂಡು ಹೋಗಲು ಬಂದರು. ಲಲಿತಮ್ಮ ಕಣ್ಣಿನಲ್ಲೇ ಮಗನಿಗೆ ಸಂಜ್ಞೆ ಮಾಡಿದರು.

"ಏನೂ ಹೇಳಬೇಡಾ!"

"ಬನ್ನೀ. ಮಗ್ಳನ್ನ ನೋಡೋಕ್ಕೆ ಬಂದ್ರಾ? ಇನ್ನೂ ಮಲಗಿದ್ದಾಳೆ!" ಲಲಿತಮ್ಮ ಬೀಗರನ್ನು ಸ್ವಾಗತಿಸಿದರು.

"ಅದಕ್ಕೇ ನೋಡಿ ಮುದ್ದು ಮಾಡಿ ಬೆಳೆಸಬಾರ್ದು ಅನ್ನೋದು ನಮ್ಮ ನೇಲಂತೂ ಎಂಟು ಗಂಟೆ ಕಡಿಮೆ ಏಳ್ತಾ ಇರ್ಲಿಲ್ಲ. ಇಲ್ಲಾದ್ರೂ ಬೇಗ ಎದ್ದು ನಿಮಗೆ ಒಂದಿಷ್ಟು ಸಹಾಯ ಮಾಡ್ಬಾರ್ದೇ? ಅವಳು ಏಳಲಿ ಬುದ್ಧಿ ಹೇಳ್ತೀನಿ!"

ಕಾವೇರಮ್ಮ ತಮ್ಮ ಮಗಳ ನಡವಳಿಕೆ ಬಗ್ಗೆ ಬೇಸರಗೊಂಡರು.

"ನಿಧಾನವಾಗಿ ಏಳಲಿ ಬಿಡಿ-ಏನು ಕೆಲ್ಸ ಇದೆ? ಕೈಗೊಬ್ಬ, ಕಾಲಿಗೊಬ್ಬ ಆಳಿದ್ದಾರೆ. ಏನಿದ್ರೂ ನಮ್ಮ ಮಾನನ್ನ ವಿಚಾರಿಸ್ಕೊಂಡ್ರೆ ಸಾಕು. ಇನ್ನೂ ಹೊಸ ಪರಿ."

ಲಲಿತಮ್ಮ ಹೇಳಿದಾಗ ಕಾವೇರಮ್ಮ ಮನಸ್ಸಿನಲ್ಲೇ ಮಗಳ ಅದೃಷ್ಟ ಕಂಡು ಹೆಮ್ಮೆಪಟ್ಟರು. ಎಲ್ಲರಿಗೂ ಇಷ್ಟು ಒಳ್ಳೆಯ ಅತ್ತೆಯ ಮನೆ ಎಲ್ಲಿ ಸಿಕ್ಕುತ್ತದೆ?

ರಂಗಮ್ಮ ಬಂದವರಿಗೆ ಕಾಫಿ, ತಿಂಡಿ ತಂದಿತ್ತರು. ಸಂಜೀವಯ್ಯ ಮಗಳನ್ನು ನೋಡುವ ತವಕದಿಂದ ಹೇಳಿದರು.

"ಅಳಿಯಂದಿರೇ, ನೋಡಿ ನಮ್ಮ ನೂಪ್ರು ಎದ್ದಿದ್ದಾಳಂತಾ? ಈಗ್ಲಿಂದ ನೀವು ಇಷ್ಟು ಹೆಚ್ಚಿಸಿಬಿಟ್ರೆ ಹೇಗೆ?"

ವರ್ಧಮಾನ ತಾಯಿಯತ್ತ ನೋಡಿದ.

"ಹೋಗೂ ಮಾನೂ ಎದ್ದಿದ್ರೆ, ಮುಖ ತೊಳ್ಕೊಂಡು ಬಾ, ನಿಮ್ತಂದೆ ತಾಯಿ ಬಂದಿದ್ದಾರೇಂತಾ ಹೇಳು"

ವರ್ಧಮಾನ ರೂಮಿನೊಳಗೆ ಬಂದಾಗ ನೂಪುರ, ಆಗಲೇ ಎದ್ದು ಕುಳಿತಿದ್ದಳು. ಕಣ್ಣುಗಳಿಂದ ನಿದ್ರೆಯಿನ್ನೂ ಅಳಿದಿರಲಿಲ್ಲ. ತಲೆಗೂದಲು ಕೆದರಿತ್ತು. ಕಿತ್ತೆಸೆದಿದ್ದ ಬಟ್ಟೆಗಳೆಲ್ಲಾ ಹಾಗೇ ಇದ್ದವು. ಅವನನ್ನು ನೋಡಿ ಹೊದಿಕೆಯಿಂದ ಮೈ ಮುಚ್ಚಿಕೊಂಡಳು. ನಾಚಿಕೆಯೋ, ಭಯವೋ ಮುಖ ಕೆಂಪಾಗಿತ್ತು.

"ನೂಪುರ, ನಿದ್ದೆ ಆಯ್ತಾ ? ಏಳ್ತೀಯಾ ? ನಿನ್ನ ತಂದೆ, ತಾಯಿ ನಿನ್ನ ನೋಡೋಕ್ಕೆ ಬಂದಿದ್ದಾರೆ." ವರ್ಧಮಾನ ಹೇಳಿದಾಗ ಅವಳು ಹೊದಿಕೆಯಿಂದ ಮೈಮುಚ್ಚಿಕೊಂಡೆ ತನ್ನ ಸೀರೆ ಕೈಗೆತ್ತಿಕೊಂಡಳು.

"ನಾನು ಹೊರಗೆ ಹೋಗ್ತೀನಿ. ಬಟ್ಟೆ ಹಾಕ್ಕೊಂಡು, ಅಲ್ಲೇ ನೋಡೂ ಬಾತ್‌ರೂಮಿದೆ. ಮುಖ ತೊಳ್ಕೊಂಡು ಬಾ....!"

ಅವಳನ್ನು ಹೆಚ್ಚು ಕೆಣಕಿ ಮಾತನಾಡಿಸಲಿಚ್ಛಿಸದೇ ಹೊರಗೆ ಬಂದ.

"ಎದ್ದಿದ್ದಾಳೆ, ಬರ್ತಾಳೆ !"

"ಅಳಿಯಂದಿರು ಮಧುಚಂದ್ರಕ್ಕೆ ಎಲ್ಲಾದ್ರೂ ಹೋಗ್ತೀರಾ ಹೇಗೆ ?" ಸಂಜೀವಯ್ಯ ಕೇಳಿದಾಗ ವರ್ಧಮಾನ ತಲೆಯಾಡಿಸಿದ.

"ಈಗ ಎಲ್ಲೂ ಕೆಲಸ ಬಿಟ್ಟು ಹೋಗೋಕ್ಕಾಗೋಲ್ಲ. ಕೈ ತುಂಬಾ ಕೆಲ್ಸ ಇದೆ. ಅದೂ ಅಲ್ದೇ ತಾತಂಗೆ ವಯಸ್ಸಾಯ್ತು. ಅಮ್ಮನ್ನ ತಾತನ್ನ ಇಬ್ರನ್ನೇ ಬಿಟ್ಟು ಹೋಗೋಕ್ಕಾಗೋಲ್ಲ ."

"ಅದ್ಸರೀನ್ನೂ–ನಿನ್ನ ಮುಂದಾಲೋಚನೆ ಒಪ್ಪತಕ್ಕದ್ದೇ "

ಕಾವೇರಮ್ಮ ಮಧ್ಯದಲ್ಲಿ ತಲೆ ಹಾಕಿದರು.

"ಎಲ್ಲೂ ಹೋಗೋದು ಬೇಡಾ-ಅವ್ಳು ಮನೆ ಕೆಲ್ಸ, ಜವಾಬ್ದಾರಿ ಕಲಿತ್ಕೊಳ್ಳಲಿ. ಅತ್ತೆ, ಯಜಮಾನ್ರು ಹೇಗೆ ಹೇಳ್ತಾರೋ ಹಾಗೆ ಕ್ಕೊಂಡಿರ್ಲಿ ."

ಅವರು ಮಾತನಾಡುತ್ತಿರುವಂತೆಯೇ ಕಾಲಿನ ಗೆಜ್ಜೆಯಲಿ ನೂಪುರ ಬರುತ್ತಿರುವುದನ್ನು ತಿಳಿಸಿತು. ಅವಳು ಬಂದು ಅವರ ಮುಸ್ಖೆ ಕೊಡಪೇ ಬಾಗಿಲ ಪರದೆಯ ಮರೆಯಲ್ಲೇ ನಿಂತಳು.

"ಬಾಮ್ಮಾ ನಿಮ್ತಾಯಿ, ನಿಮ್ತಂದೆ ಪಾಪ ನಿನ್ನ ನೋಡೋಕ್ಕೆ

ಬಂದಿದ್ದಾರೆ. ಅದ್ಯಾಕೆ ಬಚ್ಚಿಟ್ಕೊಂಡಿದ್ದೀಯಾ ? ಆಗ್ಲೇ ನಿಂಗೆ ಅವ್ರು ಹೊಸಬರಾಗಿಬಿಟ್ರಾ ?"

ಲಲಿತಮ್ಮ ಇನಿದನಿಯಲ್ಲಿ ಕರೆದರು. ಅವರ ಮುಂದೆ ಸೊಸೆ ಹಿಂದಿನ ರಾತ್ರಿಯಂತೆ ಆಡಿದರೆ !

"ನಿನ್ನೆ ನೀವು ನೂಪುರನ್ನ ಕಾರ್ನಲ್ಲಿ ಕರ್ಕೊಂಡು ಬಂದ್ಬಿಟ್ರಿ, ನಾವು ನಮ್ಮ ಕಡೆಯವರ್ನ ಕಳಿಸಿ, ಖಾಲಿ ಮಾಡಿ, ಸಾಮಾನೆಲ್ಲಾ ಸಾಗಿಸೋ ಹೊತ್ಗೇ ಮಧ್ಯರಾತ್ರಿಯಾಗಿಹೋಯ್ತು. ಮಗಳ್ನ ನಾವೇ ಕರ್ಕೊಂಡು ಬಂದು ಬಿಡೋಕ್ಕಾಗ್ಲಿಲ್ಲ. ನೀವು ಏನಂದ್ಕಂಡ್ರೋ ಏನೋ !"

"ಅಯ್ಯೋ ಅದೆಲ್ಲಾ ಏನು ಮಹಾ ಬಿಡಿ, ತಾಳಿ ಕಟ್ಟಿದ್ಮೇಲೆ ಅವ್ಳು ನಿಮ್ಮ ಸ್ವತ್ತು ಆಗೋದಿಲ್ಲ ! ಬಾ. ನೂಪುರಾ–"

ನೂಪುರ ಪರದೆ ಸರಿಸಿ ಮೆಲ್ಲನಡಿಯಿಟ್ಟುಬಂದಳು.

"ಇದೇನೇ ನೂಪುರ, ಮುಖ ಹೀಗಾಗಿದೆ ? ಮೈ ಸರಿಯಾಗಿಲ್ವಾ ?" ಕಾವೇರಮ್ಮ ಆತಂಕ ವ್ಯಕ್ತಪಡಿಸಿದರು.

"ಮದ್ವೆ ಮನೇಂದ್ರೆ ಸಾವಿರಾರು ಜನ ಬರಾಟ, ಹೋಗಾಟಾ, ಎಲ್ಲೊ ತುಂಬಾ ದೃಷ್ಟಿಯಾಗಿರ್ಬೇಕೂ, ರಾತ್ರಿ ಸ್ವಲ್ಪ ಜ್ವರ ಇತ್ತು. ನಮ್ಮನೇ ಡಾಕ್ಟ್ರು ಬಂದು ನೋಡಿ ಮಾತ್ರೆ, ಇಂಜೆಕ್ಷನ್ ಕೊಟ್ಟು ಹೋದ್ರು."

"ಹೌದಾ ? ಅವಳ್ಗೆ ಜ್ವರ ಬರೋದೇ ಅಪರೂಪ ! ಅದಕ್ಕೆ ಮುಖ ಕೆಟ್ಟು ಹೋಗಿದೆ ! ಈಗಿನ ಕಾಲದ ಹುಡುಗ್ರೇ ಅಷ್ಟು. ಬಲು ಸೂಕ್ಷ್ಮ. ಮಂಗ್ಳಾರ್ತಿ ತೊಗೊಂಡ್ರೆ ಉಷ್ಣ, ತೀರ್ಥ ತೊಗೊಂಡ್ರೆ ಶೀತ ! ಬಾ, ಕೂತ್ಕೊ ಇಲ್ಲ !"

ನೂಪುರನನ್ನು ಕರೆದಾಗ ಅವಳು ಬಂದು ತಾಯಿಯ ಪಕ್ಕದಲ್ಲಿ ಕುಳಿತಳು. ಲಲಿತಮ್ಮ ಸಮಯ ಸಾಧಿಸಿ ಎದ್ದು ಒಳಗೆ ಹೊರಟರು, ರಂಗಮ್ಮಂಗೆ ಅಡ್ಗೆ ಏನು ಮಾಡ್ಬೇಕೂಂತ ಹೇಳ್ಬಿಟ್ಟು ಬರ್ತೀನಿ- "ನೀವು ಮಾತಾಡ್ತಾ ಇರಿ, ನಾನು ಸ್ನಾನ ಮುಗಿಸಿ ಬಂದಿಬಿಡ್ತೀನಿ–"

ವರ್ಧಮಾನನೂ ಎದ್ದು ಹೊರಟ ಅವರಿಬ್ಬರೂ ಅತ್ತ ಹೋಗುತ್ತಲೇ ಕಾವೇರಮ್ಮ ಮಗಳ ತಲೆಸವರಿದರು.

"ಯಾಕೆ ನೂಪು, ಒಡವೆ ಎಲ್ಲಾ ತೆಗೆದುಬಿಟ್ಟಿದ್ದೀ ? ಮದ್ವೆಯಾಗಿ ಒಂದು ವಾರಾ ಆಗ್ಲಿ ಮೈ ಮೇಲಿಲ್ಲ, ಅರಸಿನದ ನೀರು ಆರೋಕ್ಮುಂಚೇನೆ ತೆಗೇಬಾರ್ದು ! ಜ್ವರ ಯಾಕೆ ಬಂತು ನಿಂಗೆ ?"

ನೂಪುರ ತಾಯಿಗೊರಗಿ ಕೂತಳು, "ಅಮ್ಮ ನಂಗೆ ಇಲ್ಲಿರೋಕ್ಕೆ ತುಂಬಾ ಹೆದರಿಕೆಯಾಗುತ್ತೆ. ನಾನು ನಿಂಜೊತೆ ಬರ್ತೀನಿ" "ಹೆದರಿಕೇಂದ್ರೇನೇ! ಅಷ್ಟು ಒಳ್ಳೇ ಅತ್ತೇ, ಅಂಥಹ ಒಳ್ಳೇ ಗಂಡ, ಇಷ್ಟು ದೊಡ್ಡ ಮನೆ ಇಲ್ಲಿ ಹೆದರ್ಕ್ಕೊಳ್ಳೊಕ್ಕೇನಿದೆ? ನಮ್ಮನ್ನ ಬಿಟ್ಟಿರೋದು ನಿಂಗೆ ಹಾಗನ್ನಿಸುತ್ತೆ ಅಷ್ಟೆ. ನಾಲ್ಕು ದಿನ ಹೊಂದ್ಕೊಂಡಿರೋದು ಕಲಿ, ತಕ್ಷಣ ನಮ್ಮನೇಗೆ ಕರ್ಕ್ಕೊಂಡ್ಹೋದ್ರೆ ಏನನ್ಕೋತಾರೆ ನಿಮ್ಮತ್ತೆ?"

"ಇಲ್ಲ, ನಾನು ನಿಂಜೊತೆ ಬಂದೇ ಬರ್ತೀನಿ" ನೂಪುರ ಹಟಹಿಡಿದಳು. "ನಾನಿಲಿರೋಲ್ಲ!"

ಮಗೂ ಹಾಗನ್ಬಾರ್ದಮ್ಮ. ಇವೊತ್ತೊಂದು ದಿನ ಇರು ನಾಳೆ ನಾನೇ ಏನದ್ರೂ ನೆವ ಹೇಳಿ ಕರ್ಕ್ಕೊಂಡು ಹೋಗ್ತೀನಿ" ಸಂಜೀವಯ್ಯ ಮಗಳಿಗೆ ರಮಿಸಿ ಹೇಳಿದ್ದರು. "ಜಾಣೆ ನೀನು ಹಾಗ್ಗೆಲ್ಲಾ ಹಟ ಮಾಡ್ಬಾರ್ದು! ಅಳಿಯಂದಿರು ಏನನ್ಕೋತಾರೆ!"

ನೂಪುರ, ತಂದೆ, ತಾಯಿಯನ್ನು ದುರುಗುಟ್ಟಿಕೊಂಡು ನೋಡಿದಳು.

"ಇಲ್ಲಿ ನಾನಿದ್ರೆ ಸತ್ತುಹೋಗ್ತೀನಿ"

"ಅಯ್ಯೋ, ಅಯ್ಯೋ, ಹಾಗೆ ಅನ್ಬಾರ್ದು ಬಿಡ್ತೂನ್ನು! ನೂರು ವರ್ಷ ಸುಖವಾಗಿರು!" ಕಾವೇರಮ್ಮ ಮಗಳ ಕೆನ್ನೆ ಸವರಿದರು. ಆದರೆ ನೂಪುರ ಅವರ ಕೈಕೊಸರಿ ದೂರ ಸರಿದು ನಿಂತಳು.

"ನೀವ್ಯಾಕೆ ಬಂದ್ರಿ? ನಂಗೆ ಮದ್ವೆ ಯಾಕೆ ಮಾಡಿದ್ರಿ? ನಾನು ಆಗ್ಲೇ ಚೆನ್ನಾಗಿದ್ದೆ!"

ಕಾವೇರಮ್ಮ ಮಾತಾಡುವ ಮುನ್ನವೇ ನೂಪುರ ರೂಮಿನೊಳಗೋಡಿದಳು.

"ನೋಡಿ ಮುದ್ದು ಮಾಡಿ ಬೆಳಸಿದ್ರೆ ಇದೇ ಗತಿ! ಬರ್ತೀನಿಂತ ಗಲಾಟೆ ಮಾಡ್ತಾಳಲ್ಲಾ. ನಾವು ಯಾವ ಬಾಯಿಂದ ಕೇಳೋದು?" ಕಾವೇರಮ್ಮ ಪಿಸು ದನಿಯಲ್ಲಿ ಗಂಡನನ್ನು ಕೇಳಿದರು.

"ನೀನು ಸುಮ್ಮಿರು. ಅದೆಲ್ಲಾ ನಾನು ನೋಡ್ಕೋತೀನಿ ಅವ್ಳೇನು ಮಹಾ ವಯಸ್ಸಾಗಿರೋದೂ. ಇನ್ನೂ ಚಿಕ್ಕೋಳು. ನಮ್ಮನೇ ಬಿಟ್ಟು ಬೇರೆ ಎಲ್ಲಿಗೆ ಹೋಗಿದ್ದಾಳೆ! ನಮ್ಮನ್ನು ಬಿಟ್ಟಿರೋದು ಅವಳ್ಗೆ ಕಷ್ಟ ಆಗ್ಬೋದು. ಗಂಡ, ಅತ್ತೆ ಎಲ್ಲಾ ಇನ್ನು ಹೊಸಬರಲ್ವೇನೆ? ನೀನೆ ಜ್ಞಾಪಿಸ್ಕೋ ನೀನು ನಮ್ಮನೇಗೆ ಬರೋಲ್ಲಾಂತ ಮೊದ್ಲು ಮದುವೆ ದಿನಾನೇ ಹಟ ಮಾಡಿರ್ಲಿಲ್ವಾ? ನಿನ್ನ ಮಗಳು ಅವ್ಳು!"

ಅಷ್ಟರಲ್ಲಿ ಒಳಗಡ ಕೈಗೊಂಚಲನ್ನು ಸೊಂಟಕ್ಕೆ ಸಿಕ್ಕಿಸಿಕೊಳ್ಳುತ್ತಾ ಲಲಿತಮ್ಮ ಬಂದರು.

"ಎಲ್ಲಿ ನೂಪುರಾ ?"

"ಒಳಗೆ ಹೋದ್ಲು ಈಗ್ತಾನೆ! ಅವಳಿಗೆ ನಮ್ಮನ್ನ ಬಿಟ್ಟಿರೋದು ಕಷ್ಟ ಆಗ್ಬೋದೂ ತಾಯಿಗಿಂತ ಹೆಚ್ಚಾಗಿ ನೀವು ನೋಡ್ಕೋತಿರಿ-ಏನಾದ್ರೂ ದುಡುಕಿದರೆ ದಯವಿಟ್ಟು ಏನೂ ತಿಳ್ಕೋಬೇಡಿ" ಕಾವೇರಮ್ಮ ಹೇಳಿದರು.

"ನಾನೂ ನಿಮ್ಜೊತೆ ಬರ್ತೀನೀಂತಾ ಗಲಾಟೆ ಮಾಡಿದಳು. ಈಗ್ತಾನೇ ಬುದ್ದಿ ಹೇಳಿ ಕಳ್ಸಿದ್ದೀನಿ !"

"ಹೌದಾ ? ನಿಮ್ಜೊತೆ ಬರ್ಬೇಕಂತಾ....ಅದಕ್ಕೇನು ಕರ್ಕೊಂಡು ಹೋಗಿ ಅಲ್ಲೆರ್ಡುದಿನ ಇರ್ಡು ದಿನ ಇರಲಿ. ಅಭ್ಯಾಸವಾಗುತ್ತೆ' ಲಲಿತಮ್ಮ ಹೇಳಿದಾಗ ಸಂಜೀವಯ್ಯ ಮಧ್ಯೆ ತಲೆಹಾಕಿದರು.

"ಇಪ್ಪೊತ್ತೊಂದು ದಿನ ಇಲ್ಲಿರ್ಲಿ. ನಾಳೆ ನಾನೇ ಬಂದು ಕರ್ಕೊಂಡು ಹೋಗ್ತೀನಿ."

"ಹಾಗೇ ಮಾಡಿ" ಲಲಿತಮ್ಮ ಒಪ್ಪಿದರು.

"ನಾವಿನ್ನು ಹೊರಡ್ತೀವಿ. ಮನೆಯೆಲ್ಲಾ ಹಾಗೇ ಬಿಟ್ಬಂದಿದ್ದೀವಿ"

ಲಲಿತಮ್ಮ ನೂಪುರನನ್ನು ಕೂಗಿದರು. "ನೂಪುರಾ, ಬಾಮ್ಮಾ ನಿಮ್ತಾಯಿಗೆ ಕುಂಕುಮ ಕೊಡೂ ಬಾ."

ನೂಪುರ ರೂಮು ಬಿಟ್ಟು ಬರಲಿಲ್ಲ.

"ಅವಳಿಗೆ ಕೋಪ ಬಂದಿದೆ ಬಿಡಿ. ನಾನೇ ಕುಂಕುಮ ತೊಗೊತೀನಿ" ಕಾವೇರಮ್ಮ ಹೇಳಿದಾಗ ಲಲಿತಮ್ಮ ಅವರನ್ನು ದೇವರ ಮನೆಗೆ ಕರೆದೊಯ್ದರು. ಅಲ್ಲಿ ಕಟ್ಟೆಯಲ್ಲಿಟ್ಟಿದ್ದ ಬೆಳ್ಳಿ ಬಟ್ಟಲಿನಲ್ಲಿದ್ದ ಅರಿಸಿನ ಕುಂಕುಮ ಹಚ್ಚಿಕೊಂಡು ಹೂವು ತಾಂಬೂಲ ತೆಗೆದುಕೊಂಡು ಕಾವೇರಮ್ಮ ಹೊರಟರು.

"ನೂಪುರ ನನ್ನ ಮಗಳಲ್ಲ ನಿಮ್ಮ ಮಗಳು. ಅವಳೇನು ಮಾಡಿದ್ರೂ ಹೊಟ್ಟೆಗೆ ಹಾಕ್ಕೊಳ್ಳಿ. ಅವಳಿಗೇನು ತಿಳಿಯೋಲ್ಲ !" "ಪರ್ವಾಗಿಲ್ಲ ಬಿಡಿ ವಯಸ್ಸೆ ಹಾಗೇ-ನೀವೇನು ಯೋಚ್ನೆ ಮಾಡ್ಬೇಡಿ. ಅವ್ಳು ನಮ್ಮನೆ ಮಗ್ಳು ಸೊಸೆ ಎರಡೂ ಆಗಿದ್ದಾಳೆ !"

ಲಲಿತಮ್ಮ ಕಾವೇರಮ್ಮ ಸಂಜೀವಯ್ಯನವರನ್ನು ಮುಂಬಾಗಿಲವರೆಗೆ ಬಿಟ್ಟುಬಂದರು.

"ವರ್ಧಮಾನ ಇನ್ನೂ ಸ್ನಾನ ಮಾಡ್ತಾ ಇದ್ದಾನೇನೋ ಅವನ್ಗೆ ಹೇಳಿಬಿಡಿ." ಸಂಜೀವಯ್ಯ ಕಾವೇರಮ್ಮನೊಂದಿಗೆ ಹೊರಟರು.

ಅವರತ್ತ ಹೋಗುತ್ತಲೇ ಲಲಿತಮ್ಮ ನಿಟ್ಟುಸಿರಿಟ್ಟರು. ಸಧ್ಯ ನೂಪುರ ಹುಚ್ಚು ಹುಚ್ಚಾಗಿ ಆಡಲಿಲ್ಲವಲ್ಲ! ದೇವರಮನೆಗೆ ಅರಿಸಿನ ಕುಂಕುಮ ಒಳಗಿಡಲು ಬಂದರು. ಬಂದವರು ಅಲ್ಲಿಯೇ ನಿಂತುಬಿಟ್ಟರು. ನೂಪುರ ಹಿಡಿ ಹಿಡಿ ಕುಂಕುಮ ತೆಗೆದು ಹಣೆಗೆ ಬಳಿದುಕೊಳ್ಳುತ್ತಿದ್ದಳು. ಅರಸಿನ ವನ್ನೆಲ್ಲಾ ತಲೆಯ ಮೇಲೆ ಸುರಿದುಕೊಂಡಿದ್ದಳು.

"ನೂಪುರ ಇದೇನಮ್ಮ ಅರಸಿನ ಕುಂಕುಮ ಹೀಗೆ ಚೆಲ್ಲಾಡ್ತೀ? ಹಾಗೆಲ್ಲಾ ಮಾಡ್ಬಾರ್ದು" ಲಲಿತಮ್ಮ ಅವಳ ಕೈಯಿಂದ ಅರಸಿನ ಕುಂಕುಮದ ಬಟ್ಟಲನ್ನು ಕಿತ್ತುಕೊಳ್ಳಲು ಬಂದಾಗ ಅವಳು ಕರ್ಕಶವಾಗಿ ನಕ್ಕು ಅವರನ್ನು ನೂಕಿದಳು. ನೂಕಿದ ರಭಸಕ್ಕೆ ಲಲಿತಮ್ಮ ಮಾರು ದೂರ ಹೋಗಿ ಹೂಪಿನ ಬುಟ್ಟಿಯ ಮೇಲೆ ದೊಪ್ಪನೇ ಬಿದ್ದಿದ್ದರಿಂದ ಅಷ್ಟು ಪೆಟ್ಟು ತಗಲಿಲ್ಲ. ಗಂಟಲೆತ್ತಿ ಕೂಗಿದರೆ ಅಡಿಗೆ ರಂಗಮ್ಮ, ಕೆಲಸದ ನಿಂಗಿ, ಸಿದ್ದಮ್ಮ, ಬಸಮ್ಮ, ಎಲ್ಲಾ ಬಂದರೆ ಎಲ್ಲರಿಗೂ ಸೊಸೆಯ ಹುಚ್ಚು ತಿಳಿದೀತೆಂದು ಲಲಿತಮ್ಮ ತಾವೇ ಸಾವರಿಸಿಕೊಂಡು ಎದ್ದರು. ಅವರಿಗೆ ತಮ್ಮ ಅಜ್ಜಿ ಮಾಡುತ್ತಿದ್ದುದು ನೆನಪಿಗೆ ಬಂದಿತ್ತು ಅಕ್ಕನ ಮಗು ಅತೀ ಹಟಮಾರಿ. ಹಟಮಾಡಿ ಅಳಲು ಪ್ರಾರಂಭಿಸಿದರೆ ಉಸಿರು ಕಟ್ಟುವವರೆಗೆ ಅಳುತ್ತಿದ್ದ. ಆಗ ಅಜ್ಜಿ ತಣ್ಣೀರು ತಂದು ಮುಖಕ್ಕೆ ಎರಚುತ್ತಿದ್ದರು. ಕೂಡಲೇ ಮಗು ಹಟ ನಿಲ್ಲಿಸುತ್ತಿತ್ತು! ಅವರ ಕಣ್ಣಿಗೆ ಬೆಳ್ಳಿ ಚೊಂಬಿನಲ್ಲಿದ್ದ ನೀರು ಕಂಡಿತು. ಅದನ್ನೆತ್ತಿ ರೊಪ್ಪನೇ ಅದರಲ್ಲಿದ್ದ ನೀರನ್ನು ನೂಪುರನ ಮುಖಕ್ಕೆರೆಚಿದರು. ಅವಳು ಬೆಚ್ಚಿ ಸಣ್ಣಗೆ ಚೀರಿದಳು, ಅವಳ ಮುಖದಲ್ಲಿದ್ದ ವಿಕಾರತೆ ನಿಧಾನ ವಾಗಿ ಮಾಯವಾಯಿತು. ತಾನೇ ಅರಸಿನ, ಕುಂಕುಮದ ಬಟ್ಟಲುಗಳನ್ನು ದೂರ ಸರಿಸಿದಳು. ಅತ್ತೇ, ಕುಂಕುಮ ಚೆಲ್ಲಿಹೋಯ್ತು!"

ಲಲಿತಮ್ಮ ಉಸಿರ ಬಿಗಿ ಹಿಡಿದು ತಾಳ್ಮೆಯಿಂದ ಹೇಳಿದರು. "ಹೋಗ್ಲಿ ಬಿಡು. ಎಲ್ಲಾ ಬಳಿದಿಟ್ಟರಾಯ್ತು! ನೀನು ಬಚ್ಚಲ ಮನೆಗೆ ನಡೀ, ತಲೇಗೆ ನಾಲ್ಕು ಚೊಂಬು ನೀರ್ಹಾಕ್ತೀನಿ," ಅವಳ ತೋಳು ಹಿಡಿದುಕೊಂಡು ಬಚ್ಚಲ ಮನೆಗೆ ಕರೆದೊಯ್ದರು.

"ರಂಗಮ್ಮ, ಮಾನೂಗೆ, ಕಾಫಿ, ತಿಂಡಿ ಕೊಟ್ಬಿಡಿ"

ಬಚ್ಚಲ ಮನೆಗೆ ಕರೆದೊಯ್ದು ತಣ್ಣೀರು ಸುರಿದು ನೂಪುರನಿಗೆ ಹೇಳಿದರು "ಸೋಪು ಹಾಕಿ ಮುಖ ತಲೆತೊಳ್ಕೋ ಹೀಗೆಲ್ಲಾ ನೀನು ಹುಚ್ಚು ಹುಚ್ಚಾಗಿ ಆಡಿದ್ರೆ ನೋಡ್ದೋರು ಹುಚ್ಚಿ ಅಂತಾರೆ !"

ನೂಪುರು ಕಮಕ್ಕಿಮಕ್ಕೆನದೇ ಮುಖ, ತಲೆ ಉಜ್ಜಿ ತೊಳೆದು ಕೊಂಡಳು.

"ಬಟ್ಟೆ ಎಲ್ಲಾ ಬಿಚ್ಚಿ ಹಾಕಿ ಮೈ ಕೈಕಾಲೆಲ್ಲಾ ಚೆನ್ನಾಗಿ ಉಜ್ಕೊಂಡು ಸ್ನಾನ ಮಾಡು, ಬಟ್ಟೆ ತಂದ್ಕೊಡ್ತೀನಿ ! ಬಕ್ಕೆಟ್ನಲ್ಲಿ ನೀರಿದೆ ನೋಡೂ" ಅವರು ಅವಳ ಕೈಲಿ ಬಿಸಿನೀರು ಮುಟ್ಟಿಸದೇ ತಣ್ಣೀರು ತುಂಬಿದರು.

ವರ್ಧಮಾನ ಅದೇ ತಾನೇ ಸ್ನಾನ ಮುಗಿಸಿ, ತಲೆ ಬಾಚಿಕೊಳ್ಳುತ್ತಿದ್ದ. ರಂಗಮ್ಮನಾಗಲೇ ಅವನಿಗಾಗಿ ಟೇಬಲ್ಲಿನ ಮೇಲೆ ತಿಂಡಿ ಕಾಫಿಯಿಟ್ಟಿದ್ದರು.

"ಯಾಕಮ್ಮ ನೀನು ಅವಳ್ಗೆ ಸ್ನಾನ ಮಾಡಿಸ್ತಾ ಇದ್ದೀ ? ಅವ್ಳೇನೂ ಎಳೇ ಮಗೂನಾ ?"

"ಅವಳಿಗೆ ಜ್ವರಾ ಇತ್ತಲ್ಲಾ, ಏನಾದ್ರೂ ಹೆಚ್ಚೂ ಕಡಿಮೆ ಆದೀತೂಂತಾ ಮಾಡಿಸ್ದೆ– ನಾಳೆ ಅವಳ ತಂದೆ ಬಂದು ಕರ್ಕೊಂಡು ಹೋಗ್ತಾರಂತೆ. ಕಳಿಸಿಬಿಡೋಣ ಅಲ್ಲಿಗೆ ಹೋದ್ರೆ ಸರಿಯಾಗಬಹುದು !"

"ಹೂಂ !" ವರ್ಧಮಾನ ಮೊಟಕಾಗಿ ಉತ್ತರಿಸಿದ. ಮದುವೆ ಹೆಂಡತಿ ಎಂಬ ದಾಂಪತ್ಯದ ಸುಖದ ಬಗ್ಗೆ ಕನಸು ಕಟ್ಟಿದ್ದ ಅವನಿಗೆ ಬರಸಿಡಿಲಂತೆ ನೂಪುರ ಅದನ್ನು ಚೂರು ಚೂರು ಮಾಡಿದ್ದಳು. ಲಲಿತಮ್ಮ ನೂಪುರನ ಸೀರೆಯೊಂದನ್ನು ಕೈಗೆತ್ತಿಕೊಂಡು ನಡೆದರು. ನೂಪುರ ತಣ್ಣೀರಿನಲ್ಲೇ ಸ್ನಾನ ಮಾಡಿ ಮುಗಿಸಿದ್ದಳು. "ಅತ್ತೇ, ತಣ್ಣೀರು ಹಾಕ್ಕೊಂಡ್ರೆ ಚಳಿ ಆಗುತ್ತೆ !"

"ಹೌದಮ್ಮ, ಆದ್ರೆ ಡಾಕ್ಟರು ನಿಂಗೆ ತಣ್ಣೀರ್ನಲ್ಲೇ ಸ್ನಾನ ಮಾಡೂಂತ ಹೇಳಿದ್ದಾರೆ. ಉಷ್ಣ ಇಳಿದರೆ ಜ್ವರ ಬರೋಲ್ವಂತೆ ." ಸೊಸೆಗೆ ಟವಲು, ಸೀರೆ ಕೊಟ್ಟರು.

"ಬೇಗ ಬೇಗ ಒರಸ್ಕೊಂಡು ರೂಮಿಗೆ ಹೋಗಿ ಬಟ್ಟೆ ಹಾಕ್ಕೋ" ಅವಳು ಸೀರೆ ಸುತ್ತಿಕೊಂಡು ಹೋಗುವವರೆಗೆ ಕಾದಿದ್ದು ಅವಳು ರೂಮಿನತ್ತ ಹೋಗುತ್ತಲೇ ದೇವರ ಮನೆಯಲ್ಲಿ ಹರಡಿದುದನ್ನು ತೆಗೆದಿಡಲು ಹೊರಟರು.

ಸೀರೆ ಸುತ್ತಿಕೊಂಡು ಬಂದ ನೂಪುರನನ್ನು ವರ್ಧಮಾನ ಕನ್ನಡಿಯಲ್ಲಿ ನೋಡಿದ. ತಲೆಗೆ ಮುಖಕ್ಕೆ ಅಂಟಿಕೊಂಡಿದ್ದ ಕೂದಲು, ಮೈಗಂಟಿಕೊಂಡಂತಿದ್ದ ಸೀರೆ ! ಅವನನ್ನು ನೋಡುತ್ತಲೇ ನೂಪುರ ನಾಚಿ ಮುದುರಿ ನಿಂತಳು.

"ಸ್ವಲ್ಪ ಹೊರಗೆ ಹೋಗ್ತೀರಾ ?"

ತನ್ನೊಡನೇ ಸರಿಯಾಗಿ ಮಾತನಾಡಿದ ಅವಳತ್ತ ನೋಡಿದ. ಮುಖ ನಿರ್ಮಲವಾಗಿತ್ತು. ಕಣ್ಣುಗಳಲ್ಲಿ ನಾಚಿಕೆ ಮಿನುಗಿತ್ತು, ಇವಳು ಹೀಗೇ ಇರಬಾರದೇ ?

"ಮಾಡ್ಕೋ ನಾನು ನಿನ್ನ ಕಡೆ ನೋಡೋಲ್ಲ !"

ವರ್ಧಮಾನ ಬೇಕಾಗಿಯೇ ಹೇಳಿದ–

"ಊಂ ಹುಂ ! ನಂಗೆ ನಾಚ್ಕೆ ಆಗುತ್ತೆ. ಪ್ಲೀಸ್ ಹೊರಗೆ ಹೋಗಿ !"

ಅವಳು ಹೇಳಿದಾಗ ಅಚ್ಚರಿಯಿಂದ ನೋಡಿದ. ಇವಳೇನೇ ಹಿಂದಿನ ರಾತ್ರಿ ತನ್ನ ಮುಂದೆ ಬಟ್ಟೆ ಬರೆ ಕಿತ್ತೆಸೆದವಳು ! ಈಗ ನಾಚಿಕೆಯೇ ?

"ಸರಿ ಹೋಗ್ತೀನಿ" ವರ್ಧಮಾನ ಹೊರಗೆ ಬಂದ, ಕೊಂಚ ಹೊತ್ತಿನಲ್ಲಿ ನೂಪುರ ಸೀರೆಯುಟ್ಟು ಹಣೆಗಿಟ್ಟುಕೊಂಡು ಒದ್ದೆ ಕೂದಲನ್ನು ಟವಲಿನಿಂದ ಒರೆಸಿಕೊಳ್ಳುತ್ತಾ ಬಂದಳು. "ಹೊರಗೆ ಬಿಸಿಲಲ್ಲಿ ನಿಂತು ತಲೆ ಒರೆಸಿ ಕೊಳ್ಳಲಾ !"

"ನಿನ್ನಿಷ್ಟ" ವರ್ಧಮಾನ ಹೇಳಿದ. ಅವಳು ಸರಿಯಾಗಿದ್ದಾರೆ ಸಾಕು !

ಅವಳು ಹೊರಗೆ ಬಿಸಿಲಲ್ಲಿ ತಲೆ ಒಣಗಿಸಿಕೊಳ್ಳುತ್ತಾ ನಿಂತಳು. ಅವಳನ್ನ ರಸ ಬಂದ ಲಲಿತಮ್ಮ ಅವಳು ಬಿಸಿಲಲ್ಲಿ ನಿಂತಿದ್ದು ಕಂಡು ಕೂಗಿದರು.

"ಬಿಸ್ಲಲ್ಲಿ ನಿಂತ್ಕೊಬೇಡಾ ಬಾ ಒಳಗೆ" ಆದರೆ ಅಲ್ಲೇ ನಿಂತರು. ಇದೇಕೆ ಮನೆಯ ಮುಂದಿರುವ ಮಾವಿನ ಮರ ಒಣಗಿಹೋಗಿದೆ ;

ಹಿಂದಿನ ದಿನ ಬೆಳಿಗ್ಗೆ ಅದರಿಂದಲೇ ಸೊಪ್ಪು ಕಿತ್ತಿಸಿ ತೋರಣ ಕಟ್ಟಿಸಿರ ಲಿಲ್ಲವೇ ?

ಅಷ್ಟು ಹೊತ್ತಿಗೆ ರಾಮಲಿಂಗಯ್ಯನವರಿಗೆ ಎಚ್ಚರವಾಗಿ ಅವರೂ ಎದ್ದು ಬಂದರು.

"ಏನೇ ಲಲ್ತಾ ಅದೂ ?"

"ಅಪ್ಪ, ಬಾ ಇಲ್ಲಿ ನೋಡೂ, ಮಾವಿನ ಮರ ನೆನ್ನೆ ಬೆಳ್ಳಿಗ್ಗೆ ನಳನಳಿಸುತ್ತಾ ಇತ್ತು. ಈಗ ನೋಡಿದ್ರೆ ಮರ ಸುಟ್ಟು ಹೋದ ಹಾಗೆ ಆಗಿ ಎಲೆಗಳೆಲ್ಲಾ ಕಮರಿಹೋಗಿದ್ಯಲ್ಲಾ !" ಲಲಿತಮ್ಮ ಹೇಳಿದಾಗ ಅವರ ಕಣ್ಣುಗಳು ನೂಪುರನ ಮೇಲೆ ಕೇಂದ್ರೀಕೃತವಾಗಿತ್ತು.

"ಹೌದು ನಾನೂ ನೆನ್ನೆ ನೋಡಿದ್ದ. ನೆನ್ನೆ ಮಳೆ ಇಲ್ಲ, ಸಿಡಿಲು ಗುಡುಗು ಇಲ್ಲ."

'ಸಿಡ್ಡೇನಾದ್ರೂ ಬಡೀತೂ ಅಮ್ಮೇಕೆ ! ಯಾಕೆ ಹೀಗಾಯ್ತು !' ರಾಮಲಿಂಗಯ್ಯ ಚಿಂತಾಕ್ರಾಂತರಾದರು.

ಸಭಾಪತಿ ಶಾಸ್ತ್ರಿಗಳು ಬಂದಾಗ ಒಂಭತ್ತೂವರೆಯಾಗಿತ್ತು. ನೂಪುರ ತಲೆಯೊರೆಸಿಕೊಂಡು ಮುಖಕ್ಕೆ ಅಲಂಕಾರ ಮಾಡಿಕೊಂಡು ಹೊಸ ಸೀರೆ ಯೊಂದನ್ನು ಉಟ್ಟು ರೂಮಿನಲ್ಲಿ ಕುಳಿತಿದ್ದಳು. ವರ್ಧಮಾನ ಹೊರಗಿನ ವರಾಂಡದಲ್ಲಿ ತಾತನೊಡನೆ ಅವಳ ಬಗ್ಗೆಯೇ ಮಾತಾಡುತ್ತಾ ಕುಳಿತಿದ್ದ.

"ಹಾ ನಚಿಕೇತ್ ನೆನ್ನೆ ನೋಡಿ ಹೋದರಲ್ಲಾ, ಫೋನು ಮಾಡಿದ್ದೀನಿ. ಹತ್ತು ಗಂಟೆಗೆ ಬಂದುಹೋಗ್ತೀನೀಂತಾ ಅಂದಿದ್ದಾರೆ. ಅವರ್ನ ಕೇಳಿ ನೂಪುರನ್ನ ಯಾರಾದ್ರೂ ಸೈಕಿಯಾಲಿಜ್‌ಸ್ಟ್ ಹತ್ರ ಕರ್ಕೊಂಡು ಹೋಗಿ ತೋರಿಸ್ಬೇಕೂ !"

"ಬನ್ನಿ, ಬನ್ನಿ ಶಾಸ್ತ್ರಿಗಳೇ–"

ರಾಮಲಿಂಗಯ್ಯನವರು ಶಾಸ್ತ್ರಿಗಳನ್ನು ನೋಡುತ್ತಲೇ ಒಳಗೆ ಕರೆದರು.

"ಏನಯ್ಯ ಮದುವಣಿಗಾ, ಏನಂತಾಳೆ ಹೆಂಡತಿ ?"

ಸಭಾಪತಿ ಶಾಸ್ತ್ರಿಗಳು ವರ್ಧಮಾನನತ್ತ ನೋಡಿ ನಕ್ಕರು.

"ಅಂತೂ ಅಯ್ಯನವರು ಮೊಮ್ಮಗನ ಮದ್ವೆ ಮಾಡಿ ಮುಗಿಸಿಬಿಟ್ರು. ಇನ್ನು ಮರಿಮಗನನ್ನು ನೋಡಿದರೆ ಆಯ್ತು !"

ವರ್ಧಮಾನ ಅಲ್ಲಿಂದ ಎದ್ದು ಉತ್ತರಿಸದೇ ಹೊರಟುಹೋದಾಗ ಶಾಸ್ತ್ರಿಗಳು ಉತ್ತರೀಯದಿಂದ ಹಣೆ ಒರೆಸಿಕೊಂಡರು.

"ಯಾಕೆ ? ಏನ್ಸಮಾಚಾರ"

"ಒಳಗೆ ಬನ್ನಿ ಶಾಸ್ತ್ರಿಗಳೇ ಎಲ್ಲಾ ಹೇಳ್ತೀನಿ–ಲಲಿತನಿಗಂತೂ ತಲೆ ಕೆಟ್ಟು ಹೋಗಿದೆ. ನಾವೇನೋ ಅಂದ್ಕೊಂಡ್ರೆ ಅದೇನೋ ಆಗೋಗಿದೆ." ರಾಮ ಲಿಂಗಯ್ಯನವರು. ಶಾಸ್ತ್ರಿಗಳನ್ನು ಒಳಗೆ ಕರೆದೊಯ್ದರು. ಪೂಜಾ ಗೃಹದಲ್ಲಿದ್ದ ಲಲಿತಮ್ಮನ ಬಳಿಗೇ ನೇರವಾಗಿ ಕರದೊಯ್ದು ಅವರಿಗೆ ಕೂಡಲು ಮಣೆ ಕೊಟ್ಟರು.

"ಲಲ್ತೂ ನೋಡಮ್ಮ ಶಾಸ್ತ್ರಿಗಳು ಬಂದಿದ್ದಾರೆ. ಅದೇನು ಹೇಳ ಬೇಕೋ, ಮಾಡಬೇಕೋ ಎಲ್ಲಾ ನೀನೇ ನೋಡಿಕೋ. ನಾನು ಸ್ನಾನ ಮಾಡಿ ಸ್ವಲ್ಪ ಹೊರಗೆ ಹೋಗಿ ಬರ್ತೀನಿ...."

ತಂದೆ ಇಳಿ ವಯಸ್ಸಿನಲ್ಲಿ ಒಬ್ಬರೇ ಹೊರಗೆ ತಿರುಗುವುದನ್ನು ತಡೆಯಲು

ಲಲಿತಮ್ಮನಿಗೆ ಮನಸ್ಸಾದರೂ ಯಾವುದೋ ಕಾರ್ಯನಿಮಿತ್ತವಾಗಿ ಹೊರಡ ಲಿಚ್ಛಿಸಿದ ಅವರನ್ನು ತಡೆಯಲು ಮನಸ್ಸು ಬಾರದಾಯಿತು.

ಲಲಿತಮ್ಮ ಹೇಳಿದುದೆಲ್ಲವನ್ನೂ ಕೇಳಿದ ಶಾಸ್ತ್ರಿಗಳು ವರ್ಧಮಾನನ, ನೂಪುರನ ಜಾತಕ ಕೇಳಿದರು. ಜಾತಕಗಳನ್ನು ಹಿಡಿದು ಕುಳಿತು ಲೆಕ್ಕಾಚಾರ ಮಾಡಿ ಹೇಳಿದರು.

"ಈ ಮದ್ವೆ ಲಗ್ನ ಪ್ರಶಸ್ತಿವಾಗಿದ್ದರೂ ಹುಡುಗೀಗೆ ಈಗ ಶನಿಕ್ರೂರ ವಾಗಿದ್ದಾನೆ. ಅದರಿಂದ ವರ್ಧಮಾನನಿಗೂ ತಾಪತ್ರಯವಾಗುತ್ತೆ ! ಈ ಮನೆಗೂ ಕಷ್ಟಗಳು ಬರಬಹುದು !"

"ಅಲ್ಲಾ ಶಾಸ್ತ್ರಿಗಳೇ ಹುಡುಗ ಹುಡುಗೀ ಜಾತಕನೋಡಿ ನೀವು ತುಂಬಾ ಪ್ರಶಸ್ತವಾಗಿದೇಂತಾ ಅಂದಿದ್ರಲ್ಲಾ ಅವೊತ್ತು ! ಆಗ ಯಾಕೆ ಈ ಶನಿ ದೋಷದ ಬಗ್ಗೆ ಹೇಳಲಿಲ್ಲ ?"

"ಎಲ್ಲಾದ್ರೂ ಉಂಟೇಮ್ಮ. ಹುಡುಗ ಹುಡುಗೀ ಗ್ರಹ ಮೈತ್ರಿ, ರಜ್ಜು ಕೂಟ, ಯೋನಿ ಕೂಟ, ಇವುಗಳ್ನ ಜಾತಕ ಮದ್ವೆಗೆ ನೋಡ್ತಾ ಹೇಳೋದೂ ನೀವು ಹುಡುಗೀದೇ ಬೇರೇ ಜಾತಕ ಕೊಟ್ಟು ಕೇಳಿದ್ರೆ ಎಲ್ಲಾ ಕೂಲಂಕುಷವಾಗಿ ಹೇಳ್ತಾ ಇದ್ದೆ..."

"ಈಗೇನು ಬಿಡಿ. ಅಂತಹ ತೊಂದರೆಯೇನಿಲ್ಲ. ನವಗ್ರಹ ಶಾಂತಿ ಮಾಡಿಸಿ ಬಿಡಿ. ಶನಿಮಹಾತ್ಮೆ ಓದಿಸಿ, ಶನಿಗೆ ಅರ್ಚನೆ ಮಾಡಿ, ಯಂತ್ರ ಬರೆಸಿ, ಹುಡುಗಿಗೆ ಕಟ್ಟಿಸಿ ಬಿಡಿ. ಸಿಡಿಲಿನಂತೆ ಬರೋದು ಮಿಂಚಂತೆ ಬಂದು ಹೋಗಿಬಿಡುತ್ತೆ.."

"ಹೇಗಾದ್ರೂ ಮಾಡಿ ಶಾಸ್ತ್ರಿಗಳೇ ನಂಗೇಕೋ ಭಯವಾಗಿದೆ. ನಮ್ಮ ಯಜಮಾನ್ರ ಮನೆ ವಿಚಾರ ನಿಮ್ಗೆ ಗೊತ್ತಿದ್ಯಲ್ಲಾ. ಅವರು ಮಾಡಿದ ಪಾಪಕ್ಕೆ ನನ್ನ ಮಗ, ಸೊಸೆ ಬಾಳು ಹಾಳಾಗ್ಬಾರ್ದು !" ಲಲಿತಮ್ಮ ಕಣ್ಣೀರ್ಗರೆದಾಗ ಶಾಸ್ತ್ರಿಗಳು ಎದ್ದು ನಿಂತರು.

"ಗ್ರಹಶಾಂತಿಗೆ ಮಧ್ಯಾಹ್ನ ಹನ್ನೆರಡು ಗಂಟೆಗೆ ಪ್ರಶಸ್ತವಾಗಿದೆ. ನಾನು ಒಂದು ಪಟ್ಟಿ ಬರೆದುಕೊಡ್ತೀನಿ-ಎಲ್ಲಾ ಸಾಮಾನೂ ಅಷ್ಟೊತ್ತಿಗೆ ತರಿಸಿಟ್ಟು ಬಿಡಿ. ಪೂಜೆ ಮಾಡಿ, ಶಾಂತಿ ಮಾಡಿ ಪೂರ್ಣಾಹುತಿ ಕೊಟ್ಟು ಯಂತ್ರ ಕಟ್ಟಿಬಿಡೋಣ. ನೀವು ನಿಶ್ಚಿಂತೆಯಾಗಿರಿ. ಅವರು ಬೇಕಾದ ಸಾಮಾಗ್ರಿ ಗಳನ್ನೆಲ್ಲಾ ಪಟ್ಟಿಮಾಡಿ ಲಲಿತಮ್ಮನ ಕೈಗಿಟ್ಟು ಹೇಳಿದರು.

"ಸೊಸೇನ್ನ ಕರೀರಿ. ಒಂದ್ಸಲ ನೋಡಿಬಿಡ್ತೀನಿ"

"ನ ಪು ಾ. ನೂ ರಾ...." ಲಲಿತಮ್ಮ ಕರೆದರು.

ನೂಪುರ ನಿಧಾನವಾಗಿ ನಡೆದು ಬಂದಳು. ಶಾಸ್ತ್ರಿಗಳು ಅವಳನ್ನೇ ದಿಟ್ಟಿಸಿ ನೋಡಿ ಕೈಲಿದ್ದ ಮಂತ್ರಾಕ್ಷತೆಯನ್ನು ಅವಳ ಮೇಲೆ ಹಾಕಿದಾಗ ಅವಳು ಬೆಚ್ಚಿದಳು.

"ಏನಿಲ್ಲ ಲಲಿತಮ್ಮ. ಹುಡುಗಿ ಹೆದರಿಬಿಟ್ಟಿದ್ದಾಳೆ ಅಷ್ಟೆ. ನೋಡ್ತಾ ಇರಿ" ಶಾಸ್ತ್ರಿಗಳು ನೂಪುರನಿಗೆ ಹೇಳಿದರು.

"ನಮಸ್ಕಾರ ಮಾಡಮ್ಮ"

ನೂಪ್ಪುರ ಅವರತ್ತ ಕಡೆಗಣ್ಣಿನಿಂದ ನೋಡಿದಳೇ ವಿನಾ ನಮಸ್ಕರಿಸಲಿಲ್ಲ. "ಮಾಡು ನೂಪ್ಪುರ. ಹಿರಿಯರಿಗೆ ನಮಸ್ಕಾರ ಮಾಡಿದ್ರೆ ತಪ್ಪೇನಿಲ್ಲ" ಲಲಿತಮ್ಮ ಹೇಳಿದಾಗ ಅವಳು ಬೆನ್ನು ತಿರುಗಿಸಿ ತನ್ನ ರೂಮಿನತ್ತ ನಡೆದಳು.

"ಶನಿ ಹಾಗೆ ಆಡಿಸ್ತಾನಮ್ಮಾ ! ಆಡ್ಲಿ ಬಿಡಿ. ಎಲ್ಲಾ ಸರಿ ಮಾಡ್ತೀನಿ"

ಶಾಸ್ತ್ರಿಗಳು ಹೊರಟರು.

ಶಾಸ್ತ್ರಿಗಳು ಹೋಗಿ ಅರ್ಧಗಂಟೆಯ ಹೊತ್ತಿಗೆಲ್ಲಾ ಡಾಕ್ಟರ್ ನಚಿಕೇತ್ ಬಂದರು....ವರ್ಧಮಾನ ಅವರಿಗಾಗಿಯೇ ಕಾಯುತ್ತಿದ್ದ.

"ಹಲೋ ಹೌಈಸ್ ಎವ್ವೆರಿ ಥಿಂಗ್ ?"

ಡಾಕ್ಟರ್ ಸ್ನೇಹದಿಂದ ವರ್ಧಮಾನನ ಭುಜದ ಮೇಲೆ ಕೈ ಹಾಕಿ ಕೇಳಿದರು.

ವರ್ಧಮಾನ ಅವರನ್ನು ರೂಮಿಗೆ ಕರೆದೊಯ್ದು ರಾತ್ರಿ ನಡೆದದ್ದೆಲ್ಲಾ ಹೇಳಿದ.

"ಮಾನೂ, ಇದೆಲ್ಲಾ ಸೈಕಿಕ್ ! ಎಲ್ಲೋ ಹುಡುಗಿ ಏನೋ ಮಾತು ಕತೆ ಕೇಳಿರ್ತಾಳೆ ಎಚ್ಚರವಾಗಿರೋ ಕಾನ್ಷಿಯಸ್ ಮೈಂಡ್‌ನಲ್ಲಿ ಅದು ಒಂದು. ಹಾದು ಹೋಗಿದ್ದರೂ ಸಬ್ ಕಾನ್ಷಿಯಸ್ ಮೈಂಡ್ನಲಿ ಅದು ಒಂದು ವೀಕ್ ಮೊಂಮೆಂಟ್‌ನಲ್ಲಿ ಅದು ರೇಕ್ ಅಪ್ ಆಗುತ್ತೆ.

"ಅದಕ್ಕೆ ನಾವು ಏನೇನೋ ಅಂದ್ಕೋತೀವಿ. ಅವ್ರು ಚಿಕ್ಕೋಳಾಗಾಗ್ಲೊ ಯಾವಾಗ್ಲೊ ಏನೋ ವಿಚಿತ್ರವಾದದ್ದು, ಭಯಪಡುವಂತಹದ್ದು ಕೇಳಿರ ಬೇಕೂ, ಇಲ್ಲ ನೋಡಿರಬೇಕು. ಅಷ್ಟೆ—ನಚಿಕೇತ್" ಅಲ್ಲಿಯೇ ಕುಳಿತು ವರ್ಧಮಾನನಿಗೆ ಧೈರ್ಯ ತುಂಬಿದರು.

ಒಂದು ಘಟನೆ ಹೇಳ್ತೀನಿ ಕೇಳು. ನನ್ನ ಅಕ್ಕನ ಮಗಳು ಚಿಕ್ಕೋಳಿದ್ದಾಗ ಯಾವ್ದೋ ಹೆಣಾನ್ನ ಎತ್ಕೊಂಡು ಹೋಗೋದು ನೋಡಿದ್ಲು ಕೆನ್ನೆ ತುಂಬಾ ಅರಿಸಿನ ಹಚ್ಚಿ ಹಣೆಗೆ ಇಷ್ಟಗಲ ಕುಂಕುಮ ಹಚ್ಚಿ, ಹೂವಿನಿಂದ ಅಲಂಕರಿಸಿದ್ದ ಮುತ್ತೈದೆ ಹೆಣ ಅದು ! ಆವೊತ್ತು ಅದ್ನ ನೋಡಿದ್ರಿಂದ ರಾತ್ರಿಯೆಲ್ಲಾ ಹೆದರಿ, ಕಿರಚಿ, ಹಾರಿಗೆಲ್ಲೆಲ್ಲಾ ಉಚ್ಚೆ ಮಾಡ್ಕೊಂಡಿದ್ಲು ಮಾರಾನೇ ದಿನಕ್ಕೆ ಆ ಹೆದರಿಕೆ ಕಡಿಮೆಯಾಗುತ್ತಾ ಬಂದು ಒಂದೆರಡು ತಿಂಗಳಲ್ಲಿ ಅವಳಿಗೆ ಮರೆತೇಹೋಗಿತ್ತು. ಆದ್ರೆ ಏನಾಯ್ತು ಗೊತ್ತಾ... ಅವಳ ಎದುರು ಮನೆಗೆ ಬಾಡಿಗೆಗೆ ಹೊಸಬರೊಬ್ಬರು ಬಂದರು, ಶ್ಯಾಮರಾಯರೂಂತಾ. ಆತನ ಹೆಂಡತಿ ಶಂಕರಮ್ಮ ಲಕ್ಷಣವಾದ ಸಂಪ್ರದಾಯಸ್ಥ ಹೆಂಗಸು ! ಹಣೆಗೆ ಕಾಸಿನಗಲ ಕುಂಕುಮ ಹಚ್ಚಿಕೊಂಡು, ಕೆನ್ನೆಗೆ ಅರಿಸಿನ ಬಳಿದುಕೊಂಡು, ಕೈತುಂಬಾ ಬಳೆ ಕತ್ತಿನ ತುಂಬಾ ಸರ ಹಾಕಿಕೊಳ್ಳುತ್ತಿದ್ದರು. ಅವರನ್ನು ನೋಡಿದರೆ ಅಕ್ಕನ ಮಗಳಿಗಾಗ್ತಾ ಇರ್ಲಿಲ್ಲ. ಅವರು ಬಂದ್ರೆ ಒಳಗೆ ಓಡಿ ಹೊರಟುಹೋಗೋಳು ಬರ್‍ತಾ ಬರ್‍ತಾ ಏನ್ಕಂಡ್ರೂ ಯಾರ್ನ್ಕಂಡ್ರೂ ಹೆದರೋಕ್ಕೆ ಶುರು ಮಾಡಿದ್ಲು. ನಂಗೆ ಅವಳ ಫೋಟೆಯೂ ತಿಳಿದಿತ್ತು. ಕ್ಲಿನಿಕಲ್ ಸೈಕಾಲಜಿಸ್ಟ ಹತ್ರ ಕರ್‍ಕೊಂಡು ಹೋಗಿ ಟ್ರೀಟ್‌ಮೆಂಟ್ ಕೊಡಿಸಿದೆ ಸರಿಹೋದ್ಲು. ಈಗ ಮದ್ವೆ ಮಾಡ್ಕೊಂಡು ಗಂಡ, ಮಕ್ಳೂಂತಾ ಹಾಯಾಗಿದ್ದಾಳೆ. ನಿನ್ನ ಹೆಂಡತೀನ್ನೋ ಅವರ ಮನೆ ಯವರ್‍ನ್ನೂ ಕೇಳಿ ನೋಡು ಏನಾದ್ರೂ ಹಾಗೆ ಹೆದರ್‍ಕೊಂಡಿದ್ಲಾಂತಾ–ವಿಚಾರ್‍ಸು ಈ ತರಹ ಸೈಕೋಸಿಸ್‌ನ ಕ್ಯೂರ್ ಮಾಡಬಹುದು !

ಅವರು ಹೇಳಿದುದು ಕೇಳಿ ವರ್ಧಮಾನನಿಗೆ ಸಮಾಧಾನವಾಯಿತು. ತಾನು ಮಾವನ ಮನೆಗೆ ಹೋಗಿ ವಿಚಾರಿಸಬೇಕು !

ರಾಮಲಿಂಗಯ್ಯನವರು ಕೈಯಲ್ಲಿ ಬೆತ್ತ ಹಿಡಿದು, ಕಣ್ಣಿಗೆ ದಪ್ಪ ಗಾಜಿನ ಕನ್ನಡಕ ಹಾಕಿಕೊಂಡು ಹೊರಟಾಗ ಲಲಿತಮ್ಮ ಕೂಗಿ ಹೇಳಿದರು.

"ಹುಷಾರು ಅಪ್ಪಾ, ರಸ್ತೆ ಕ್ರಾಸ್ ಮಾಡ್ತಾ ನಿಧಾನವಾಗಿ ಮಾಡು. ಮುದ್ದಯ್ಯನ ಜೊತೆಗೆ ಕರ್‍ಕೊಂಡು ಹೋಗ್ಬಾರ್‍ದಾ ? ನಾನು ಹೋಗೋ ಕಡೆಗೆ ಯಾರ್‍ನ್ನೂ ಕರ್‍ಕೊಂಡು ಹೋಗೋಕ್ಕಾಗೋಲ್ಲ ಒಬ್ನೇ ಹೋಗಿ ಬರ್‍ತೀನಿ. ನಂಗೆಲ್ಲಾ ಗೊತ್ತು ! ರಾಮಲಿಂಗಯ್ಯ ಹೊರಟೇಬಿಟ್ಟರು. ಪೇಟೆ ರಸ್ತೆ ದಾಟಿ ಗಲ್ಲಿಯೊಂದಕ್ಕೆ ಬಂದರು. ಸಣ್ಣ ಕೊರಕಲು ಗಲ್ಲಿಯ

ಸಂದಿಯಲ್ಲಿದ್ದ ಮನೆಗಳತ್ತ ಕಣ್ಣು ಹಾಯಿಸಿದರು. ಅಲ್ಲಿಯೇ ಆಡುತ್ತಿದ್ದ ಮಕ್ಕಳಲ್ಲಿ ಒಬ್ಬನನ್ನು ಕರೆದು ಕೇಳಿದರು.

"ಮಗೂ, ಇಲ್ಲಿ ರುದ್ರಣ್ಣನ ಮನೆ ಯಾವ್ದು ?"

"ಯಾವ ರುದ್ರಣ್ಣ ? ದೆವ್ವ ಬಿಡ್ಸೋ ರುದ್ರಣ್ಣನೇ ?" ಹುಡುಗ ಒರಟಾಗಿ ಕೇಳಿದ.

"ಹೂಂ... ಅವ್ನ ಮನೇನೇ..." ರಾಮಲಿಂಗಯ್ಯ ನಾಲ್ಕಾಣೆ ಬಿಲ್ಲೆ ತೆಗೆದು ಹುಡುಗನ ಕೈಗಿತ್ತರು.

"ಓ, ನೋಡಿ ಅಲ್ಲಿ ನೀಲಿ ಬಾಗಿಲಿಲ್ವಾ ? ಅದರ ಮೇಲೆ ಬೋರ್ಡಿದೆ, ನೋಡಿ ಶಕ್ತಿ ಔಷಧಾಲಯಾಂತ. ಅದೇ ಮನೆ !"

ರಾಮಲಿಂಗಯ್ಯ ನೀಲಿ ಬಾಗಿಲಿನ ಮನೆಯ ಮುಂದೆ ಬಂದು ನಿಂತರು. ಬಾಗಿಲ ಮೇಲಿದ್ದ ಬೋರ್ಡನ್ನು ಓದಿದರು. ಶಕ್ತಿ ಔಷಧಾಲಯ-ಇಲ್ಲಿ ಮಂತ್ರ, ಯಂತ್ರ ಪೂಜೆಗಳಿಂದ ಗುಣಪಡಿಸಲಾರದ ಕಾಯಿಲೆಗಳನ್ನು ಬಿಡಿಸಲಾಗುತ್ತೆ. ರುದ್ರಣ್ಣ ಅದರ ಕೆಳಗೆ ದೊಡ್ಡ ಅಕ್ಷರದಲ್ಲಿ ಬರೆದಿತ್ತು. ಕೈಲಿದ್ದ ಬೆತ್ತದಿಂದಲೇ ಮುಚ್ಚಿದ ಬಾಗಿಲು ತಟ್ಟಿದರು. ಬಾಗಿಲು ತೆರೆದಾಗ ಎದುರಿಗೆ ಅಡ್ಡ ಪಂಚೆಯುಟ್ಟಿದ್ದ ಸಣಕಲು ಮೈಯಿನ ಯುವಕನೊಬ್ಬ ನಿಂತಿದ್ದ. ಹಣೆಗೆ ವಿಭೂತಿ, ಕುಂಕುಮ ಇಟ್ಟಿದ್ದ ಅವನನ್ನು ರಾಮಲಿಂಗಯ್ಯ ಅರೆಕ್ಷಣ ದಿಟ್ಟಿಸಿದರು. ಅವನ ಕಣ್ಣುಗಳಲ್ಲಿ ಜೀವವೇ ಇದ್ದಂತಿರಲಿಲ್ಲ. ಹೆಣವೊಂದಕ್ಕೆ ಜೀವ ತುಂಬಿ ಬಂದಂತಿತ್ತು. ಕೈ ಕಾಲುಗಳು ಮರಗಟ್ಟಿದ್ದಂತಿದ್ದವು.

"ರುದ್ರಣ್ಣ ಇದ್ದಾನಾ ?"

* * * *

ಆ ಯುವಕ ಮಾತಾಡಲಿಲ್ಲ. ಬಂದವನಂತೆ ಹಾಗೆಯೇ ಒಳಗೆ ನಡೆದು ಹೋದ. ಒಳಗಿನಿಂದ ಕೆಂಪು ಬಣ್ಣದ ಕಚ್ಚೆ ಪಂಚೆಯುಟ್ಟು ಅದರ ಚುಂಗನ್ನು ಕೈಯಲ್ಲಿ ಹಿಡಿದು ಸ್ಥೂಲವನಂತಿದ್ದ ರುದ್ರಣ್ಣ ಬಂದ. ಅವನ ಪೊದೆಹುಬ್ಬು, ಹುರಿಮೀಸೆಯಲ್ಲಿ ಅಲ್ಲಲ್ಲಿ ನೆರೆಗೂದಲು ಬಂದಿತ್ತು. ಜಡೆಗಟ್ಟಿದ್ದ ಗುಂಗುರು ತಲೆಗೂದಲೆಲ್ಲಾ ಬೆಳ್ಳಗಾಗಿತ್ತು. ಹಣೆಯ ತುಂಬಾ ಬಳಿದಿದ್ದ ವಿಭೂತಿಯ ಮಧ್ಯ ದೊಡ್ಡ ಕುಂಕುಮ, ದಪ್ಪ ತುಟಿಗಳನ್ನು ಮೀರಿ ಮುಂದೆ ಬಂದಿದ್ದ

ನಾಲ್ಕು ಉಬ್ಬುಹಲ್ಲುಗಳು !–ಅರೆಕ್ಷಣ ರಾಮಲಿಂಗಯ್ಯನವರಿಗೇ ಅವನನ್ನು ನೋಡಿ ಹೆದರಿಕೆಯಾಯಿತು.

"ನಾನು ರಾಮಲಿಂಗಯ್ಯ...." ಅವರು ಹೇಳುತ್ತಿದ್ದಂತೆಯೇ ರುದ್ರಣ್ಣನ ಮುಖದಲ್ಲಿ ಪರಿಚಯದ ನಗೆ ಮಿಂಚಿತು.

"ಓಹೋ ಹೋ ಸಾಹ್ಕಾರ್ರು ಬರ್ಬೇಕೂ – ಶಾನೇದಿನಗಳಾಯ್ತು ನೋಡಿ ಇರ್ದೇನು ಬಡವನ ಮನೆಗೆ ಇಷ್ಟು ದೂರ....? ಇಪ್ಪತ್ತೈದು ಮೂವತ್ತು ವರ್ಷ ಆಗಿರ್ಬೇಕಲ್ವಾ ?"

ರುದ್ರಣ್ಣ ಅಲ್ಲಿಯೇ ಇದ್ದ ಈಚಲ ಚಾಪೆಯತ್ತ ಕೈ ತೋರಿದ. 'ಕೂತ್ಕೊಳ್ಳಿ, ಸಾಹ್ಕಾರೆ, ಬಂದೆ.' ಅವರನ್ನು ಕುಳ್ಳಿರಿಸಿ ಕತ್ತಲು ಗವಿಯಂತಿದ್ದ ಒಳಮನೆಯೊಳಗೆ ಹೋದ. ರಾಮಲಿಂಗಯ್ಯ ಸುತ್ತ ನಿರೀಕ್ಷಿಸಿದರು, ಎಲ್ಲಾ ಹಾಗೆಯೇ ಇದೆ. ಅದೇ ಶಕ್ತಿದೇವತೆಗಳ ಪಟಗಳು, ಬಣ್ಣ ಬಣ್ಣದ ಕ್ಯಾಲೆಂಡರುಗಳು, ಅದೇ ಕರಿಯ ಮರದ ಮುರುಕು ಮಂಚ. ಅದರ ಮೇಲೆ ಒಂದು ಮೇಲೊಂದು ಹೇರಿದ್ದ ಕೊಳಕು ಹಾಕಿದ್ದ ಗಾಜಿನ ಕೊಳವೆಗಳ ತೋರಣ, ಈಚಲು ಚಾಪೆಯ ಸುರಳಿಗಳು..! "ಏನ್ಹೇಳಿ ಸಾಹ್ಕಾರ್ರೇ.... ಮನೇಲೆಲ್ಲಾ ಚೆನ್ನಾಗಿದ್ದಾರಾ ? ಅವ್ರ್ಯಾವ್ರು ಚೆನ್ನಾಗಿದ್ದಾರಾ ? ಮೊಮ್ಮಗನಿಗೆ ಮದ್ವೆ ಆಯ್ತಾ ?"

ಅವರ ಮುಂದೆ ರುದ್ರಣ್ಣ ಬಂದು ಕುಳಿತ. ಒಳಗೆ ಕಾಲಿನ ಗೆಜ್ಜೆ. ಬಳೆಗಳ ಸದ್ದಾದರೂ ಯಾವ ಹೆಣ್ಣೂ ಹೊರಗೆ ಬರಲಿಲ್ಲ.

"ಹೂಂ-ಎಲ್ಲಾ ಚೆನ್ನಾಗಿದ್ದಾರೆ. ಮೊಮ್ಮಗನ ಮದ್ವೆಯಾಗಿ ಎರಡು ದಿನ ಆಯ್ತು !" ರಾಮಲಿಂಗಯ್ಯನವರು ಕೋಟಿನ ಒಳಜೇಬಿನಿಂದ ಒಂದಿಷ್ಟು ನೋಟುಗಳನ್ನು ತೆಗೆದು ಅವನ ಮುಂದಿಟ್ಟರು.

"ರುದ್ರಣ್ಣ, ಮೊದ್ಲು ಬಂದಾಗ ಮನೆ ಸೈಟಿನ ಪೂಜೆ ಮಾಡ್ಸಿ ಯಾವ್ದಾದ್ರೂ ದೋಷ ಇದ್ರೆ ತೆಗೆದುಬಿಡೂಂತಾ ಹೇಳಿದ್ದೆ. ಜ್ಞಾಪಕ ಇದ್ಯಾ ?

"ಹೂಂ, ಮರ್‍ಯಕ್ಕಾಗುತ್ತಾ ಆ ಪಾಂಡುರಂಗಯ್ಯನ ತಾಯಿ ಪಿಶಾಚಿ ಯಂತೋಳೂ-ಸೊಸೆಗೆ ಮಾಟ ಮಾಡಿ ಕೊಲ್ಸಿ, ಹಿಂದೆ ಹಿತ್ಲಲ್ಲಿ ಹೂತಿದ್ಳು ಅಲ್ವಾ ? ಅಮೇಲೆ ಸೈಟು ಅಗೆಸಿದಾಗ ಹೆಣ ಸಿಕ್ಲಿಲ್ಲ ಅಲ್ಲಾ ? ಅಷ್ಕೇ ತಾನೇ ನೀವು ನನ್ನ ಹತ್ರ ಬಂದುದ್ದು ! ಪೂಜೆ ಮಾಡಿಸ್ದೇ. ಪೂಜೆ ಮಾಡಿ ಮಂತ್ರಿಸಿದ್ದ ನಿಂಬೆ ಹಣ್ಣುಗಳ್ನ ಮಂತ್ರಿಸಿದ್ದ ವಿಭೂತಿ ಕುಂಕುಮದ ಕರಡಿಗೇನ್ನ ಮಣ್ಣಲ್ಲಿ ಹೂತಿಟ್ಟಿರಲಿಲ್ವೇ ? ಆಮೇಲೆ ಏನೂ ಕೆಡಕು ಆಗೋಲ್ವಾ ?"

"ಏನೂ ಕೆಡಕಾಗಲ್ಲ ರುದ್ರಣ್ಣ ! ಇಲ್ಲೀವರ್ಗೂ ಏನೂ ಆಗಲಿಲ್ಲ. ಆದ್ರೆ ನನ್ನ ಮೊಮ್ಮಗನ ಹೆಂಡ್ತೀನ್ನ ಮನೆ ತುಂಬಿಸ್ಕೋಳ್ಳೋಕೆ ಕರ್ಕೊಂಡು ಬಂದಾಗ್ಲಿಂದ ಆಗಬಾರದ್ದು ಆಗ್ತಾ ಇದೆ." ಅವನಿಗೆ ಎಲ್ಲಾ ವಿವರಿಸಿದರು.

ರುದ್ರಣ್ಣ ಕಣ್ಮುಚ್ಚಿ ಕುಳಿತು ಆಲಿಸಿದ. ಅವನ ಹುಬ್ಬುಗಳು ಗಂಟಿಕ್ಕಿದವು.

"ಹೂಂ. ಎಲ್ಲೋ ಆ ಲೌಡಿ ಮೆಟ್ಕೊಂಡಿದ್ದಾಳೆ." "ಅಂದ್ರೇ ! ?" ರಾಮಲಿಂಗಯ್ಯನವರು ಅಚ್ಚರಿಯಿಂದ ಕೇಳಿದರು. "ಹೆಣ ಸಿಕ್ಲಿಲ್ವಲ್ಲ ಸಾವ್ಕಾರ್ರೆ ! ಆ ಹೆಣ ಎಲ್ಲೋಯ್ತು ? ಹೆಣನ್ನ ಸುಟ್ರೋ, ಎಲ್ಲಾದ್ರೂ ಬೇರೆಕಡೆ ಹೂಳಿದ್ರೋ ಗೊತ್ತಾಗ್ಲಿಲ್ಲ. ಆ ಹೆಣದ ಬುರುಡೆ, ಅಸ್ತಿಗಳು ಸಿಕ್ಲಿಲ್ಲ. ಅದಕ್ಕೇನಾದ್ರೂ ಎಡವಟ್ಟು ಮಾಡಿದ್ರೆ. ಹೆಣ ಹಾಗೆ ಕೊಳತು ಉಳ್ಕೊಂಬಿಟ್ಟಿದ್ರೆ ಪಿಶಾಚಿಯಾಗಿ, ದೆಯ್ಯ ಆಗಿ ಪ್ರೇತಾತ್ಮ ಹೊಂದಿ ಕೊರಗ್ತಾ, ನರಳ್ತಾ ಇದ್ದಾಳೆ. ಅಂದಮೇಲೆ ಆ ಲೌಡಿ ಆ ಮನೆ ಸುತ್ಲೇ ಕಾಯ್ತಾ ಇದ್ಲೂಂತಾ ಕಾಣಿಸತ್ತೆ. ನಿಮ್ಮನೇಯವರ್ಗೆಲ್ಲಾ ಏನೂ ತಗ್ಲದಂತೆ ಮಂತ್ರಿಸಿ ಕೊಟ್ಟಿದ್ದೆ. ಸೊಸೆ ಕೂರಗ್ನಿಂದ ಬಂದಳು. ಮನೆ ಒಳ್ಗೆ ಕಾಲಿಡೋಕ್ಮುಂಚೆ ಅದ್ಕೇ ಮೆಟ್ಕಂಡಿದ್ದಾಳೆ. ಇನ್ನೂ ತುಂಬಾ ಹುಷಾರಾಗ್ಬೇಕು. ತಾನು ಸೊಸೆಯಾಗಿ ಪಾಡು ಪಟ್ಟಿದ್ದನ್ನು ಮರೆತಿಲ್ಲಾಂತ್ಮೇಲೆ ಅವ್ಳು ನಿಮ್ಮ ಮೊಮ್ಮಗನ ಸೊಸೆ ಪ್ರಾಣ ಹಿಂಡಿ ಹೀರಿಬಿಡ್ತಾಳೆ. ಅವ್ಳು ಮೇಲೆ ಬಂದ್ಮೇಲೆ ನಿಮ್ಮ ಮನೇನೇ ನಾಶಮಾಡ್ದೇ ಬಿಡೋಲ್ಲ. ಅವಳ ಜಾಗಕ್ಕೆ ನಿಮ್ಮ ಮಗಳ್ನ ತಂದ್ಕೊಂಡಿಲ್ವಾ ? ಕಾಯ್ತಾ ಇತ್ತೂಂತಾ ಕಾಣ್ಸತ್ತೆ ಪ್ರೇತಾ ! ಮದ್ವೆಗೆ ಮುಂಚೆ ಒಂದ್ಮಾತು ನನ್ನ ಹತ್ರ ಹೇಳ್ಬೇಕಾಗಿತ್ತು ನೀವು !"

ರಾಮಲಿಂಗಯ್ಯನವರ ಎದೆ ನಗಾರಿಯಂತೆ ಹೊಡೆದುಕೊಂಡಿತು.

"ಈಗೇನು ಮಾಡೋದು ರುದ್ರಣ್ಣ. ಎಷ್ಟೇ ಖರ್ಚಾದ್ರು ಪರ್ವಾಗಿಲ್ಲ ನೀನು ಏನಾದ್ರೂ ಮಾಡಿ ನನ್ನ ಮಾನು ಹೆಂಡ್ತಿ ಮೇಲೆ ಬಂದಿರೋ ದೆವ್ವನ ಬಿಡಿಸ್ಬೇಕೂ !"

ರುದ್ರಣ್ಣನ ಕಣ್ಣುಗಳು ನೋಟಿನ ಮೇಲೆ ಹರಿಯಿತು. "ಬಿಡಿ ಸಾವ್ಕಾರ್ರೇ ನಿಮಗೆ ದುಡ್ಡಿನ ಮಾತೇನು ! ನಾಳೆ ಬಂದು, ಆ ಹುಡುಗೀನ್ನ ನೋಡ್ತೀನಿ. ದೆವ್ವ, ಪ್ರೇತಾ ಎಂತಾದ್ದುಂತಾ ತಿಳ್ಕೋಬೇಕೂ. ಹಾಗೇ ಆ ಪಾಂಡುರಂಗಯ್ಯನ್ನ ಮೊದ್ಲನೇ ಹೆಂಡತಿಗೆ ಮಾಟ ಯಾರ ಹತ್ತಿರ ಮಾಡ್ಸಿದ್ರೂಂತ ತಿಳ್ಕೋಬೇಕು.... ವರದಾಚಾರೀಂತಾ ಕೇಳಿದ್ದೆ ಆದ್ರೆ ಅವ್ನು

ಈಗ ಎಲ್ಲಿದ್ದಾನೋ ! ಅವನೇನಾದ್ರೂ ಹೆಣ ಎತ್ಕೊಂಡ್ಹೋಗಿ ಪ್ರೇತಾನ್ನ ಕೈವಶ ಮಾಡ್ಕೊಂಡ್ಬಿಟ್ಟದ್ರೆ ಬಾಳಾ ಕಷ್ಟ ಆಗುತ್ತೆ !"

"ನಿಂಗೇನಾದ್ರೂ ವರದಾಚಾರಿ ಎಲ್ಲಿದ್ದಾನೇ ಅನ್ನೋದು ತಿಳಿದಿದ್ರೆ ಹೇಳು ನಾನು ಅವನ್ನೂ ಬೇಕಾದ್ರೆ ಹೋಗಿ ನೋಡ್ತೀನಿ !" ರಾಮಲಿಂಗಯ್ಯ ಹೇಳಿದಾಗ ರುದ್ರಣ್ಣ ತಡೆದ.

"ಬೇಡಾ ಸಾವ್ಕಾರೇ ಆ ಕೆಲ್ಸಮಾತ್ರ ಮಾಡ್ಬೇಡಿ ಹುಡುಗೀನ್ನ ನೋಡಿದೆ ದೆವ್ವ ಮೈಮೇಲೆ ಬಂದಾಗ ಅದ್ನ ಪ್ರಶ್ನೆ ಮಾಡಿದ್ರೆ ತಿಳೀತಿದೆ ವರದಾಚಾರಿ ನಾವು ಮಾಡೋದು ತಿಳೀಕೂಡ್ದು !"

"ಸರಿ. ರುದ್ರಣ್ಣ, ಎಲ್ಲಾ ನಿನಗೇ ಬಿಟ್ಟದ್ದೀನಿ. ಈ ಎರಡು ಸಾವಿರ ಈಗ ಕೊಟ್ಟಿರ್‍ತೀನಿ, ಆಮೇಲೆ ಅದೆಷ್ಟಾಗುತ್ತೆ ಹೇಳು ಕೊಡ್ತೀನಿ-" ರುದ್ರಣ್ಣ ಒಪ್ಪಿದ, ನೋಟಿನ ಗಂಟನ್ನು ಸೊಂಟಕ್ಕೆ ಸಿಕ್ಕಿಸಿದ. ರಾಮಲಿಂಗಯ್ಯನವರು ಎದ್ದು ನಿಂತರು.

"ನಾನು ಬರಲ್ಲಾ ?"

"ಊಂ ನಾಡಿದ್ದು ಬರ್‍ತೀನಿ. ಒಂದ್ವೇಳೆ ಮೈಮೇಲೆ ಬಂದ್ರೆ ರೂಮ್ನಲ್ಲಿ ಕೂಡ್ಹಾಕಿ ಅದೇನು ಕೇಳಿದ್ರೂ ಕೊಟ್ಬಿಡಿ. ರೇಗಿಸೋಕ್ಕೆ ಹೋಗ್ಬೇಡೀ-"

'ಅಂದ್ಹಾಗೆ ರುದ್ರಣ್ಣ, ಮನೆ ಮುಂದಿದ್ದ ಮಾವಿನ ಮರ ನೆನ್ನೆ ಬೆಳಿಗ್ಗೆ ಚೆನ್ನಾಗಿತ್ತು. ಇವತ್ತು ನೋಡಿದ್ರೆ ಎಲ್ಲಾ ಕಮರಿಹೋಗಿದೆ'

"ಆಂ ಅಂಗೇಳಿ. ಆ ದೆವ್ವ ಆ ಮರದಲ್ಲೇ ಅಡಗಿಕೊಂಡಿತ್ತು. ಹುಡ್ಗೀನ ನೋಡಿದ್ಕೂಡ್ಲೆ ಮೆಟ್ಕೊಂಡ್ಬಿಡ್ತು. ಅದಕ್ಕೇ ಮರ ಒಣಗಿ ಹೋಯ್ತು ! ಲೋ ವೀರಭದ್ರಾ !" ಕೂಗು ಹಾಕಿದ. ಅದೇ ಅಸ್ತಿಪಂಜರ ದಂತಿದ್ದ ಅಡ್ಡ ಪಂಚೆಯ ಯುವಕ ಬಂದು ನಿಂತು "ಇವನು ಯಾರು ?" ರುದ್ರಣ್ಣನನ್ನು ರಾಮಲಿಂಗಯ್ಯನವರು ಕೇಳಿದರು "ಮಗ್ನಾ ?"

"ಅಯ್ಯೋ ಇದಾ ?"

ಬಾಯಿಲ್ಲ, ಇವನ್ಗೆ ಕೊಳ್ಳಿದೆವ್ವದಕಾಟ ಆಗಿ, ಇವ್ನರಕ್ತ ಮಾಂಸ ಮಜ್ಜೆಎಲ್ಲಾ ನೆಕೊಂಡ್ಬಿಡ್ತು. ಮಾತು ನಿಂತ್ಹೋಯ್ತು. ಅದ್ನೆಲ್ಲಾ ನಿವಾರ್‍ಸಿ ನಾನೆ ಇಟ್ಕೊಂಡಿದ್ದೀನಿ, ನನ್ನ ಪೂಜೆಗೆ, ನಂಗೆ ಸಹಾಯ ಮಾಡ್ತಾನೆ ! ನನ್ನ ಮಗ, ಸೊಸೆ ಮಗಳು ಅಳಿಯ ಎಲ್ಲಾ ಬೇರೆ ಇದ್ದಾರೆ."

ರಾಮಲಿಂಗಯ್ಯ ಆ ಮನೆಯಿಂದ ಹೊರಬಿದ್ದರು. ಅವರಿಗೆ ಒಳಗೇ ಯಾವುದೋ ಅವ್ಯಕ್ತ ಭಯ ಕೆನ್ನಾಲಿಗೆ ಬಂತು.

ಅವರ ತಲೆಯ ತುಂಬಾ ರುದ್ರಣ್ಣ ಹೇಳಿದ ಮಾತೇ ತುಂಬಿತ್ತು. ಲಲಿತನಿಗೆ ಮೋಸವಾದುದು ತಮ್ಮಿಂದಲೇ. ಅವಳ ಬಾಳು, ಅವಳ ಮಗನ ಬಾಳು ತಾವು ಸರಿಪಡಿಸಲೇಬೇಕು, ಖರ್ಚೇಷ್ಟಾದರೂ ಆಗಲಿ ತಮ್ಮ ಕೊನೆಯುಸಿರುವವರೆಗೆ ತಾವು ಅದಕ್ಕಾಗಿ ಹೋರಾಡಲೇ ಬೇಕು ! ಒಂದು ವೇಳೆ ನೂಪುರನನ್ನು ಗಂಗೆಯೇ ಸುಟ್ಟಿಕೊಂಡಿದ್ದರೆ ಅದನ್ನು ಬಿಡಿಸಲು ತಾವು ಪ್ರಯತ್ನಿಸಲೇಬೇಕು. ನೊಂದ ಹೆಣ್ಣಿನ ಅತೃಪ್ತ ಆತ್ಮದ ದುಃಖದ ದಾವಾಗ್ನಿ ಮನೆಯನ್ನೇನು ಮರವೇನು, ಮನುಷ್ಯರನ್ನೇ ಸುಟ್ಟು ಹಾಕೀತು.

* * * *

ಶಾಸ್ತ್ರಿಗಳು ಪೂಜೆ ಪ್ರಾರಂಭಿಸಿದಾಗ ನೂಪುರನನ್ನು ಉತ್ತರಾಭಿಮುಖವಾಗಿ ಕೂಡಿಸಿ, ಹಣೆಗೆ ಅಮ್ಮನವರ ಕುಂಕುಮ ಹಚ್ಚಿ ಬಾಯಿಗೆ ಚಿಟಿಕೆ ವಿಭೂತಿಯನ್ನು ಶಾಸ್ತ್ರಿಗಳು ಹಾಕಿದರು. ನವಗ್ರಹಗಳ ಪೂಜೆಯನ್ನು ಸಾಂಗೋಪಾಂಗವಾಗಿ ಮಾಡಿ ಶಾಂತಿ ಮಾಡಿ ಪೂರ್ಣಾಹುತಿ ನೀಡಿ ಯಜ್ಞಕುಂಡದಿಂದ ಬೂದಿ ತೆಗೆದು ಮಂತ್ರಿಸಿ, ತಾಯಿತದಲ್ಲಿ ಹಾಕಿ ಕರಿಯ ಕಂಬಳಿದಾರಕ್ಕೆ ಅವನ್ನು ಕಟ್ಟಿ ನೂಪುರನ ಎಡಗೈ ತೋಳಿಗೆ ಕಟ್ಟಿದರು. ನೂಪುರ ಗಂಭೀರವಾಗಿಯೇ ಕುಳಿತಿದ್ದಳು. ಲಲಿತಮ್ಮನಿಗೆ ಸೊಸೆಗೆ ಆಗಲೇ ಗುಣವಾಗಿದೆಯೆಂಬ ನಂಬಿಕೆ ಮೂಡಿತ್ತು, ಆದರೂ ಆತಂಕ.

"ಶಾಸ್ತ್ರಿಗಳೇ ಎಲ್ಲಾ ಸರಿಹೋಗುತ್ತಾ ?"

"ಇದೇನಮ್ಮ ಹೀಗೆ ಕೇಳ್ತೀರಾ, ನನ್ನ ಯಂತ್ರದ ಬಲ ನಿಮಗೆ ಗೊತ್ತಿಲ್ಲ. ಆದದ್ದೆಲ್ಲ ಕೆಟ್ಟ ಕನಸೂಂತ ಅಂದ್ಕೊಂಡ್ಬಿಡಿ !"

"ನೂಪುರಾ ಬಾಮ್ಮಾ ಶಾಸ್ತ್ರಿಗೆ ನಮಸ್ಕರಿಸು !"

ಲಲಿತಮ್ಮ ಹೇಳಿದಾಗ ಅವಳು ವಿನೀತಳಾಗಿ ಎದ್ದು ಬಂದು ನಮಸ್ಕರಿಸಿದಳು.

"ಸಕಲ ಸನ್ಮಂಗಳಾನಿ ಭವಂತು !" ಶಾಸ್ತ್ರಿಗಳು ಆಶೀರ್ವದಿಸಿದರು. "ನಾನು ಇನ್ನೆರಡು ದಿನಗಳು ಬಿಟ್ಟು ಬಂದು ನೋಡ್ತೀನಿ. ಧೈರ್ಯವಾಗಿರಿ. ದೇವರು ದಿಡಂರೂಂತಾ ಪೂಜೆ ಮಾಡೋರು, ದಿನಾ ದೀಪ ಹೊತ್ತಿಸೋರು ಇಂತಹ ಕ್ಷುದ್ರವಾದುದೆಲ್ಲಾ ನಾಶವಾಗಿಹೋಗುತ್ತೆ !" ಅವರಿಗೆ ಕೈ ತುಂಬಾ ದಕ್ಷಿಣೆ, ಫಲತಾಂಬೂಲ ನೀಡಿ ಲಲಿತಮ್ಮ ಕಳುಹಿಸಿಕೊಟ್ಟು, ನೂಪುರನ ತಲೆಯಲ್ಲಿದ್ದ ಹೂವು ಸರಿ ಮಾಡಿ ಅವಳ ತಲೆ ಸವರಿದರು.

'ನೂಪುರಾ ಬಾಮ್ಮಾ, ಹೊಟ್ಟೆ ತುಂಬಾ ತಿಂದು, ಸ್ವಲ್ಪ ಹೊತ್ತು ಸುಧಾರಿಸಿಕೋ.' ಪ್ರೀತಿಯಿಂದ ಕರೆದರು.

"ಅತ್ತೆ ಇಷ್ಟೊಂದು ಬೇಡಿ ನಂಗೆ ಸೇರೋಲ್ಲ"

"ಇಲ್ಲ ನೀನು ತಿನ್ನಲೇಬೇಕು. ನೆನ್ನೆಯೆಲ್ಲಾ ಏನೂ ಸರಿಯಾಗಿ ತಿಂದಿಲ್ಲ." ಬಲವಂತದಿಂದ ತಿಂಡಿ ತಿನ್ನಿಸಿ ಕುಡಿಯಲು ಹಾಲು ಕೊಟ್ಟರು.

"ಏನೇ ನೂಪುರಾ, ನಮ್ಮ ಮಾನು ನಿಂಗೆ ತುಂಬಾ ಒಪ್ಪೀಗೇನಾ ?"

ನೂಪುರ ತಲೆ ತಗ್ಗಿಸಿದಳು. ಅವಳ ಕೆನ್ನೆಗಳು ಕೆಂಪಾದವು.

"ನೋಡು ಮುಂದಿನ ವರ್ಷದೊಳಗೆ ನಂಗೊಂದು ಮೊಮ್ಮಗೂ ಕೊಡ್ಬೇಕೂ !" ನೂಪುರ ಮತ್ತೂ ನಾಚಿದಳು.

ಲಲಿತಮ್ಮನ ಗಮನವೆಲ್ಲಾ ಶಾಸ್ತ್ರಿಗಳು ಕಟ್ಟಿದ್ದ ತಾಯಿತದ ಮೇಲಿತ್ತು. ಸಧ್ಯ ಅದರಿಂದಾಗಿ ನೂಪುರ ಮೊದಲಿನಂತಾದಳಲ್ಲಾ ! "ಬರ್ತೀಯ ಅಮ್ಮನವರ ದೇವಸ್ಥಾನಕ್ಕೆ ಹೋಗಿ ಬರೋಣ ?" "ಹೂ" ನೂಪುರ ಮೆಲುದನಿಯಲ್ಲಿ ಒಪ್ಪಿಕೊಂಡಳು.

ಬೆಳ್ಳಿಯ ಬುಟ್ಟಿಯಲ್ಲಿ ತೆಂಗಿನ ಕಾಯಿ, ಬಾಳೇಹಣ್ಣು, ಹೂವು, ಊದಿನಕಡ್ಡಿ ಇಟ್ಟುಕೊಂಡು ಬಂದು ಲಲಿತಮ್ಮ ಅವಳ ಕೈಗಿತ್ತರು. ಅವರಿಗೆ ಏನೋ ಅತ್ಯುತ್ಸಾಹ. ಸೊಸೆಗೆ ಆಗಲೇ ಸರಿಹೋದಂತಾಗಿದೆ. ದೇವಸ್ಥಾನಕ್ಕೆ ಹೋಗಿ ಅಮ್ಮನವರ ಪೂಜೆ ಮಾಡಿಸಿ, ಅಷ್ಟೋತ್ತರ ಮಾಡಿಸಿ ಕೊಂಡು ಬಂದರೆ ಮತ್ತು ಒಳ್ಳೆಯದಾಗಬಹುದು !

ಲಲಿತಮ್ಮ- ನೂಪುರ ಇಬ್ಬರೂ ಕಾರಿನ ಹಿಂದಿನ ಸೀಟಿನಲ್ಲಿ ಕುಳಿತರು. ಡ್ರೈವರ್ ಮಾದಯ್ಯ ಕಾರು ಏರಿದ. ಚಿಕ್ಕ ಕಾರನ್ನು ಸ್ಟಾರ್ಟ್ ಮಾಡಿದ.

"ಅಮ್ಮನವರ ದೇವಸ್ಥಾನಕ್ಕೆ ಬಿಡು" ಲಲಿತಮ್ಮ ಹೇಳಿದರು. ಕಾರು ದೊಡ್ಡ ರಸ್ತೆ ದಾಟಿ ಅಮ್ಮನವರ ದೇವಸ್ಥಾನಕ್ಕೆ ಬಲಗಡೆಗೆ ತಿರುಗಿದಾಗ ಗಕ್ಕನೇ ನಿಂತಿತು. ಇಂಜೀನ್ ಆಫ್ ಆಯಿತು, ಮತ್ತೆ ಸ್ಟಾರ್ಟ್ ಮಾಡಲು ಮಾದಯ್ಯ ಯತ್ನಿಸಿದ, ಆದರೆ ಆಗಲಿಲ್ಲ.

"ಏನಾಯ್ತು ಮಾದಯ್ಯ ?"

"ಯಾಕೋ ಆಫ್ ಆಗೈತೆ-ಪೆಟ್ರೋಲ್ ಬ್ಲಾಕ್ ಆಗಿರ್ಬೇಕೂ ನೋಡ್ತೀನಿ." ಇಳಿದು ಬಾನೆಟ್ ತೆಗೆದು ನೋಡಿದ. ಬ್ಯಾಟರಿ ಡೆಡ್ ಆಗಿತ್ತು. ಹೋದ ತಿಂಗಳು ತಾನೇ ಹೊಸ ಬ್ಯಾಟರಿ ತಂದುಹಾಕಿದ್ದು. ಚೆನ್ನಾಗಿ ಚಾರ್ಜ್ ಆಗಿತ್ತು. ಇದ್ದಕ್ಕಿದ್ದ ಹಾಗೆ ಹಾಗಾಗಲು ಕಾರಣ ? ಬ್ಯಾಟರಿಯ

ವಯರ್‌ಗಳನ್ನು ಚೆಕ್ ಮಾಡಿ ನೋಡಿದ ಡಿಸ್ಟಿಲ್ಡ್ ವಾಟರ್ ಇದೆಯೇ ನೋಡಿದ. ಎಲ್ಲಾ ಸರಿಯಾಗಿತ್ತು. ಆದರೂ ಬ್ಯಾಟರಿ ಚೆಕ್ ಆಗುವುದೆಂದರೇನು?

"ಏನಾಗಿದೆ ಮಾದಯ್ಯ ?"

"ಬ್ಯಾಟರಿ ಡೆಡ್ ಆಗ್ಬೈತೆ-"

"ಸರಿ ಹಾಗಾದ್ರೆ ನಾವಿಬ್ರೂ ನಡ್ಕೊಂಡೇ ಹೋಗಿಬರ್ತೀವಿ ? ನೂಪುರಾ ದೇವಸ್ಥಾನಕ್ಕೆ ನಡೀತೀಯಾ ?"

"ಹೂಂ" ನೂಪುರ ತಲೆಯಾಡಿಸಿದಳು !

ಲಲಿತಮ್ಮ ಮೊದಲು ಇಳಿದು ನೂಪುರನನ್ನು ಇಳಿಸಿಕೊಂಡರು.

"ಮೆಲ್ಲಗೆ-"

ನೂಪುರ ಲಲಿತಮ್ಮನೊಂದಿಗೆ ಹೆಜ್ಜೆ ಹಾಕಿದಳು. ಎಲ್ಲರ ಕಣ್ಣುಗಳೂ ತಮ್ಮ ಸೊಸೆಯ ಮೇಲಿರುವುದು ಕಂಡು ಲಲಿತಮ್ಮನಿಗೆ ಹೆಮ್ಮೆಯೆನಿಸಿತು. ಪದ್ಮಾವತಮ್ಮ ಎದುರಿಗೆ ಬಂದಾಗ ಕೇಳಿದರು.

"ಸೊಸೆಯಲ್ವೇ ? ತುಂಬಾ ಮುದ್ದಾಗಿದ್ದಾಳೆ"

ಅತ್ತೆ ಸೊಸೆ ದೇವಸ್ಥಾನದತ್ತ ನಡೆದರು. ಮಾದಯ್ಯ ಬಾನೆಟ್ ಮುಚ್ಚಿ ಹತ್ತಿರದ ಗ್ಯಾರೇಜಿಗೆ ಹೋಗಬೇಕೆಂದು ಕೊಂಡವನು ಕೊನೆಯ ಬಾರಿಗೆ ಒಮ್ಮೆ ಸ್ಟಾರ್ಟ್ ಮಾಡಿ ನೋಡೋಣವೆಂದುಕೊಂಡು ಆಕ್ಸಿಲೇಟರ್ ಒತ್ತಿ ಸ್ವಿಚ್‌ಕೀ ತಿರುಗಿದ. ಕಾರಿಗೆ ಜೀವ ಬಂದು ಎಂಜಿನ್ ಘೋರ್ಗರೆಯಿತು. ಅನ್ಯಾಯವಾಗಿ ದೊಡ್ಡಮ್ಮಾವರ್ನ, ಚಿಕ್ಕಮ್ಮಾವರ್ನ ನಡೆಸಿದೆನಲ್ಲಾ ಎಂದು ಮಾದಯ್ಯ ಕಾರನ್ನು ಬಲಕ್ಕೆ ತಿರುಗಿಸಿ ನಡೆದುಹೋಗುತ್ತಿದ್ದ ಅವರ ಮುಂದೆ ನಿಲ್ಲಿಸಿದ.

"ಅಮ್ಮಾವ್ರೇ, ಕಾರು ಸರಿಹೋಯ್ತು ! ಹತ್ತಿ !"

ಸಧ್ಯ ಎಲ್ಲರ ಕಣ್ಣು ನೂಪುರಳ ಮೇಲಿತ್ತು ; ದೃಷ್ಟಿಯಾದರೆ ಕಷ್ಟ. ಕಾರಿನಲ್ಲಿ ಹೋದರೆ ಯಾರಿಗೂ ಕಾಣುವುದಿಲ್ಲ. ಲಲಿತಮ್ಮ ಕಾರಿಗೆ ಹತ್ತಿ ಸೊಸೆಯನ್ನೂ ಹತ್ತಿಸಿಕೊಂಡರು. ಮಾದಯ್ಯ ಕಾರು ನಡೆಸಿದ. ಒಂದು ಗಜ ಹೋಗುವುದರಲ್ಲಿ ಮತ್ತೆ ನಿಂತಿತು.

"ಈ ಕಾರು ಸರೀಗಿಲ್ವಪ್ಪಾ, ನಡ್ಕೊಂಡೇ ಹೊರಟುಹೋಗ್ತೀವಿ" ಇಬ್ಬರು ಇಳಿದು ಮುಂದೆ ನಡೆದರು. ಕಾರನ್ನು ಒಂದು ಪಕ್ಕಕ್ಕೆ ನಿಲ್ಲಿಸಲು ಮಾದಯ್ಯ ಯತ್ನಿಸಿದಾಗ ಕಾರು ಮತ್ತೆ ಸ್ಟಾರ್ಟ್ ಆಯಿತು ಮಾದಯ್ಯ ಆಚ್ಚರಿಗೊಂಡ. ಕಾರಿಗೂ ಭಾವನೆಗಳಿವೆಯೇನೋ. ಈ ಹೆಂಗಸರು

ಕುಳಿತರೆ ಮುಂದೆ ಹೋಗುವುದಿಲ್ಲ, ಅವರು ಇಳಿದರೆ ಮುಂದೆ ಹೋಗುವುದು. ಕಾರನ್ನು ಅಲ್ಲಿಯೇ ನಿಲ್ಲಿಸಿ ಅವರಿಬ್ಬರೊಂದಿಗೆ ತಾನೂ ನಡೆದುಹೋದ.

ದೇವಸ್ಥಾನದಲ್ಲಿ ಅಂತಹ ಗಲಾಟೆಯೇನೂ ಇರಲಿಲ್ಲ. ಲಲಿತಮ್ಮ, ನೂಪುರ ಇಬ್ಬರೂ ಒಳಗೆ ಬಂದ ಕೂಡಲೇ ಅರ್ಚಕರು ಅವರನ್ನು ಗುರುತಿಸಿದರು.

"ಅಷ್ಟೋತ್ತರ ತಾನೇ ?"

ನೂಪುರಳ ಕೈಯಿಂದ ಅರ್ಚಕರು ಬೆಳ್ಳಿಯ ಬುಟ್ಟಿಯಲ್ಲಿದ್ದ ತೆಂಗಿನ ಕಾಯಿ, ಹೂವು, ಊದಿನಕಡ್ಡಿ ತೆಗೆದುಕೊಳ್ಳಲು ಬಂದಾಗ ಅವಳು ಬುಟ್ಟಿಯನ್ನು ಎದೆಗವಚಿಕೊಂಡಳು. ಅರ್ಚಕರಿಗೆ ಕೊಡಲಿಲ್ಲ.

"ನೂಪುರ ಕೊಡಮ್ಮಾ !"

ಲಲಿತಮ್ಮ ಅಳುಕುತ್ತಲೇ ಹೇಳಿದರು. ಅವರಿಗೆ ನೂಪುರ ಮತ್ತೆ ಮೈ ಮೇಲೆ ಬಂದ ಹಾಗೆ ಮಾಡಿದರೆ ಎಂಬ ಹೆದರಿಕೆ ಉಂಟಾಯಿತು.

ನೂಪುರ ಅರ್ಚಕರನ್ನು ದುರದುರನೇ ನೋಡಿ ತಾನೇ ಬುಟ್ಟಿಯನ್ನು ಗರ್ಭಗುಡಿಯ ಬಾಗಿಲಲ್ಲಿ ಇಟ್ಟು ಬಂದಳು.

'ಯಾರ ಹೆಸರಿನಲ್ಲಿ ಅರ್ಚನೆ ಮಾಡಲಿ ತಾಯಿ ?' ಅರ್ಚಕರು ಬೆದರು ಗಣ್ಣು ಬಿಡುತ್ತಾ ಕೇಳಿದರು.

ನೂಪುರಳ ಹೆಸರಿನಲ್ಲಿ ಅರ್ಚನೆ ಮಾಡಿಸಲು ಅದೇಕೋ ಲಲಿತಮ್ಮನಿಗೆ ಹೆದರಿಕೆಯಾಯಿತು.

"ನಮ್ಮ ಮಾನು ಹೆಸರಿನಲ್ಲಿ ಮಾಡಿಬಿಡಿ" ಎಂದರು.

ಅಷ್ಟೋತ್ತರ ಮಾಡುತ್ತಿದ್ದಾಗ ನೂಪುರಳ ಮುಖದಲ್ಲಿ ವಿಲಕ್ಷಣವಾದ ನಗೆಯೊಂದು ಸುಳಿದುದನ್ನು ಲಲಿತಮ್ಮ ಕಂಡರು. ಅಷ್ಟೋತ್ತರ ಮುಗಿಸಿ, ತೀರ್ಥ ಪ್ರಸಾದಗಳನ್ನು ಕೊಡಲು ಬಂದಾಗ ನೂಪುರ ದೂರ ಸರಿದು ನಿಂತಳು.

"ಬಾ ನೂಪುರ, ತೀರ್ಥ ತೊಗೋ, ಪ್ರಸಾದ ತೊಗೋ !"

ಲಲಿತಮ್ಮನಿಗೆ ಅಲ್ಲಿರುವವರೆಲ್ಲಾ ಎಲ್ಲಿ ಅವಳಾಡುವುದನ್ನು ನೋಡಿ ಆಡಿಕೊಳ್ಳುವರೋ ಎಂಬ ಆತಂಕ. ತಾವೇ ತೀರ್ಥ ತೆಗೆದುಕೊಂಡು ಅವಳ ಅಂಗೈ ಮೇಲೆ ಹಾಕಿದರು.

"ಕಣ್ಣೊತ್ತಿಕೊಂಡು ಕುಡಿ" ಅವರು ಹೇಳಿದಂತೆ ಕಣ್ಣೊತ್ತಿಕೊಂಡು ಕುಡಿದಾಗ ಅವಳು ಬೆಚ್ಚಿದಂತಾಯಿತು. ಪ್ರಸಾದದ ಹೂವನ್ನು ಅವಳ

ಕೈಗಿತ್ತಾಗ ಬೆಂಕಿ ಮುಟ್ಟಿದಂತೆ ಕೈಯಿಂದ ಕೆಳಗೆ ಹಾಕಿಬಿಟ್ಟಳು. ಲಲಿತಮ್ಮ ಅದನ್ನು ತೆಗೆದು ಅವಳ ಮುಡಿಗೆ ಸಿಕ್ಕಿಸಿದಾಗ ಉನ್ಮಾದಿನಿಯಂತಿದ್ದ ಅವಳ ಮುಖದ ಖಳೆ ಕೊಂಚ ಸೌಮ್ಯವಾಯಿತು. ಅಪ್ಪಾಮ್ಮವರ ಕುಂಕುಮಾರ್ಚನೆಯ ಕುಂಕುಮ ಅವಳ ಹಣೆಗಿಡುತ್ತಲೇ ಅವಳ ಮುಖ ನಿರ್ಮಲವಾಯಿತು.

* * * *

ಕಾರಿನಲ್ಲಿ ಮನೆಗೆ ಹಿಂತಿರುಗಲಾಗದುದರಿಂದ ಲಲಿತಮ್ಮ ನೂಪುರ ಇಬ್ಬರೂ ಮಾದಯ್ಯನೊಂದಿಗೆ ಮನೆಗೆ ಹಿಂತಿರುಗಿದರು. ನೂಪುರ ಲವಲವಿಕೆ ಯಿಂದ ಇದ್ದುದು ಲಲಿತಮ್ಮನಿಗೆ ಸಮಾಧಾನವಾಯಿತು. ಈ ರಾತ್ರಿಯಾದರೂ ತಮ್ಮ ಮಗ ಸೊಸೆ ಒಟ್ಟಿಗೇ ಕಳೆಯಲಿ ಎಂದುಕೊಳ್ಳುತ್ತಲೇ ಮನೆಗೆ ಹಿಂತಿರುಗಿದರು. ಅವರು ಹಿಂತಿರುಗುವ ವೇಳೆಗೆ ವರ್ಧಮಾನ ಮನೆಗೆ ಬಂದಿದ್ದ. ಡಾಕ್ಟರ್ ನಚಿಕೇತ್‌ನೊಡನೆ ಮಾತನಾಡಿ ನೂಪುರನ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡಿದ್ದರಿಂದ ಅವನ ಮನಸ್ಸು ಶಾಂತ ವಾಗಿತ್ತು.

"ಅಮ್ಮಾ, ಕುಡಿಯೋಕ್ಕೆ ನೀರು ಕೊಡಮ್ಮ"

ವರ್ಧಮಾನ ಕಾಲು ಚಾಚಿ ಕುಳಿತುಕೊಂಡು ಕೇಳಿದಾಗ ಲಲಿತಮ್ಮ ನಸು ಮುನಿದರು.

"ಇದೇನೋ ಇನ್ನೂ ನಾನೇ ನಿನ್ನ ಎಲ್ಲಾದಕ್ಕೂ ನೋಡ್ಕೋಬೇಕಾ ? ನೂಪುರ ಬಂದಿದ್ದಾಳಲ್ಲ ಕೇಳು !"

ವರ್ಧಮಾನ ಅಚ್ಚರಿಯಿಂದ ತಾಯಿಯತ್ತ ನೋಡಿದ.

"ನೂಪುರಾ, ಮನೂಗೆ ನೀರ್ಬೇಕಂತೆ, ತಂದ್ಕೊಡು." ಅವನು ನೋಡು ತ್ತಿದ್ದಂತೆಯೇ ನೂಪುರ ಒಳಗೆ ಹೋಗಿ ನೀರು ತಂದಿತ್ತಳು.

"ನೂಪುರಾ, ರಂಗಮ್ಮನ್ನ ಕೇಳಮ್ಮ ಅಡಿಗೆ ಎಲ್ಲಾ ಆಯ್ತಾ ಅಂತ ಆಗಿದ್ರೆ ಎಲ್ರೂ ಒಟ್ಗೇ ಊಟ ಮಾಡೋಣ. ಹಾಗೇ ಅಪ್ಪಾ ಅವ್ರು ಏನ್ಮಾಡ್ತಾ ಇದ್ದಾರೆ ನೋಡ್ಕೊಂಡ್ಬಾ. ಪಾಪ ವಯಸ್ಸಾಯ್ತು. ಬೆಳಿಗ್ಯೆಯೆಲ್ಲಾ ಬಿಸ್ಲಿನಲ್ಲಿ ಹೊರಗೆ ಹೋಗಿ ಬಂದು ಸುಸ್ತಾಗಿ ಮಲಗಿಬಿಟ್ಟಿದ್ರು."

ನೂಪುರ ಅವರ ಆದೇಶದಂತೆ ಹೋದಾಗ ಲಲಿತಮ್ಮ ಮಗನತ್ತ ಹೆಮ್ಮೆಯಿಂದ ಬೀಗಿದರು.

"ನೋಡಿದ್ಯಾ ನಮ್ಮ ಶಾಸ್ತ್ರಿಗಳ ಪೂಜೆ ಮಹತ್ವಾನ್ನ-ಪೂಜೆ ಮಾಡಿ ತಾಯಿತ ಕಟ್ಟಿದ್ರು. ಸರಿ ಹೋಸ್ತು. ಕೆಟ್ಟಗಾಳಿ. ಕೆಟ್ಟ ಕಣ್ಣೂಂತಾ ಹಿರಿಯರು ಹೇಳ್ತಾ ಇದ್ದುದು ಇದೇನೇ! ದೇವಸ್ಥಾನಕ್ಕೂ ಕರ್ಕೊಂಡು ಹೋಗಿ ಬಂದೆ. ಕೈಗೆ ಕಟ್ಟಿರೋ ತಾಯಿತಾ ಹುಷಾರು, ಅದ್ನ ಬಿಚ್ದೇ ಇರೋ ಹಾಗೆ ನೋಡ್ಕೋಬೇಕು!"

ಅರೆಕ್ಷಣ ವರ್ಧಮಾನ ಜಿಜ್ಞಾಸೆಗೊಳಗಾದ. ಡಾಕ್ಟರ್ ಹೇಳಿದುದು ಇವೆಲ್ಲಾ ಮಾನಸಿಕ ಅಸ್ವಸ್ಥತೆಯೆಂದಲ್ಲವೇ? ಆದರೆ ತಾಯಿತಾ ಪೂಜೆ ಎಂದಾಕ್ಷಣಕ್ಕೆ ನೂಪುರ ಸರಿಹೋದುದು ನೋಡಿದರೆ ಪವಾಡವೇ ನಡೆದಿದೆಯಲ್ಲ! ಹೂಂ ಪೂಜೆ ಪುನಸ್ಕಾರಗಳೂ ದೇಹದ ಮನಸ್ಸಿನ ಒಂದು ಬಗೆಯ ಶಿಸ್ತಲ್ಲವೇ? ಹಿಂದಿನವರು ಮಾನಸಿಕ ಬಲಕ್ಕಾಗಿಯೇ ಪೂಜೆ ಇತ್ಯಾದಿಗಳನ್ನು ಮಾಡಿಸುತ್ತಿದ್ದಿರಬೇಕು. ಹೆದರಿದ್ದ ನೂಪುರನಿಗೆ ತಾಯಿತಾ ತನ್ನ ಕೈಯಲ್ಲಿದೆ ಎಂಬ ನಂಬಿಕೆಯಿಂದಲೇ ಹೆದರಿಕೆ ಓಡಿಹೋಗಿರಬೇಕು.

ನೂಪುರ ನೆರಿಗೆ ಚಿಮ್ಮುತ್ತಾ, ಕಾಲಿನ ಅಂದುಗೆಯ ಗೆಜ್ಜೆ ಸದ್ದು ಮಾಡುತ್ತಾ ಬಂದಳು.

"ಅಡಿಗೆ ಆಗಿದೆಯಂತೆ, ತಟ್ಟೆ ಹಾಕಲಾಂತಾ ರಂಗಮ್ಮ ಕೇಳ್ತಾ ಇದ್ದಾರೆ, ಅಪ್ಪಾ ಅವ್ರು ಏನೋ ಓದ್ತಾ ಇದ್ದಾರೆ."

ಲಲಿತಮ್ಮ ಬೇಕಾಗಿಯೇ ಎದ್ದರು. "ನೀನೂ ಕೂತ್ಕೋ ನಾನು ಹೋಗಿ ತಟ್ಟೆ ಹಾಕ್ಸಿ ಅಪ್ಪನ್ನೂ ಊಟಕ್ಕೆ ಎಬ್ಬಿಸ್ತೀನಿ" ಮಗ ಸೊಸೆ ಒಟ್ಟಿಗೆ ಕುಳಿತು ಮಾತಾಡಲೆಂದೇ ಅವರ ಆಸೆ.

ಅವರತ್ತ ಹೋಗುತ್ತಲೇ ಕುರ್ಚಿಗೊರಗಿ ನಿಂತೇ ಇದ್ದ ನೂಪುರನನ್ನು ವರ್ಧಮಾನ ನೋಡಿದ. ಕೊಂಚ ಕೆದರಿದ ಮುಂಗುರುಳು ಹಣೆಯಲ್ಲಿದ್ದ ದೇವರ ಕುಂಕುಮ, ಸೌಮ್ಯವಾದ ಮುಖದಲ್ಲಿ ಮಿಂಚುತ್ತಿದ್ದ ಅವಳು ಕಣ್ಣುಗಳು, ಕೆನ್ನೆಗಳಲ್ಲಿ ಏರಿದ್ದ ಕೆಂಪು, ಉಟ್ಟಿದ್ದ ಕಿತ್ತಲೇ ಬಣ್ಣದ ಸಿಲ್ಕಿನ ಸೀರೆಯಲ್ಲಿ ಎದ್ದು ಕಾಣುತ್ತಿದ್ದ ಅವಳ ಮೈಸಿರಿ! ನೆನ್ನೆಯೇಕೆ ಹಾಗಾಡಿದಳು! ಹಾಗಾಗಿದ್ದಳು?

"ಕೂತ್ಕೋ ಬಾ ನೂಪುರಾ ದೇವಸ್ಥಾನಕ್ಕೆ ಹೋಗಿದ್ಯಂತೆ"

ನೂಪುರ ನಾಚುತ್ತಲೇ ಅವನೆದುರಿಗೆ ಕುಳಿತಳು.

"ಅಮ್ಮನಿಗೆ ನಿನ್ನನ್ನು ಕಂಡ್ರೆ ತುಂಬಾ ಇಷ್ಟ ಅಲ್ವಾ?" ನೂಪುರನನ್ನು

ಕೇಳಿದಾಗ ಅವಳು ಸರಕ್ಕನೇ ಅವನತ್ತ ನೋಡಿದಳು. ಅವಳ ಮುಖ ಇದ್ದಕ್ಕಿದ್ದಂತೆ ಬಿರುಸಾದಂತೆ ಕಂಡಿತು.

ವರ್ಧಮಾನ ಅವನು ಗಮನಿಸಿದಂತೆ ಕಾಣಲಿಲ್ಲ, "ಊಟ ಮಾಡಿ ಬೇಗ ಮಲಗೋಣ್ವಾ ? ನೆನ್ನೆಯಲ್ಲಾ ಸರಿಯಾಗಿ ನಿದ್ದೆಯಿಲ್ಲ"

ಅಷ್ಟು ಹೊತ್ತಿಗೆ ಸರಿಯಾಗಿ ಮಾದಯ್ಯ ಒಳಗೆ ಬಂದ "ಸಾರ್ ದೊಡ್ಡ ಕಾರಿನ ಎಂಜಿನ್ ಇದ್ದಕ್ಕಿದ್ದ ಹಾಗೆ ಆಫ್ ಆಗೋಗತ್ತೆ ಸಾರ್. ನಾನು ಗ್ಯಾರೇಜ್ಗೆ ಬಿಟ್ಬಿಟ್ಟು ಬರ್ತೀನಿ ಸಾರ್."

"ಯಾಕೋ, ಎಲ್ಲಾ ಚೆಕ್ ಮಾಡ್ಸಿದ್ವಲ್ಲಾ ! ಎಂಜಿನ್ ಫಸ್ಟ್ ಕ್ಲಾಸ್ ಆಗಿತ್ತು ! ಏನಾಯ್ತು ?"

"ಅದೇಸಾರ್ ಅಮ್ಮಾವ್ರು ದೇವಸ್ಥಾನಕ್ಕೆ ಹೋಗೋವಾಗ ದಾರೀಲಿ ಎರಡು ಸಲ ಆಫ್ ಆಯ್ತು ಸಾರ್. ಕೊನೆಗೆ ನಡ್ಕೊಂಡೇ ಹೋಗಿ ನಡ್ಕೊಂಡು ಬಂದ್ರು. ಅವರ ಜೊತೇಲೇ ನಾನು ಬಂದೆ. ಕಾರು ಅಲ್ಲೇ ಲಾಕ್ ಮಾಡಿ ಬಂದಿದ್ದೀನಿ ಸಾರ್, ನೋಡಿದ್ರೆ ಏನೂ ತಿಳ್ಯೋಲ್ಲ ಸಾರ್, ಎಂಜಿನ್ನೂ ಸರಿಯಾಗೇ ಇದೆ. ಇದ್ದಕ್ಕಿದ್ದ ಹಾಗೆ ಬ್ಯಾಟರಿ ಡೆಡ್ ಆಗ್ಬಿಡ್ತು ಸಾರ್ ! ಬೇಕಾದ್ರೆ ಅಮ್ಮಾವ್ರ್ನೇ ಕೇಳಿ !" ಮಾದಯ್ಯ ನೂಪುರನತ್ತ ನೋಡಿ ಹೇಳಿದ, ಅವಳೂ ಅವನನ್ನೇ ನೋಡುತ್ತಿದ್ದಳು. ಅವಳ ನೋಟ ವನ್ನು ಎದುರಿಸಿದ ಮಾದಯ್ಯನಿಗೆ ಮೈಯೆಲ್ಲಾ ಅರೆಗಳಿಗೆ ಹಿಮವಾದಂತಾ ಯಿತು.

"ಹೂಂ ಸರಿ, ಗ್ಯಾರೇಜ್ಗೆ ಬಿಟ್ಬಿಟ್ಟು ಬಾ. ಎಲ್ಲಾ ಸರಿಯಾಗಿ ಚೆಕ್ ಮಾಡ್ಬೇಕಂತಾ ಜುಂಜಪ್ಪಂಗೆ ಹೇಳು, ನಾಳೆ ಹನ್ನೊಂದು ಗಂಟೆಯೊಳ್ಗೆ ಸರಿ ಮಾಡಿಸ್ಕೊಂಡ್ಬಾ. ಚಿಕ್ಕ ಗಾಡಿ ಮನೇಲಿರ್ಲಿ. ದೊಡ್ಡದ್ದು ತೊಗೊಂಡು ಹೋಗ್ತೀನಿ."

"ಸರಿ ಸಾರ್" ಮಾದಯ್ಯ ಹೊರಗೆ ಹೋದ.

"ನೂಪುರಾ, ಸಾರಿ ಎರಡು ಕಾರುಗಳಿದ್ರೂ ನೀನು, ಅಮ್ಮ ನಡೀಬೇಕಾಗಿ ಬಂತು. ಕಾಲುನೋಯ್ತಾ ?" ಅವಳ ಪುಟ್ಟ ನಸುಗೆಂಪಿನ ಪಾದಗಳನ್ನು ನೋಡಿದ.

ಇಲ್ಲವೆನ್ನುವಂತೆ ತಲೆಯಾಡಿಸಿದಳು.

ಅವಳ ಬಗ್ಗೆ ಅವನಲ್ಲಿ ಮೂಡಿದ್ದ ಆತ್ಮಸ್ಸರ ಮಾಯವಾಯಿತು. 'ಇವಳು ಚೆಲುವೆ, ನನ್ನ ಹೆಂಡತಿ, ಇವಳು ನನ್ನವಳು' ಎಂಬ ಭಾವನೆ

ಅವನಲ್ಲಿ ಮೂಡಿ ಮೈ ಹೂವಿನಂತಾಯಿತು. "ನೂಪುರಾ ಯಾಕೆ ಮಾತೇ ಆಡೋಲ್ಲ. ಇನ್ನೂ ನಾಚಿಕೇನಾ ? ಬಾ. ಇಲ್ಲಿ ಹತ್ತಿರ ಕೂತ್ಕೋ. ನೀನು ಅಷ್ಟು ದೂರ ಕೂತ್ಕೊಂಡ್ರೆ ಮಾತಾಡೋದು ಕೇಳ್ಸೋದು ಇಲ್ಲ." ಬಾಗಿ ಅವಳ ಕೈ ಹಿಡಿದು ಅವಳನ್ನು ಹತ್ತಿರಕ್ಕೆಳೆದುಕೊಂಡು ಕೂಡಿಸಿಕೊಂಡು ಹಿಂದಿನ ದಿನದಂತೆ ಅವಳ ಕೈ ತಣ್ಣಗಿರದೇ ಬೆಚ್ಚಗೆ ಸುಖವಾಗಿತ್ತು. ಅವಳು ಕೈ ಕೊಸರಿಕೊಂಡಳು. 'ಬಿಡಿ, ಯಾರಾದ್ರೂ ನೋಡ್ತಾರೆ !'

ಅವಳ ಮಾತು ಕೇಳಿದ ವರ್ಧಮಾನನಿಗೆ ಸ್ವರ್ಗಕ್ಕೆ ಗೇಣುಳಿದಂತಾಯಿತು.

"ಯಾರಾದ್ರೂ ನೋಡ್ತೀರ್ರೇ ಪರ್ವಾಗಿಲ್ಲಾ ?"

ಅವಳ ಅಂಗೈ ಸವರಿದ. ಲಲಿತಮ್ಮ ಅವರಿಬ್ಬರನ್ನೂ ಊಟಕ್ಕೆ ಕರೆಯಲು ಬಂದುದರಿಂದ ವರ್ಧಮಾನ ಅವಳ ಕೈ ಬಿಟ್ಟ. ಸೂಕ್ಷ್ಮ ದೃಷ್ಟಿಯ ಲಲಿತಮ್ಮ ಅದನ್ನು ಗಮನಿಸಿಯೂ ಗಮನಿಸದಂತೆ ಮನಸ್ಸಿನಲ್ಲೇ ನಕ್ಕರು, ಶಾಸ್ತ್ರಿಗಳಿಗೆ ಮನಸಾರೆ ವಂದಿಸಿದರು.

ಊಟಕ್ಕೆ ಕುಳಿತಿದ್ದಾಗ ರಾಮಲಿಂಗಯ್ಯನವರ ಗಮನವೆಲ್ಲಾ ನೂಪುರಳ ಮೇಲಿತ್ತು. ರುದ್ರಣ್ಣ ಹೇಳಿದ ಹಾಗೆ ಗಂಗೆ ಇವಳನ್ನು ಕಾಡುತ್ತಿರಬಹುದು. ಗಂಗೆಯೂ ಈ ಮನೆಯ ಸೊಸೆಯಾಗಿದ್ದಳು. ಬೇಕಾದಷ್ಟು ಆಸೆ ಹೊತ್ತು ಬಂದಿದ್ದಳು. ಆದರೆ ಅವಳ ಆಸೆಗಳೊಂದೂ ಪೂರೈಸಿರಲಿಲ್ಲ. ಗಂಡನೊಲವು ಅವಳಿಗಿರಲಿಲ್ಲ. ಅತ್ತೆ ಪ್ರೀತಿ ದಕ್ಕಿರಲಿಲ್ಲ. ಕೊನೆಗೆ ಅವರ ಹಿಂಸೆಯಿಂದಲೇ ತೊಳಲಾಡಿ ಸತ್ತಿದ್ದಳು. ದುರ್ಮರಣಕ್ಕೊಳಗಾದ ಅವಳು ಎಷ್ಟು ನೊಂದಿರಬೇಕು ! ದೇಹವನ್ನು ಅವರು ಕೊಂದಿದ್ದರೂ ಅವಳ ಆತ್ಮವಿನ್ನೂ ಇಲ್ಲೇ ಎಲ್ಲೋ ಸುತ್ತಾಡುತ್ತಿರಬೇಕು ನೂಪುರಳನ್ನು ನೋಡಿದ್ದಾಗ ಆ ಪ್ರೇತಾತ್ಮಾಕ್ಕೂ ತನ್ನ ಹಳೆಯ ನೆನಪು ಮರುಕಳಿಸಿರಬೇಕು. ತನ್ನನ್ನೂ ಹೀಗೆ ಮನೆ ತುಂಬಿಸಿಕೊಂಡಾಗ ನಡೆದುದು ನೆನಪಾಗಿ ಕ್ರೋಧವುಕ್ಕಿ ಬಂದಿರಬೇಕು. ತನ್ನ ನೋವು, ರೋಷಗಳನ್ನು ನೂಪುರಳ ಮೂಲಕ ತೋರ್ಪಡಿಸಿರಬೇಕು ! ರುದ್ರಣ್ಣ ಹೇಳಿದಂತೆ ಗಂಗೆಯ ಶವದ ಅವಶೇಷ ಭಾಗಗಳು ದೊರೆತಲ್ಲಿ ತಾವು ಅದನ್ನು ಸಂಪ್ರದಾಯಬದ್ಧವಾಗಿ ಕರ್ಮ ಮಾಡಿಸಿ, ಅವಳ ಆತ್ಮಕ್ಕೆ ಶಾಂತಿ ನೀಡಿದರೆ, ನೂಪುರನನ್ನು ಅವಳು ಹಿಂಸಿಸುವುದಿಲ್ಲ. ಆದರೆ ಅವುಗಳನ್ನು ತರುವುದೆಲ್ಲಿಂದ ? ವರದಾಚಾರಿಯನ್ನು ಹುಡುಕುವುದಾದರೂ ಎಲ್ಲಿ ?

"ಯಾಕಮ್ಮ ಇಷ್ಟೇ ತುಪ್ಪ ಹಾಕ್ಕೋತೀ ಇನ್ನೊಂದು ಚಮಚ ಹಾಕ್ಕೋ ಚಿಕ್ಕ ವಯಸ್ನೋರು ನೀವ್. ತಿನ್ನೋದ್ರಲ್ಲಿ ನಾಜೂಕು ಮಾಡಿದ್ರೆ ಹೇಗೆ ?" ಲಲಿತಮ್ಮ ನೂಪುರಳಿಗೆ ಉಪಚಾರ ಹೇಳಿದರು

ವರ್ಧಮಾನ ತುಪ್ಪದ ಬಟ್ಟಲು ತೆಗೆದುಕೊಂಡು ತಾನೇ ನೂಪುರಳ ತಟ್ಟೆಗೆ ಬಡಿಸಿದ. ತುಪ್ಪ ತುಳುಕಿ ಅವಳ ಬೆರಳುಗಳ ಮೇಲೆ ಬಿದ್ದಿತು.

"ಇಲ್ಲಿ ನೀನು ಹಾಲು, ಮೊಸರು, ತುಪ್ಪದಲ್ಲಿ ಕೈ ತೊಳ್ಕೊಬೇಕು. ಗೊತ್ತಾ ?" ವರ್ಧಮಾನ ಅವಳತ್ತ ನೋಡಿ ನಕ್ಕ. ತುಪ್ಪ ಸೋರುತ್ತಿದ್ದ ಬೆರಳನ್ನೇ ನೂಪುರ ನೋಡಿ ಇದ್ದಕ್ಕಿದ್ದಂತೆ ಬೆಚ್ಚಿದಳು.

"ಯಾಕಮ್ಮ ಬೆಚ್ಚೀ ? ಬೇಡದಿದ್ರೆ ಬಿಡು. ಬೇಜಾರು ಮಾಡ್ಕೊಬೇಡ" ಲಲಿತಮ್ಮ ಹೇಳಿದರು.

ಊಟ ಮುಗಿಸಿ ಅವಳೆದ್ದು ಕೈ ತೊಳೆಯಲು ಹೊರಟಾಗ ವರ್ಧಮಾನನೂ ಅವಳ ಹಿಂದೆ ಹೊರಟ.

"ಅಬ್ಬಾ, ನೋಡಿದ್ಯಾ ಈಗ ಸರಿಹೋದ್ಲು ! ಶಾಸ್ತ್ರಿಗಳ ತಾಯಿತ ಕಟ್ಟಿರೋದ್ರಿಂದ ಇನ್ನು ಹೆದರಿಕೆಯಿಲ್ಲ."

"ಸರಿಹೋಗಿದ್ರೆ ಸಂತೋಷ, ಆದ್ರೆ ಹುಷಾರಾಗಿರು. ಅವಳಿಗೆ ರೇಗುವ ಹಾಗೆ ಏನೂ ಮಾಡಬೇಡಾ. ತುಪ್ಪ ಜಾಸ್ತಿ ಹಾಕಿದಾಗ ನೋಡಿದ್ಯೊ ಇಲ್ವೋ ?"

"ಅಪ್ಪಾ, ಆ ರುದ್ರಣ್ಣ ನಿಂಗೆ ಏನೇನೋ ಹೇಳಿ ಹೆದರ್ಸಿದ್ದಾನೆ. ಅವ್ನು ದುಡ್ಡು ಮಾಡ್ಕೋಬೇಕಲ್ಲಾ ! ನಾಳೆ ನಾಡಿದ್ದು ಅವ್ನು ಬರ್ತೀನೀಂತ ಬೇರೆ ಹೇಳಿದ್ದಾನೆ. ನಂಗ್ಯಾಕೋ ಅವ್ನು ಈ ಮನೆಗೆ ಬರೋದೇ ಇಷ್ಟ ಇಲ್ಲ, ನೀನು ಸುಮ್ಮನಿರಮ್ಮ ಆ ಮಾವಿನ ಮರ ಆಗಿದ್ದು ನೋಡಿದ್ಯೋ ಇಲ್ವೋ ! ಅವ್ನು ಹೇಳಿದೆಲ್ಲಾ ಸರಿ ಅನ್ಸುತ್ತೆ. ತಾಯಿತ ಕಟ್ಟಿರೋದ್ರಿಂದ ಮೈ ಮೇಲೆ ಬರ್ದೇ ಒಳಗೇ ಅಡಗಿ ಕೂತ್ಕೊಳ್ಳಾರ್ದೆ. ಆ ಜೀವ ಒದ್ದಾಡ್ತಾ ಇದೆ. ಆ ತಾಯಿತಕ್ಕೆ ಮೈಲಿಗೆಗಿಯ್ಲಿಗಿ ಆದ್ರೆ ಖಂಡಿತ ತಿರ್ಗಾ ಅವಳ ಮೆಟ್ಕೊಳ್ಳುತ್ತೆ ಇಲ್ದಿದ್ರೆ ಇನ್ಯಾವ ರೀತಿಲಾದ್ರೂ ತನ್ನ ಆಕ್ರೋಶ ತೋರಿಸ್ಕೊಳ್ಳುತ್ತೆ. ಮಾದಯ್ಯ ಆಗೆ ಬಂದು ಹೇಳ್ದ ಕಾರು ಆಫ್ ಆಗೋಯ್ತು. ಆದ್ರೆ ನೀವಿಬ್ರೂ ಇಳಿದ ಕೂಡ್ಲೆ ಸರಿ ಹೋಯ್ತುಂತು. ಅದು ಆಫ್ ಆಗಿದ್ದು ಎಂಜಿನ್ ಡಿಫಿಕ್ಟಾನಿಂದಲ್ಲಮ್ಮ ನೂಪುರಳ್ನ ಕಾಡ್ತ ಇರೋ ಅದ್ರಿಂದ್ಲೇ ! ಅದಕ್ಕೆ ದೇವಸ್ಥಾನ ಪ್ರಸಾದ, ತೀರ್ಥ, ಮಂಗಳಾರತಿ ಅದೆಲ್ಲಾ ಹೆದರಿಕೆ

ಯಲ್ಲವೇ ? ಅವಳು ಅದರ ಬಳಿಗೆ ಹೋಗಕೂಡದೆಂದು ಅದು ತಡೆಯೋಕ್ಕೆ ಅವಳ ಕೈಯಲ್ಲಿರೋ ತಾಯಿತ ತಡೆಯುತ್ತೆ. ಅದಕ್ಕೆ ನಿರ್ಜೀವ ವಸ್ತುವಾದ ಕಾರನ್ನ ನಿಲ್ಲಿಸಲು ಪ್ರಯತ್ನಪಟ್ಟದ್ದು ! ನಡೆದುಹೋದಾಗ ಅದರ ಆಟ ನಡೆಯಲಿಲ್ಲ.

"ಹೋಗಪ್ಪಾ ಏನೇನೋ ಹೇಳಿ ನನ್ನ ಹೆದರಿಸ್ಬೇಡಾ. ನಂಗೆನೋ ಅದೆಲ್ಲಾ ಏನೂ ಇಲ್ಲ ಅನ್ನಿಸುತ್ತೆ. ಮಾವಿನ ಮರ ಒಣಗಿರೋಕ್ಕೆ ಬೇರೆ ಏನೋ ಕಾರಣ ಇರ್ಬೇಕೂ. ಹೆಗ್ಗಣ ಕೊರೆದು ಬೇರ್ನೆಲ್ಲಾ ಹಾಳು ಮಾಡಿರ್ಬೇಕೂ. ನಾವು ಮುಂಚಿಂದ ಗಮನಿಸಿಲ್ಲ ಅಷ್ಟೆ."

ನೂಪುರ, ವರ್ಧಮಾನ ಕೈತೊಳೆದು ಬಂದುದರಿಂದ ಅವರಿಬ್ಬರೂ ಮಾತು ನಿಲ್ಲಿಸಬೇಕಾಯಿತು.

"ನೂಪುರಾ, ನೋಡು ಅಲ್ಲಿ ಒಳಗೆ, ಅಡಿಕೆ ಚಿಗುರೆಲೆ ಇಟ್ಟಿದ್ದೀನಿ. ಮಾನೂಗೆ ಕೊಡು. ಅವನ್ಗೆ ತುಂಬಾ ಇಷ್ಟ" ಲಲಿತಮ್ಮ ಹೇಳಿದರು. "ರೂಮ್ಗೇ ತೊಗೊಂಡ್ಹೋಗಿ ಕೊಡು."

ನೂಪುರ ಟವಲಿಗೆ ಕೈ ಒರೆಸುತ್ತಾ ಗೊಣಗಿದಳು. 'ಎಷ್ಟು ತೊಳದ್ರೂ ಈ ತುಪ್ಪದ ಜಿಡ್ಡುಹೋಗೋದೇ ಇಲ್ಲ.'

"ಇರ್ಲಿ ಬಿಡು. ಇನ್ಮೇಲೆ ಹಾಗೆ ಹಾಕ್ಬೇಡಾಂತಾ ಮಾನೂಗೆ ಹೇಳ್ತಿನಿ." ಲಲಿತಮ್ಮ ಹೇಳಿದಾಗ ಅವಳು ಕೈಯಿಗೆ ಅಂಟಿದ್ದ ಜಿಡ್ಡನ್ನು ಟವಲಿಗೆ ತೀಡಿದಳು.

"ಬಾ ನೂಪುರ ಎಲೆ ಅಡ್ಕೆ ತೊಗೊಂಡ್ಬಾ" ವರ್ಧಮಾನ ಹೇಳಿ ರೂಮಿನತ್ತ ನಡೆದ.

"ಹೋಗಮ್ಮ ಅವನ್ಗೆ ಎಲೆ ಅಡ್ಕೆ ಕೊಟ್ಟು ಹಾಗೇ ರಂಗಮ್ಮನ ಕೈಲಿ ಎರಡು ಲೋಟ ಹಾಲು ಇಸ್ಕೊಂಡು ಹೋಗು. ನೆನ್ನೆಯೆಲ್ಲಾ ಯಾರಿಗೂ ನಿದ್ರೆ ಇಲ್ಲ. ನೀನೂ ಮಾನು ಬೇಗ ಮಲ್ಕೊಳ್ಳಿ, ಹೋಗು !"

ನೂಪುರ ಒಳಮನೆಯಲ್ಲಿದ್ದ ಚಿಗುರೆಲೆ ಸಣ್ಣ ಬಣ್ಣಕಟ್ಟಿದ ಅಡಿಕೆಯನ್ನು ಕೈಗೆ ತೆಗೆದುಕೊಂಡು ರೂಮಿನತ್ತ ನಡೆದಳು. ವರ್ಧಮಾನ ಮಂಚದ ಮೇಲೆ ಕಾಲುಚಾಚಿ ಕುಳಿತಿದ್ದ. ಅವನ ಮುಂದೆ ಎಲೆ ಅಡಿಕೆ ತಟ್ಟೆಯಿಟ್ಟಳು.

"ಹೂ-ಹಾಗಲ್ಲ-ನೀನೇ ಕೊಡು"

ವರ್ಧಮಾನ ಅವಳನ್ನು ಬಳಿಗೆಳೆದುಕೊಂಡು ಕೂಡಿಸಿಕೊಂಡ-ಅವಳು ಅವನ ಕೈಗೆ ಅಡಿಕೆ ಹಾಕಿದಳು. ಚಿಗುರೆಲೆ ಸುಣ್ಣ ಹಚ್ಚುತ್ತಾ ಅದೇನೆನಿಸಿತೋ ಏನೋ ಮಡಚಿ ಅವನಿಗೆ ಕೊಡುವ ಬದಲು ಕಿವುಚಿ ಅತ್ತ ಎಸೆದಳು.

"ಎಲೆಯಾಕೆ ಎಸೀತಿ ? ಚೆನ್ನಾಗಿದ್ಯಲ್ಲಾ ? ಹಾಗೆ ಎಸೀಬಾರ್ದು !"

ವರ್ಧಮಾನ ಅವಳನ್ನು ತಡೆದಾಗ ಅವನನ್ನೆ ನೋಡಿದಳು, ಅನಂತರ ತಾನೇ ಬಾಯಿಗೆ ಅಡಿಕೆ ಹಾಕಿಕೊಂಡು ನಾಲ್ಕೈದು ಎಲೆಗಳನ್ನು ಬಾಯಿಗೆ ತುರುಕಿಕೊಂಡಳು.

"ಹಾಗಲ್ಲ ಚಿನ್ನಾ, ನಾನು ತೋರಿಸ್ತೀನಿ ತಾಳು"

ವರ್ಧಮಾನ ತಾನೇ ಎಲೆಗೆ ಸುಣ್ಣ ಹಚ್ಚಿ ತೀಡಿ ನಾರು ತೆಗೆದು ಅವಳ ಬಾಯಿಗಿತ್ತಾಗ ಅವಳು ನಸು ನಕ್ಕಳು. ಅವಳು ಹಾಗೆ ಸಂತಸದಿಂದ ನಕ್ಕಿದ್ದು ಕಂಡು ಅವನಿಗೆ ಮೈ ಜುಂ ಎಂದಿತು. ಅವಳನ್ನು ಬರಸೆಳೆದು ಮುತ್ತಿಟ್ಟಾಗ ಅವನಿಗೆ ಮೈ ಮರೆತಂತಾಯಿತು. ಮುಂದೇನಾಯಿತೆಂದೇ ಅವನಿಗೆ ತಿಳಿಯಲಿಲ್ಲ. ಬಾಗಿಲ ಬಳಿ ನಿಂತು ಲಲಿತಮ್ಮ ಕೂಗಿದಾಗಲೇ ಅವನಿಗೆಚ್ಚರವಾದುದು.

"ನೂಪುರಾ. ವರ್ಧಾನೂ. ಹಾಲು ತಂದಿದ್ದೀನಿ ತೊಗೊಳ್ಳಿ"

ವರ್ಧಮಾನ ಕಣ್ಣುಜ್ಜಿಕೊಂಡು ನೋಡಿದ-ಪಕ್ಕದಲ್ಲಿ ನೂಪುರ-ಮೈ ತೆರೆದು ಉನ್ಮೀಲಿತ ನೇತ್ರಳಾಗಿ ಸುಖನಿದ್ರೆಯಲ್ಲಿದ್ದಾಳೆ. ತಾನು ! ತನ್ನ ಮೈಮೇಲಿದ್ದುದೆಲ್ಲಾ ಯಾರು ಕಳಚಿದ್ದು ? ತನಗೂ ಮೈಯೆಲ್ಲಾ ಹಗುರವಾಗಿ ಯಾವುದೋ ಅವ್ಯಕ್ತ ಆನಂದದಲ್ಲಿ ತೇಲಿಹೋದ ಅನುಭವವಾದುದು ಮಸುಕು ಮಸುಕಾಗಿ ನೆನಪಿಗೆ ಬಂದಿತು ಅವಳತ್ತ ಮತ್ತೆ ನೋಡಿದ, ಹೌದು ತನ್ನಿಂದ ಪಡೆದ ಸುಖದಲ್ಲಿ ಇವಳು ತೇಲಿಹೋಗಿದ್ದಾಳೆ ! ತನಗೂ ಇವಳಿಂದ ಇಂತಹ ಸುಖಸಿಗುವುದೆಂದು ತಿಳಿದುದು ಇಂದೇ ಅಲ್ಲವೇ ? ಮತ್ತೆ ತಾಯಿಯ ದನಿ ಕೇಳಿ ಅವನು ಸರಸರನೇ ಉಡುಪು ಧರಿಸಿ ಬಾಗಿಲಿಗೆ ಬಂದ.

"ಕೊಡಮ್ಮಾ ಅವ್ಳು ಆಗ್ಲೇ ಮಲ್ಕೊಂಡ್ಬಿಟ್ಲು. ಬೇಕಾದ್ರೆ ಎದ್ದಾಗ ಕುಡೀಲಿ" ಅವನ ಕೆದರಿದ್ದ ತಲೆಗೂದಲು, ಮುಖದ ಮೇಲಿದ್ದ ಮಾದಕತೆ ನೋಡಿ ಲಲಿತಮ್ಮ ನಕ್ಕರು.

"ಹೂಂ- ಮಲಗ್ಲಿ ಬಿಡು, ನೀನೂ ಮಲ್ಕೋ-ಬೆಳಿಗ್ಗೆ ನಿಧಾನವಾಗಿ ಏಳು. ಬಾಗಿಲು ಹಾಕ್ಕೋ !" ತಾವೇ ಬಾಗಿಲು ಮುಚ್ಚಿಕೊಂಡು ನಡೆದರು.

ವರ್ಧಮಾನ ಹಾಲು ಕುಡಿದು ಲೋಟ ಅತ್ತ ಇಟ್ಟು ನೂಪುರಳತ್ತ ನೋಡಿದ. ಪಾಪ ಅವಳೂ ಕುಡಿದರೆ ಸರಿ ಎನಿಸಿತು; ಕೆನ್ನೆ ಹಿಡಿದಲುಗಿಸಿ ಎಬ್ಬಿಸಿದ.

"ನೂಪ್ರೂ, ನೂಪ್ರೂ, ಚಿನ್ನಾ ಏಳು. ಹಾಲು ಕುಡಿದು ಮಲ್ಕೋ"
ಅವಳು ನಿದ್ರೆಯಲ್ಲೇ ಏನೋ ಗೊಣಗಿಕೊಂಡು ಕಣ್ಣು ಹೊಸೆಯುತ್ತ ಎದ್ದು ಕುಳಿತಳು.

"ತೊಗೋ!" ಹಾಲಿನ ಲೋಟ ಅವಳ ಮುಂದೆ ಹಿಡಿದ. ಅವಳು ಲೋಟವನ್ನು ಕೈಗೆತ್ತಿಕೊಂಡಳು. ಬಾಯಿಗಿಟ್ಟುಕೊಳ್ಳುವ ಮುಂಚೆ ಅದರಲ್ಲಿ ಇಣುಕಿದವಳು ಚಿಟ್ಟನೇ ಚೀರಿದಳು.

"ಯಾಕೆ, ನೂಪ್ರೂ, ಯಾಕೆ ?"

ಅವಳ ಮುಖದಲ್ಲಿ ಬೆವರಿಳಿಯುತ್ತಿತ್ತು. ಕಣ್ಣುಗಳು ಹೆದರಿಕೆಯಿಂದ ಅರಳಿತ್ತು. ತುಟಿಗಳು ನಡುಗುತ್ತಿತ್ತು. ಅವನ ಮುಂದೆ ಲೋಟ ಹಿಡಿದಳು. "ಹಾಲೂಂತಾ-ರಕ್ತ ಯಾಕೆ ಕೊಟ್ರಿ ?"

"ಏನ್ಹೇಳ್ತಾ ಇದ್ದೀ ?" ವರ್ಧಮಾನ ಲೋಟವನ್ನು ಕೈಗೆತ್ತಿಕೊಂಡು ನೋಡಿದ. ಹಾಲು ಬೆಳ್ಳಗೆ ಇತ್ತು.

"ನೂಪುರಾ, ಎಲ್ಲಿ ರಕ್ತ ? ಹಾಲಿದ್ಯಲ್ಲಾ ! ತೊಗೋ-"

ನೂಪುರ ಲೋಟ ಅತ್ತ ಸರಿಸಿದಳು. "ನೋಡಿ ಅದು ಹಾಲಲ್ಲ ರಕ್ತ !" ಅವಳ ಕಣ್ಣಿಗೆ ಹಾಲಿನ ಬದಲು ನೊರೆ ನೊರೆಯಾದ ಕೆಂಪಗಿನ ರಕ್ತದಂತೆಯೇ ಕಂಡಿತು, ವಾಕರಿಕೆ ಬಂದಂತಾಯಿತು.

"ನಂಗೆ ಬೇಡಾ- ಬೇಡಾಂದ್ರೆ ಬೇಡಾ," ಲೋಟವನ್ನು ತಳ್ಳಿದಾಗ ಅದು ಕೆಳಗೆ ಬಿದ್ದು ಅದರಲ್ಲಿದ್ದ ಹಾಲೆಲ್ಲಾ ನೆಲದ ಮೇಲೆ ಚೆಲ್ಲಿತು.

"ನೋಡು ಅನ್ಯಾಯವಾಗಿ ಹಾಲೆಲ್ಲಾ ಚೆಲ್ಲಿದ್ಯಲ್ಲಾ ! ಕಾಣಿಸ್ತಾ ಇಲ್ವಾ ಅದು ಹಾಲು !"

ನೂಪುರ ಕಣ್ಣುಗಳನ್ನು ಕೈಯಿಂದ ಮುಚ್ಚಿಕೊಂಡಳು. "ಛೂ-ಅದು ಹಾಲಲ್ಲ-ಬರೀ ರಕ್ತ ರಕ್ತ !"

ಅವಳೊಂದಿಗೆ ಚರ್ಚೆ ಮಾಡಿ ಪ್ರಯೋಜನವಿಲ್ಲವೆಂದು ಅವಳನ್ನು ಸಮಾಧಾನ ಮಾಡಿದ. "ಹೋಗ್ಲಿ ಬಿಡು-ದೀಪ ಆರಿಸಿಬಿಡ್ತೀನಿ ತಾಳು. ನೀನು ಆಕಡೆ ಮಲ್ಕೋ" ದೀಪ ಆರಿಸಿ ಅವಳನ್ನು ಅತ್ತ ಸರಿಸಿ ತಾನು ಅವಳ ಜಾಗದಲ್ಲಿ ಮಲಗಿದ. ಹೆದರಿದ್ದ ಅವಳನ್ನು ಎದೆಗವಚಿ ಮಲಗಿದ. "ನಾನಿದ್ದೀನಿ ನೂಪುರಾ. ನಿಂಗೇನೂ ಆಗೋಲ್ಲ-ಆಗೋಕ್ಕೂ ಬಿಡೋಲ್ಲ."

ಬೆಳಗಿನ ಝಾವದಲ್ಲಿ ಅವನಿಗೆ ಎಚ್ಚರಿಕೆಯಾಯಿತು. ಬಾತ್‌ರೂಮಿಗೆ ಹೋಗಲು ಎದ್ದಾಗ ಮಸುಕು ಬೆಳಕಿನಲ್ಲಿ ನೆಲದ ಮೇಲೆ ಚೆಲ್ಲಿದ ಹಾಲು

ಅವನ ಕಣ್ಣಿಗೆ ಬಿತ್ತು. ಅವನು ಕಣ್ಣುಜ್ಜಿಕೊಂಡ. ಇದೇನು ಹಾಲು ಬೆಳ್ಳಗೆ ಇತ್ತು. ಈಗ ಕೆಂಪು ಬಣ್ಣ ಕಾಣುತ್ತಿದೆಯಲ್ಲಾ ! ತಟ್ಟನೇ ದೀಪ ಹೊತ್ತಿಸಿದ, ಆ ಪ್ರಖರವಾದ ಬೆಳಕಿನಲ್ಲಿ ಕೆಂಪಗಿದ್ದ ಹಾಲು ಬರು ಬರುತ್ತಾ ನಸುಗೆಂಪಾಗಿ ಕೊನೆಗೆ ಬೆಳ್ಳಗಾಯಿತು. ಇದೇನು ತನಗೂ ನೂಪುರನ ಮಾನಸಿಕ ಅಸ್ವಸ್ಥತೆಯುಂಟಾಯಿತೆ ? ಅಥವಾ ಅದು ತನ್ನ ಭ್ರಮೆಯೋ ಏನೋ ! ಅವನು ಎದ್ದು ಬಾತ್‌ರೂಮಿಗೆ ಹೋಗಿ ಹೊರಗೆ ಬಂದಾಗ ಕೊಳೆತ ಮಾಂಸ ಅಲ್ಲ ಕೊಳೆತ ಶವದ ವಾಸನೆ ಮೂಗಿಗೆ ಬಡಿಯಿತು. ಹೊಟ್ಟೆ ತೊಳಸಿ ಬಂದಂತಾಗಿ ಮತ್ತೆ ಬಾತ್‌ರೂಮಿಗೆ ಹೋಗಿ ವಾಂತಿ ಮಾಡಿಕೊಂಡು. ತನ್ನ ರೂಮಿನಲ್ಲಿ ಕೊಳೆತು ನಾರುವ ಮಾಂಸದ ವಾಸನೆ ಎಲ್ಲಿಂದ ಬಂತು ? ಮುಖಕ್ಕೆ, ತಲೆಗೆ ತಣ್ಣೀರು ಎರಚಿಕೊಂಡು ಅಲ್ಲಿಯೇ ಇದ್ದ ಟವಲಿನಿಂದ ಒರೆಸಿಕೊಂಡ. ಅವನ ಹೊಟ್ಟೆಯಲ್ಲಿ ವಿಚಿತ್ರ ಸಂಕಟ ವಾಗತೊಡಗಿತು. ತನಗೆ ಅಂತಹ ವಾಸನೆ ಬರುತ್ತಿರುವಾಗ ನೂಪುರ ಹಾಯಾಗಿ ನಿದ್ರಿಸುತ್ತಿರುವಳಲ್ಲಾ -ಅವಳಿಗೆ ವಾಸನೆ ಬರುತ್ತಿಲ್ಲವೇ ? ಮೂಗನ್ನು ಭದ್ರವಾಗಿ ಮುಚ್ಚಿಕೊಂಡು ಬಂದು ಕಿಟಕಿಗಳ ಬಾಗಿಲು ತೆರೆದು, ಪರದೆ ಸರಿಸಿ ಹೊರಗಿನಿಂದ ಗಾಳಿ ಬರುವಂತೆ ಮಾಡಿದ. ಬೀರುವಿನಲ್ಲಿದ್ದ ಸುಗಂಧದ ಅಗರಬತ್ತಿಯನ್ನು ಹಚ್ಚಿದ. ಸ್ವಲ್ಪ ಹೊತ್ತಿನ ಮೇಲೆ ಆ ಕೊಳೆತು ನಾರುವ ವಾಸನೆ ಮಾಯವಾಯಿತು. ನಿಧಾನವಾಗಿ ನೂಪುರಳ ಬಳಿಗೆ ಬಂದ. ಅವಳು ಹಾಯಾಗಿ ನಿದ್ರಿಸುತ್ತಿದ್ದಳು, ಬಗ್ಗಿ ಅವಳ ಮೈ ವಾಸನೆ ನೋಡಿದ. ಊಹೂಂ-ಅವಳ ಹತ್ತಿರ ಆ ವಾಸನೆಯಿರಲಿಲ್ಲ. ಅವನ ದೃಷ್ಟಿ ನೆಲದ ಮೇಲೆ ಚೆಲ್ಲಿದ್ದ ಹಾಲಿನತ್ತ ಹರಿಯಿತು. ಹಾಲು ಒಡೆದು ಹೋಗಿ ಗಡ್ಡೆ ಗಡ್ಡೆಯಾಗಿತ್ತು. ಆ ಗಡ್ಡೆಯೆಲ್ಲಾ ಅವನ ಕಣ್ಣಿಗೆ ಕೆಂಪು ಕಪ್ಪು ಮಿಶ್ರಿತ ಮಾಂಸದ ತುಂಡುಗಳಂತೆ ಕಂಡಿತು. ದೇವರೇ, ಇದೇನು ಹೀಗೆ ? ತನಗೆ ಇವುಗಳಿಂದ ಮುಕ್ತಿಯಿಲ್ಲವೇ ? ನೂಪುರಳಿಗೆ ರಕ್ತವಾಗಿ ಕಂಡದ್ದು ಈಗ ತನಗೂ ಹಾಗೇ ಕಾಣುತ್ತಿದೆಯಲ್ಲಾ. ನಾಳೆ ಈ ರೂಮಿನಲ್ಲಿ ಮಲಗಬಾರದು. ಮಹಡಿಯ ಮೇಲಿನ ರೂಮಿನಲ್ಲಿ ಮಲಗಬೇಕು ! ಹಾಕಿದ್ದ ರೂಮಿನ ಬಾಗಿಲು ತೆರೆದುಬಿಟ್ಟ. ತಾನು ಹೋಗಿ ಡ್ರಾಯಿಂಗ್ ರೂಮಿನಲ್ಲಿದ್ದ ಸೋಫಾದ ಮೇಲೆ ಮಲಗಿದ. ರಾತ್ರಿಯೆಲ್ಲಾ ಅನುಭವಿಸಿದ್ದ ಸುಖ ವೆಲ್ಲಾ ಆವಿಯಾಗಿಹೋದಂತ ಯಿತು. ಎದ್ದು ಸಿಗರೇಟೊಂದನ್ನು ಹೊತ್ತಿಸಿಕೊಂಡು ಕುಳಿತ. ತಾನು ನೂಪುರಳನ್ನು ಕರೆದುಕೊಂಡು ಈ

ಮನೆಯಿಂದಲೇ ದೂರ ಹೋಗಿಬಿಡಬೇಕು. ಆಗೇನಾದರೂ ಇದೆಲ್ಲಾ ಆಗುವುದು ನಿಲ್ಲುವುದೇ ನೋಡಬೇಕು!

* * * *

ಸಂಜೀವಯ್ಯನವರಿಗೆ ಕಾಲಿಗೆ ಎಣ್ಣೆ ತಿಕ್ಕುತ್ತಾ ಕುಳಿತ್ತಿದ್ದ ಕಾವೇರಮ್ಮ ತಮ್ಮ ಮಾತನ್ನು ಮತ್ತೆ ಹೇಳಿದ್ದರು.

"ನೂಪುರ ಯಾಕೋ ಒಂದು ತರಹಾ ಆಗೋಗಿದ್ದಾಳಲ್ರೀ-ಅವಳ್ನ ಇಲ್ಲಿಗೆ ಕರೆಸಿಕೊಂಡುಬಿಡೋಣ"

"ಬಹಳ ಚೆನ್ನಾಗಿ ಹೇಳ್ತೀ. ಮದ್ವೆಯಾಗಿ ಎರಡು ದಿನಗಳಾಗಿಲ್ಲ ಆಗ್ಲೇ ಇಲ್ಲಿಗೆ ಕರ್ಕೊಂಡು ಬಂದ್ಬಿಟ್ರೆ ಅಳಿಯ ಏನನ್ಕೋತಾನೆ! ಅಲ್ಲಿ ಸಭ್ಯತೆಗಾಗಿ ಕಳಿಸಿಕೊಡೀಂತಾ ಅಂದೆ. ಅವ್ರು ಹೂಂ ಅಂದ್ರು, ಅದ್ನೇ ಹಿಡ್ಕೊಂಡ್ಯಲ್ಲಾ ನೀನೂ! ಮದ್ವೆ ಆದ ಹೊಸದ್ರಲ್ಲಿ ಗಂಡ ಹೆಂಡತೀನ ದೂರ ಮಾಡ್ಬಾರ್ದೇ!"

"ಏನೂಂದ್ರೆ ಮದ್ವೆ ಗೊತ್ತಾಗಿ ಲಗ್ನಪತ್ರಿಕೆಯಾದಾಗ್ಲಿಂದ ನೂಪುರ ಸಪ್ಪಗಾಗಿಹೋಗಿದ್ಲು. ಅವತ್ತು ಹೆಣ್ಣು ತೋರಿಸೋಕ್ಕೆ ಅವ್ರು ಮನೆಗೆ ಕರ್ಕೊಂಡು ಹೋಗಿದ್ದು ನೋಡಿ ಅವೊತ್ತೇ ಅಲ್ಲಿಂದ ಬಂದೋಳೇ 'ಚಳಿ ಚಳಿ' ಅಂತ ಮಲಗಿಬಿಟ್ಟಿದ್ದು ಜ್ಞಾಪ್ಕ ಇದ್ಯೇ? ಅದೆಲ್ಲಾ ಅವಳ ನಾಟ್ಕ-ಅವಳ್ಗೆ ಇಷ್ಟು ಬೇಗ ಮದ್ವೆ ಮಾಡ್ಕೊಳ್ಳೋಕೆ ಇಷ್ಟ ಇಲ್ಲಾಂತ ನೀವಂದ್ರಿ. ಮಾರನೇ ದಿನಾನೂ ಸಪ್ಪಗೇ ಇದ್ಲು- ಲಗ್ನಪತ್ರಿಕೆ ದಿನ ಅವಳ ಕೈಗೆ ಬಳೆ ತೊಡ್ಸಿ ಕತ್ತಿಗೆ ಕಾಸಿನಸರ ಹಾಕಿ, ಅವ್ರು ಕೊಟ್ಟಿದ್ದ ಸೀರೆ ಉಟ್ಕೊಂಡು ಬಂದು ಹಸೇಮಣೇ ಮೇಲೆ ಕೂತ್ಕೊಂಡಾಗ ನಂಗೆ ಅವ್ಳು ಹೇಗೆಹೇಗೋ ಕಂಡ್ಲು. ಆದ್ರೆ ಅದ್ಕೆ ನಾನು ಹೇಳಿದ್ರೆ ನೀವೆಲ್ಲಾ ನಗ್ತೀರೀಂತ ಸುಮ್ಮನಾದೆ. ಆ ಲಲಿತಮ್ಮನ್ಗಂಡ ಪಾಂಡುರಂಗಯ್ಯನ ಮೊದಲ್ನೇ ಹೆಂಡತೀನ್ನ ಮಾಟ ಮಾಡ್ಸಿ ಕೊಂದ್ರಂತಲ್ಲಾ, ಅನ್ನೇ ಏನಾದ್ರೂ ದೆವ್ವ ಗಿವ್ವ ಆಗಿ ಕಾಡ್ತಾ ಇದ್ದಾಳಾಂತಾ ನಂಗೆ ಅನುಮಾನ!"

"ಇಷ್ಟು ದಿನ ಲಲಿತಮ್ಮ, ಅಲ್ಲಿಲ್ವೇ, ವರ್ಧಮಾನ ಹುಟ್ಟಿ ಬೆಳೀಲಿಲ್ವೇ! ಏನ್ಮಾತಾಡ್ತೀಯೇ? ಸಧ್ಯ ಯಾರ ಕಿವೀಗಾದ್ರೂ ಬಿದ್ದೀತು-ಸುಮ್ಮನಿರು. ದೆವ್ವದ ಕಾಟನೂ ಇಲ್ಲ. ಯಾವ ಕಾಟಾನೂ ಇಲ್ಲ. ಎಲ್ಲ ಸರಿಹೋಗುತ್ತೆ.

ಅವ್ರು ಸದ್ಯಕ್ಕೆ ಅಲ್ಲೇ ಇರಲಿ" ಸಂಜೀವಯ್ಯ ಎದ್ದು ಸ್ನಾನಕ್ಕೆ ನಡೆದರು. ಆದರೆ ಕಾವೇರಮ್ಮನಿಗೆ ನೂಪುರಳ ಯೋಚನೆ ಕಡಿಮೆಯಾಗಲಿಲ್ಲ.

ನೂಪುರನಿಗೆ ಮದುವೆ ಗೊತ್ತಾಯಿತೆಂದು ತಾವು ಪಕ್ಕದ ಮನೆ ಮಹಾಲಕ್ಷ್ಮಮ್ಮನವರ ಬಳಿ ಹೇಳಿದಾಗ ನೂಪುರ ಅಲ್ಲೇ ಇದ್ದಳು.

"ಯಾರು ಹೇಳಿ, ಆ ರಾಮಲಿಂಗಯ್ಯನವರ ಮನೆಯವ್ರಾ ? ಅದೇನೋ ಜನ ಏನೇನೋ ಹೇಳ್ತಾರಪ್ಪಾ. ಅವರ ಅಳಿಯನ ಮೊದಲ್ನೇ ಹೆಂಡ್ತೀನ್ನ ಗಂಡ ಅತ್ತೆ ಅವ್ರೆಲ್ಲಾ ಸೇರ್ಕೊಂಡು ಮಾಟ ಮಾಡ್ಸಿ ಕೊಲ್ಸಿದ್ರಂತೆ ಹೆಣನ ಸುಡ್ದೇ ಹಿತ್ತಲ್ಲೇ ಹೂಳಿದ್ರಂತೆ. ಆಮೇಲೆ ಹೆಣ ಅಲ್ಲಿ ಸಿಗ್ಲೇ ಇಲ್ವಂತೆ. ಗಂಡ ಅತ್ತೆ ಅಜ್ಜಿನೆಲ್ಲಾ ಅವಳೇ ದೆವ್ವ ಆಗಿ ಬಂದು ನುಂಗಿ ಹಾಕಿದ್ಲಂತೆ. ಹೋಗಿ ಹೋಗಿ ಆ ಮನೆಗೆ ಯಾಕೆ ಕೊಡ್ತೀ‌ರಿ ? ಒಳ್ಳೇ ದಂತದ ಬೊಂಬೆ ಇದ್ದಂಗಿದ್ದಾಳೆ ನೂಪುರ ! ಯಾರಾದ್ರೂ ದೊರೆ ಮಗ ಬಂದು ಕೈ ಹಿಡೀತಾನೆ !"

ಕಾವೇರಮ್ಮ ಮಾತಾಡದೇ ಒಳಗೆ ಹೊರಟರು. "ಬಾರೇ ನೂಪುರಾ ಒಳಗೆ. ಅಲ್ಲೇನು ನೋಡ್ತಾ ನಿಂತಿದ್ದೀಯಾ !" ನೂಪುರ ಇಲ್ಲದ ಮನಸ್ಸಿನಿಂದಲೇ ಒಳಗೆ ಬಂದಳು.

"ಆ ಮಹಾಲಕ್ಷ್ಮಮ್ಮನ ನೋಡಿದ್ಯಾ ಬರೀ ಹೊಟ್ಟೆಕಿಚ್ಚಿನ ಮೊಟ್ಟೆ. ತನ್ನ ಮಗಳು ಲತಂಗೆ ಇನ್ನೂ ಗಂಡು ಸಿಕ್ಕಿಲ್ಲ. ಅದಕ್ಕೇ ಹೊಟ್ಟೆಕಿಚ್ಚು. ಅವಳ ಮಾತೆಲ್ಲಾ ಕೇಳ್ಬೇಡಾ, ಇಲ್ಲದ್ದು ಸಲ್ಲದ್ದು ಎಲ್ಲಾ ಹೇಳ್ತಾಳೆ. ಏನು ಹಾಳು ಜನಾನೋ. ಇನ್ನೊಬ್ರು ಚೆನ್ನಾಗಿ ಬಾಳಿ ಬದುಕೋದ್ನ ನೋಡಿ ಸಹಿಸೋಕ್ಕೇ ಆಗೋಲ್ಲಾಂತ ಕಾಣ್ಸತ್ತೆ !"

ಬಾಯಿಯಲ್ಲಿ ಹಾಗೆ ಹೇಳಿದರೂ ನೂಪುರ ಆ ಬಗ್ಗೆ ಏನೂ ಕೇಳದಿದ್ದರೂ ಕಾವೇರಮ್ಮನ ಮನಸ್ಸಿನಲ್ಲಿ ಮಹಾಲಕ್ಷ್ಮಮ್ಮನ ಮಾತು ಬೇರೂರಿತ್ತು. ಪಾಂಡುರಂಗಯ್ಯನ ಹೆಂಡತಿ ಗಂಗೆ ಸತ್ತ ರೀತಿ ಎಲ್ಲರ ಮನೆ ಮಾತಾಗಿತ್ತು. ಆದರೆ ಅದರಲ್ಲಿ ಎಷ್ಟು ಹುರುಳಿತ್ತೆನ್ನುವುದು ಯಾರಿಗೂ ತಿಳಿದಿರಲಿಲ್ಲ. ರಾಮಲಿಂಗಯ್ಯ ಆ ಮನೆ ಕೊಂಡು, ದೊಡ್ಡದಾಗಿ ಕಟ್ಟಿಸಿ ಮೊಮ್ಮಗ ಮಗಳನ್ನು ಅ ‍ ಬೆಳಸಲಿಲ್ಲವೇ ? ಯಾರಿಗೂ ಏನೂ ತೊಂದರೆಯಾಗಿರಲಿಲ್ಲ. ಏನ ದರಾಗಲೀ ಒಮ್ಮೆ ಯಜಮಾನರಿಗೆ ಹೇಳಿಬಿಡಬೇಕೆಂದು ಸಮಯ ಸಾಧಿಸಿ ಬಡಿಸುತ್ತಾ ಹೇಳಿದ್ದರು. "ಏನೂಂದ್ರೆ, ಆ ರಾಮಲಿಂಗಯ್ಯನವರ ಸಂಬಂಧ ಬೆಳೆಸೋಕ್ಮುಂಚೆ ಯೋಚ್ನೆ ಮಾಡ್ಬೇಕೂಂದ್ರೆ. ಒಬ್ಬೊಬ್ರು

ಒಂದೊಂದು ತರಹ ಅಂತಾರೆ. ಆ ಲಲಿತಮ್ಮನ ಗಂಡ ಪಾಂಡುರಂಗಯ್ಯನ ಮೊದಲ್ನೇ ಹೆಂಡತೀನ್ನ ಮಾಟ ಮಾಡಿ ಕೊಲ್ಸಿದ್ರಂತಲ್ಲಾ ಅವ್ನ ಬಗ್ಗೇನೋ ಏನೇನೋ ಮಾತಾಡ್ತಾರೆ...."

ಸಂಜೀವಯ್ಯ ನಕ್ಕರು. "ಅಲ್ವೇ ಕಾವ್ರೂ ಊರ್ನೋರೆಲ್ಲಾ ಅಂತಾರೇಂತ ನಾವು ಮಾಡೋದು ಬಿಡೋಕ್ಕಾಗುತ್ಯೇ? ನೀವು ಹೆಂಗಸರು ಬಿಡು; ಇಲಿ ಬಂತೂ ಅಂದ್ರೆ ಹುಲಿಹೋಯ್ತುಂತಾ ಮಾಡ್ತೀರಿ. ಒಂದ್ವೇಳೆ ಆ ಹೆಂಗ್ಸು ಹಾಗೇ ಸತ್ತಿದ್ರೆ ಅದಕ್ಕೆ ರಾಮಲಿಂಗಯ್ಯನಾಗಲೀ ಲಲಿತಮ್ಮ ಆಗ್ಲಿ ಕಾರಣವಲ್ಲವಲ್ಲ. ಅಷ್ಟು ಒಳ್ಳೇ ಸಂಬಂಧ ಸಿಕ್ಕಿರೋದು ನಮ್ಮ ನೂಪುರಳ ಪುಣ್ಯ. ಆ ಮನೇಲಿ ರಾಣಿ ಹಾಗೆ ಇರ್ಬೋದೂ—ಅತ್ತಿಗೆ ನಾದಿನಿ ಕಾಟವಿಲ್ಲ, ದೇವರಂತ ಅತ್ತೆ, ಗಂಡ ಅದಕ್ಕಿಂತ ಇನ್ನೇನು ಬೇಕು. ಯಾರ ಮಾತೂ ಕಿವಿಗೆ ಹಾಕ್ಕೋಬೇಡಾ ನಮ್ಮ ಪಾಡಿಗೆ ನಾವು ಮದುವೆ ಮಾಡಿ ಮುಗಿಸೋಣ. ಆಮೇಲೆ ಹಾಳುಜನ ಏನಾದ್ರೂ ಅಂದ್ಕೊಳ್ಳಿ! ಆಮೇಲೆ ಈ ಗಂಡು ತಪ್ಪಿ ಹೋದ್ರೆ ನನ್ನ ಬೈಯ್ಬೇಡಾ. ನೂಪುರಳಿಗೆ ಇದಕ್ಕಿಂತ ಒಳ್ಳೇ ಸಂಬಂಧ ಸಿಕ್ಕಲಾರದು!"

ಕಾವೇರಮ್ಮನಿಗೆ ಪತಿಯ ಮಾತು ಸರಿಯೆನಿಸಿತು. ಲಲಿತಮ್ಮ ಹಸುವಿನಂತಹ ಸ್ವಭಾವದವರು. ವರ್ಧಮಾನನೋ ಓದಿದವನು. ಬುದ್ಧಿವಂತ ರಾಮಲಿಂಗಯ್ಯನವರು ವಯಸ್ಸಿನಲ್ಲಿ ಹಿರಿಯರು, ಬಹಳ ತೂಕದ ಮನುಷ್ಯ. ಏನೋ ಯಾರ ಯಾರ ಹಣೆಯಲ್ಲಿ ಏನೇನು ಬರೆದಿರುತ್ತೋ, ಹಾಗೆಯೇ ಆಗುವುದು. ಅದ್ನ ತಪ್ಪಿಸೋಕ್ಕೆ ಯಾರಿಂದಲೂ ಸಾಧ್ಯವಾಗುವುದಿಲ್ಲ. ದೇವರ ಮೇಲೆ ಭಾರಹಾಕಿ ಸುಮ್ಮನಾದರು. ಲಗ್ನ ಪತ್ರಿಕೆಯೂ ನಡೆದು ಹೋಯಿತು.

ಲತಾ ನೂಪುರ ಹೆಚ್ಚು ಕಡಿಮೆ ಒಂದೇ ಓರಿಗೆಯವರು. ಮದುವೆ ಗೊತ್ತಾದ ಮೇಲೆ ಲತಾ ಆಗಾಗ ನೂಪುರಳನ್ನು ನೋಡಲು ಬರುತ್ತಿದ್ದಳು. ಅವಳ ಮದುವೆಯ ಜವಳಿ, ಒಡವೆ, ಸಿದ್ಧತೆಗಳನ್ನು ನೋಡಿ ಹೋಗುತ್ತಿದ್ದಳು. ನೂಪುರಳೊಂದಿಗೆ ಒಂದಿಷ್ಟು ಮಾತಾಡಿ ಹೋಗುತ್ತಿದ್ದಳು.

"ನಿಂಗೇನಮ್ಮ ಬಿಡು ಗಂಡಿನೋರ ಮನೇಯವ್ರು ಬೇಕಾದಷ್ಟು ಕೊಡ್ತಾರಂತೆ ಹೌದಾ? ವಜ್ರದೋಲೆ, ಇಪ್ಪತ್ತು ತೊಲ ಚಿನ್ನ ಹಾಕ್ತಾರಂತೆ. ನಾಲ್ಕು ಭಾರೀ ಸೀರೆಗಳ್ನ ಕೊಡ್ತಾರಂತೆ...."

ನೂಪುರ ಸ್ವಭಾವತಃ ಮುಗ್ಧೆ. ಯಾರೊಂದಿಗೂ ಹೆಚ್ಚು ಬೆರೆಯು ತ್ತಿರಲಿಲ್ಲ ಯಾರು ಏನು ಹೇಳಿದರೂ ನಂಬುವಂತಹವಳು.

"ಅದೆಲ್ಲಾ ಕೊಡ್ತಾರೆ ಸರಿ. ಆದ್ರೆ ಆ ಮನೇಗೆ ನೀನು ಹೇಗೆ ಹೋಗ್ತೀಯೇಮ್ಮಾ ! ಕೇಳಿದ್ರೆ ಭಯವಾಗುತ್ತೆ."

"ನಮ್ಮಾಯಿ, ನಮ್ತಂದೆ ಹೇಳಿದ್ರು ಅದೆಲ್ಲಾ ಬರಿ ಸುಳ್ಳು ಅಂತಾ. ಎಲ್ರೂ ಹೊಟ್ಟೆಕಿಚ್ಚಿಗೆ ಆಡ್ಕೋತಾರೇಂತಾ ಹೇಳಿದ್ರು."

"ನಿಂಗೊತ್ತಿಲ್ಲ ನೂಪುರ ನಮ್ಮಾಯಿಗೆ ಅವರ ಮನೆ ಎದ್ರೂ ಮನೇಲೇ ಇರೋ ತಹಸೀಲ್ದಾರರ ಮನೆ ಜಯಮ್ಮ ಹೇಳಿದ್ರಂತೆ, ಅವ್ರೇ ಕಣ್ಣಾರೇ ಕಂಡಂತೆ, ರಾತ್ರಿ ಹೊತ್ತು ಆ ಮನೇ ಮೇಲೆ ಬೆಂಕಿ ಕಾಣಿಸ್ತಾ ಇತ್ತಂತೇ. ಆ ಮನೆ ಹಿತ್ಲಲ್ಲಿ ಹುದುಗಿದ್ದ ಹಣಾನ್ನ ಯಾವುನೋ ಎಗರಿಸ್ಕೊಂಡು ಹೋಗಿದ್ನಂತೆ, ಆದಾದ್ಮೇಲೆ ಆ ಅತ್ತೆ, ಆ ಮುದುಕಿ, ಪಾಂಡುರಂಗಯ್ಯ ಎಲ್ಲಾ ಬರಬಾರದ್ದು ಬಂದು ಆಗಬಾರದ್ದು ಆಗಿಸತ್ತಿದ್ದು !"

ನೂಪುರ ಅವಳು ಹೇಳಿದುದನ್ನೆಲ್ಲಾ ಕೇಳಿ ನಕ್ಕು "ನೀನೇ ನೋಡಿದ ಹಾಗೆ ಹೇಳ್ತೀಯಲ್ಲಾ !"

"ನಾನೇನಾದ್ರೂ ನೀನಾಗಿದ್ದದ್ರೆ ಖಂಡಿತ ಆ ಮನೆಗೆ ಸೊಸೆಯಾಗಿ ಹೋಗ್ತಾ ಇರ್ಲಿಲ್ಲ. ಅಲ್ಲಿನ ನರಕ ಯಾರು ಅನುಭವಿಸ್ತಾರೆ !"

ಲತಾ ಹೇಳುತ್ತಿರುವಂತೆಯೇ ಕಾವೇರಮ್ಮ ಒಳಗೆ ಬಂದುದರಿಂದ ಮಾತು ಅಲ್ಲಿಗೆ ನಿಂತಿತು.

ರಾತ್ರಿ ಅಡಿಗೆ ಮನೆ ಶುಚಿ ಮಾಡುತ್ತಿದ್ದ ತಾಯಿಯನ್ನು ನೂಪುರ ಕೇಳಿದಳು. "ಅಮ್ಮಾ ಲತಾ ಹೇಳ್ತಾಳೆ ಆ ರಾಮಲಿಂಗಯ್ಯನೋರ ಮನೆ ದೆವ್ವದ ಮನೇಂತೆ ಹೌದಾ ?"

ಕೈಯಲ್ಲಿದ್ದ ಪೊರಕೆ ಕೆಳಗೆ ಹಾಕಿ ಕಾವೇರಮ್ಮ ಮಗಳನ್ನು ದುರು ದುರು ನೋಡಿದರು. "ಆ ಹುಡ್ಗೀನ್ನ ಮನೆಯೊಳ್ಗೆ ಸೇರ್ಸಿದ್ರೆ ನಾನು ಸುಮ್ಮನಿರೋಲ್ಲ, ಆ ಮಹಾಲಕ್ಷ್ಮಮ್ಮ ಆ ಲತಾನಿಗಿಂತ ದೆವ್ವ ಬೇಕಾ ? ಅವರೇ ದೆವ್ವ ಪಿಶಾಚಿಗಳ ತರಹ ಆಡ್ತಾರೆ ! ದೇವ್ರು, ದಿಂಡ್ರು ಪೂಜೆ, ಪುನಸ್ಕಾರ ಮಾಡೋ ಮನೇಲಿ ದೆವ್ವ, ಪಿಶಾಚಿ ಯಾವ್ದೂ ಬರೋಲ್ಲ. ಅದೆಲ್ಲಾ ಇದ್ದಿದ್ರೆ ರಾಮಲಿಂಗಯ್ಯನೋರ ಮನೇವ್ರು ಇಷ್ಟು ದಿನ ಅಲ್ಲೇ ಇರ್ತಾ ಇದ್ರಾ ? ಅದ್ನೆಲ್ಲಾ ಬುದ್ಧಿಯಿಲ್ದೇ ಇರೋಳ ಹಾಗೆ ನೀನು ಕೇಳ್ತೀಯಲ್ಲಾ !" ಮಗಳನ್ನು ಗದರಿದರು. "ಹೋಗಿ ಮಲ್ಕೋ ಹೋಗೂ !"

ನೂಪುರ ತಾಯಿ ಹೇಳಿದಂತೆ ಹೋಗಿ ಮಲಗಿದಳು. ಆದರೆ ಬಹಳ ಹೊತ್ತು ನಿದ್ರೆ ಬರಲಿಲ್ಲ. ಆ ಪಾಂಡುರಂಗಯ್ಯನ ತಾಯಿ ಅಜ್ಜಿ ಇಬ್ಬರೂ ಗಂಗೆಯನ್ನು ಹಿಂಸಿಸುತ್ತಿದ್ದರೆಂದು ಲತಾ ಹೇಳಿದುದೇ ಮನಸ್ಸಿನಲ್ಲಿ ನೆಲೆಯೂರಿತ್ತು. ಪಾಪ ಆ ಹೆಂಗಸು ಎಷ್ಟು ಕಷ್ಟಪಟ್ಟಿರಬಹುದು. ಅದೇ ಯೋಚನೆಯಲ್ಲೇ ಮುಳುಗಿದ್ದಳು. ಬೆಳಗಿನ ಝಾವದ ಹೊತ್ತಿಗೆ ನಿದ್ರೆ ಬಂದದ್ದು.

ಬೆಳಿಗ್ಗೆ ನಿಧಾನವಾಗಿಯೇ ಎದ್ದ ಮಗಳನ್ನು ಕಂಡು ಕಾವೇರಮ್ಮ ಗೊಣಗಿದರು. "ನಾಳೆ ಅತ್ತೆ ಮನೇಗೆ ಹೋಗೋ ಹುಡ್ಗೀ ಹೀಗೆ ನಿಧಾನವಾಗಿ ಎದ್ರಾಯ್ತು. ಅದೇನು ಸಂಸಾರ ಮಾಡ್ತೀರೋ ಈಗಿನ ಕಾಲದ ಹುಡ್ಗೀರು. ದೇವರಿಗೇ ಗೊತ್ತು." "ಹೋಗಮ್ಮ ಬೆಳಿಗ್ಗೆ ಎಳ್ತಾನೇ ಶುರು ಮಾಡ್ಬೇಡಾ" ನೂಪುರ ರೇಗಿದಳು. "ನೀನೇ ಹೇಳ್ದಿ ಆ ಮನೇಲಿ ಕೈಗೊಬ್ಬ ಕಾಲಿಗೊಬ್ಬ ಆಳೂಂತಾ. ನಾನ್ಯಾಕೆ ಬೇಗ ಎದ್ದು ಕೆಲ್ಸಮಾಡ್ಬೇಕೂ."

"ಇದ್ರೆ ಇರ್ಲಿ ಇಲ್ಲಿದ್ರೆ ಬೇಡಾ. ಆಳಾದವನು ಅರಸಾಗಬಲ್ಲ ಅಂತ ಗಾದೆ ಇದೆ ಗೊತ್ತಾ ? ನೀನು ಆಳಿನಂತೆ ಕೆಲಸ ಮಾಡಿದ್ದರೆ ಅರಸಾದಾಗ ಆ ಕೆಲ್ಸ ಹೇಗೆ ಮಾಡಿಸ್ಬೇಕೂಂತ ತಿಳ್ಯೋದೂ. ನೀನು ಹೀಗೆ ಎಂಟು ಗಂಟೆಗೆ ಎದ್ರೆ ಕೆಲ್ಸದೋರೂ ಹಾಗೇ ಎಳ್ತಾರೆ."

ನೂಪುರನಿಗೆ ತಾಯಿಯ ಮಾತು ಅರ್ಥವಾದಂತೆ ಕಾಣಲಿಲ್ಲ. ಎಲ್ಲೋ ನೋಡುತ್ತಿದ್ದಳು.

"ಇವೊತ್ತು ಶುಕ್ರವಾರ ನಡೀ ತಲೆಗೆ ಎಣ್ಣೆ ಒತ್ತಿ ನೀರ್ಹಾಕ್ತೀನಿ-"

ಕಾವೇರಮ್ಮ ಮಗಳಿಗೆ ಎಣ್ಣೆ ಒತ್ತಿ ನೀರು ಹಾಕುತ್ತಾ ಬುದ್ಧಿ ಹೇಳ ತೊಡಗಿದರು. ಬಿಸಿ ನೀರು ಬಿದ್ದಾಗ ಅವಳು ಬೆಚ್ಚಿದಳು.

"ಯಾಕೆ ಬೆಚ್ತೀ ? ಏನಾಯ್ತು ?"

ಕಾವೇರಮ್ಮ ಕೇಳಿದರು.

"ಬಿಸಿನೀರು ಬೀಳ್ದೆ ಇದ್ರೆ ಎಣ್ಣೆಜಿಡ್ಡು ಹೇಗೆ ಹೋಗುತ್ತೆ-ತಾಳು ಒಂದು ನಿಮಿಷ ಉಜ್ಜಿಬಿಡ್ತೀನಿ."

ಕಾವೇರಮ್ಮ ಮಗಳಿಗೆ ಬೇಗ ನೀರು ಹಾಕಿ ಮುಗಿಸಿದರು. ಮೊದಲೇ ದಟ್ಟವಾದ ಉದ್ದ ಕೂದಲು ಜಿಡ್ಡು ನಿಂತುಬಿಟ್ಟರೆ ನೆಗಡಿ ಬಂದೀತೆಂದು ಅವರಿಗೆ ಅಳುಕು.

ತಲೆಗೆ ನೀರು ಹಾಕಿಕೊಂಡ ಆ ದಿನವೆಲ್ಲಾ ಮಂಕಾಗೇ ಇದ್ದಳು.

ಯಾರೊಂದಿಗೂ ಮಾತಿಲ್ಲ. ಕತೆಯಿಲ್ಲ. ಎಲ್ಲೋ ಒಂದು ಮೂಲೆಯಲ್ಲಿ ಸುಮ್ಮನೇ ಕುಳಿತುಬಿಟ್ಟಿದ್ದಳು. ಕಾವೇರಮ್ಮ ಆತಂಕದಿಂದ ಅವಳ ಹಣೆ ಕತ್ತು ಮುಟ್ಟಿ ನೋಡಿದರು.

"ಜ್ವರ ಬಂದಿದ್ಯೇನೇ ?"

"ಏನೂ ಇಲ್ಲ-" ಅವರ ಕೈ ಸರಿಸಿದಳು.

ಮಾರನೆಯ ದಿನ ಬೆಳಗಿನ ಹೊತ್ತಿಗೆ ಸರಿಹೋಗಿದ್ದಳು.

ಕಾವೇರಮ್ಮನಿಗೆ ಅದೆಲ್ಲಾ ಜ್ಞಾಪಕಕ್ಕೆ ಬಂದಿತು, ನೂಪುರಳಿಗೇನಾಗಿದೆ ? ಅವರ ಮನೆಯಲ್ಲಿ ಏನಾದರೂ ಎಡವಟ್ಟು ಮಾಡಿಕೊಂಡು ಬಿಟ್ಟು ತಮ್ಮ ಮನೆಗೆ ಬಂದು ಬಿಟ್ಟರೆ ಅಕ್ಕ ಪಕ್ಕದವರ ಮಾತು ಕೇಳಬೇಕಾದೀತು. ಮೊದಲೇ ಸೊಸೆಗಳು ಚೆನ್ನಾಗಿ ಬಾಳದ ಮನೆ, ಇವಳ ಬದುಕೂ ಹಾಗೆ ಆದರೆ ! ಅವರಿಗೆ ಯೋಚನೆಯಿಂದ ತಲೆ ಬಿಸಿಯಾಯಿತು.

ಸಾಯಂಕಾಲ ವರ್ಧಮಾನ ಕಾರಿನಿಂದಿಳಿದು ಬಂದಾಗ ನೂಪುರಳೂ ಜೊತೆಗೆ ಬಂದಿರಬಹುದೆಂದುಕೊಂಡು ಸಂತಸದಿಂದ ಮುಂಬಾಗಿಲಿಗೆ ಬಂದ ಕಾವೇರಮ್ಮ ಅವನೊಬ್ಬನೇ ಒಳಗೆ ಬಂದರೂ ನೂಪುರ ಬರದೇ ಇದ್ದುದು ಕಂಡು ನಿರಾಶೆಯಾಯಿತು. ಅದನ್ನು ಗಮನಿಸಿದ ವರ್ಧಮಾನ ಹೇಳಿದ. "ನೂಪುರ ಅಮ್ಮನ ಜೊತೇಲೇ ಇದ್ಳು. ನಾನು ಇಲ್ಲಿಗೆ ಬರ್‍ತಾ ಇದ್ದೀನಿಂತ ಗೊತ್ತಿಲ್ಲ. ಅವಳಿಗೆ ನಾನು ಡಾಕ್ಟರ್ ನಚಿಕೇತ್‌ರವರ ಬಳಿಗೆ ಹೋಗಿ ಬರುತ್ತಿದ್ದೇನೆ."

ಸಂಜೀವಯ್ಯನವರ ಮುಖದಲ್ಲಿ ಮೋಡಕವಿಯಿತು.

"ನೂಪುರ ಹುಷಾರಾಗಿದ್ದಾಳೆ ತಾನೇ ?"

"ಹೂಂ ಹುಷಾರಾಗಿದ್ದಾಳೆ !"

ವರ್ಧಮಾನ ಕುರ್ಚಿಯೊಂದರಲ್ಲಿ ಕುಳಿತ, ಕಾವೇರಮ್ಮ ಅಳಿಯನಿಗೆ ಕಾಫಿ, ತಿಂಡಿ ತಂದು ಉಪಚರಿಸಲು ಒಳಗೆ ನಡೆದರು.

ವರ್ಧಮಾನನಿಗೆ ಮಾತು ಹೇಗೆ ಪ್ರಾರಂಭಿಸಬೇಕೆಂದು ತಿಳಿಯದೆ ಒದ್ದಾಡಿದ. ಎರಡು ಬಾರಿ ಕೆಮ್ಮಿದ ನಾಲ್ಕಾರು ಬಾರಿ ವಾಚು ನೋಡಿಕೊಂಡ ಕೊನೆಗೆ ಧೈರ್ಯ ಮಾಡಿ ಕೇಳಿದ-

"ನಾನು ಡಾಕ್ಟರ್ ನಚಿಕೇತ್ ಬಳಿಗೆ ಹೋಗಿ ಬಂದೆ. ಅವರು ನನಗೆ ಕೆಲವು ಪ್ರಶ್ನೆಗಳ್ನ ಕೇಳಿದರು. ನಾನು ಉತ್ತರ ನಿಮ್ಮನ್ನು ಕೇಳಿ ಹೇಳುತ್ತೇನೆ ಎಂದೆ...."

"ಏನು ಕೇಳಿದ್ರು ?"

"ಅದೇ ನೂಪುರ ಯಾವಾಗ್ಲಾದ್ರೂ ತಲೆಗೆ ಪೆಟ್ಟು ಮಾಡಿಕೊಂಡಿದ್ಲಾ. ಅಥವಾ ಏನಾದ್ರೂ ನೋಡಿ, ಕೇಳಿ ಹೆದರಿದ್ಲಾ ?"

ಸಂಜೀವಯ್ಯ ಅಚ್ಚರಿಯಿಂದ ಅವನ ಮುಖ ನೋಡಿದರು.

"ಯಾಕೆ ಏನಾಯ್ತು ? ಏನಾದ್ರೂ ಹೆದರ್ಕೊಂಡು ಗಲಾಟೆ ಮಾಡಿದ್ಲಾ ?"

ವರ್ಧಮಾನ ತಲೆ ತಗ್ಗಿಸಿದ.

"ಹೊರಗೆ ಹೋಗಿ ನಾವಿಬ್ರೇ ಕೂತ್ಕೊಂಡು ಮಾತಾಡಿದ್ರೆ ವಾಸಿ ಅನ್ನಿಸುತ್ತೆ."

ಸಂಜೀವಯ್ಯನವರ ಎದೆ ಬಡಿದುಕೊಂಡಿತು. ತಮ್ಮ ಮಗಳಲ್ಲಿ ಏನು ದೋಷವಿದೆಯೋ ? ಮದುವೆಯಾಗಿ ಎರಡು ಮೂರು ದಿನಗಳಿಗೆಲ್ಲ ಆಗಲೇ ಹೀಗಾದರೆ ! ವರ್ಧಮಾನ ಹೇಳಿದಂತೆ ಹೊರಗಿನ ವರಾಂಡದಲ್ಲಿ ಕುಳಿತರು. ವರ್ಧಮಾನ ಅವರಿಗೆ ನೂಪುರಳ ಬಗ್ಗೆ ಎಲ್ಲಾ ತಿಳಿಸಿದ. ಸಂಜೀವಯ್ಯನವರಿಗೆ ನಂಬಲೇ ಆಗಲಿಲ್ಲ.

"ಮಾನು ನಂಗೆ ನಂಬೋಕ್ಕೇ ಆಗ್ತಾ ಇಲ್ಲ. ಮನೇಲಿ ಒಂದು ದಿನಾದ್ರೂ ಹಾಗೆ ಆಡಿದೋಳಲ್ಲ. ಅವಳಮ್ಮ ಇದ್ದಿದ್ದಿದ್ರೆ ಕೇಳಿಬಿಟ್ರೆ ಹುಚ್ಚಿ ಹಾಗೆ ಆಡ್ಬಿಡ್ತಾಳೆ. ಯಾಕೆ ಹೀಗಾಯ್ತು ? ಮದ್ವೆಗೆ ಮುಂಚೆ ಅವ್ರು ಇವ್ರು ನಂಗೆ ನಿಮ್ಮ ಮನೇಲಿ ನಡೆದ ಸಾವಿನ ಬಗ್ಗೆ ಹೇಳಿ. ದೆವ್ವಾನೇ ನಿಮ್ತಂದೆ, ಅಜ್ಜಿ ಮುತ್ತಜ್ಜೀನ ತಿಂದ್ಕೊಂತು ಅಂದ್ರು. ನನಗದರಲ್ಲೆಲ್ಲಾ ನಂಬಿಕೆಯಿಲ್ಲ–ಆದರೂ ನೀವು ಹೇಳೋದು ಕೇಳಿದ್ರೆ ಅನುಮಾನ ಬಲವಾಗ್ತಾ ಇದೆ." ವರ್ಧಮಾನ ತಲೆಯಾಡಿಸಿದ. "ನನಗೂ ಡಾಕ್ಟರಿಗೂ ಅದ್ರಲೆಲ್ಲಾ ನಂಬಿಕೆಯಿಲ್ಲ. ಅವ್ರು ಅದೆಲ್ಲಾ ಸೈಕಲಾಜಿಕಲ್ ಪ್ರಾಬ್ಲಮ್ಸ್ ಎಲ್ಲೋ ಹೆದರಿರಬೇಕು, ಎಲ್ಲೋ ಕತೆ ಕೇಳಿ ಅವ್ಳೇ ಏನೇನೋ ಇಮ್ಯಾಜಿನ್ ಮಾಡ್ಕೊಂಡಿರ್ಬೇಕೂಂತಾ ಅಂತಾರೆ."

ಅಷ್ಟರಲ್ಲಿ ಕಾವೇರಮ್ಮ ಬಂದಿದ್ದರಿಂದ ಮಾತು ನಿಲ್ಲಿಸಿದರು. ಅವರತ್ತ ಹೋಗುತ್ತಲೇ ವರ್ಧಮಾನ ಹೇಳಿದ.

"ಅಮ್ಮ ನವಗ್ರಹ ಶಾಂತಿ, ತಾಯಿತ ಕಟ್ಸೋದು ಎಲ್ಲಾ ಮಾಡಿದ್ಲಾಳೆ. ನಚಿಕೇತ್ ನಂಗೆ ಒಂದಿಷ್ಟು ಮಾತ್ರೆ ಕೊಟ್ಟಿದ್ದಾರೆ. ಪ್ರತಿದಿನ ದಿನಕ್ಕೆ

ಮೂರು ಸಲ ಕೊಡೂಂತಾ. ಒಂದು ವಾರ ವಾಚ್ ಮಾಡಿ ನೋಡೂಂತಾ ಹೇಳಿದ್ದಾರೆ. ಅವಳ್ನ ನಿಮ್ಮ ಮನೆಗೆ ಸಧ್ಯಕ್ಕೆ ಕಳಿಸಿಕೊಡೋಕ್ಕಾಗೋಲ್ಲ. ಅಲ್ದೇ ನೀವಾರೂ ಆ ಕಡೆ ಬರ್ದೇ ಇದ್ರೆ ಕೇಸು ಸ್ಟಡಿ ಮಾಡೋದು ಸುಲಭ ಅಂತಾರೆ ಡಾಕ್ಟ್ರು.

"ಹಾಗೇ ಆಗ್ಲಪ್ಪ. ಅವ್ಳು ಸರಿಹೋದ್ರೆ ಸಾಕು" ನೀನೇನೂ ಬೇಜಾರು ಮಾಡ್ಕೋಬೇಡಪ್ಪಾ. ಅವ್ಳು ಸರಿ ಹೋಗ್ತಾಳೆ, ಅವ್ಳು ಎಲ್ಲರಂತೆ ನಾರ್ಮಲ್ ಆಗೇ ಇದ್ಲು, ನನ್ನಿಂದ ಏನು ಸಹಾಯ ಬೇಕಾದ್ರೂ ಕೇಳು. ನಾನು ಸಿದ್ಧ" ಸಂಜೀವಯ್ಯ ವಿನೀತರಾಗಿ ಹೇಳಿದರು. ವರ್ಧಮಾನ ಕಾಫಿ ತಿಂಡಿ ಮುಗಿಸಿ ಎದ್ದು ಹೊರಟ.

ವರ್ಧಮಾನ ಮನೆಗೆ ಬಂದಾಗ ಮುಂದಿನ ವರಾಂಡದಲ್ಲಿ ನೂಪುರ ಮಲ್ಲಿಗೆ ಮೊಗ್ಗು ಪೋಣಿಸುತ್ತಾ ಕುಳಿತಿದ್ದಳು. ಅವಳ ಗಮನವೆಲ್ಲಾ ಮೊಗ್ಗನ್ನು ಸೂಜಿಗೆ ತೂರಿಸಲು ಯತ್ನಿಸುತ್ತಿದ್ದರಿಂದ ಅವಳಿಗೆ ವರ್ಧಮಾನ ಬಂದುದು ತಿಳಿಯಲಿಲ್ಲ. ಕೈಲಿದ್ದ ಮಲ್ಲಿಗೆ ಮೊಗ್ಗಿನಷ್ಟೆ ಮುದ್ದಾಗಿದ್ದ ಅವಳ ಮುಖವನ್ನೇ ನೋಡಿದ. ಇವಳಲ್ಲಿ ಯಾವ ದೋಷವೂ ಇಲ್ಲ. ಡಾಕ್ಟರ್ ಹೇಳಿದಂತೆ ಅವಳನ್ನು ಈ ಮನೆಯಿಂದ ದೂರ ಬೇರೆಲ್ಲಾದರೂ ಕರೆದುಕೊಂಡು ಹೋಗಿ ನೋಡಬೇಕು. ತಾನಾಗಲೇ ಸುಮಂತ್‌ನ ಮನೆ ಖಾಲಿಯಾಗಿರುವುದರಿಂದ ಅಲ್ಲಿಗೆ ಒಂದು ತಿಂಗಳವಟ್ಟಿಗೆ ಹೋಗಿರಬೇಕೆಂದು ನಿರ್ಧರಿಸಾಗಿತ್ತು. ಅಲ್ಲಿ ತಾನು ನೂಪುರ ಇಬ್ಬರೇ ಇರಬೇಕು. ಮೊಗ್ಗು ಪೋಣಿಸಿ ಮುಗಿಸುವವರೆಗೂ ಅಲ್ಲಿಯೇ ನಿಂತಿದ್ದು ಅವಳನ್ನೆ ನೋಡುತ್ತಿದ್ದ. ಅವಳು ಪೋಣಿಸಿದ ದಂಡೆಯನ್ನು ಹೆರಳಿಗೇರಿಸುವಾಗ ಎದುರಿಗೆ ಅವನು ನಿಂತಿದ್ದು ಕಂಡು ಬೆಚ್ಚಿದಳು. ಕೈಲಿದ್ದ ದಂಡೆ ಕೆಳಗೆ ಬಿತ್ತು.

"ಯಾಕೆ ಹೆದರಿದೆ ? ತೊಗೋ" ಅವನೇ ಬಗ್ಗಿ ದಂಡೆಯನ್ನು ಅವಳ ಕೈಗಿತ್ತಾಗ ಅವಳು ಅವನನ್ನೇ ದುರುದುರು ನೋಡಿದಳು. ಇದ್ದಕ್ಕಿದಂತೆ ಅವಳ ಕಣ್ಣುಗಳು ಭಯದಿಂದ ಅರಳಿದವು. "ಅಯ್ಯೋ ಬೆಂಕಿ ಬೆಂ' '" ಚೀರಿದಳು.

"ಎಲ್ಲಿ ಬೆಂಕಿ ನೂಪು ? ಎಲ್ಲಿ ?" ವರ್ಧಮಾನ ಅವಳನ್ನು ಹಿಡಿದಲುಗಿಸಿ ಕೇಳಿದ.

"ನೋಡಿ ಅಲ್ಲಿ ಗೇಟಿನ ಹತ್ತಿರ !"

ಅವನು ತಿರುಗಿ ನೋಡಲಿಲ್ಲ. "ನೂಪುರಾ, ನೀನು ಏನೇನೋ

ಕಲ್ಪಿಸಿಕೊಂಡು ಹೆದರುತ್ತೀ – ಈಗ್ತಾನೇ ಸನ್‌ಸೆಟ್ ಆಗ್ತಾ ಇದೆ. ಆಕಾಶದ ಕೆಂಪು ಬಣ್ಣ ನೋಡಿ ಹೆದರಿದ್ದೀಯಾ ಅಷ್ಟೆ ಬಾ– ಒಳಗೆ ಕರೆತಂದ, ಲಲಿತಮ್ಮ ಲಲಿತಾ ಸಹಸ್ರನಾಮ ಓದುತ್ತಾ ಕುಳಿತಿದ್ದರು.

"ಏನೋ ಅದು ಅದ್ಯಾಕೆ ಇವ್ಳು ಏನೋ ಕೂಗಿದ ಹಾಗಿತ್ತು!"

"ಏನಿಲ್ಲವಮ್ಮಾ ಆಕಾಶ ಕೆಂಪಗೆ ಕಾಣ್ತಾ ಇತ್ತಲ್ಲಾ ಅದ್ನ ನೋಡಿ ಬೆಂಕಿ ಅಂತ ತಿಳ್ಕೊಂಡು ಕೂಗಿದ್ಲು ಅಷ್ಟೆ. ಮೊಗ್ಗು ಪೋಣಿಸಿ ದಂಡೆ ಮಾಡಿದ್ದಾಳೆ. ಮುಡಿಸು ಅವಳ್ಗೆ ನಿನ್ನ ಹತ್ರಾನೇ ಕೂಡಿಸ್ಕೋ ನಾನು ಬಟ್ಟೆ ಬದಲಿಸಿ ಬರ್ತೀನಿ."

ವರ್ಧಮಾನ ಒಳಗೆ ನಡೆದ. ಲಲಿತಮ್ಮ ನೂಪುರಳನ್ನು ಪಕ್ಕದಲ್ಲಿ ಕೂಡಿಸಿಕೊಂಡರು. "ಇಲ್ಲಿ ಕೂತ್ಕೋ ಸಹಸ್ರನಾಮ ಓದಿ ಮುಗಿಸಿ ಮುಡಿಸ್ತೀನಿ"

ವರ್ಧಮಾನ ಬಟ್ಟೆ ಬದಲಿಸಿ ಬಂದವನೇ ಸಿಗರೇಟ್ ಸೇದಲು ಹೊರಗೆ ಬಂದ ತಾಯಿಗೆ ತಾನು ಮನೆಯಲ್ಲಿ ಸಿಗರೇಟು ಸೇದುವುದು ಇಷ್ಟವಿಲ್ಲ. ಹೊರಗೆ ವರಾಂಡದಿಂದ ಹೊರಬಂದು ಸಿಗರೇಟಿಗೆ ಬೆಂಕಿ ತಗಲಿಸಿ, ಒಂದೆರಡು 'ದಂ' ಎಳೆದ. ಅವನ ದೃಷ್ಟಿ ಇದ್ದಕ್ಕಿದ್ದಂತೆ ಗೇಟಿನತ್ತ ಹರಿಯಿತು. ಗೇಟಿನ ಮುಂದೆ ಏನೋ ಹತ್ತಿಕೊಂಡು ಉರಿಯುತ್ತಿತ್ತು. ಇಲ್ಲಿ ಯಾರು ಬೆಂಕಿ ಹಾಕಿದರು? ಸರಸರನೆ ಆ ಬೆಂಕಿಯತ್ತ ನಡೆದ. ಬೆಂಕಿ ಪಕ್ಕನೇ ಆರಿತು. ಮತ್ತೊಂದು ಕ್ಷಣದಲ್ಲಿ ಮಲ್ಲಿಗೆ ಗಿಡದ ಮೇಲೆ ಬೆಂಕಿ ಕಂಡಿತು. ವರ್ಧಮಾನ ಅವಾಕ್ಕಾದ. ಅವನು ನೋಡುತ್ತಿದ್ದಂತೆಯೇ ಬೆಂಕಿ ಮೇಲೆಹೋಗಿ ಮನೆಯ ಸೂರಿನ ಮೇಲೆ ಉರಿಯತೊಡಗಿತು. ಅವನ ಕೈಲಿದ್ದ ಸಿಗರೇಟು ಬಿದ್ದಿತು. ನೂಪುರ ಹೇಳಿದುದು ಸುಳ್ಳಲ್ಲ. ಅವಳಿಗೆ ಬೆಂಕಿ ಕಂಡಿರಬೇಕು. ಅವಳ ಮನಸ್ಸು ಅತೀ ಸೂಕ್ಷ್ಮವಾಗಿದ್ದು ಅತೀಂದ್ರಿಯವಾದುದೆಲ್ಲಾ ತಿಳಿಯುವುದೋ ಏನೋ, ಕ್ಷಣ ಕಾಲ ಯೋಚಿಸಿದ. ತಾಯಿಯನ್ನು ಕರೆದುತೋರಿಸಲೇ ಎಂಬ ಬಯಕೆಯುಂಟಾದರೂ ಅದನ್ನು ತಡೆದ. ಅದೇ ಹೊತ್ತಿಗೆ ಸಂಜೆಯ ವಾಕಿಂಗ್‌ಗೆ ಹೋಗಿದ್ದ ರಾಮಲಿಂಗಯ್ಯನವರು ಮನೆಯತ್ತ ಬಂದವರು ಗೇಟಿನ ಬಳಿಯೇ ನಿಂತರು.

ಅವರ ದೃಷ್ಟಿ ಸೂರಿನತ್ತ ಹರಿಯಿತು. ಅಲ್ಲಿ ಬೆಂಕಿ ಧಗಧಗನೇ ಉರಿಯುತ್ತಿತ್ತು. ರಸ್ತೆಯಲ್ಲಿ ಹೋಗುತ್ತಿದ್ದ ಅನೇಕರಿಗೆ ಅದು ಗೋಚರವಾಗಿರಬೇಕು ಅಲ್ಲಿಯೇ ನಿಂತು ನೋಡತೊಡಗಿದರು. ಬೆಂಕಿ ಇದ್ದಕ್ಕಿದ್ದಂತೆ

ಆರಿಹೋಯಿತು. ರಾಮಲಿಂಗಯ್ಯನವರು ಯಾರೊಂದಿಗೂ ಮಾತನಾಡದೇ ಗೇಟು ತೆಗೆದು ಒಳಗೆ ಬಂದರು. ರಸ್ತೆಯಲ್ಲಿನ ಜನರು ದಿಗ್ಭ್ರಮೆಗೊಂಡು ನೋಡುತ್ತಲೇ ಇದ್ದರು. ಎದುರಿಗೆ ನಿಂತಿದ್ದ ವರ್ಧಮಾನನ ಮುಖ ನೋಡಿದರು.

"ಒಳಗೆ ಬಾ ಮಾನು-ಜನಕ್ಕೆ ಇದೆಲ್ಲಾ ತಮಾಷೆಯಾಗಿದೆ ಒಳಗೇ ನುಗ್ಗಿಬಿಟ್ಟಾರೂ !"

ವರ್ಧಮಾನ ಅವರನ್ನು ಹಿಂಬಾಲಿಸಿ ನಡೆದ. "ಮಾನೂ ಬೆಂಕಿ ನೋಡಿದ್ಯಾ ?"

"ಹೂಂ ತಾತಾ ಅದ್ಯಾಗೆ ಹಾಗೆ ಬೆಂಕಿ ಹತ್ತಿಕೊಂಡಿತ್ತು ?"

"ರುದ್ರಣ್ಣನ ಹತ್ತಿರ ಹೋಗಿದ್ದೆ. ನಾಳೆ ನಾಡಿದ್ದರಲ್ಲಿ ಬಂದು ನೋಡ್ತಾನೆ. ಮೊದಲು ನೂಪುರನಿಗೆ ಕಾಣಿಸಿಕೊಂಡಿತು. ಈಗ ನಮಗೂ ಕಾಣ್ತಾ ಇದೆ. ಅದು ಬಲವಾಗುವ ಮುಂಚೆ ನಾವು ಅದ್ನ ತಡೆಯಬೇಕು !"

* * * *

"ಏನು ತಾತಾ ನೀವು ಹೇಳ್ತಾ ಇರೋದು ?"

"ಅದೆಲ್ಲಾ ಸಿಂಗರ್ಥವಾಗೋಲ್ಲ-ನಮ್ಮ ಕೆಲಸಕ್ಕೆ ಅಡ್ಡಿಮಾಡಬೇಡ ಅಷ್ಟೆ ರುದ್ರಣ್ಣ ಎಲ್ಲಾ ನೋಡ್ಕೋತಾನೆ"

"ತಾತಾ, ನಂಗೇನೋ ಯಾರೋ ಮಿಸ್ಚೀಫ್ ಮಾಡ್ತಾ ಇದ್ದಾರೇಂತಾ ಅನ್ನುಸ್ತೆ. ನಾವು ಹೆದರದೇ ಕೇರ್ ಮಾಡ್ದೇ ಇದ್ರೆ ತೆಪ್ಗಾಗ್ತಾರೆ"

"ಮಾನೂ, ನಿಂಗದೆಲ್ಲಾ ತಿಳಿಯೋಲ್ಲ ಕಣೋ, ನಾನು ಹೇಳಿದಷ್ಟು ಕೇಳು. ನಿಂಗೆ ನಾಚಿಕೆ ಇಲ್ದೇದ್ರೆ ಬೇಡಾ ಆದ್ರೆ ರುದ್ರಣ್ಣ ಬಂದಾಗ ನೀನು ಎದುರಿಗೆ ಬಂದು ನಿಂತು ಏನಾದ್ರೂ ತರಲೇಮಾಡ್ಬೇಡಾ. ಅವ್ನು ನೂಪುರಂಗೆ ನಿಮ್ತಂದೆ ಮೊದಲ್ನೇ ಹೆಂಡ್ತಿ ಗಂಗೆ ದೆವ್ವ ಹಿಡ್ಕೊಂಡು ತೊಂದ್ರೆ ಕೊಡ್ತಾ ಇದೇಂತಾ ಅನುಮಾನ."

"ಹೋಗು ತಾತಾ. ಸತ್ತು ಹೋದೋಳು ಮತ್ತೆ ಬರ್ತಾಳಾ ? ಅನೂ ಅಲ್ದೇ ನೂಪುರಾಳೂ ಅವ್ಳಹಾಗೆ ಹೆಣ್ಣೂಂತ ಅವನ್ಗೆ ಗೊತ್ತಿಲ್ವಾ ? ಅವ್ಳು ದೆವ್ವ ಆಗಿ ತೊಂದ್ರೆ ಕೊಡೋ ಹಾಗಿದ್ದಿದ್ರೆ ಅಮ್ಮಂಗೇ ತೊಂದ್ರೆ ಕೊಡ್ಬೋದಿತ್ತಲ್ಲಾ !"

"ಅದ್ಕೇ ಕಣೋ ನಾನು ಹೇಳಿದ್ದು ನೀನು ಒಳಗೆ ನಡೀ- ಊರ್ನೋರ ಬಾಯಿಗೆಲ್ಲಾ ಬೀಳ್ಬಾರ್ದು"

ವರ್ಧಮಾನ ಗೊಣಗುತ್ತಲೇ ಒಳಕ್ಕೆ ಹೋದ. ಯಾರೂ ಹೊರಗೆ ಬಾರದಿದ್ದು ಕಂಡು ಮನೆಯ ಮುಂದಿದ್ದ ಜನರ ಗುಂಪೆಲ್ಲಾ ಕರಗತೊಡಗಿತು. ಒಳಗೇ ಇದ್ದ ಲಲಿತಮ್ಮನಿಗೆ ಎಲ್ಲಾ ತಿಳಿದಾಗ ನಡುಗಿದರು.

"ಅಪ್ಪಾ, ಇದೇನು ಗ್ರಹಚಾರ ಬಂತಪ್ಪಾ, ನೂಪುರಂದಾಯ್ತು ಈಗ ಮನೇ ಮೇಲೆ ಶುರುವಾಯ್ತು? ಮನೆ ಬಿಟ್ಟು ಹೊರಟುಹೋಗೋಣ, ಅದ್ನೆ ಮಾರಿಬಿಡು!"

"ಅಲ್ವೇ ಲಲ್ತಾ ಮನೆ ಮಾರಿದ್ರೆ ಬೆನ್ನಿಗೆ ಹತ್ಕೊಂಡು ಬಂದದ್ದು ಬಿಟ್ಹೋಗುತ್ತಾ? ಬೆನ್ನ ಹಿಂದೆ ಬಂದ ಬೇತಾಳಾಂತಾ ನೀನೇ ಕೇಳಿಲ್ವಾ? ರುದ್ರಣ್ಣ ಬಂದು ಎಲ್ಲಾ ಸರಿಮಾಡ್ತಾನೆ. ಸುಮ್ನಿರು. ಅದಕ್ಕೆಲ್ಲಾ ನಾನು ಏರ್ಪಾಡು ಮಾಡಿದ್ದೇನಿ ನೂಪುರ ಎಲ್ಲಿ?"

"ಒಳಗೆ ಏನೋ ಓದ್ತಾ ಕೂತಿದ್ಲು! ಮಾನೂನೂ ಅಲ್ಲೇ ಇದ್ದಾನಲ್ಲಾ!" ಲಲಿತಮ್ಮ ಆತಂಕದಿಂದಲೇ ಸೊಸೆಯ ರೂಮಿನತ್ತ ನಡೆದು ಬಾಗಿಲ ಪರದೆ ಸರಿಸಿ ಬಗ್ಗಿ ನೋಡಿದರು, ಮಾನು ಅವಳ ಕೆನ್ನೆಗೆ ಮುತ್ತಿಡುತ್ತಿದ್ದ. ಅವರಿಗೇ ನಾಚಿಕೆಯಾಗಿ ಪರದೆಹಾಕಿ ಬಂದುಬಿಟ್ಟರು. ಆದರೂ ಮನಸ್ಸಿನಲ್ಲಿ ಅಳುಕಿದುದ್ದರಿಂದ ಕೈ ಕಾಲು ತೊಳೆದುಕೊಂಡು ಬಂದು ಮತ್ತೆ ದೇವರಿಗೆ ದೀಪ ಹೊತ್ತಿಸಿದರು.

ಅಂದು ರಾತ್ರಿ ಊಟ ಮಾಡಿ ಎಲ್ಲರೂ ಹೊರಗೆ ಡ್ರಾಯಿಂಗ್ ರೂಮಿನಲ್ಲಿ ಕುಳಿತಿದ್ದರು. ಮನಸ್ಸಿನಲ್ಲಿ ಏನೋ ಅವ್ಯಕ್ತ ಭಯವಿದ್ದರೂ ಯಾರೂ ಅದನ್ನು ಹೊರಗೆಡವದೇ ಮೇಲ್ನೋಟಕ್ಕೆ ನಿಶ್ಚಿಂತರಾಗಿ ಕಾಣುತಿದ್ದರಷ್ಟೇ. ವರ್ಧಮಾನ ತಾನು ಬೇರೆ ಮನೆ ನೋಡಿ ತಾನೂ, ನೂಪುರ ಇಬ್ಬರೇ ಒಟ್ಟಿಗೆ ಇರುವ ಬಗ್ಗೆ ಕನಸು ಕಟ್ಟುತ್ತಾ ಕಾಲುಚಾಚಿ ಕುಳಿತ್ತಿದ್ದ. ನೂಪುರ ಅವನ ಸನಿಹದಲ್ಲೇ ನಾಚಿ ಮುದುರಿ ಕುಳಿತಿದ್ದಳು. ಅತ್ತೆ, ತಾತನ ಮುಂದೆ ಕುಳಿತುಕೊಳ್ಳಲು ಅವಳಿಗೆ ಸಂಕೋಚ; ಲಲಿತಮ್ಮ ಅಂದಿನ ಖರ್ಚಿನ ಲೆಕ್ಕ ಪುಸ್ತಕದಲ್ಲಿ ಬರೆಯುತ್ತಿದ್ದರು. ರಾಮಲಿಂಗಯ್ಯ ನವರು ಕಣ್ಮುಚ್ಚಿ ಸೋಫಾದ ಮೇಲೊರಗಿದ್ದರು. ಟಿ.ವಿ.ಯಲ್ಲಿ ಯಾವುದೋ ಸಂಗೀತ ಕಾರ್ಯಕ್ರಮ ಬರುತ್ತಿದ್ದರೂ ಯಾರಿಗೂ ಅದರ ಕಡೆ ಗಮನವಿರಲಿಲ್ಲ. ಇದ್ದಕ್ಕಿದಂತೆ ಲೈಟುಗಳು ಮಬ್ಬಾಗಿ, ಟಿವಿಯಲ್ಲಿನ ಚಿತ್ರ ಮರೆಯಾಗಿ ಕರಕರ ಸದ್ದಾಯಿತು.

"ವೋಲ್ಟೇಜ್ ಡ್ರಾಪ್ ಆಗಿರ್ಬೇಕು"

ವರ್ಧಮಾನ ತನಗೆ ತಾನೇ ಅಂದುಕೊಂಡ. ಲೈಟ್ ಮತ್ತೆ ಪ್ರಖರ ವಾಯಿತು. ಟಿವಿಯಲ್ಲಿ ಚಿತ್ರವಿಚಿತ್ರವಾದ ಸದ್ದು ಬಂದಿತೇ ಹೊರತು ಚಿತ್ರ ಮೂಡಲಿಲ್ಲ. ವರ್ಧಮಾನ ಟಿವಿಯತ್ತ ನಡೆದ. ಅಡ್ಜೆಸ್ಟ್ ಮಾಡಿದರೆ ಸರಿಹೋಗಬಹುದು. ಅವನು ಟಿವಿಯ ಬಳಿಗೆ ಬಂದಾಗ ಏನೋ ಮಿಂಚು ಹೊಳೆದಂತಾಗಿ ಅವನ ಕಣ್ಣುಗಳ ಮುಂದೆ ಯಾವುದೋ ಪ್ರಕಾಶ ಮಿನುಗಿದಂತಾಯಿತು ಕಣ್ಣುಗಳನ್ನು ಮುಚ್ಚಿಕೊಂಡ. ಟಿವಿಯಿಂದ ಯಾವುದೋ ಶಬ್ದ ವಿಕಾರವಾಗಿ ಕೇಳಿಸಿತು. ವರ್ಧಮಾನ ಮತ್ತೆ ಟಿವಿಯ ಬಳಿಗೆ ಸರಿದ, ಅವನನ್ನು ಯಾರೋ ತಳ್ಳಿದಂತಾಗಿ ಆಯತಪ್ಪಿ ಟಿವಿಯಿಂದ ದೂರ ಹೋಗಿ ದೊಪ್ಪನೇ ಬಿದ್ದ.

"ಏನಾಯ್ತು? ಶಾಕ್ ಹೊಡೀತೇನೋ! ಎಲ್ಲಿ ಶಾರ್ಟ್ ಆಗ್ತಾ ಇದ್ಯೋ ಏನೋ. ಆಫ್ ಮಾಡ್ಬಿಡ್ತೀನಿ ತಾಳು" ಲಲಿತಮ್ಮ ಎದ್ದು ಸ್ವಿಚ್ ಆಫ್ ಮಾಡಿದರು. ಆದರೆ ಟಿವಿಯಲ್ಲಿ ಮೂಡಿಬರುತ್ತಿದ್ದ ಚಿತ್ರ ವಿಚಿತ್ರ ಗೆರೆಗಳು ಹೋಗಲಿಲ್ಲ.

ರಾಮಲಿಂಗಯ್ಯ, ನೂಪುರ ವರ್ಧಮಾನನತ್ತ ಧಾವಿಸಿದರು. ಅವನು ಎದ್ದು ಕುಳಿತು ಕಣ್ಣುಜ್ಜುತ್ತಿದ್ದು, "ಏನೂ ಆಗ್ಲಿಲ್ಲ ಎಲ್ಲೊ ಕರೆಂಟ್ ಲೀಕ್ ಆಗ್ತಾ ಇರ್ಬೇಕೂ! ಸರ್ಯಾಗಿ ಆಫ್ ಮಾಡಮ್ಮ ನೀನು. ಸ್ಟಬಿಲೇಜರ್ ಹತ್ರ ಹೋಗಿ ಆರಿಸ್ಬೆ ಹಾಗೆ ಬಂದಿದಿ" ನಿಧಾನವಾಗಿ ಎದ್ದು ನಿಂತ. ತನಗೆ ಕರೆಂಟಿನ ಶಾಕ್‌ಲ್ಲ. ಯಾರೋ ಒದ್ದ ಹಾಗಾಯಿತೆಂದು ಹೇಳಲು ಅವನು ಒಪ್ಪಲಿಲ್ಲ. ಎಲ್ಲಾ ತನ್ನ ಕಲ್ಪನೆಗಳಿರಬೇಕು! ಅವನೇ ಮತ್ತೆ ಸ್ವಿಚ್ ಆರಿಸಲು ಹೊರಟಾಗ ನೂಪುರ ಅವನನ್ನು ತಡೆದು ತಾನೇ ಹೋಗಿ ಸ್ವಿಚ್ ಆರಿಸಿದಳು. ಟಿವಿಯ ಚಿತ್ರಗಳು ಮಾಯವಾಯಿತು, ಸದ್ದೂ ಮಾಯವಾಯಿತು. ಅದರೊಂದಿಗೆ ಮನೆಯ ದೀಪಗಳೆಲ್ಲಾ ಪಕ್ಕನೆ ಆರಿ ಹೋದವು.

"ಫ್ಯೂಸ್ ಹೋಗಿರಬೇಕು! ಎಲ್ಲಾ ಅಲ್ಲಲ್ಲೇ ಇರಿ ಟಾರ್ಚ್ ತರ್ತೀನಿ. ಫ್ಯೂಸ್ ಹೋಗಿದ್ರೆ ಹಾಕಿಬಿಡ್ತೀನಿ", ವರ್ಧಮಾನ ಹೇಳಿ ಜೇಬಿನಲ್ಲಿದ್ದ ಬೆಂಕಿಪೊಟ್ಟಣ್ಣ ತೆಗೆದು ಕಡ್ಡಿ ಗೀರಿದ. ಹತ್ತಿಕೊಂಡು ಬೆಂಕಿ ಆರಿಹೋಯಿತು. ಮತ್ತೆ ಮತ್ತೆ ಕಡ್ಡಿ ಗೀರಿದ ಅದು ಹತ್ತಲೇ ಇಲ್ಲ. "ಕಚಡಾ ಮ್ಯಾಚಸ್. ಎಲ್ಲಾ ಮೋಸ!" ವರ್ಧಮಾನ ಗೊಣಗುತ್ತಾ ಕತ್ತಲಲ್ಲೇ ಟಾರ್ಚ್

ಹುಡುಕಲು ಹೆಜ್ಜೆ ಮುಂದಿಟ್ಟು, ನೂಪುರ ಲಲಿತಮ್ಮನನ್ನು ಹಿಡಿದುಕೊಂಡಳು. "ಅತ್ತೇ ಅಲ್ನೋಡೀ ಯಾರೋ ಬರ್‍ತಾ ಇರೋ ಹಾಗಿದೆ"

"ಬಾಗಿಲು ಹಾಕಿದೆ, ಯಾರು ಬರ್‍ತಾರೆ! ಹೆದರ್‍ಕೋಬೇಡಾ-ಮಾನು ಕ್ಯಾಂಡಲ್ ಹತ್ತಿಸ್ತಾನೆ! ಮಾನು ಟಾರ್ಚು ಟೇಬಲ್ ಮೇಲಿದೆ ನೋಡು!"

"ಮಾನೂ ಹುಷಾರೋ ಕತ್ಲಲ್ಲಿ ಏನಾದ್ರೂ ಎಡವೀಯಾ!" ರಾಮಲಿಂಗಯ್ಯ ಕೂಗಿದರು.

ಢಣ್ ಏನೋ ಸದ್ದಾಯಿತು. "ಏನು ಮಾನು ಏನು ಬೀಳಿಸ್ದಿ?" ಲಲಿತಮ್ಮ ಕೂಗಿದರು.

"ನಾನೇನೂ ಬೀಳ್ಸಿಲ್ಲಮ್ಮ, ಇಲ್ಲೇ ಇದ್ದೀನಲ್ಲಾ, ಎಲ್ಲೋ ಪಕ್ಕದ ಮನೆ ಬೆಕ್ಕು ಕೆಂಪಿ ಬಂದಿರ್‍ಬೇಕು. ಇಲಿ ಹಿಡೀತಿದ್ಯೋ ಏನೋ" ಮತ್ತೆ 'ಢಣ್' ಪಾತ್ರೆ ಕೆಳಗೆ ಬಿದ್ದ ಸದ್ದು. ನೂಪುರ ಸಣ್ಣಗೆ ನಡುಗುತ್ತಿದ್ದುದು ಲಲಿತಮ್ಮ ಗಮನಿಸಿದರು. ಕೆಲವೇ ಕ್ಷಣಗಳಲ್ಲಿ ಪಾತ್ರೆಗಳೆಲ್ಲಾ ಉರುಳಿದ ಸದ್ದು!

"ಇದೇನ್ಸಂತಪಾ ಕತ್ಲು ಬೇರೆ-ಹಾಲು ಮೊಸರು ಅಕ್ಕಿ ಬೇಳೆ ಎಲ್ಲಾ ಉರುಳಿಸಿಬಿಡ್ತೊ ಏನೋ ಬೆಕ್ಕು" ಲಲಿತಮ್ಮ ಹೇಳುತ್ತಿರುವಂತೆಯೇ ದೊಪ್ಪನೆ ಏನೋ ಅವರೆಲ್ಲರ ಮುಂದೆ ಬಿದ್ದ ಸದ್ದಾಯಿತು. ನೂಪುರ ಚಟ್ಟನೇ ಚೀರಿದಳು. ಅವರೆಲ್ಲ ಇದ್ದ ಜಾಗ ಇದ್ದಕ್ಕಿದ್ದಂತೆ ಹಿಮದಷ್ಟು ಕೊರೆಯತೊಡಗಿತು. ವರ್ಧಮಾನ ಧೈರ್ಯಗೆಡದೇ ಟೇಬಲಿನತ್ತ ಹೋಗಿ ಟಾರ್ಚ್ ಕೈಗೆತ್ತಿಕೊಂಡು ಬೆಳಕು ತೋರಿದ. ಆ ಬೆಳಕಿನಲ್ಲಿ ನೂಪುರಳ ಕಾಲಿನ ಬಳಿ ಕರಿಯ ಹೆಗ್ಗಣ ಬಿದ್ದಿತ್ತು. ಲಲಿತಮ್ಮನೂ ಬೆದರಿ ಹಿಂದೆ ಸರಿದರು. ನೂಪುರ ಪೂರ ಬೆವತುಹೋಗಿದ್ದಳು. ವರ್ಧಮಾನ ಬೀರುವಿನಿಂದ ಎರಡು ಕ್ಯಾಂಡಲ್ ತೆಗೆದು ಹಚ್ಚಿದ ಹೆಗ್ಗಣದತ್ತ ಟಾರ್ಚ್ ಬಿಟ್ಟು ಬಗ್ಗಿನೋಡಿ ಮೂಗು ಮುಚ್ಚಿಕೊಂಡ.

"ಥೂ ಸತ್ತುಹೋಗಿ ಎಷ್ಟು ದಿನಗಳಾಯ್ತೋ ಗಬ್ಬುವಾಸನೆ" ಕಾಲಿನಿಂದ ಅದನ್ನ ಸರಿಸಿದ. ಎಲ್ಲರೂ ಮೂಗು ಮುಚ್ಚಿಕೊಂಡರು, ಆ ಕೆಟ್ಟ-ವಾಸನೆಯಿಂದ ನೂಪುರಳಿಗೆ ವಾಂತಿ ಬರುವಂತಾಗಿ ವಾಕರಿಕೆ ಬಂತು. ವರ್ಧಮಾನ ಕಾಲಿನಿಂದ ಆ ಹೆಗ್ಗಣವನ್ನು ಎತ್ತಿ ಒದ್ದ ರಭಸಕ್ಕೆ ಅದು ಬಾಗಿಲ ಬಳಿಬಿತ್ತು, ಅಲ್ಲಿಗೆ ಹೋಗಿ ಮತ್ತೆ ಒದ್ದು ವರಾಂಡಕ್ಕೆ ತಳ್ಳಿ,

ಬೀದಿ ಬಾಗಿಲನ್ನು ತೆರೆದು ಅದನ್ನು ಕಾಲಿನಿಂದಲೇ ತಳ್ಳಿ ಹೊರಗೆ ಹಾಕಿ ಬಾಗಿಲು ಮುಚ್ಚಿದ. ಹೋದ ಕರೆಂಟು ಪಕ್ಕನೇ ಬಂದಿತ್ತು. ಟಿವಿಯಲ್ಲಿ ಸಂಗೀತ ಕಾರ್ಯಕ್ರಮ ಮೂಡಿ ಬಂದಿತು. ಆಗಲೇ ವರ್ಧಮಾನನಿಗೆ ಹೊಳೆದಿದ್ದು ಅಕ್ಕಪಕ್ಕದಲ್ಲೂ ಕರೆಂಟು ಹೋಗಿರಲಿಲ್ಲ. ತಮ್ಮ ಮನೆಯಲ್ಲಿ ಮಾತ್ರ ಹೋಗಿದ್ದತು, ನೂಪುರ ಸೆರಗಿನಿಂದ ಬೆವರು ಒರೆಸಿಕೊಳ್ಳುತ್ತಿದ್ದಳು. ಲಲಿತಮ್ಮ ಅಡಿಗೆ ಮನೆಯತ್ತ ನಡೆದರು. ಅವರು ಅಲ್ಲಿ ಆಗಿದ್ದು ಕಂಡು ಅವಕ್ಕಾದರು. ನೆಲುವಿನ ಮೇಲಿಟ್ಟಿದ್ದ ಹಾಲು, ಮೊಸರಿನ ಪಾತ್ರೆ ಕೆಳಗೆ ಬಿದ್ದು ಎಲ್ಲಾ ಚೆಲ್ಲಿಹೋಗಿತ್ತು. ಕಾಳುಗಳು, ಅಕ್ಕಿ, ಹಿಟ್ಟು ಎಲ್ಲಾ ಅಡಿಗೆ ಮನೆ, ಊಟದ ಮನೆ ಎಲ್ಲೆಡೆ ಚೆಲ್ಲಾಡಿತ್ತು. ಪಾತ್ರೆ ಲೋಟ ಸೌಟು ಚಮಚಗಳೆಲ್ಲಾ ದಿಕ್ಕಾಪಾಲಾಗಿ ಬಿದ್ದಿದ್ದವು. ಒಂದು ಬೆಕ್ಕು ಬಂದರೆ ಇಷ್ಟೊಂದು ಅನಾಹುತ ಮಾಡುವುದಿಲ್ಲ! "ಅಪ್ಪಾ ಇಲ್ಲಿ ನೋಡು ಬಾ ಮಾನೂ ಬಾರೋ ಇಲ್ಲಿ!" ರಾಮಲಿಂಗಯ್ಯ, ವರ್ಧಮಾನ ಇಬ್ಬರೂ ಅಡಿಗೆ ಮನೆಗೆ ಬಂದು ನೋಡಿದರು.

"ಏನು ಇದು ಒಂದು ಬೆಕ್ಕು ಮಾಡೋ ಕೆಲ್ಸಾನಾ? ಒಂದ್ಸಲಾನೂ ಆ ಕೆಂಪಿ ಹೀಗೆ ಹರಡಿಲ್ಲ. ಆ ಕೊಳೆತ ಹೆಗ್ಗಣ ಎಲ್ಲಿಂದ ಬಂತು?"

"ಆ ಹಾಳು ಬೆಕ್ಕೇ ಕಚ್ಕೊಂಡು ಬಂದಿರ್ಬೇಕು! ಏನು ಹುಡ್ಕೊಕೇ ಬಂದಿತ್ತೊ ಏನೋ!" ವರ್ಧಮಾನ ಹೇಳಿದ. ಆದರೆ ರಾಮಲಿಂಗಯ್ಯನವರು ಮಾತ್ರ ಮೌನವಾಗಿದ್ದರು. ಅವರಿಗೆ ಅದು ಬೆಕ್ಕು' ಹೆಗ್ಗಣ ಎರಡೂ ಅಲ್ಲವೆಂದೆನಿಸೀತು. ಎಲ್ಲಾ ಅದರ ಆಟವೇ ಇಷ್ಟು ದಿನ ನೂಪುರಳನ್ನು ಆಡಿಸುತ್ತಿತ್ತು. ಅವ್ನ ಕೈಗೆ ಯಂತ್ರ ಬಂದು ಅದರ ಪ್ರಭಾವ ಮೈಪೂರ ಹರಡಿರುವುದರಿಂದ ಅವಳ ತಂಟೆಗೆ ಹೋಗುವ ಹಾಗಿಲ್ಲ. ಅದಕ್ಕೇ ಈ ತರಹ ಮನೆಯ ಮೇಲೆ ಆಟ ಆಡಲು ಪ್ರಾರಂಭಿಸಿದೆ. ರುದ್ರಣ್ಣ ಬಂದು ಆ ಹಾಳು ಪ್ರೇತನ್ನ ದಿಗ್ಬಂಧಿಸಿ ಬಿಟ್ಟರೆ ಈ ಅನರ್ಥಗಳೆಲ್ಲಾ ಕೊನೆಗೊಳುತ್ತದೆ.

"ಆಯ್ತುಲ್ಲಾ, ಎಲ್ಲಾ ಬೆಳಿಗ್ಗೆ ರಂಗವ್ವ ಬಂದಾಗ ತೆಗೆದಿಟ್ಕೋತಾಳೆ ಮಲ್ಕೋ ನಡೀರಿ!" ರಾಮಲಿಂಗಯ್ಯ ಹೇಳಿದರು. "ಮಾನೂ, ನೂಪುರಳ ಮೇಲೆ ಗಮನ ಇರ್ಲಿ ಅಪ್ಪಾ, ತುಂಬಾ ಹೆದರಿಕೊಂಡಹಾಗಿದ್ದಾಳೆ?"

ಆದಷ್ಟು ಪಾತ್ರೆಗಳನ್ನು ಮತ್ತೆ ಯಥಾಸ್ಥಾನದಲ್ಲಿಟ್ಟು, ಮೇಲೆ ಮೇಲೆ ಅಡಿಗೆ ಮನೆಯಲ್ಲಿ ಹರಡಿದ್ದನ್ನು ಸರಿಪಡಿಸಿ ಲಲಿತಮ್ಮ ಓರಣ

ಗೋಳಿಸಿ, ಬೆಕ್ಕು ಮತ್ತೆ ಬಾರದಂತೆ ಕಿಟಕಿಯ ಬಾಗಿಲು ಮುಚ್ಚಿ ಅಡಿಗೆ ಮನೆಯ ಬಾಗಿಲು ಮುಚ್ಚಿ ಅಗಳಿ ಹಾಕಿಕೊಂಡು ಬಂದು ಮಲಗಿದರು.

ರಾತ್ರಿ ನೂಪುರ ಒಂದೆರಡು ಬಾರಿ ಕನವರಿಸಿಕೊಂಡು ಬೆಚ್ಚಿ ಬಿದ್ದದ್ದು ಬಿಟ್ಟರೆ ಯಾವ ವಿಶೇಷ ಘಟನೆಯೂ ಆಗಲಿಲ್ಲ.

ಬೆಳಗಿನ ಝಾವ ಲಲಿತಮ್ಮನಿಗೆ ಇದ್ದಕ್ಕಿದ್ದ ಹಾಗೆ ಎಚ್ಚರವಾಯಿತು. ಮನೆಯ ಮೇಲೆ ಏನೋ ಬಿದ್ದ ಸದ್ದಾಯಿತಲ್ಲಾ. ತೆಂಗಿನ ಕಾಯಿಯ ಮರದಿಂದ ಒಣಗಿದ ಕಾಯೇನಾದರೂ ಬಿದ್ದಿತೋ ಏನೋ. ಹೊರಳಿ ಮಲಗಿದರು. ಮತ್ತೆ ಏನೋ ಬಿದ್ದ ಸದ್ದಾಯಿತು. ಎದ್ದು ಕುಳಿತರು. ಹೊರಗಿನ ಕೊಟ್ಟಿಗೆಯ ಜಿಂಗ್ ಶೀಟಿನ ಮೇಲೆ ಕಲ್ಲು ಬಿದ್ದಂತೆ ಕೇಳಿಸಿತು. ಯಾರೋ ಪುಂಡಪೋಕರಿಗಳು ಅಲ್ಲಿಯೇ ಇದ್ದ ಸೀಬೇ ಕಾಯಿಗಳಿಗೆ ಕಲ್ಲು ತೂರಿರಬೇಕು. ಮರುಕ್ಷಣದಲ್ಲಿ ಪಟ ಪಟನೇ ಕಲ್ಲುಗಳು ಬಿದ್ದ ಸದ್ದಾಯಿತು. ದೀಪ ಹೊತ್ತಿಸಿ ರೂಮಿನಿಂದ ಹೊರಬಂದು ಹಿತ್ತಲ ಬಾಗಿಲು ತೆರೆದು ಕೊಟ್ಟಿಗೆಯತ್ತ ನೋಡಿದರು. ಕಲ್ಲುಗಳು ಬೀಳುತ್ತಿದ್ದ ಸದ್ದು ಕೇಳುತ್ತಿತ್ತು. ಮಸುಕುಬೆಳಕಾದುದರಿಂದ ಕಲ್ಲುಗಳು ಕಾಣುತ್ತಿರಲಿಲ್ಲ. ಈ ಸದ್ದು ತನಗೆ ಮಾತ್ರ ಕೇಳುತ್ತಿದೆಯೋ ಒಳಗಿರುವವರಿಗೂ ಕೇಳಿಸುತ್ತಿದೆಯೋ ಅವರು ಚಿಂತಾಕ್ರಾಂತರಾದರು. ತಾವು ಅಲ್ಲಿ ಇಲ್ಲಿ ಕೇಳಿದಂತೆ ಮನೆಯ ಮೇಲೆ ಕಲ್ಲು ಬೀಳುವುದು ಬೆಂಕಿ ಕಾಣಿಸಿಕೊಳ್ಳುವುದು ಇವೆಲ್ಲಾ ಭೂತಚೇಷ್ಟೆಯೇ ಇರಬೇಕು. ಪಾತ್ರೆ ಪಗಡಗಳು ಅಡಿಗೆ ಮನೆಯಲ್ಲಿ ಬಿದ್ದದ್ದೂ ಭೂತಚೇಷ್ಟೆಯೇ ಇರಬೇಕು ! ಮನೆಗೆ ಭೂತ ಚೇಷ್ಟೆ ಪ್ರಾರಂಭವಾಗಿದೆ. ಯಾರಾದರೂ ಮಾಂತ್ರಿಕರನ್ನು ಕರೆಸಬೇಕು. ರುದ್ರಣ್ಣ ಒಳ್ಳೆಯ ಮಾಂತ್ರಿಕನೇನೋ ಸರಿ. ಆದರೆ ಅವನಿಗೆ ಹೆಣ್ಣಿನ ಹುಚ್ಚು. ಮನೆಯಲ್ಲಿ ಭೈರವಿಯೊಬ್ಬಳಿದ್ದಾಳಂತೆ. ಹೆಂಡತಿ ಮಕ್ಕಳನ್ನು ಅದಕ್ಕೇ ದೂರ ಇಟ್ಟಿದ್ದನಂತೆ ! ಅವನು ನೂಪುರಳನ್ನು ನೋಡಬಾರದು. ಅವನ ಕಣ್ಣು ಅವಳ ಮೇಲೆ ಬಿದ್ದರೆ ಕಷ್ಟ. ಅಪ್ಪನಿಗೆ ಹೇಳಿಬಿಡಬೇಕು. ಹೇಗಿದ್ದರೂ ನೂಪುರ ಈಗ ಸರಿಹೋಗಿದ್ದಾಳೆ. ಮನೆಯ ಬಗ್ಗೆ ಅವರು ಏನು ಬೇಕಾದರೂ ಮಾಡಿಕೊಳ್ಳಲಿ, ಒಂದಾರು ತಿಂಗಳು ಮನೆ ಬಿಟ್ಟು ಹೋದರೂ ಚಿಂತೆಯಿಲ್ಲ ! 'ಢಮಾರ್' ಎಂಬ ಸದ್ದು ಅವರು ಕಿವಿಗಪ್ಪಳಿಸಿತು. ದೊಡ್ಡ ಕಲ್ಲೊಂದು ಕೊಟ್ಟಿಗೆಯ ಮೇಲೆ ಬಿದ್ದಿತು. ಹಸುಗಳು ಬೆದರಿ ಎಳೆದಾಡಿದವು. ಆ ಸದ್ದು ಕೇಳಿದ ವರ್ಧಮಾನನಿಗೆ ತಕ್ಷಣ ಎಚ್ಚರವಾಗಿ

ಎದ್ದು ಬಂದ. ಹಿತ್ತಲ ಬಾಗಿಲು ತೆರೆದಿದ್ದು ಕಂಡು ಅಲ್ಲಿಗೆ ಬಂದ. ಲಲಿತಮ್ಮ ಅಲ್ಲಿಯೇ ಶಿಲೆಯಂತೆ ನಿಂತಿದ್ದರು.

"ಏನಮ್ಮಾ ಅದೂ ಶಬ್ದ" ಅವರ ಕೈಯಲ್ಲಿದ್ದ ಟಾರ್ಚನ್ನು ಕೊಟ್ಟಿಗೆ ಯತ್ತ ತಿರುಗಿಸಿದ. ಆ ಬೆಳಕಲ್ಲಿ ಹಸುಕರುಗಳು ಕಂಗಾಲಾದುದು ಕಂಡಿತಲ್ಲದೆ ಅಲ್ಲೆಲ್ಲಾ ಸಣ್ಣಸಣ್ಣ ಕಲ್ಲುಗಳು ಬಿದ್ದಿದ್ದವು. ಕೊಟ್ಟಿಗೆಗೆ ಹಾಕಿಸಿದ್ದ ಶೀಟಿನ ಮೇಲೆಲ್ಲಾ ಕಲ್ಲುಗಳು ದೊಡ್ಡದೊಂದು ಕಲ್ಲು ಶೀಟನ್ನು ಒಡೆದಿತ್ತು.

"ನೀನು ಒಳಗೆ ಹೋಗಮ್ಮಾ. ನಿನ್ನ ತಲೇ ಮೇಲೇನಾದ್ರೂ ಬಿದ್ದಿತೂ!"

ತಾಯಿಯನ್ನು ಒಳಗೆ ಕಳಿಸಿ ವರ್ಧಮಾನ ಕೊಟ್ಟಿಗೆಯತ್ತ ನಡೆದ. ಹತ್ತಿರ ಹೋದಾಗ ಸೆಗಣಿಯ ವಾಸನೆ ಬಾರದೇ ಹೊಲಸು ವಾಸನೆ ಮೂಗಿಗೆ ಬಡಿಯಿತು. ಹಸುಗಳ ನಟ್ಟನ್ನು ಬಿಚ್ಚಿ ಕೊಟ್ಟಿಗೆಯ ಮೂಲೆಯಲ್ಲಿದ್ದ ಹುಲ್ಲು ತಂದು ಹಸುಗಳಿಗೆ ಹಾಕಿದ. ಆದರೆ ಆ ಹೊಲಸುವಾಸನೆ ಅವನಿಗೆ ಆಶ್ಚರಿಯಾಗಿತ್ತು. ಚಿಕ್ಕಂದಿನಿಂದ ಹಸುಕರುಗಳೊಂದಿಗೆ ಆಡುತ್ತಿದ್ದ ತಾನು ಸಗಣಿ ವಾಸನೆಗೆ ಎಂದೂ ಅಸಹ್ಯಪಟ್ಟಿರಲಿಲ್ಲ. ಆದರೆ ಇಂದೇಕೆ ಈ ಸಗಣಿ ವಾಸನೆ ಬದಲು ಇಂತಹ ಅಸಹ್ಯ ವಾಸನೆ! ಏನೋ ಮೆತ್ತಗಿರುವುದನ್ನು ಮೆಟ್ಟಿದಂತಾಗಿ ಬೆಚ್ಚಿ ಹಿಂದೆ ಸರಿದು ಟಾರ್ಚಿನ ಲೈಟ್‌ನ್ನು ಅತ್ತ ತಿರುಗಿಸಿದ. ಅದು ಸಗಣಿಯಾಗಿರದೆ ಮಾನವನ ಅಮೇಧ್ಯವಾಗಿತ್ತು. ಅವನಿಗೆ ವಾಕರಿಕೆ ಬಂದಂತಾಗಿ ಹೊಟ್ಟೆಯಲ್ಲಿದ್ದದ್ದೆಲ್ಲಾ ಹೊರಗೆ ಬಂದಿತು. ಬಟ್ಟೆ ಬಗೆಯುವ ಬಂಡೆಯ ಬಳಿಯಿದ್ದ ನಲ್ಲಿಯ ಕಾಲು ತೊಳೆದುಕೊಂಡು, ತಣ್ಣೀರಿನಲ್ಲಿ ಬಾಯಿ ಮುಕ್ಕಳಿಸಿದ. ಥೂ, ಯಾರು ಇಲ್ಲಿ ಹೊಲಸು ಮಾಡಿರುವುದು? ಸಿದ್ದ ಲಚ್ಚಮ್ಮನ ಮಕ್ಕಳು ಮರಿ, ಕಾಳಿ ಇಬ್ಬರೂ ಬಂದಿದ್ದರೇನೋ. ಅವರು ಎಲ್ಲೆಂದರಲ್ಲೇ ಕುಳಿತು ಹೊಲಸು ಮಾಡುತ್ತಾರೆ. ಅವರಿಗೆ ಒಳ್ಳೆಯ ಬುದ್ಧಿ ಕಲಿಸೇ ಇಲ್ಲ. ಬೆಳಿಗ್ಗೆ ಸಿದ್ದ ಬರಲಿ! ಅವನಿಗೆ ಮಾಡುತ್ತೇನೆ. ಹಸು, ಗೋವು ಗಳೆಂದರೆ ದೇವರ ಸಮಾನ ಎಂದು ಕಣ್ಣೊತ್ತಿಕೊಳ್ಳುವುದು, ಅಲ್ಲೇ ಹೊಲಸು ಮಾಡುವುದು! ಮೂಗು ಮುಚ್ಚಿಕೊಂಡು ಒಳಗೆ ಬಂದ. ಲಲಿತಮ್ಮ ಅಲ್ಲೇ ಬಾಗಿಲಲ್ಲೇ ನಿಂತಿದ್ದರು.

"ಬಾಮ್ಮಾ, ಒಳಗೆ, ಏನೂ ಇಲ್ಲ. ಅಲ್ಲಿ ಕೊಟ್ಟಿಗೇರಿ ಆ ಮರಿ,

ಕಾಳಿ ಎಲ್ಲಾ ಕಕ್ಕಸ್ನ ಮಾಡಿದ್ದಾರೆ ಅಷ್ಟೆ. ಕಲ್ಲುಗಳ್ನ ಹೊರಗ್ನಿಂದ ಯಾರೋ ಎಸ್ದಿರಬೇಕು ಬೆಳಗಾಗೋತ್ಲೂ ಎಲ್ಲಾ ನೋಡೋಣ."

ತಾಯಿಯನ್ನು ಒಳಗೆ ಕರೆತಂದು ಸೋಫಾದ ಮೇಲೆ ಕೂಡಿಸಿದ.

"ನೀನು ಹಾಗೆಲ್ಲಾ ಒಬ್ಳೇ ಬಾಗಿಲು ತೆಕ್ಕೊಂಡು ಹೋಗಿ ನಿಂತ್ಕೋ ಬೇಡಾ. ಕಾಲ ಚೆನ್ನಾಗಿಲ್ಲ. ನನ್ನ ಎಬ್ಬಿಸಬಾರ್ದೇ ? ಇನ್ಮೇಲೆ ಕರಿಯಪ್ಪನ್ನ, ಮಾದಯ್ಯನ್ನ ಇಲ್ಲೇ ಮಲ್ಕೊಳ್ಳೋಕೆ ಹೇಳ್ತೀನಿ...."

ಲಲಿತಮ್ಮ ಮಂಕಾಗಿಯೇ ಕುಳಿತಿದ್ದರು.

"ಮಾನೂ ಯಾಕೋ ಹೀಗಾಗ್ತಾ ಇದೆ ? ನಾನೇನು ಪಾಪ ಮಾಡಿದ್ನೋ ಹೇಗಿದ್ದ ಮನೆ ಹೇಗಾಗಿ ಹೋಗ್ತಾ ಇದ್ಯೋ ! ನಿಮ್ಮ ತಂದೆ ಮಾಡಿದ ಪಾಪ ನಮ್ನೇಲ್ಲಾ ಕಿತ್ಕೊಂಡು ತಿನ್ತಾ ಇದೇ ಕಣೋ !"

"ಅಯ್ಯೋ ಬಿಡಮ್ಮಾ. ಅದೆಲ್ಲಾ ಸುಳ್ಳು. ಅಪ್ಪ ಮಾಡಿರೋ ಪಾಪ, ಅದ್ನ ಅನುಭವಿಸಿಯಾಯ್ತಲ್ಲಾ ! ಅನುಭವಿಸಿ ಸತ್ತುಹೋದ್ರಲ್ಲಾ. ಇದೆಲ್ಲಾ ಅದಕ್ಕೆ ಹೋಲಿಸ್ಬೇಡಾ. ನೋಡೋಣ. ತಾಳು ! ಬೇಕಾದ್ರೆ ಹಳ್ಳೀ ಮನೆಗೆ ಹೋಗಿದ್ದು ಬಾ."

ತಾಯಿಯ ಮುಂದೆ ಅವನೂ ಕುಳಿತ.

"ತಾಳಪ್ಪಾ ಇನ್ನು ನಿದ್ರೆ ಮಾಡಿದ ಹಾಗೇ ಇದೆ. ಹೋಗಿ ಒಂದಿಷ್ಟು ಕಾಫಿ ಮಾಡಿ ತರ್ತೀನಿ. ಇಬ್ರಿಗೂ ನಿದ್ದೆ ಹಾಳು !" ಲಲಿತಮ್ಮ ಎದ್ದು ಅಡಿಗೆ ಮನೆಯತ್ತ ನಡೆದರು. ಅಲ್ಲಿಯೂ ಅವರಿಗೆ ಅಚ್ಚರಿ ಕಾದಿತ್ತು. ತಾವೇ ಬಾಗಿಲಿನ ಅಗಳಿ ಹಾಕಿ ಬಂದಿದ್ದು ಅವರಿಗೆ ಚೆನ್ನಾಗಿ ಜ್ಞಾಪಕವಿತ್ತು. ಆದರೆ ಅಡಿಗೆ ಮನೆ ಬಾಗಿಲು ಹಾರು ಹೊಡೆದಿದೆ, ಕಿಟಕಿ ಬಾಗಿಲು ತೆರೆದಿದೆ ! ಯಾರು ತೆಗಿದಿರಬಹುದು ? ಮಾನೂ ಏನಾದರೂ ನೀರು ಕುಡಿಯಲು ಬಂದಿದ್ದನೇ ? ಕಾಫಿಗೆ ನೀರಿಟ್ಟು ಮಗನ ಬಳಿಗೆ ಬಂದರು.

"ಮಾನೂ ಮಧ್ಯರಾತ್ರಿಯೇನಾದ್ರೂ ಅಡಿಗೆ ಮನೆಗೆ ಬಂದಿದ್ಯಾ ?"

"ಇಲ್ಲಮ್ಮಾ, ನಾನ್ಯಾಕೆ ಅಡಿಗೆ ಮನೆಗೆ ಬರ್ಲಿ ? ಏನೋ ಕಲ್ಲು ಬಿದ್ದ ಸದ್ದು ಕೇಳಿದಾಗ್ಲೇ ಎಚ್ಚರವಾದದ್ದು. ನೂಪುರ ನೀರು ಕುಡಿಯೋಕ್ಕಂತಾನೇ ಒಂದು ಚೊಂಬಿನ ತುಂಬಾ ಯಾವಾಗ್ಲೂ ಟೇಬಲ್ಲಿನ ಮೇಲಿಟ್ಟಿರ್ತಾಳೆ."

ಲಲಿತಮ್ಮನವರ ಮುಖದಲ್ಲಿ ಗೆರೆಗಳು ಮೂಡಿ ಮಾಯವಾಯಿತು.

"ನೂಪುರ ಏನಾದ್ರೂ ಎದ್ದಿದ್ಲಾ ?"

"ಇಲ್ಲಾಮ್ಮಾ. ಒಳ್ಳೇ ನಿದ್ದೇಲಿದ್ದಾಳೆ. ಡಾಕ್ಟ್ರು ಕೊಟ್ಟ ಮಾತ್ರೆ

ತೊಗೋತಾ ಇದ್ದಾಳೆ. ಅವಳಿಗೆ ಚೆನ್ನಾಗಿ ನಿದ್ದೆ ಬರುತ್ತೆ. ಮಧ್ಯ ಎಚ್ಚರಾನೇ ಆಗೋಲ್ಲ !"

ಲಲಿತಮ್ಮ ಕಾಫಿಮಾಡಿ ತಂದು ಮಗನ ಕೈಗಿತ್ತರು.

"ರುದ್ರಣ್ಣ ಅದೇನು ಮಾಡ್ತಾನೋ ಮಾಡಿ. ಆಗ್ಲಿಲ್ಲ ಸರಿ ಹೋಗ್ದೇ ಇದ್ರೆ ಮನೆ ಖಾಲಿ ಮಾಡಿ ಒಂದಿಷ್ಟು ದಿನ ಬೇರೆ ಮನೇಲಿದ್ದು ನೋಡೋಣ"

ವರ್ಧಮಾನ ನಸುನಕ್ಕ. "ಅಮ್ಮಾ ನಿನ್ನ ನಂಬಿಕೆ, ಅಪನಂಬಿಕೆಗಳ್ನ ನಾನೇನೂ ಅನ್ನೋಲ್ಲ. ಆದ್ರೆ ನನ್ನ ಮಾತ್ರ ಇದ್ನೆಲ್ಲಾ ಭೂತಚೇಷ್ಟೆ ಅಂತ ನಂಬೂ ಅಂದ್ರೆ ನಂಬೋಲ್ಲ. ಯಾರೋ ಬೇಕಾಗಿ ಮಾಡ್ತಾ ಇದ್ದಾರೆ"

ಬೆಳಕು ಮೂಡುತ್ತಿದಂತೆಯೇ ಸಿದ್ದ ಕಂಬಳಿ ಹೊದೆದು ಬಂದ. ಕೊಟ್ಟಿಗೆ ಗುಡಿಸಿ, ಹಸುವಿನ ಮೈ ತೊಳೆದು ಅದಕ್ಕೆ ಹುಲ್ಲು, ಕಲಗಚ್ಚು ಎಲ್ಲಾ ಕೊಟ್ಟು ರಂಗಮ್ಮ ಬರುವ ಹೊತ್ತಿಗೆ ಹಾಲು ಕರೆಯಲು ಅಣಿ ಮಾಡಬೇಕು. ಕೊಟ್ಟಿಗೆಯ ಒಳಗೆ ಬಂದವನೇ ಕೂಗಿಕೊಂಡ. ಬಿಳಿ ಹಸು ಅಪ್ಪಿಯ ನೆತ್ತಿಯ ಮೇಲೆ ಗಾಯವಾಗಿ ರಕ್ತ ಸೋರುತ್ತಿದೆ ! ಕೊಟ್ಟಿಗೆಯ ಸುತ್ತ ಕಲ್ಲುಗಳು ಅಲ್ಲಲ್ಲಿ, ಅಮೇಧ್ಯ !

"ಅಮ್ಮಾರೇ. ಅಮ್ಮಾರೇ, ಅಪ್ಪಿಗೆ ನೆತ್ತಿ ಮ್ಯಾಗೆ ರಕ್ತ ಸುರೀತೈತೆ." ಲಲಿತಮ್ಮ ಮಾಡುತ್ತಿದ್ದ ಕೆಲಸ ಬಿಟ್ಟು ಹಾಗೆಯೇ ಓಡಿಬಂದರು. "ಹೌದು ! ಅಪ್ಪಿಯ ತಲೆಯ ಮೇಲೆ, ಕಿವಿಯ ಬಳಿ ಆಳವಾದ ಗಾಯವಾಗಿ ರಕ್ತ ಸೋರುತ್ತಿತ್ತು. ತಾಳು ಬಂದೆ !" ಅವರು ಒಳಗೆ ಹೋಗಿ ಕುಂಕುಮ ತಂದು ಗಾಯಕ್ಕೆ ಮೆತ್ತಿದರು.

"ಮಾನೂಗೆ ಹೇಳು ಹೋಗು ಆ ದನದ ಡಾಕ್ಟ್ರ ರಾಜಪ್ಪನ್ನ ಕರ್ಕೊಂಡ್ಬಾನ್ನೂ ! ಅವ್ರು ಬಂದು ನೋಡ್ಲಿ !"

ವರ್ಧಮಾನ ಸಿದ್ದನನ್ನು ಬೈಯ್ಯುತ್ತಲೇ ಬಂದ. "ಥೂ, ಕೊಳಕು ನನ್ನ ಮಕ್ಳಾ ! ಏನೋ ನಿನ್ನ ಮಕ್ಕಳಿಗೆ ಕಕ್ಕಸ್ಸು ಮಾಡಲು ಜಾಗಾನೇ ಇಲ್ವಾ ? ಕೊಟ್ಟಿಗೇಲೆಲ್ಲಾ ಮಾಡಿದ್ದಾರಲ್ಲಾ ! ಎಲ್ಲಾ ತೊಳಿ ಮುಂಚೆ. ಇನ್ನೊಂದ್ಸಲ ಹೀಗೆ ಮಾಡಿದ್ರೆ ನೋಡ್ತಾ ಇರು ಏನ್ಮಾಡ್ತೀನೀ ಅಂತಾ !"

"ಸ್ವಾಮಿ, ಖಂಡಿತ್ವಾಗ್ಲೂ ನನ್ನ ಮಕ್ಳು ಮಾಡಿಲ್ಲ ನಾನೇ ಇದ್ನಾಲ್ಲ. ಆಪಾಟಿ ಕಕ್ಸು ನನ್ನ ಮಕ್ಳ ಮಾಡ್ತಾರಾ ? ಯಾರೋ ಬಂದು ಕೊಟ್ಟಿಗೇಲೆಲ್ಲಾ ಅಲ್ಲಲ್ಲಿ ಮಾಡವ್ರೆ ಸ್ವಾಮಿ.... ಅವ್ರೇ ಅಪ್ಪಿಗೂ ಏನೋ ತೊಗೊಂಡು ಒಡ್ದಿರ್ಬೇಕೂ.... !"

ವರ್ಧಮಾನ ಸಿದ್ದನತ್ತ ಆಶ್ಚರ್ಯದಿಂದ ನೋಡಿದ. ಕೊಟ್ಟಿಗೆಯಲೆಲ್ಲಾ ಹೊಲಸಿದೆಯೋ ? ತಾನೆಂದುಕೊಂಡ ಹಾಗೆ ಒಂದೆಡೆ ಮಾತ್ರ ಅಲ್ಲ !

* * * *

ಸಿದ್ದ ಕೊಟ್ಟಿಗೆಯೆಲ್ಲಾ ಶುಚಿಮಾಡಿ ಕಲ್ಲೆಲ್ಲಾ ಎತ್ತಿಹಾಕಿ, ಹುಲ್ಲು ಹಾಕುತ್ತಿರುವ ಹೊತ್ತಿಗೆ ರಂಗಮ್ಮ ಬಂದರು.

"ರಂಗಮ್ಮ, ಬೇಗ ಬೇಗ ಹಾಲು ಕರೆದುಬಿಡಿ. ನೀವು ಇವೊತ್ತು ಬಂದಿರೋದು ಲೇಟು"

ಲಲಿತಮ್ಮ ಕೂಗಿ ಹೇಳಿದರು. ರಂಗಮ್ಮ ಎಂದಿನಂತೆ ಕಂಚಿನ ಚೊಂಬು, ಸ್ಟೀಲಿನ ಬಕೇಟು ಹಿಡಿದು ಕೈ ಕಾಲು ತೊಳೆದುಕೊಂಡು, ತುಳಸಿ ಕಣ್ಣೊತ್ತಿಕೊಂಡು ಕೊಟ್ಟಿಗೆಯೊಳಗೆ ಕಾಲಿಟ್ಟರು. ಹಸುವಿನ ಕೆಚ್ಚಲು ತೊಳೆಯಲು ಕಂಚಿನ ಚೊಂಬಿನಲ್ಲಿ ತಂದಿದ್ದ ಬೆಚ್ಚಗಿನ ನೀರನ್ನು ಕೈಗೆತ್ತಿಕೊಂಡು ಬಾಗಿದರು. ಚಿಟ್ಟನೇ ಚೀರಿದರು. ಕೆಚ್ಚಲಿನ ಮೇಲೆಲ್ಲಾ ತರಿದ ಗಾಯ !

"ಅಮ್ಮಾ ಇಲ್ನೋಡಿ ಬನ್ನಿ. ಕೆಚ್ಚಲೆಲ್ಲಾ ಹೆಂಗಾಗೋಗಿದೆ ! ನೋಡಿ ಬನ್ನೀ...." ಅವರು ಕೂಗಿದ್ದು ಕೇಳಿ ಲಲಿತಮ್ಮ ಓಡಿ ಬಂದರು.

"ಹೌದೇ. ಅದ್ಹೇಗೆ ಹೀಗೆ ಗಾಯ ಆಗಿದೆ-ಮುಳ್ಳಿನ ಬೇಲಿ ಗಿಡ ಯಾವ್ದೂ ಹಾಯ್ದಿಲ್ಲ !" ಲಲಿತಮ್ಮ ಹಣೆ ಚಚ್ಚಿಕೊಂಡರು.

"ಹಾಲ್ಹೆಂಗೆ ಕರೆಯೋದೂ ? ಹಾಗೆ ಬಿಟ್ರೆ ಹಾಲು ಕಟ್ಕೊಳ್ಳುತ್ತೆ. ಕರೂನೂ ಕುಡಿಯೋಕ್ಕೆ ಆಗೋಲ್ಲ !"

"ಹೋಗಿ ಒಳಗಿಂದ ಹರಳೆಣ್ಣೆ, ಅರಿಸಿನ ತೊಗೊಂಡ್ಬನ್ನಿ ರಂಗಮ್ಮ, ಹಚ್ಚೋಣ. ಪಾಪ ಮೂಕ ಪ್ರಾಣಿ ಎಷ್ಟು ಬಾಧೆಪಡುತ್ತೋ !"

ಇದ್ದ ನಾಲ್ಕು ಹಸುಗಳ ಕೆಚ್ಚಲೂ ಗಾಯವಾಗಿತ್ತು. ಲಲಿತಮ್ಮನ ತಲೆ ಕಲಸಿಹೋಯಿತು. ಆ ರುದ್ರಣ್ಣ ಅ ಆದಷ್ಟು ಬೇಗ ಬರಬಾರದೆ ? ನಾಳೇನೇ ಬರುತ್ತೇನೆಂದವನು ಯಾಕೆ ಬರಲಿಲ್ಲ ? ಅಪ್ಪನಿಗೆ ಹೇಳಿ ಅವನನ್ನು ಹೇಳಿ ಕಳಿಸಬೇಕು. ಯಾರೋ ಮಾಟ ಮಾಡ್ತಾ, ಇರಬೇಕು ! ನಾವು ಯಾರಿಗೂ ಕೆಡಕು ಮಾಡಿಲ್ಲ. ಹೊಟ್ಟೆಕಿಚ್ಚಿನಿಂದ ಮಾಡಿರಬೇಕು ! ಎಂದು ಕೊಂಡರೂ ಒಳಗೇ ಅವ್ಯಕ್ತ ಭಯ ಮುಗಿಲೆತ್ತರಕ್ಕೆ ಬೆಳೆದಿತ್ತು. ಮನ ಒಡಂಬಡದಿದ್ದರೂ ಇದೆಲ್ಲಾ ತನ್ನ ಸವತಿ ಗಂಗೆಯ ಭೂತ ಚೇಷ್ಟೆಯೇ ಇರಬೇಕು ! ಹಸುವಿನ ಹಾಲು ಕರೆಯಲಾಗಲೇ ಇಲ್ಲ. ಕೊಟ್ಟಿಗೆಯಲ್ಲಿ

ಅವು 'ಅಂಬಾ-ಅಂಬಾ' ಎಂದು ಗೋಳಾಡುತ್ತಿದ್ದುದು ಅವರಿಗೆ ತಡೆಯಲಾಗಲಿಲ್ಲ. ತಂದೆಯ ಬಳಿಗೆ ಬಂದರು.

"ಎಲ್ಲಿ ರುದ್ರಣ್ಣ ಬರ್ಲೇ ಇಲ್ಲ-ಈ ಭೂತಚೇಷ್ಟೆಗೆಲ್ಲಾ ಒಂದು ಕೊನೆ ಮುಟ್ಟಿಸುತ್ತಾನೆ ಎಂದುಕೊಂಡಿದ್ದೆ-ಅವನ ಕೈಲಾಗದಿದ್ದರೆ ಬೇರೆ ಯಾರಾದ್ರೂ ಸಿಕ್ರೆ ನೋಡಾಪ್ಪಾ ನಿಂಗೇ ಗೊತ್ತು ಮನೆಮೇಲೆ ಬೆಂಕಿ, ಕಲ್ಲು ಬೀಳಾಟ, ಹಸುವಿನ ತಲೆ ಗಾಯ, ಕೆಚ್ಚಲೆಲ್ಲಾ ಗಾಯ! ಇದ್ನ ನಾನು ನೋಡಲಾರೆ! ಮದ್ವೆ ಮಾಡ್ಕೊಂಡು ಆ ಹುಡ್ಗೀನ ಮನೆ ತುಂಬಿಸ್ಕೊಂಡಾಗ್ನಿಂದ ಇದೇ ಆಯ್ತಲ್ಲಾ! ಆ ಹುಡುಗಿದೇನಾದ್ರೂ ಅನಿಷ್ಟ ಕಾಡ್ತಾ ಇದ್ಯೋ ಏನೋ. ಅವಳು ಕಾಲಿಟ್ಟ ಕಡೇಲೆಲ್ಲಾ ಹೀಗೆ ಏನೋ!"

"ಛೇ, ಪಾಪಾ ಆ ಹುಡುಗೀನ್ನ ಯಾಕೆ ಅಂತ್ತೀ! ಅದೇನೂ ಆಗೀದ್ದು. ಆಗಿರೋದೆಲ್ಲಾ ಈ ಮನೇಲೇ! ಆ ಹುಡುಗಿ ಮನೇಲಿ ಎಲ್ರೂ ಚೆನ್ನಾಗಿ ಬಾಳಿ ಬದುಕಿದೋರೇ! ಇವೊತ್ತು ನೋಡೋಣ, ರುದ್ರಣ್ಣ ಬರದೇ ಇದ್ರೆ -ನಾಳೆ ಹೋಗಿ ನಾನೇ ಕರ್ಕೊಂಡು ಬರ್ತೀನಿ!"

ರಾಮಲಿಂಗಯ್ಯ ಮಗಳಿಗೆ ಸಮಾಧಾನ ಹೇಳಿದರು.

ಅಂದು ಎಲ್ಲರಿಗಿಂತ ನಿಶ್ಚಿಂತೆಯಿಂದ, ಸಮಾಧಾನದಿಂದ ಇದ್ದವಳೆಂದರೆ ನೂಪುರ. ಅವಳಿಗೆ ಮನೆಯ ಮೇಲಿನ ಬೆಂಕಿ, ಬಿದ್ದ ಕಲ್ಲು, ಹಸುಗಳ ಕೆಚ್ಚಲು ಗಾಯ, ಯಾವುದೂ ತಿಳಿದಿರಲಿಲ್ಲ. ಡಾಕ್ಟರ್ ನಚಿಕೇತ್ ಕೊಟ್ಟಿದ್ದ ನಿದ್ರೆಯ ಮಾತ್ರೆಗಳನ್ನು ವರ್ಧಮಾನ ಅವಳಿಗೆ ಮಲಗುವ ಮುಂಚೆ ಕೊಟ್ಟಿದ್ದ. ಅವನೇ ಹೊರಗೆ ಹೊರಡುವ ಮುನ್ನ ಎಬ್ಬಿಸುವವರೆಗೆ ಅವಳಿಗೆ ಎಚ್ಚರವೇ ಆಗಿರಲಿಲ್ಲ.

ರಂಗಮ್ಮ ಗರಬಡಿದವರಂತೆ ಒಂದಡೆ ಕುಳಿತುಬಿಟ್ಟರು. "ಅಮ್ಮಾಪ್ರೀ, ಯಾಕೋ ನಂಗೆ ಇವೊತ್ತು ಕೈಕಾಲೇ ಓಡ್ತಾ ಇಲ್ಲ" "ನಂಗೂ ಯಾಕೋ ತುಂಬಾ ಬೇಜಾರು!" ರಂಗಮ್ಮನಿಗೆ ರಾತ್ರಿ ನಡೆದುದೆಲ್ಲಾ ಹೇಳಿದರೆ ಎಲ್ಲಿ ಕೆಲಸ ಬಿಟ್ಟು ಹೊರಟುಹೋಗುವರೋ ಎಂದು ಅದನ್ನು ತಿಳಿಸದೇ ಹಸುಗಳ ವಿಷಯ ಮಾತ್ರ ಹೇಳಿದರು. ಅಷ್ಟು ಹೊತ್ತಿಗೆ ನೂಪುರ ಎದ್ದು ಮುಖ ತೊಳೆದು ಬಂದಳು. ಅಡಿಗೆ ಮನೆಯಲ್ಲಿ ಪಾತ್ರೆಯಲ್ಲಿ ಹಾಲಿಲ್ಲ! ಒಲೆ ಹೊತ್ತಿಸಿಲ್ಲ! ಅವಳು ಅಲ್ಲಿ ಏನೂ ತೋಚದೇ ಹೊರಬಂದಾಗ ಲಲಿತಮ್ಮ ಹೇಳಿದರು. "ಹಸುಗಳ ಕೆಚ್ಚಲಿಗೆ ಏನೋ ಆಗಿದೆ. ಹಾಲೇ ಕರೆಯಲಿಲ್ಲ, ಸಿದ್ದನ್ನ ಹಾಲು ಕರೆಸೋಕ್ಕೆ ಕಳ್ಸಿದ್ದೀನಿ. ಬರೋತನ್ಕ ಕಾಫಿ ಬೆರಸಿಕೊಂಡು

ಕುಡಿಯೋಣ. ಅವ್ನಂಗೂ ಕೊಟ್ಟಿಲ್ಲ !" "ರಂಗಮ್ಮಂಗೆ ಯಾಕೋ ಕೈಕಾಲು ಸುಸ್ತಂತೆ. ಹಾಗೆ ಮೈ ತೊಳ್ಕೊಂಡು ಅನ್ನಕ್ಕೆ ಬೇಳೆಗೆ ಎಸರಿಟ್ಟಿದ್ದವಮ್ಮಾ !"

"ಆಗಲಿ, ಬೇಕಾದ್ರೆ ನಾನೇ ಅಡಿಗೆ ಮಾಡ್ತೀನಿ." ನೂಪುರ ಹೇಳಿದಾಗ ಲಲಿತಮ್ಮ ಒಪ್ಪಲಿಲ್ಲ. "ಬೇಡಾಮ್ಮ-ಎಸರಿಡು ನಾನೂ, ರಂಗಮ್ಮ ಸುಧಾರಿಸ್ಕೊಂಡು ನಿಧಾನವಾಗಿ ಅಡಿಗೆ ಮಾಡ್ತೀವಿ."

ಸಿದ್ದ ಹಾಲು ತಂದ ಮೇಲೆ ನೂಪುರ ಎಲ್ಲರಿಗೂ ನಾನೇ ಕಾಫಿ ಬೆರೆಸಿಕೊಟ್ಟಳು. ಬೇಗ ಸ್ನಾನ ಮಾಡಿ. ಅಡಿಗೆ ಮನೆಗೆ ಹೋಗಿ ಒಲೆ ಹೊತ್ತಿಸಿ. ಅನ್ನಕ್ಕೆ ಎಸರಿಟ್ಟು ಬೇಳೆ ಬೇಯಿಸಲು ನೀರಿಟ್ಟಳು. ಹೊರಗಿನ ವ್ಯಾಯಾಮ, ವಾಕಿಂಗ್ ಮುಗಿಸಿ ಬರುವಾಗ ವರ್ಧಮಾನ ವೆಟರ್ನರಿ ಡಾಕ್ಟರ್ ಮನೆಗೆ ಹೋಗಿ ತಿಳಿಸಿ ಬಂದುದರಿಂದ ಅವನು ಮನೆಗೆ ಬರುವ ವೇಳೆಗೆ ಅವರೂ ಬಂದರು. ನೂಪುರಳೇ ಅವರಿಬ್ಬರಿಗೂ ಕಾಫಿ ತಂದಿತ್ತಳು.

ಡಾಕ್ಟರ್ ಲಲಿತಮ್ಮ ಹೇಳಿದುದೆಲ್ಲಾ ಕೇಳಿ ಕೊಟ್ಟಿಗೆಗೆ ಬಂದು ಹಸುಗಳನ್ನೂ ಕರುಗಳನ್ನೂ ಪರೀಕ್ಷಿಸಿದರು.

"ಎಲ್ಲಾ ತರಿದ ಗಾಯಗಳವಮ್ಮಾ-ಒಂದೊಂದ್ಸಲ ಹುಲ್ಲಿನ ಹೊರೆಲೂ ಮುಳ್ಳಿನ ಕಡ್ಡಿಗಳು ಸೇರಿಬಿಡುತ್ತೆ. ಹಾಗೇನಾದ್ರೂ ಸೇರಿರಬಹುದು.... ಏನಾದ್ರೂ ಕೆರೆತ ಹತ್ತಿ ಕೆರೆದುಕೊಳ್ಳಲು ಎಲ್ಲೋ ಮುಳ್ಳಿನ ಗಿಡದ ಬಳಿ ಬಂದು ಉಜ್ಜಿಕೊಂಡಿರಬೇಕು. ಏನೂ ಆಗಿಲ್ಲ. ಮೊದ್ಲು ಎಲ್ಲಾ ಕೆಚ್ಚಲನ್ನು ಬಿಸಿನೀರ ಸೋಪು ಹಾಕಿ ತೊಳ್ಯೀರಿ. ಆಮೇಲೆ ಮುಲಾಮು ಕೊಡ್ತೀನಿ ಹಚ್ಚಿ. ಎಲ್ಲಾ ವಾಸಿಯಾಗುತ್ತೆ" ಎಂದರು.

ಹಸುವಿನ ನೆತ್ತಿಯ ಮೇಲಾಗಿದ್ದ ಗಾಯಕ್ಕೆ ಮೇಲಿಂದ ಬಿದ್ದ ಗಾಯಕ್ಕೆ ಮೇಲಿಂದ ಬಿದ್ದ ಹೆಂಚಿನ ಚೂರೋ, ಕಲ್ಲೋ ಕಾರಣವೆಂದು ಗಾಯಕ್ಕೆ ಔಷಧಿ ಹಚ್ಚಿದರು. ಅವರೊಂದಿಗೆ ರಂಗಮ್ಮ, ಲಲಿತಮ್ಮ ಇಬ್ಬರೂ ಕೊಟ್ಟಿಗೆಯಲ್ಲೇ ನಿಂತಿರಬೇಕಾಯಿತು. ಅವರು ಹೋಗುವವರೆಗೆ ಹೊರಗೆ ಬರುವಂತಿರಲಿಲ್ಲ.

"ಅತ್ತೇ, ಅಕ್ಕಿ ತೊಳೆದು ಹಾಕ್ಲಾ ನೀರು ಕುದೀತಾ ಇದೆ, ಎಷ್ಟು ಹಾಕ್ಲಿ ?" ನೂಪುರ ಕೇಳಿದಳು.

"ಮೂರು ಪಾವು ಸಾಕು !" ರಂಗಮ್ಮ ಹೇಳಿದಳು.

"ಇವೊತ್ತು ಏಕಾದಸಿ, ನಾನು ಊಟ ಮಾಡೋಲ್ಲ-ಸಿದ್ದಂಗೆ, ಮಿಕ್ಕವರಿಗೆ ರಾತ್ರಿ ಅನ್ನ ಇದೆ"

ನೂಪುರ ಅಕ್ಕಿ ಕೇರಿ ತೊಳೆದು ನೀರಿಗೆ ಹಾಕಿದಳು. ರಾತ್ರಿಯ ಒಳ್ಳೆಯ ನಿದ್ರೆಯಿಂದ ಮನಸ್ಸು ಮೈ ಹಗುರವಾಗಿತ್ತು. ಅಲ್ಲೇ ಒಲೆಯ ಮುಂದೆ ಕುಳಿತಳು. ಅನ್ನ ಕುದಿಯ ತೊಡಗಿವಾಗ ಸೌಟು ಹಾಕಿ ಕೆದಕಲು ನೋಡಿದಳು. ಅವಳ ಕಣ್ಣುಗಳು ಬೆದರಿ ಅರಳಿದವು. ಸಣ್ಣಗೆ ಚೀರಿ ಹೊರಗೋಡಿ ಬಂದಳು.

"ಅತ್ತೇ, ಬನ್ನಿ ಇಲ್ಲಿ...."

"ಏನಾಯ್ತಮ್ಮಾ ?"

ರಂಗಮ್ಮ ಆತಂಕದಿಂದ ಕೇಳಿದರು. ಲಲಿತಮ್ಮ ಸೊಸೆಯ ಬಳಿಗೆ ಬಂದರು.

"ಯಾಕೆ ನೂಪುರ ?"

"ಅತ್ತೆ, ಅನ್ನದಲ್ಲಿ ಗಂಜಿಯ ಬದಲು ರಕ್ತ...." ಅವಳಿಗೆ ವಾಕರಿಕೆ ಬಂದಂತಾಯಿತು.

ಅವರು ಅಡಿಗೆ ಮನೆಯತ್ತ ಧಾವಿಸಿದರು. ಬೇಳೆ ಬೇಯುತ್ತಿತ್ತು. ಅನ್ನ ಕುದಿಯುತ್ತಿತ್ತು. ಅನ್ನ ಬೆಳ್ಳಗಿರದೆ ಕೆಂಪಗೇ ಕೆನ್ನೀರಿನಲ್ಲಿ ಅದ್ದಿದಂತಿತ್ತು! ರಂಗಮ್ಮ ಬರುವ ಮುಂಚೆ ಅದನ್ನು ಕಲ್ಲುಮರಿಗೆಗೆ ಚೆಲ್ಲಿಬಿಟ್ಟರು.

"ಏನಾಯ್ತಮ್ಮಾ ?"

ರಂಗಮ್ಮ ಬಂದಾಗ ಲಲಿತಮ್ಮ ಅಕ್ಕಿಗಾಗಿ ಬೇರೆ ನೀರು ತೆಗೆದಿಡು ತ್ತಿದ್ದರು.

"ಏನಿಲ್ಲ ನೂಪುರ ಇನ್ನೂ ಬೆಂಕಿ ಅಂದರೆ ಹೆದರುತ್ತಾಳೆ. ಅದಕ್ಕೆ ನಾನೇ ಅಕ್ಕಿ ತೊಳೀತಾ ಇದ್ದೀನಿ ? ನೀವು ಹೋಗಿ ಕೈಕಾಲು ತೊಳ್ಕೊಂಡು ಬನ್ನಿ. ನಾನು ಅನ್ನಕ್ಕಿಟ್ಟಿರ್ತೀನಿ. ಆಮೇಲೆ ನೀವೇ ಒಂದಿಷ್ಟು ಅಡಿಗೆ ಮಾಡ್ಬಿಡಿ-ತರಕಾರಿ ನಾನು ಹಚ್ಚಿ ಕೊಡ್ತೀನಿ !"

ಅವರತ್ತ ಹೋಗುತ್ತಲೇ ಕಲ್ಲುಮರಿಗೆಯಲ್ಲಿದ್ದ ಅನ್ನ, ಗಂಜಿ ಎಲ್ಲವನ್ನೂ ಬಚ್ಚಲಿಗೆ ಚೆಲ್ಲಿ ನೀರು ಹಾಕಿ ತಳ್ಳಿಬಿಟ್ಟರು. ನೂಪುರನನ್ನು ಆಗಲೇ ವರ್ಧಮಾನನ ರೂಮಿಗೆ ಕರೆದೊಯ್ದಿದ್ದ.

"ಹಾಗೆಲ್ಲಾ ಕೂಗಬಾರದು—ಹೆದರ್ಕೊಬಾರದು. ನಾಳೆ ನಾಡಿದ್ರಲ್ಲಿ ನಾವಿಬ್ರೂ ಬೇರೆ ಮನೆಗೆ ಹೊರಟು ಹೋಗೋಣ. ಆಗ ಇಂತಹದೇನೂ ಆಗೋಲ್ಲ."

ಅವಳಿಗೆ ಸಮಾಧಾನಮಾಡುತ್ತಿದ್ದ.

ರುದ್ರಣ್ಣನ ಬರುವಿಗಾಗಿ ರಾಮಲಿಂಗಯ್ಯನವರು ಮನೆಯ ಮುಂದೆ ಆರಾಮಾಸದ ಹಾಕಿಸಿಕೊಂಡು ಕಾದು ಕುಳಿತಿದ್ದರು. ಅವರೆದುರಿಗೇ ಒಣಗಿ ಸೀದು ನಿಂತಿದ್ದ ಮಾವಿನ ಮರವಿತ್ತು. ರುದ್ರಣ್ಣ ಎಂದೂ ಮಾತಿಗೆ ತಪ್ಪಿದವನಲ್ಲ. ಅಲ್ಲದೇ ತಾವು ತಾವು ಅವನಿಗಾಗಲೇ ಕೈ ತುಂಬಾ ಹಣ ಕೊಟ್ಟು ಬಂದಿದ್ದಾಗಿದೆ. ಖಂಡಿತ ಅವನು ಬಂದೇ ಬರುತ್ತಾನೆ!

* * * *

ರುದ್ರಣ್ಣ ಪೂಜೆಗೆ ಕುಳಿತಿದ್ದ, ತಟ್ಟೆಯ ತುಂಬಾ ಅರಿಸಿನ ಕುಂಕುಮ ಹೂವು! ಮನೆಯ ತುಂಬಾ ಅಗರಬತ್ತಿಯ ದಟ್ಟ ಹೊಗೆಯೊಂದಿಗೆ ಅದರ ಮಾದಕ ವಾಸನೆ! ನೇವೇದ್ಯಕ್ಕಾಗಿ ಹಣ್ಣುಗಳು, ಖಾದ್ಯಗಳು ಇದ್ದವು. ಜೊತೆಗೆ ತಾಮ್ರದ ಚೊಂಬಿನ ತುಂಬಾ ಸಾರಾಯಿ ವೀರಭದ್ರ ತಂದಿಟ್ಟಿದ್ದ. ಪೂಜಾಸ್ಥಾನದಲ್ಲಿದ್ದ ಗುಂಡು ಕಲ್ಲು, ಅದಕ್ಕೆ ಹಾಕಿದ ಬೆಳ್ಳಿ ಮುಖವಾಡ ದಲ್ಲಿ ಕಣ್ಣುಗಳು, ಅಗಲವಾಗಿದ್ದ ಹೆಣ್ಣಿನ ಮುಖ. ಕೆನ್ನೆಗೆ ಅರಸಿನ, ಕೆಂಪು ದಾಸವಾಳ, ಕಣಗಿಲೆ ಹೂವಿನಿಂದ ಆವೃತವಾದ ಆ ದೇವತೆಯೆದುರಿಗೆ ಸ್ವಸ್ತಿಕ ದಾಕಾರದ ರಂಗೋಲಿ, ಅದರ ಮಧ್ಯೆಯೊಂದು ಕಪಾಲ, ನಾಲ್ಕು ಮೂಳೆಗಳು, ಅದಕ್ಕೆ ನೇವೇದ್ಯವಾಗಿಟ್ಟಿದ್ದ ಕತ್ತರಿಸಿದ್ದ ಕೋಳಿಯ ತರ, ಅದರ ರಕ್ತ ಒಂದು ಬಟ್ಟಲಲ್ಲಿಡಲಾಗಿತ್ತು. ಹಣೆಗೆ ವಿಭೂತಿ ಬಳಿದುಕೊಂಡು, ಅದರ ಮಧ್ಯದಲ್ಲಿ ಅಗಲವಾದ ಕುಂಕುಮವಿಟ್ಟುಕೊಂಡು, ಕೆಂಪು ಪಂಚೆಯುಟ್ಟು, ಪೂಜೆಗೆ ಕುಳಿತಿದ್ದ ರು ದ್ರ ಣ್ಣ ನೋಡಲು ರುದ್ರಭೀಕರನಾಗಿದ್ದ–ಜಟೆ ಕಟ್ಟಿದ್ದ ತಲೆಗೂದಲು, ಪೊದೆ ಹುಬ್ಬು, ಕೆಂಗಣ್ಣು, ತುಟಿ ಮೀರಿ ಬಂದಿದ್ದ ಬಾಚಿ ಹಲ್ಲುಗಳು, ಅರ್ಧ ಎದೆಯತನಕವಿದ್ದ ಗಡ್ಡ, ಕರಿಯ ಮೈಗೆ ಆವರಿಸಿದ್ದ ಕೆಂಪು ಪಂಚೆ! ಕೊಳಕಾದ ಉದ್ದವಾದ ಹರಿತವಾದ ಕೈ ಉಗುರುಗಳಿಂದಲೇ ಕೋಳಿಯನ್ನು ನಾಲ್ಕು ಭಾಗ ಮಾಡಿ ನಾಲ್ಕುಮೂ ಗಿಟ್ಟ.

"ಮಂಗಳಾ...." ಕೂಗಿದ. ಹಳದಿ ಪೀತಾಂಬರವನ್ನುಟ್ಟು ಕೆನ್ನೆಗೆ ಅರಿಸಿನ, ಹಣೆಗೆ ಕಾಸಿನಗಲ ಕುಂಕುಮ, ಕೈತುಂಬಾ ಗಾಜಿನ ಬಳೆ ಕತ್ತಿನಲ್ಲಿ ಸರಗಳು, ಕಾಲಿಗೆ ಬೆಳ್ಳಿ ಗೆಜ್ಜೆ. ಝುಣ್, ಝುಣ್ ಎಂದು ಗೆಜ್ಜೆ ಸದ್ದು ಮಾಡುತ್ತಾ ಅವಳು ಹೊರಗೆ ಬಂದು ರುದ್ರಣ್ಣನೆದುರಿಗಿದ್ದ ಮಣೆಯ ಮೇಲೆ ಕುಳಿತಿದ್ದಳು. ರುದ್ರಣ್ಣ ಅವಳಿಗೆ ಅರಸಿನ ಕುಂಕುಮ ಪೂಜೆ ಮಾಡಿದ್ದ,

ಪದ್ಮಾಸನ ಹಾಕಿ ಕುಳಿತಿದ್ದ ಅವಳಿಗೆ ಹೂವಿನಿಂದ ಅಲಂಕರಿಸಿದ, ತಾಮ್ರದ ಚೊಂಬಿನಲ್ಲಿದ್ದ ಸಾರಾಯಿಯನ್ನು ಅವಳಿಗಿತ್ತ. ಅವಳ ಮುಂದೆ ಕೈ ಮುಗಿದು ನಿಂತು ಮಿಣಮಿಣನೆ ಮಂತ್ರ ಜಪಿಸಿದ, ಅವಳಿಗೆ ಧೂಪ ಹಾಕಿದ, ಆ ಹೊಗೆಯಲ್ಲಿ ಅವಳ ಕಣ್ಣುಗಳು ಕೆಂಪಾದವು, ಅವಳುಸಿರು ಬಿರುಸಾಯಿತು.

"ದೇವೀ, ಮಹಾಶಕ್ತಿ, ಎಲ್ಲಾ ನಿನಗಾರೋಹಣೇ, ದೀರ್ಘ ದಂಡ ನಮಸ್ಕರಿಸಿದ. ಅವಳು ಕೈಯಲ್ಲಿದ್ದ ಸಾರಾಯಿಯನ್ನು ಗಟಗಟನೆ ಕುಡಿದಳು. ಅವಳೆದುರಿಗಿದ್ದ ಹಸಿಯ ಮಾಂಸವನ್ನೇ ಹಿಡಿ ಹಿಡಿ ತೆಗೆದುಕೊಂಡು ಮುಕ್ಕಿದಳು. ಬಟ್ಟಲಲ್ಲಿದ್ದ ಕೋಳಿಯ ರಕ್ತ ಬಾಯಿಗೆ ಸುರಿದುಕೊಂಡಳು. ರುದ್ರಣ್ಣ ಅವಳ ತಲೆಯ ಮೇಲೆ ಹೂವಿಟ್ಟು ಪೂಜಿಸಿದ. ಅವಳ ಕೈಯನ್ನು ಹಿಡಿದು ಅಂಗೈಯಲ್ಲಿ ಕುಂಕುಮವಿಟ್ಟ ಅವಳು ಎದ್ದು ನಿಂತಳು.

"ವೀರಭದ್ರಾ ಕೂಗಿದ. ವೀರಭದ್ರ ಓಡಿಹೋಗಿ ಪಲ್ಲಂಗದ ಮೇಲಿನ ಹಾಸಿಗೆ ಸರಿಮಾಡಿದ-ಹಾಸಿಗೆಯ ಮೇಲೆ ಅರಸಿನ ಕುಂಕುಮ ಹಾಕಿ ಹೂವು ಹರಡಿದ. ದೊಡ್ಡ ಚೊಂಬಿನಲ್ಲಿ ಸಾರಾಯಿ ತಂದಿಟ್ಟ. ಮಾಂಸದ ಖಾದ್ಯಗಳನ್ನು ತಂದಿಟ್ಟು ರುದ್ರಣ್ಣನ ಮುಂದೆ ಬಂದು ನಿಂತ-

"ಹೂಂ"

ಹೂಂಕರಿಸಿದ ರುದ್ರಣ್ಣ-ವೀರಭದ್ರ ಮನೆಯ ಹೊರಗೆ ಹೊರಗಿನಿಂದ ಬಾಗಿಲು ಹಾಕಿಕೊಂಡು ಮನೆಯ ಮುಂದೆ ಕುಳಿತ. ಮಂಗಳನನ್ನು ಪಲ್ಲಂಗಕೆ ಕರೆತಂದು ಅವಳ ಸೀರೆ ಬಟ್ಟೆ ಕಳಚಿ, ಅವಳನ್ನು ನಗ್ನಳಾಗಿ ಪೂಜಿಸಿದ. ವಕ್ಷ ಸ್ಥಳ,ಹೊಕ್ಕಳು, ಯೋನಿಗೆ ಕುಂಕುಮ ಅರಸಿನ ಹೂವು ಹಾಕಿ ಪೂಜಿಸಿದ. ಸಾರಾಯಿ ಕುಡಿಯಲು ಕೊಟ್ಟು, ಖಾದ್ಯ ನಿವೇದಿಸಿದ. ಅವಳಾಗಲೇ ಮತ್ತೇರಿದಂತಾಗಿ ಉನ್ಮೀಲಿತ ನೇತ್ರಳಾಗಿ ಕುಳಿತಿದ್ದಳು. ಅವಳನ್ನು ಸಮೀಪಿಸಿದ ಅವನಿಗೂ ಮೈಮೇಲೆ ಪ್ರಜ್ಞೆ ಇದ್ದಂತಿರಲಿಲ್ಲ. ಹೊರಗೆ ಕುಳಿತಿದ್ದ ವೀರಭದ್ರನಿಗೆ ಕುಳಿತು ಸಾಕಾಯಿತು. ಹಾಗೇ ಮಂಡಿಯೂರಿ ಕುಳಿತು ತೂಕಡಿಸತೊಡಗಿದ. ಎದುರಿಗೆ ಬಂದು ನಿಂತ ವ್ಯಕ್ತಿ ಅವನ ಗಮನಕ್ಕೆ ಬರಲಿಲ್ಲ. ಕೈಲಿದ್ದ ಕೋಲಿನಿಂದ 'ಟಕ್ ಟಕ್' ಎಂದು ಸದ್ದು ಮಾಡಿದರು. ವೀರಭದ್ರ ಬೆಚ್ಚಿ ಕಣ್ತೆರೆದ.

"ರುದ್ರಣ್ಣ ಇದ್ದಾನೋ ?"

ರಾಮಲಿಂಗಯ್ಯನವರು ಕೇಳಿದಾಗ ವೀರಭದ್ರ ಮುಚ್ಚಿದ ಬಾಗಿಲು ತೋರಿ ಮಿಥುನದ ಸಂಜ್ಞೆಮಾಡಿ ತೋರಿಸಿದ. ರಾಮಲಿಂಗಯ್ಯನವರಿಗೆ

ನೆನಪಾಯಿತು. ರುದ್ರಣ್ಣನಿಗೆ ಭೈರವಿಯಾಗಿ ಹೆಣ್ಣೊಬ್ಬಳಿದ್ದಾಳೆ. ಅವಳಿಂದ ಅವನ ಉಪಾಸನೆ, ಪೂಜೆ, ಸ್ತಂಭನ, ವಶೀಕರಣ, ಮುಂತಾದ ಎಲ್ಲಾ ವಾಮಾಚಾರದ ವಿವಿಧ ಸ್ತರಗಳಲ್ಲಿ ನೈಪುಣ್ಯತೆ ಗಳಿಸಿದ್ದಾನೆ!

"ಎಷ್ಟು ಹೊತ್ತಾಗುತ್ತೆ ?" ಅವರು ವೀರಭದ್ರನನ್ನು ಕೇಳಿದಾಗ ಅವನು ಮೇಲೆ ಕೈತೋರಿ ದೇವರಿಗೆ ಗೊತ್ತು ಎನ್ನುವಂತೆ ಮುಖ ಮಾಡಿದ. ಭೈರವಿಯೊಂದಿಗೆ ಅವನು ಕೂಡಿರುವಾಗ ಅವನನ್ನು ತಾವು ಭೇಟಿಯಾಗುವಂತಿಲ್ಲ. ಆ ಹೊತ್ತಿನಲ್ಲಿ ಏನಾದರೂ ವಿಘ್ನವಾಗಲೀ, ತೊಂದರೆಯಾಗಲೀ ಆದರೆ ಶಕ್ತಿಯು ಕೆನ್ನಾಲಿಗೆಯಿಂದ ಎಲ್ಲವನ್ನೂ ದಹಿಸಿಬಿಡುವಳಂತೆ ಭೈರವಿ! ಭೈರವಿಯನ್ನು ಸಂಪ್ರೀತ ಗೊಳಿಸುವವರೆಗೆ ತಾವು ಕಾಯಲೇಬೇಕು. ಮನೆಯ ಎದುರಿಗಿದ್ದ ಕಲ್ಲೊಂದರ ಮೇಲೆ ಕುಳಿತರು. ಈ ರುದ್ರಣ್ಣ ಮನೆಗೆ ಬರುವನೆಂದು ಹೇಳಿ ಬಂದಿರಲಿಲ್ಲ. ಅಲ್ಲಿ ಮನೆಯಲ್ಲಿ ಆಗಬಾರದ್ದು ಆಗುತ್ತಿತ್ತು. ತಾವು ಕೊಟ್ಟ ಹಣ ಸಾಲದೇ ಇವನಿಗೆ ? ರುದ್ರಣ್ಣ ತಾವು ಕಂಡಂತೆ ಎಂದೂ ಮಾತಿಗೆ ತಪ್ಪಿದವನಲ್ಲ. ಬಾರದಿರುವುದಕ್ಕೆ ಏನೋ ಬಲವಾದ ಕಾರಣವಿರಲೇಬೇಕು! ವೀರಭದ್ರ ಮತ್ತೆ ಕಣ್ಣು ಮುಚ್ಚಿ ಕುಳಿತಿದ್ದ.

ಸುಮಾರು ಅರ್ಧ ಗಂಟೆಯ ಮೇಲೆ ಮನೆಯ ಬಾಗಿಲ ಒಳಗಿನಿಂದ ಸದ್ದಾಯಿತು. 'ವೀರಭದ್ರಾ' ಎಂದು ಕೂಗಿದ ದನಿ ಕೇಳಿಸಿತು. ವೀರಭದ್ರ ಬೆಚ್ಚಿ ಎದ್ದು ಬಾಗಿಲು ತೆರೆದ. ರುದ್ರಣ್ಣ ನಿಂತಿದ್ದ, ಅವನು ಮತ್ತೆ ಸ್ನಾನ ಮಾಡಿ ಹಣೆಗೆ ವಿಭೂತಿ ಕುಂಕುಮ ಹಚ್ಚಿಕೊಂಡು ಹಳದಿ ಪಂಚೆಯುಟ್ಟು ನಿಂತಿದ್ದ ಅವನ ಕಣ್ಣಿಗೆ ರಾಮಲಿಂಗಯ್ಯನವರು ಬಿದ್ದರು. ಅವರನ್ನೇ ದಿಟ್ಟಿಸಿ ನೋಡಿದ.

"ಸಾವ್ಕಾರ್ರೇ ನಾನು ಯಾಕೆ ಬರ್ಲಿಲ್ಲಾಂತಾ ಹುಡ್ಕೊಂಡು ಬಂದ್ರಾ ? ನಾನು ಮಾತು ತಪ್ಪಿದ್ರೆ ನಾಲಿಗೆ ಕತ್ತರಿಸಿಕೊಂಡುಬಿಡ್ತೀನಿ". ರಾಮಲಿಂಗಯ್ಯನವರು ಎದ್ದು ಅವನ ಬಳಿಗೆ ಬಂದರು. "ನಂಗೊತ್ತು ನಿಮ್ಮನೇಲಿ ಏನೇನಾಗ್ತಾ ಐತೇಂತಾ–! ಬೆಂಕಿ ಹತ್ತಿದ್ದು, ಉರೀತು, ಕಲ್ಲುಗಳು ಬಿದ್ದವು. ತಿನ್ನೋ ಪದಾರ್ಥಗಳಲ್ಲಿ ರಕ್ತ ಕಾಣಿಸಿತು. ಗೋವುಗಳಿಗೆ ಮೂಕಸಂಕಟ ಒದಗಿತು. ಹಾಲಿನಲ್ಲಿ ರಕ್ತ, ಕೆಚ್ಚಲಲ್ಲಿ ರಕ್ತ. ಅನ್ನದಲ್ಲಿ ರಕ್ತ ಕಾಣಿಸಿ

ಕೊಂಡಿತು. ಎಲ್ಲಾ ನಾನು ನೋಡಿದೆ, ಅವ್ನು ಭಾರೀ ಕೈಯ್ಯಾಟ ತೋರ್‍ಸಿದ್ದಾನೆ. ಅದ್ನ ನಿಲ್ಲಿಸೋಕ್ಕೆ ನಾನು 'ಪೂಜೆ ಮಾಡ್ತಾ ಇದ್ದದ್ದು. ಇದಕ್ಕೆಲ್ಲಾ ಅವಸರಪಡಬಾರ್‍ದು ಸಾವ್ಕಾರ್‍ರೇ, ನಾನು ಅವನ ಶಕ್ತಿ ನಿಗ್ರಹಿಸಿ ನಿಮ್ಮ ಮನೆಗೆ ಬಂದು, ಎಲ್ಲಾ ಸರಿಯಾಗಿ ಮಾಡಬೇಕಾದರೆ ನನ್ನ ಅಂತರ್ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು; ಈಗ ನನಗೆ ಸಾಧ್ಯ. ತೊಗೊಳ್ಳಿ, ವಿಭೂತಿ ಕೊಡ್ತೀನಿ, ಕುಂಕುಮ ಕೊಡ್ತೀನಿ, ನಿಂಬೆಹಣ್ಣು ಕೊಡ್ತೀನಿ. ವಿಭೂತೀನ್ನ ಮನೆಯಲ್ಲೆಲ್ಲಾ ಪ್ರೋಕ್ಷಿಸಿ ಕುಂಕುಮವನ್ನು ಪ್ರತಿ ಬಾಗಿಲು ಕಿಟಕಿಗೆ ಹಚ್ಚಿ ನಿಂಬೆ ಹಣ್ಣುಗಳನ್ನು ಮನೆಯ ನಾಲ್ಕು ಭಾಗಗಳಲ್ಲೂ ಗುಂಡಿ ತೋಡಿ ಹೂತಿಡಿ, ಆಗ ಎಲ್ಲಾ ಸುಭದ್ರವಾಗುತ್ತದೆ. ನಾನು ಬರ್‍ತೀನಿ. ನನ್ನ ಶಕ್ತಿಯ ಮುಂದೆ ಯಾವ ಆಟಾನೂ ನಡೆಯೋಲ್ಲ!" ರಾಮಲಿಂಗಯ್ಯನವರ ಬಾಯಿ ಉದುಗಿಹೋದಂತಾಗಿತ್ತು.

ಅವನು ಕೊಟ್ಟ, ವಿಭೂತಿ, ಕುಂಕುಮ, ನಿಂಬೆ ಹಣ್ಣುಗಳನ್ನು ಭಕ್ತಿಯಿಂದ ಸ್ವೀಕರಿಸಿದರು.

"ಸಾವ್ಕಾರ್‍ರೇ, ನಾಳೆ ಸಂಜೆ ಸೂರ್ಯ ಮುಳುಗೋ ಹೊತ್ತಿಗೆ ಬರ್‍ತೀನಿ, ಧೈರ್ಯವಾಗಿ ಹೋಗಿ ಬನ್ನಿ, ಇವೊತ್ತಿನಿಂದಲೇ ನಿಮ್ಮ ಕಷ್ಟಗಳು ಕೊನೆಗೊಂಡಿತು ಅಂದ್ಕೊಳ್ಳಿ. ನಾಳೆಯಿಂದ ನಿಮಗೆ ಎಲ್ಲಾ ಪೂರ ಪರಿಹಾರ ಸಿಗುತ್ತೆ–"

[illegible]ರುದ್ರಣ್ಣನೊಂದಿಗೆ ಮಾತನಾಡಲು ರಾಮಲಿಂಗಯ್ಯನವರಿಗೆ ಆಗಲೇ ಇಲ್ಲ. ಬಾಯಿ ಕಟ್ಟಿದಂತಾಗಿ ಮಾತೇ ಹೊರಡಲಿಲ್ಲ. ಅವರು ಬೆನ್ನು ತಿರುಗಿಸಿ ಹೊರಟು ಒಂದಷ್ಟು ದೂರ ನಡೆದ ಮೇಲೆ ಅವರ ಗಂಟಲಿಗೆ ಜೀವ ಬಂದಂತಾಯಿತು. ಮನೆಯಿಂದ ಹೊರಟಾಗ ರುದ್ರಣ್ಣನನ್ನು ಬಾಯಿಗೆ ಬಂದಂತೆ ಬೈಯ್ಯಬೇಕೆಂದಲ್ಲವೇ ನಾನು ಹೊರಟದ್ದು! ಆದರೆ ಅವನೊಂದಿಗೆ ಒಂದು ಮಾತೂ ಆಡಲಿಲ್ಲ. ಆದುದ್ದೆಲ್ಲಾ ಎಷ್ಟು ಸರಿಯಾಗಿ ಹೇಳಿದ! ತಮಗಾಗಿಯೇ ಅವನು ಪೂಜೆ ಮಾಡುತ್ತಿದ್ದುದು ಸಧ್ಯ ತಮ್ಮ ದನಿ ಹೋದುದೇ ಒಳ್ಳೆಯದಾಯಿತು, ಭೈರವಿಯನ್ನು ಪೂಜಿಸಿ ಸಂಪ್ರೀತಗೊಳಿಸಿ ಅಸಾಧಾರಣ ಶಕ್ತಿಯನ್ನು ಅಮಾನುಷ ಅತೀವವಾದ ಬಲವನ್ನು ಪಡೆಯುವ ರೆಂದು ತಾವೆಲ್ಲೋ ಓದಿದ ನೆನಪಾಯಿತು.

ಮನೆಗೆ ಬಂದವರೇ ರುದ್ರಣ್ಣ ಹೇಳಿದಂತೆ ಮನೆಯಲ್ಲೆಲ್ಲಾ ವಿಭೂತಿ ಪ್ರೋಕ್ಷಿಸಿದರು. ಬಾಗಿಲು, ಕಿಟಕಿಗಳಿಗೆ ಕುಂಕುಮ ಹಚ್ಚಿದರು. ಮನೆಯ

ನಾಲ್ಕು ಮೂಲೆಯಲ್ಲಿ ನಿಂಬೆಹಣ್ಣುಗಳನ್ನು ಹ ಕರು, ಒಳಗೆ ಬಂದು ಕೈ ಕಾಲು ತೊಳೆದು ಕುಳಿತುಕೊಂಡು ಮಗಳನ್ನು ಕರೆದರು.

"ಲಲ್ತೂ, ನಾಳೆ ಬರ್‍ತಾನೆ. ಇವೊತ್ತು ಅವನು ಕೊಟ್ಟದ್ದೆಲ್ಲಾ ತೊಗೊಂಡ್ಬಂದು. ಅವನು ಹೇಳಿದ ಹಾಗೆ ಮಾಡಿದ್ದೀನಿ. ನೋಡೋಣ ಅವನ ಶಕ್ತಿ ಎಷ್ಟಿದೇಂತಾ"

"ಅಪ್ಪಾ ನಂಗ್ಯಾಕೋ ಅವನ್ನ ಕಂಡ್ರೆ ಹೆದರಿಕೆ! ನಾಳೆ ಬಂದು ಏನು ಮಾಡ್ತಾನೋ!"

"ನಿಂಗೊತ್ತಿಲ್ಲ ಲಲ್ತು. ಅವನು ಈಗ ತುಂಬಾ ಶಕ್ತಿ ಸಂಪಾದಿಸಿದ್ದಾನೆ. ಅವನು ಭೈರವಿ ಉಪಾಸಕ. ನೋಡ್ತಾ ಇರು, ಸಾಯಂಕಾಲದ ಹೊತ್ತಿಗೆ ಮನೆಯಲ್ಲಿರೋ ಭೂತ, ಪ್ರೇತ ಎಲ್ಲಾ ಮಾಯವಾಗಿಬಿಡುತ್ತೆ, ಈ ಮನೆಗೆ ತಟ್ಟಿರೋ ಶಾಪ ನಾಶವಾಗುತ್ತೆ."

ರುದ್ರಣ್ಣ ಬೇಕಾದ ಸಾಮಗ್ರಿಗಳನ್ನೆಲ್ಲಾ ಚರ್ಮದ ಚೀಲಕ್ಕೆ ತುಂಬಿಕೊಂಡ. ಕೆಂಪು ನೂಲಿನ ಪಂಚೆಬಿಚ್ಚಿ ಸಣ್ಣ ಜರಿ ಅಂಚಿದ್ದ ಸಿಲ್ಕಿನ ಪಂಚೆ ಉಟ್ಟು ಮೇಲೆ ಹಳದಿ ಬಣ್ಣದ ಜುಬ್ಬಾ ಧರಿಸಿದ. ಕತ್ತಿನಲ್ಲಿದ್ದ ತಾಯಿತ ಮುಟ್ಟಿ ನೋಡಿಕೊಂಡ. ಹಣೆಗೆ ಪಟ್ಟೆ ವಿಭೂತಿ ಬಳಿದು ದೊಡ್ಡ ಕುಂಕುಮ ಹಚ್ಚಿಕೊಂಡ. ಪೊದೆ ಹುಬ್ಬು ತೀಡಿಕೊಂಡ. ಗಡ್ಡ ನೀವಿಕೊಂಡ ಗಂಟು ಕಟ್ಟಿದ್ದ ತಲೆಗೂದಲನ್ನು ನೇವರಿಸಿಕೊಂಡ. ತಾನೂ ಪೂಜಿಸಿದ ಪ್ರಸಾದವನ್ನು ಕಪಾಲದೊಳಗಿಟ್ಟುಕೊಂಡು ಅದನ್ನು ಅರಿಸಿನ ಕುಂಕುಮ ಹಚ್ಚಿದ ಬಟ್ಟೆಯಲ್ಲಿ ಕಟ್ಟಿಕೊಂಡ. ಒಂದು ತಾಮ್ರದ ಬಿಂದಿಗೆ ಯಲ್ಲಿ ಕಾಗೆಯ ಕೊಕ್ಕು, ಹಸಿ ಮಾಂಸ, ಮಂತ್ರ ಬರೆದಿದ್ದ ತಗಡಿನ ಚೂರು, ಮಂತ್ರಿಸಿದ್ದ ನಾಲ್ಕು ಉಗುರಿನ ಚೂರುಗಳನ್ನೂ ಅದಕ್ಕೆ ಹಾಕಿ ಮೇಲೆ ಬಟ್ಟೆಯೊಂದನ್ನು ಕಟ್ಟಿ ಅದರೊಂದಿಗೆ ಒಂದು ಮುಚ್ಚಳವನ್ನು ಅಂಟಿಸಲು ಕೆಂಪಂಟನ್ನೂ ತೆಗೆದುಕೊಂಡು, ಎಲ್ಲವನ್ನೂ ತನ್ನ ಚರ್ಮದ ಚೀಲದೊ ಳಗಿಟ್ಟು ಹೊರಬಿದ್ದ. ಅವನು ಹೊರಗೆ ಹೊರಟನೆಂದರೆ ಗಲ್ಲಿಯವರಿಗೆ ಏನೋ ಭಯ! ಏನೋ ಭಕ್ತಿ! ಹೆದರಿ ಬಾಗಿಲು ಹಾಕಿಕೊಂಡರೂ ಕಿಟಕಿಯಿಂದ ಇಣುಕಿ ನೋಡಿದರು.

"ಆದ್ಯಾರೋ ಸಾಹುಕಾರರಂತೆ ಅವರ ಮನೇಲಿ ದೆವ್ವ ಸೇರ್‍ಕೊಂಡಿದೆಯಂತೆ ಅದ್ಕೆ ದಿಗ್ಬಂಧನ ಮಾಡಿ ರುದ್ರಣ್ಣ ಬರ್‍ತಾನಂತೆ"

ಅಲ್ಲಿಯವರು ತಮ್ಮ ತಮ್ಮಲ್ಲೇ ಮಾತಾಡಿಕೊಂಡರು.

ರುದ್ರಣ್ಣ ಅತ್ತ ಇತ್ತ ನೋಡದೇ ನೇರವಾಗಿ ರಾಮಲಿಂಗಯ್ಯನವರ ಮನೆಗೇ ಬಂದು ರಸ್ತೆಯಲ್ಲೇ ನಿಂತು ನಾಲ್ಕು ಕಡೆ ನೋಡಿದ. ಚೀಲದಿಂದ ಮಂತ್ರಿಸಿದ್ದ ನಾಲ್ಕು ನಿಂಬೆಹಣ್ಣುಗಳನ್ನು ಮನೆಯ ನಾಲ್ಕು ಮೂಲೆಗೆ ಎಸೆದು ಮನೆಯ ಎದುರಿಗೆ ನಿಂತು ಮಂತ್ರಿಸಿದ ವಿಭೂತಿ ತೆಗೆದು ಅಂಗೈಯಲ್ಲಿ ಹಿಡಿದು ಮನೆಯತ್ತ ಊರುಬಿದ. ಅನಂತರವೇ ಅವನು ಗೇಟು ತೆಗೆದು ಮನೆಯೊಳಗಡಿಯಿಟ್ಟದ್ದು ! ಒಣಗಿ ನಿಂತಿದ್ದ ಮಾವಿನ ಮರ ನೋಡಿದ. ಅದರ ಬೇರಿನ ಮಣ್ಣು ಕೈಗೆತ್ತಿಕೊಂಡ, ಮಣ್ಣು ಹಸಿಯಾಗಿಯೇ ಇತ್ತು. ಮಣ್ಣನ್ನು ಕೈಯಲ್ಲೇ ಹಿಡಿದು ಮನೆಯ ಮುಂಬಾಗಿಲಿಗೆ ಬಂದು ತಾನು ಮೊದಲೇ ಕಟ್ಟಿದ್ದ ಬೇವಿನ ಎಲೆಯ ಗೊಂಚಲಿನ ತೋರಣ ಮುಂಬಾಗಿಲಿಗೆ ಕಟ್ಟಿದ, ಕೈಯಲ್ಲಿದ್ದ ಮಣ್ಣನ್ನು ಹೊಸಲಿನ ಬಳಿಯೇ ಇಟ್ಟು ಕೂಗು ಹಾಕಿದ.

"ಅಮ್ಮಾವರೇ....ಅಣ್ಣಾವ್ರೇ !"

"ರುದ್ರಣ್ಣ ಬಂದಾಂತ ಕಾಣುತ್ತೆ-ರುದ್ರಣ್ಣ !"

ರಾಮಲಿಂಗಯ್ಯನವರು ಕೋಲು ಹಿಡಿದು ಮಗಳ ರೂಮಿನತ್ತ ಬಂದು ಕೂಗಿದರು. "ಲಲ್ತೂ, ರುದ್ರಣ್ಣ ಬಂದಿದ್ದಾನೆ !" "ನೀನು ಹೋಗಪ್ಪಾ-ನಾನು ನೂಪರಳ್ನ ಹೊರಗೆ ಬರಬೇಡಾ ಅಂತಾ ಹೇಳಿ ಬರ್‍ತೀನಿ"

"ಅದ್ಯಾಕಮ್ಮಾ- ಅವ್ನು ಅವಳ್ನ ನೋಡಿದ್ರೇನೇ ವಾಸಿ. ಮುಂದೇನೂ ಅವಳಿಗೆ ಏನೂ ಆಗ್ದೇ ಇರೋ ಹಾಗೆ ಮಾಡ್ತಾನೆ !"

"ಬೇಡಪ್ಪಾ-ನಿಂಗೊತ್ತಿಲ್ಲ. ನೂಪುರ ಹೊರಗೆ ಬರೋದು ಬೇಡಾ. ಅವ್ಳು ಮುಟ್ಟಾಗಿದ್ದಾಳೆಂತ ಸುಳ್ಳು ಹೇಳಿಬಿಡೋಣ"

"ಅಮ್ಮಾವ್ರೇ ! ಅಣ್ಣಾವ್ರೇ !" ಮತ್ತೆ ರುದ್ರಣ್ಣನ ದನಿ ಮಾರ್ದನಿಸಿತು.

ರಾಮಲಿಂಗಯ್ಯ ಮುಂಬಾಗಿಲ ಬಳಿಗೆ ಬಂದರು.

"ಬಾ ರುದ್ರಣ್ಣ ಒಳಗೆ ಬಾ."

"ನಾನು ಈಗಲೇ ಒಳಗೆ ಬರುವುದಿಲ್ಲ. ಅಮ್ಮಾವ್ರೆಲ್ಲಿ? ನಾಲ್ಕು ಚೂರು ಬೆರಣಿ ತರಲು ಹೇಳಿ !"

ಲಲಿತಮ್ಮನನ್ನು ನೋಡಿ ಹೇಳಿದ. "ಅಮ್ಮಾವ್ರೆ-ಸೊಸೆ ಕೈಲಿ ನಾಲ್ಕು ಚೂರು ಬೆರಣಿ ತರಸಿ"

"ಸೊಸೆ ಒಳಗಿಲ್ಲ. ನಾನೇ ತರ್‍ತೀನಿ !"

ರುದ್ರಣ್ಣ ನಕ್ಕ-"ಸೊಸೆ ಒಳಗಿಲ್ದೇ ಇರೋದೇ ಒಳ್ಳೆಯದಾಯಿತು. ಮೈಲಿಗೆ ವ್ಯಕ್ತಿಯಿಂದ ಭೂತವನ್ನು ಬೇಗ ಹೊರಗೆಳೆದು ದಿಗ್ಬಂಧಿಸಬಹುದು! ಸೊಸೆಯನ್ನು ಕರೆಯಿರಿ" ಲಲಿತಮ್ಮ ರಾಮಲಿಂಗಯ್ಯನವರತ್ತ ದೈನ್ಯದಿಂದ ನೋಡಿದರು. ರಾಮಲಿಂಗಯ್ಯನವರು ಮಗಳತ್ತ ಕಣ್ಸನ್ನೆ ಮಾಡಿದರು. "ರುದ್ರಣ್ಣ ಬಹಳ ಶಕ್ತಿವಂತ -ಏನೂ ಆಗೋಲ್ಲ, ಹೆದರಬೇಡ. ನೂಪುರಳನ್ನು ಕರಿ!"

"ನಮ್ಮ ಮಾನೂಗೆ ಗೊತ್ತಾದ್ರೆ ಬೈಯ್ತಾನಪ್ಪಾ!"

"ಮಾನು ಬರೋದ್ರೊಳ್ಗೆ ಎಲ್ಲಾ ಮುಗಿಸಿಬಿಡ್ತಾನೆ!"

ಲಲಿತಮ್ಮ ವಿಧಿಯಿಲ್ಲದೇ ನೂಪುರಳನ್ನು ಕರೆದರು; "ನೂಪುರಾ ಬಾಮ್ಮಾ, ಹಿತ್ತಲಿಗೆ ಹೋಗಿ ನಾಲ್ಕು ಚೂರು ಬೆರಣಿ ಅಂತೆ ತೊಗೊಂಡ್ಬಾಮ್ಮಾ!"

ಹೊರಗೆ ಬರಬೇಡಾ ಎಂದು ಇದೇ ತಾನೇ ಹೇಳಿ ಹೋದ ಅತ್ತೆ ತನ್ನನ್ನು ಕರೆಯುತ್ತಿರುವರಲ್ಲಾ! ನೂಪುರ ಗಲಿಬಿಲಿಗೊಂಡಳು. ತಾನು ಹೋಗುವುದೋ ಬೇಡವೋ!

"ಬಾಮ್ಮಾ ನೂಪುರಾ. ಬಾ-ಹೆದರಬೇಡಾ ಹೊರಗೆ ಬಾ...."

ರುದ್ರಣ್ಣ ಮೆಲುದನಿಯಲ್ಲಿ ಕರೆದ. ನೂಪುರನಿಗೆ ಯಾರೋ ಕರೆಯುತ್ತಿರುವುದು ಕೇಳಿಸಿತು. ಮೈಯೆಲ್ಲ ಮೋಲೆರಿದಂತೆ ಹಗುರ ವಾದಂತಾಯಿತು. ಅವಳಿಗರಿವಿಲ್ಲದೆಯೇ ಅವಳ ಕಾಲುಗಳು ಅವಳನ್ನು ಮುಂಬಾಗಿಲಿನತ್ತ ಕರೆತಂದಿತು. ರುದ್ರಣ್ಣ ಅವಳನ್ನು ನೋಡಿದ. ನೋಡುತ್ತಲೇ ಇದ್ದ-ಅವಳಿಂದ ಕಣ್ತೆಗೆಯದಾದ.

"ರುದ್ರಣ್ಣ ಬೆರಣಿ ಬೇಕೆಂದೆಯಲ್ಲಾ!" ಲಲಿತಮ್ಮ ಅವನನ್ನು ಎಚ್ಚರಿಸಿದರು.

"ಹೋಗು ತಾಯಿ, ಬೆರಣಿ ತಾ" ರುದ್ರಣ್ಣ ಹೇಳುತ್ತಲೇ ಮೋಹಿನಿ ಗೊಳಗಾದಂತೆ ನೂಪುರ ಹಿತ್ತಲಿಗೆ ಹೋಗಿ ನಾಲ್ಕು ಚೂರು ಬೆರಣಿ ತಂದು ಅವನ ಮುಂದಿಟ್ಟಳು.

ಬೆರಣಿಯ ಚೂರನ್ನು ಹೊಸ್ತಿಲ ಮೇಲೆ ಸ್ವಲ್ಪ ದೂರ ದೂರವಿಟ್ಟು ಜೋಡಿಸಿ ಅದರ ಮೇಲೆ ವಿಭೂತಿ ಹಾಕಿ, ಮಣ ಮಣ ಮಂತ್ರ ಹೇಳುತ್ತಲೇ ಬೆರಣಿ ಚೂರುಗಳು ತಾನೇ ತಾನಾಗಿ ಹತ್ತಿಕೊಂಡು ಉರಿಯ ತೊಡಗಿದವು. ಆ ಬೆಂಕಿಯನ್ನು ದಾಟಿ ಮನೆಯೊಳಗೆ ಬಂದ.

"ಸಾವ್ಕಾರ್ರೇ ನಾನು ಎಲ್ಲಾ ಮುಗಿಸಿ ಹೋಗುವವರೆಗೆ ಈ ದೀಪ ಉರಿಯುತ್ತಲೇ ಇರುತ್ತದೆ!"

ಒಳಗೆ ಬಂದು ಕುಳಿತ.

"ನನ್ನ ಪೂಜೆಗೆ ಇದೇ ಸರಿಯಾದ ಜಾಗ. ನಿಮ್ಮ ಸೊಸೆಯ ಮೇಲೆ ಭೂತ ಆವಾಹನೆ ಮಾಡಿ ಅವಳಿಂದ ಈ ಬೊಂಬಿನಲ್ಲಿ ದಿಗ್ಬಂಧಿಸಿ ತೆಗೆದು ಕೊಂಡುಹೋಗುತ್ತೇನೆ!" ರುದ್ರಣ್ಣ ಹೇಳಿದಾಗ ಲಲಿತಮ್ಮನಿಗೆ ಜಂಘಾ ಬಲವೇ ಉಡುಗಿಹೋದಂತಾಯಿತು.

"ಬೇಡಾ ರುದ್ರಣ್ಣ ಅವಳಿಗೆ ಮಂತ್ರಿಸಿದ ತಾಯಿತ ಕಟ್ಟಿಸಿದ್ದೇವೆ"

"ಮೈಲಿಗೆ ಮೈ ಮೇಲೆ ಯಂತ್ರಗಳು ಸಿದ್ಧಿಸುವುದಿಲ್ಲವಮ್ಮಾ!"

ಲಲಿತಮ್ಮನವರ ಬಾಯಿ ಒಣಗಿತು. ತಾವು ಸುಳ್ಳು ಹೇಳಿದ್ದು ಅವನಿಗೆ ಗೊತ್ತಾದರೆ ಕೋಪ ಬಂದು ತಮಗೆ ಮತ್ತಷ್ಟು ತೊಂದರೆ ಮಾಡಿ ಹೋದರೆ ಕಷ್ಟ!

"ಹೆದರಬೇಡಿ ದಿಗ್ಬಂಧನ ಮುಗಿಸುವವರೆಗೆ ಆ ಯಂತ್ರವನ್ನು ತೆಗೆದುಬಿಟ್ಟರೆ ವಾಸಿ. ಅದನ್ನು ಬಿಚ್ಚಿ ದೇವರ ಮನೆಯಲ್ಲಿ ದೇವರ ಮುಂದಿಟ್ಟು ಬಂದುಬಿಡಿ"

"ಬೇಡಾ ರುದ್ರಣ್ಣ, ಶಾಸ್ತ್ರಿಗಳು ಅದನ್ನು ತೆಗೆಯಬಾರದೆಂದು ಹೇಳಿದ್ದಾರೆ"

ಆ ಯಂತ್ರದ ಶಕ್ತಿಯಿರುವವರೆಗೆ ಭೂತವನ್ನು ನಾನು ದಿಗ್ಬಂಧಿಸಲಾರೆ ಅದು ಕೈಗೆ ಸಿಗುವುದಿಲ್ಲ! ಸಾವ್ಕಾರ್ರು ಯಂತ್ರದ ಬಗ್ಗೆ ಹೇಳಲೇ ಇಲ್ಲ!"

ರಾಮಲಿಂಗಯ್ಯ ಅವನತ್ತ ಕೈ ಮುಗಿದರು. "ರುದ್ರಣ್ಣಾ ಅದು ನಂಗೆ ತಿಳಿದಿರಲಿಲ್ಲ. ಖಂಡಿತಾ ಹೇಳ್ತಾ ಇದ್ದೆ-ಲಲ್ತೂ ಯಂತ್ರ ತೆಗೆಯಮ್ಮ. ಭೂತ ಬಿಡಿಸಿಬಿಟ್ರೆ ಆಮೇಲೆ ನಾವೆಲ್ಲಾ ಸುಖವಾಗಿರ್ತೀವಿದೂ."

"ನಂಗೆ ಹೆದರಿಕೆಯಪ್ಪಾ....ಶಾಸ್ತ್ರಿಗಳು ತುಂಬಾ ನೇಮ ನಿಯಮದವರು. ಅವರು ಕಟ್ಟಿದ್ದು....!"

"ಬಿಡು, ನಾನೇ ತೆಗಿತೀನಿ" ರಾಮಲಿಂಗಯ್ಯನವರು ನೂಪುರಳ ತೋಳಿನಲ್ಲಿದ್ದ ಯಂತ್ರ ಬಿಚ್ಚಿ ದೇವರ ಮನೆಗೊಯ್ದು ದೇವರ ಮುಂದಿಟ್ಟು ಬಂದರು.

ರುದ್ರಣ್ಣ ಸುಪ್ರೀತನಾದ, ಚೀಲದಿಂದ ವಿಭೂತಿ ಕುಂಕುಮ ತೆಗೆದು ಮನೆಯ ಎಲ್ಲೆಡೆ ತೂರಿದ. ಮಣ ಮಣ ಮಂತ್ರಿಸುತ್ತಾ ಹೂವು ಕುಂಕುಮ

ಅಂಗೈಯಲ್ಲಿ ಹಿಡಿದು ನೂಪುರಳಿಗೆ ನೀವಾಳಿಸಿ ಅವಳ ಮುಖದ ಮೇಲೆ ತೂರಿದ. ಅವಳು ದೊಪ್ಪನೇ ಕೆಳಗೆ ಬಿದ್ದಳು. ಕಪಾಲವನ್ನು ನೆಲದ ಮೇಲಿಟ್ಟು ಅದರ ನಾಲ್ಕು ಮೂಲೆಗಳಲ್ಲಿ ಹಿಡಿ ಅರಿಸಿನ ಕುಂಕುಮ ಇಟ್ಟ, ಅದರ ಮುಂದೆ ಬಾಟಲೊಂದರಲ್ಲಿ ತಂದ ರಕ್ತ, ಕಾಗೆ ಕೊಕ್ಕು ಇಟ್ಟ. ಒಣಗಿದ ಕಡ್ಡಿಗಳನ್ನು ಜೋಡಿಸಿ ಅದರ ಮೇಲೆ ನಾಲ್ಕು ಕೊಟ್ಟು ಎಣ್ಣೆ ಹಾಕಿ ಹೊತ್ತಿಸಿದ. ಲಲಿತಮ್ಮ ರಾಮಲಿಂಗಯ್ಯ ಇಬ್ಬರೂ ಮಂತ್ರಮುಗ್ಧರಾಗಿ ಶಿಲೆಯಂತೆ ನಿಂತಿದ್ದರು. ಕೆಳಗೆ ಕುಸಿದುಬಿದ್ದಿದ್ದ ನೂಪುರಳತ್ತ ಅವರ ಗಮನವಿರಲೇ ಇಲ್ಲ. ಅಡಿಗೆ ಮನೆ ಬಾಗಿಲಲ್ಲಿ ನಿಂತ ರಂಗಮ್ಮ, ಕೆಲಸದ ಸಿದ್ದ ಕಾಳಿ ಎಲ್ಲಾ ಹಾಗೇ ನಿಂತಿದ್ದರು. ಮನೆಗೆ ಮನೆಯೇ ಯಾವುದೋ ಮಾಯೆಯಲ್ಲಿ ಮುಳುಗಿದಂತಾಗಿತ್ತು. ಹೊತ್ತಿಸಿದ ಕಡ್ಡಿಗಳು ಉರಿಯಲಾರಂಭಿಸಿದಾಗ ಅದಕ್ಕೆ ಕಾಗೆಯ ಕೊಕ್ಕಿನಿಂದ ಬಾಟಲಲ್ಲಿದ್ದ ರಕ್ತ ಹಾಕಿದ, ಚೀಲದಲ್ಲಿದ್ದ ಹಸಿಯ ಮಾಂಸ ತೆಗೆದು ಉರಿಗೆ ಹಾಕಿ ಮತ್ತಷ್ಟು ಒಣಗಿದ ಕಡ್ಡಿಗಳನ್ನು ಹಾಕಿದ. ಮಾಂಸ ರಕ್ತದ ವಾಸನೆಯ ಹೊಗೆ ಮನೆ ತುಂಬ ಹರಡಿತು. ಕಪಾಲಕ್ಕೆ ಪೂಜೆ ಮಾಡಿ ನಾಲ್ಕು ಮೂಳೆಗಳನ್ನು ಎಕ್ಸ್ ಆಕಾರದಲ್ಲಿಟ್ಟು ಮಂತ್ರ ಮಣಮಣಿಸಿದ.

ಕುಸಿದುಬಿದ್ದಿದ್ದ ನೂಪುರ ಎದ್ದು ಕುಳಿತಳು. ಅವಳನ್ನೇ ದಿಟ್ಟಿಸಿದ, "ಬಾ ಬೇಗ ಬಾ ನಿನಗೇ ಆರೋಗಣೆ ಸಿದ್ಧ...."

ಹೂಂಕರಿಸಿದ, ನೂಪುರಳ ಮುಖ ವಿಕಾರವಾಗಿ ಅಟ್ಟಹಾಸದಿಂದ ನಕ್ಕಳು. "ನಂಗೆ ಹಸಿ ಮಾಂಸಬೇಕು ! ನಂಗೆ ಹಸಿವು-ಹಸಿವು" ಅವಳ ದನಿಯೇ ಬದಲಾಯಿಸಿತ್ತು. ಆ ದನಿ ಕೇಳಿ ಲಲಿತಮ್ಮ ನಡುಗಿದರು. ರಾಮಲಿಂಗಯ್ಯ ಕಿವಿ ಮುಚ್ಚಿಕೊಂಡರು.

ರುದ್ರಣ್ಣ ಗಂಟುಬಿಚ್ಚಿ ಮುದ್ದೆ ಹಸಿಮಾಂಸವನ್ನು ನೂಪುರಳ ಮುಂದೆ ಹಾಕಿದ. ಅವಳು ಅದನ್ನು ಮುಕ್ಕಿದಳು.

"ಇನ್ನೂ ಬೇಕು"

ರುದ್ರಣ್ಣ ಮತ್ತಷ್ಟು ಹಾಕಿದ. ಅದನ್ನೂ ಮುಕ್ಕಿದಳು.

"ನಂಗೆ ಹಾಲು !"

"ಅಮ್ಮಾವ್ರೇ ಹಾಲು ತನ್ನಿ."

ಲಲಿತಮ್ಮ ಎದ್ದು ಹೋಗಿ ಹಾಲು ತಂದರು. ಬಾಟಲಲ್ಲಿದ್ದ ರಕ್ತ ಸುರಿದು ನೂಪುರಳ ಮುಂದಿಟ್ಟ. ಪಾತ್ರೆಯಲ್ಲಿದ್ದ ಹಾಲೆಲ್ಲಾ ಕುಡಿದಳು. ಹಾಲು ಬಾಯಿಂದ ಸೋರಿ ವಿಕಾರವಾಗಿ ಮುಖ ಮಾಡಿ ತೇಗಿದಳು, ಬಿಸಿ

ಬಿಸಿಯಾಗಿಯೇ ಇದ್ದ ಬೆಂಕಿಯ ಬೂದಿ ತೆಗೆದು ಅವಳತ್ತ ತೂರಿದ. ಅವಳು ಕೆಟ್ಟದಾಗಿ ಚೀರಿದಳು.

"ಬಾ, ಇಲ್ಲಿ ಬಾ....!" ರುದ್ರಣ್ಣ ಗುಡುಗಿದ.

"ಬರೋಲ್ಲ ನಾನಿಲ್ಲೇ ಇರ್ತೀನಿ. ಇಲ್ಲಿದ್ರೆ ನಂಗೆ ಎಲ್ಲರೂ ಉಪಚಾರ ಮಾಡ್ತಾರೆ....ಎಲ್ಲಾ ಕೊಡ್ತಾರೆ." "ನೀನಿಲ್ಲಿರಕೂಡದೂ ಬಾ .. ಬಾ....!"

ಬೇವಿನ ಸೊಪ್ಪು ತೆಗೆದು ಅವಳ ಮುಖದ ಮೇಲೆ ಆಡಿಸಿದ.

ನೂಪುರ ಸೆಳೆವು ಬಂದಂತೆ ಕೈಕಾಲು ಒದರಿಸಿದಳು.. ಮುಖ ಗಂಟು ಮಾಡಿ ವಿಕಾರವಾಗಿ ಕಿರುಚಿದಳು–

"ಬಾ .. ಬಾ... !"

"ಬರೋಲ್ಲ !"

"ಬರ್ತೀಯೋ-ಇಲ್ಲವೋ .. ?"

ರುದ್ರಣ್ಣ ಬೇವಿನ ಸೊಪ್ಪಿನಿಂದ ಅವಳನ್ನು ಥಳಿಸಿದ.

ನೂಪುರ ನೆಲದ ಮೇಲೆ ಬಿದ್ದು ಹೊರಳಾಡಿದಳು. ರುದ್ರಣ್ಣ ಉರಿದ ಬೆಂಕಿಯ ಬೂದಿ ತೆಗೆದು ಮತ್ತೆ ಅವಳತ್ತ ತೂರಿದ.

"ಬಾ....ಬಾ....!"

ನೂಪುರ ವಿಲಿ ವಿಲಿ ಒದ್ದಾಡಿ ಕೊರಡಿನಂತೆ ಬಿದ್ದುಕೊಂಡಳು. ರುದ್ರಣ್ಣ ತಾಮ್ರದ ಬಿಂದಿಗೆ ತೆಗೆದು ಅದರಲ್ಲಿ ಉಗುರಿನ ಚೂರು ಮಂತ್ರಿಸಿದ ತಗಡಿನ ಚೂರು ಹಾಕಿ ನೂಪುರನ ಮುಂದಿಟ್ಟ. ಎದ್ದು ನಿಂತು ಅವಳನ್ನೇ ದಿಟ್ಟಿಸಿದ. ಸೊಂಟದಲ್ಲಿದ್ದ ನಿಂಬೆ ಹಣ್ಣನ್ನು ಅವಳ ತಲೆಯಿಂದ ಕಾಲಿನವರೆಗೆ ಸವರಿ ಕೈಯಲ್ಲಿ ಹಿಡಿದು ಹಿಂಡಿದ. ನೂಪುರ ವಿಲಿ ವಿಲಿ ಒದ್ದಾಡಿದಳು.

'ಬಾ .. ಬಾ....ಇಲ್ಲಿ ಬಾ–!' ರುದ್ರಣ್ಣ ಕೂಗಿದ. ತಾಮ್ರದ ಬಿಂದಿಗೆಯೊಳಗೆ ಇದ್ದಕ್ಕಿದ್ದಂತೆ ಹೊಗೆಯಾಡಲಾರಂಭಿಸಿತು. ಹಿಚುಕಿದ ನಿಂಬೆಹಣ್ಣನ್ನು ಅದರೊಳಗೆ ಹಾಕಿ ಮಂತ್ರ ಮಣಮಣಿಸಿ ಅದರ ಬಾಯಿ ಮುಚ್ಚಿ. ಅಂಟು ಹಚ್ಚಿದ. ತಾಮ್ರದ ಬಿಂದಿಗೆ ಎಲ್ಲರೂ ನೋಡುತ್ತಿದಂತೆಯೇ ಉರುಳಲಾರಂಭಿಸಿತು. ಅದನ್ನು ಕಪಾಲದಿಂದ ಮುಟ್ಟಿಸಿದ. ಅದು ಸ್ತಬ್ಧವಾಯಿತು. ನೂಪುರ ಮೆಲ್ಲನೇ ನರಳಿದಳು. ರುದ್ರಣ್ಣ ಅವಳ ಹಣೆಗೆ ಅರಿಶಿನ ಕುಂಕುಮ ಬಳಿದ. ಬೇವಿನಸೊಪ್ಪು ಮಂತ್ರಿಸಿ ಹಾಕಿದ. ಅವಳೆದ್ದು ಕುಳಿತಳು.

ರುದ್ರಣ್ಣ ಅವಳ ಕೈಲಿದ್ದ ಚಿನ್ನದ ಬಳೆಗಳನ್ನು ಕಳಚಿಕೊಂಡ. ಕಿವಿಯಲ್ಲಿದ್ದ ಓಲೆ ಕಳಚಿಕೊಂಡ. ಕತ್ತಿನಲ್ಲಿದ್ದ ಸಾಲ್ಕೆಳೆ ಸರ ತೆಗೆದುಕೊಂಡ. ಕೈ ಬೆರಳಿನಲ್ಲಿದ್ದ ವಜ್ರದುಂಗುರ ತೆಗೆದು ಎಲ್ಲವನ್ನೂ ಗಂಟು ಕಟ್ಟಿಕೊಂಡು-

"ಲಲಿತಮ್ಮ ಸೊಸೆಯ ಮೇಲೆ ಒಂದು ಚೊಂಬು ತಣ್ಣೀರು ಸುರಿದು ಮೈ ಮೇಲಿರೋ ಬಟ್ಟೆಯೆಲ್ಲಾ ಕಳಚಿ ನನಗೆ ಕೊಡಿ. ಆಮೇಲೆ ತಲೆಗೆ ಸ್ನಾನ ಮಾಡಿಸಿ ಬಟ್ಟೆ ಬದಲಿಸಿ ದೇವರ ಮುಂದೆ ಕೂಡಿಸಿ ಅವಳ ಕೈಯಲ್ಲಿ ಪೂಜೆ ಮಾಡಿಸಿ ದೇವರಿಗೆ ದೀಪ ಹಚ್ಚಿಸಿ. ಅವಳ ಮೈಮೇಲೆ ಬಂದ ಆ ಪ್ರೇತ ಮುಟ್ಟಿರುವುದರಿಂದ ಮಾಂಗಲ್ಯ ಒಂದು ಬಿಟ್ಟು ಎಲ್ಲವನ್ನೂ ಕಳಚಿ ಬಿಡಬೇಕು. ಅವುಗಳನ್ನೆಲ್ಲಾ ನಾನು ನಾಶ ಮಾಡುತ್ತೇನೆ. ಇಲ್ಲಿ ಮಾಡಲಾಗುವುದಿಲ್ಲ. ಸ್ಮಶಾನದಲ್ಲಿ ಮಧ್ಯರಾತ್ರಿ ಕಳೆದನಂತರ ಮಾಡಬೇಕು. ಅಲ್ಲಿಯೇ ಈ ತಾಮ್ರದ ಬಿಂದಿಗೆಯನ್ನು ಹೂಳುತ್ತೇನೆ. ಮತ್ತೆ ಪ್ರೇತಾತ್ಮ ಎಂದೂ ನಿಮ್ಮನ್ನು ಕಾಡುವುದಿಲ್ಲ!"

ಲಲಿತಮ್ಮ ಅವನು ಹೇಳಿದಂತೆ ನೂಪುರಳನ್ನು ಕರೆದೊಯ್ದು ಅವಳ ತಲೆಯ ಮೇಲೆ ನೀರು ಹಾಕಿ, ಅವಳು ಹಾಕಿಕೊಂಡಿದ್ದ ಉಡಿಗೆಯೆಲ್ಲವನ್ನೂ ಕಳಚಿ ರುದ್ರಣ್ಣನನ್ನು ಕೈಗಿತ್ತರು. ನೂಪುರಳಿಗೆ ಸಚೇಲ ಸ್ನಾನ ಮಾಡಿಸಿ ದೇವರ ಮನೆಗೆ ಕರೆದೊಯ್ದರು.

ರುದ್ರಣ್ಣ ಪೂಜೆಗೆ ತೆಗೆದಿದ್ದ ಸಾಮಾನೆಲ್ಲ ಚೀಲಕ್ಕೆ ಸೇರಿಸಿದ. ಅದರೊಂದಿಗೇ ನೂಪುರಳ ಉಡಿಗೆಯೂ, ಅವಳ ಒಡವೆಗಳೂ ಚೀಲ ಸೇರಿದವು. ರುದ್ರಣ್ಣ ಎದ್ದು ನಿಂತು ಮನೆಯೆಲ್ಲಾ ನಿರೀಕ್ಷಿಸಿ ಮಣ ಮಣ ಮಂತ್ರ ಹೇಳಿ ಹೊರಟ.

"ಸಾಹ್ಕಾರ್ರೇ ನನ್ನ ಕೆಲಸ ಆಯ್ತು. ನಿಮ್ಮ ಮನೆ ಮಾವಿನ ಮರದ ಬೇರ್ನಲ್ಲಿ ಸೇರ್ಕೊಂಡಿತ್ತು. ಅದರ ಹಿಡಿ ಮಣ್ಣು ಮನೆಯ ಮುಂದೇನೇ ಇಟ್ಟಿದ್ದೇನೆ-ಬೇಕಾದರೆ ನೋಡಿ, ಅದೀಗ ಬೂದಿಯಾಗಿರುತ್ತೆ. ಬೆಂಕಿ ಇನ್ನು ಉರಿಯುತ್ತಿರುತೆ. ನಾನು ಮುಂಬಾಗಿಲು ದಾಟಿದ ಕೂಡಲೇ ಆರಿ ಹೋಗುತ್ತೆ. ಅದ್ನೆಲ್ಲಾ ನಾನು ತೊಗೊಂಡು ಹೋಗ್ತೀನಿ-ನಾಳೇನೇ ಮಾವಿನ ಮರವನ್ನು ಬುಡಸಮೇತ ಕಿತ್ತಿಸಿಹಾಕಿಬಿಡಿ! ಒಂದು ವಾರ ಬಿಟ್ಟು ನನ್ನ ಪೂಜೆಯ ದಕ್ಷಿಣೆ ಕೊಡಲು ಬನ್ನಿ. ನಾನು ಈಗ ಹಿಂತಿರುಗಿ ನೋಡದೇ ಹೋಗಬೇಕು"

ಚೀಲವನ್ನು ಹೆಗಲಿಗೇರಿಸಿ ಗಂಟನ್ನು ಕಂಕುಳಿಗೇರಿಸಿ, ಎಡಗೈಯಲ್ಲಿ

ತಾಮ್ರದ ಚೊಂಬು ಹಿಡಿದು ಹೊರಟ. ಮನೆಯ ಮುಂದಿದ್ದ ಹಿಡಿಮಣ್ಣು ಬೂದಿಯಾಗಿತ್ತು. ಅದನ್ನು ಬಲಗೈಯಲ್ಲಿ ಎತ್ತಿಕೊಂಡ. ಅವನು ಹೊಸಿಲು ದಾಟುತ್ತಲೇ ಆರಿಹೋಯಿತು. ಚೂರುಗಳನ್ನು ಕೈಗೆತ್ತಿಕೊಂಡು ಹಿಂದಿರುಗಿ ನೋಡದೇ ಹೊರಟ. ಅಷ್ಟು ಹೊತ್ತಿಗೆ ಕತ್ತಲು ಮುಸುಕಿ ರಸ್ತೆಯ ದೀಪಗಳು ಹೊತ್ತಿಕೊಂಡಿದ್ದವು. ಸಣ್ಣಗೆ ಸೋನೆ ಪ್ರಾರಂಭವಾಗಿತ್ತು.

ಅವನು ಗೇಟುದಾಟದ ಮೇಲೆಯೇ ರಾಮಲಿಂಗಯ್ಯ ಲಲಿತಮ್ಮನವರಿಗೆ ಮೈಯೆಚ್ಚರ ಬಂದುದು. ತುಟಿಪಿಟಿಕ್ಕೆನ್ನದೇ ಎಲ್ಲವನ್ನು ನೋಡುತ್ತಾ ಸುಮ್ಮನಿದ್ದ ಅವರಿಬ್ಬರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು. "ನಿಜವಾಗ಼್ೂ ದಿಗ್ಬಂಧಿಸಿ ತೆಗೆದುಕೊಂಡು ಹೋದ್ನೇ? ಹೋಗಿ ನೂಪುರಳನ್ನ ನೋಡು! ಅವಳ ಕೈಗೆ ತಾಯಿತ ಕಟ್ಟುಬಿಡು!"

"ಅಪ್ಪಾ, ನೂಪುರಳಿಗೆ ಹಸಿಮಾಂಸ, ರಕ್ತ ಎಲ್ಲಾ ಕೊಟ್ನಲ್ಲಾ. ಅದ್ನೆಲ್ಲಾ ತಿಂದ್ಬಿಟ್ಟಲ್ಲಾ! ಅಸಹ್ಯ! ಮಾನೂಗೆ ತಿಳಿದ್ರೆ ನಮ್ಮಿಬ್ರನ್ನ ಸುಮ್ನೇ ಬಿಡೋಲ್ಲ. ನೂಪುರಂಗೇ ಗೊತ್ತಿದ್ಯೋ ಇಲ್ವೋ!"

"ನೀನು ಏನೂ ಹೇಳ್ಬೇಡಾ, ರುದ್ರಣ್ಣ ಬಂದೂ ಪೂಜೆ ಮಾಡಿ ಹೋದಾಂತ ಹೇಳಿಬಿಡು ಅಷ್ಟೆ!"

"ಅಪ್ಪಾ ಅವಳ ಮೈಮೇಲಿದ್ದ ಒಡವೆ ಎಲ್ಲಾ ಕಳಚಿಕೊಂಡು ಬಿಟ್ಟನಲ್ಲಾ. ಅವಳ ಸರಾನೇ ಆರು ಸವರನ್ ಇತ್ತು, ಬಳೆಗಳು ಏಳು ಸವರನ್ ಇತ್ತು. ಕಿವಿಯೋಲೆ ಸದ್ಯ ಕೆಂಪಿನದು ಹಾಕಿಕೊಂಡಿದ್ದಳು. ವಜ್ರದ್ದು ಒಳಗೆ ತೆಗೆದಿಟ್ಟಿದ್ದಳು. ವಜ್ರದುಂಗುರಾನೂ ಹೋಯ್ತು! ಅದ್ನ ನೋಡ್ತಾ ನಾನೂ ನೀನೂ ಸುಮ್ನೇ ಇದ್ವಲ್ಲಾ! ನೂಪುರಳ ಮೈ ಮೇಲೆ ಪ್ರೇತ ಬರಿಸಿ ದಿಗ್ಬಂಧನ ಮಾಡಿದನಲ್ಲಾ, ನೂಪುರಂಗೆ ಏನಾದರೂ ಆದರೆ!"

"ಒಡವೆ ಹೋದ್ರೆ ಹೋಗಲಿ, ಅವ್ನಿಟ್ಕೊಂಡು ಅವನೇನು ಮಾಡ್ತಾನೆ, ಎಲ್ಲಾ ಹೂತುಬಿಡ್ತೀನಿ ಅನ್ನಲಿಲ್ವಾ? ನೂಪುರಂಗೆ ಬೇರೆ ಮಾಡಿಸಿದರಾಯಿತು. ಒಳಗೆ ಹೋಗಿ ನೂಪುರಳನ್ನು ಗಮನಿಸಿಕೋ!"

ರಾಮಲಿಂಗಯ್ಯನವರು ಹೇಳಿದರು. "ಮಾನು ಈಗ ಬರೋ ಹೊತ್ತು" ಲಲಿತಮ್ಮನಿಗೆ ಕೈ ಕಾಲೇ ಆಡದಂತಾಯಿತು. ನೂಪುರಳ ತಲೆ ಒರಸಿ, ತಮ್ಮ ಪೆಟ್ಟಿಗೆಯಲ್ಲಿದ್ದ ತಮ್ಮ ಓಲೆ, ಸರ, ಬಳೆಗಳನ್ನು ತೊಡಿಸಿ, ಬೇರೆ ಸೀರೆ ಉಡಿಸಿ, ತೋಳಿಗೆ ತಾಯಿತ ಕಟ್ಟಿದರು. ನೂಪುರಳ ಹಣೆಗೆ ಕುಂಕುಮವಿಡುವಾಗ ಅವಳ ಮುಖ ನೋಡಿದರು. ಏನೂ ಆಗೇ ಇಲ್ಲವೆಂಬುವಂತೆ ಮುಖ ಸೌಮ್ಯವಾಗಿತ್ತು.

ಜಡೆ ಹೆಣೆಯಲು ಕೂದಲನ್ನು ಚಾಚಿದಾಗ ಅವಳೇ ಹೇಳಿದಳು. "ಬಿಡಿ ಅತ್ತೆ ನಾನೇ ಹಾಕ್ಕೊಳ್ತೀನಿ!"

ಲಲಿತಮ್ಮನಿಗೆ ಹೋದ ಜೀವ ಮರಳಿ ಬಂದಂತಾಯಿತು. "ಮಾನು ಬರೋ ಹೊತ್ಗೆ ಚೆನ್ನಾಗಿ ಡ್ರೆಸ್ ಮಾಡ್ಕೊ. ತಲೆ ಒಣಗಿಲ್ಲ. ಅಳ್ಳಕವಾಗೇ ಜಡೆ ಹಾಕ್ಕೋ!"

ನೂಪುರ ತಲೆಯಾಡಿಸಿದಳು.

ರಂಗಮ್ಮ, ಸಿದ್ದ, ಕಾಳಿ, ಮಾದಯ್ಯ ಎಲ್ಲರೂ ಹಿತ್ತಲಲ್ಲಿ ಸಭೆ ನಡೆಸಿದ್ದರು.

"ರುದ್ರಣ್ಣ ಬಾಳ ಭಾರೀ ಮಂತ್ರವಾದಿ–ಅವನು ಎಂಥೆಂತಾ ದೆವ್ವಗಳ್ನೆಲ್ಲಾ ಬಿಡ್ಸಿದ್ದಾನೆ ಗೊತ್ತಾ? ಒಂದ್ಸಲ ಮಗೂ ಮೇಲೆ ಬಂದ ದೆವ್ವ ಅವನ ಮಂತ್ರ ಪೂಜೇಗೆ ಹೆದರಿಕೊಂಡು ಬರದೇ ಹೋಯ್ತಂತೆ!"

ರಂಗಮ್ಮ, "ನೋಡಿದ್ಯಾ ಚಿಕ್ಕಮ್ನೋರು ಹಸೀ ಮಾಂಸಾನ ಎಂಗೆ ಮುಕ್ಕಿದ್ರು, ರಕ್ತ ಹಾಕಿದ್ದ ಹಾಲ್ನ ಗಟಗಟನೆ ಕುಡಿದ್ಬುಟ್ರು!"

"ಅದ್ನೆಲ್ಲಾ ಮಾಡಿದ್ದು ಚಿಕ್ಕಮ್ನೋರಲ್ಲ ಅವರ್ನ ಮೇಟ್ಕೊಂಡಿದ್ದ ದಯ್ಯ!" ಸಿದ್ದ ಒಕ್ಕಣೆ ಕೊಟ್ಟ.

ವರ್ಧಮಾನ ಮನೆಗೆ ಬಂದಾಗ ಮನೆಯಲ್ಲಿ ಏನೂ ನಡೆದೇ ಇಲ್ಲ ಎನ್ನುವಂತಿತ್ತು. ನೂಪುರ ಕನ್ನಡಿಯ ಮುಂದೆ ಕುಳಿತು ತಲೆ ಬಾಚಿಕೊಳ್ಳುತ್ತಿದ್ದಳು.

* * * *

"ಇದೇನು ಇಷ್ಟೊಂದು ಅಲಂಕಾರ? ಅಮ್ಮನ ಒಡವೆ ಎಲ್ಲಾ ಯಾಕೆ ಹಾಕ್ಕೊಂಡಿದ್ದೀ?"

"ನಂಗೊತ್ತಿಲ್ಲ. ಅತ್ತೆ ಎಲ್ಲಾ ಹಾಕಿದ್ರು!"

ನೂಪುರ ಉತ್ತರಿಸಿದಳು. ವರ್ಧಮಾನ ಮೈ ಮುರಿದು ನೀಳವಾಗಿ ಉಸಿರಾಡಿದ.

"ಮನೆ ಏನೋ ಒಂದು ತರಹ ಇದೆಯಲ್ಲಾ! ಏನೋ ಬದಲಾವಣೆ ಕಾಣ್ತಾ ಇದೆ."

"ಅದ್ಯಾರೋ ಬಂದು ಪೂಜೆ ಮಾಡಿ, ಎಲ್ಲಾ ಉಚ್ಚಾಟನೆ

ಮಾಡ್ತೀನಿ, ದಿಗ್ಬಂಧನ ಮಾಡ್ತೀನೀಂತ ಹೇಳಿ ಏನೇನೋ ಮಾಡಿದ" ನೂಪುರ ಹೇಳುತ್ತಿರುವಂತೆಯೇ ಲಲಿತಮ್ಮ ನೂಪುರನನ್ನು ಕರೆದರು.

"ಬಾಮ್ಮಾ ಇಲ್ಲಿ, ಮಾನೂಗೆ ಕಾಫಿ ತಿಂಡಿ ಕೊಡುವಿಯಂತೆ...."

ನೂಪುರ ಅತ್ತೆಯ ಕರೆ ಕೇಳಿ ಹೊರಗೆ ಹೋದಳು. ವರ್ಧಮಾನ ಮನೆಯಲ್ಲಾದ ಬದಲಾವಣೆಗಳೇನೆಂದು ಆಲಿಸಿದ. ಗಾಳಿ ನಿರಾಯಾಸವಾಗಿ ಬೀಸುತ್ತಿದೆ ಎನಿಸಿತು. ಏನು ಪೂಜೆಯಾದರೂ ಮಾಡಿಸಿಕೊಳ್ಳಿ. ಆದರೆ ತಾನು ಇದುವರೆವಿಗೂ ಇಂತಹ ಘಟನೆಗಳಿಂದ ವಿಚಲಿತನಾಗಿರಲಿಲ್ಲ. ನೂಪುರಳಿಗಾದ ಅನುಭವ ಕಂಡು ತಾನು ಏನೇನೋ ಕಲ್ಪಿಸಿಕೊಂಡಿದ್ದಿರ ಬಹುದು. ಇದಕ್ಕೆಲ್ಲಾ ವಿಶ್ಲೇಷಣೆಯನ್ನು ಡಾಕ್ಟರ್ ನಚಿಕೇತ್‌ರನ್ನು ಕೇಳಬೇಕು. ಈ ಪ್ರೇತಾತ್ಮ, ದೆವ್ವ, ಪಿಶಾಚಿ ಇವುಗಳಲ್ಲಿ ತನಗೆ ನಂಬಿಕೆಯಿಲ್ಲ. ಆದರೂ ಬೆಂಕಿ ಕಂಡಾಗ, ಹಸುಗಳ ಕೆಚ್ಚಲಲ್ಲಿ ಕಂಡ ಗಾಯ, ಕೊಟ್ಟಿಗೆ ಯಲ್ಲಿನ ಅಮೇಧ್ಯ, ಕಲ್ಲುಗಳ ಮಳೆ, ಎಲ್ಲವೂ ತನ್ನನ್ನು ಅವಿದ್ಯಾವಂತನಂತೆ ನಡೆದುಕೊಳ್ಳುವ ಹಾಗೆ ಮಾಡಿತ್ತು. ಅರೆಕ್ಷಣ ತಾಯಿ, ತಾತ ಮತ್ತಿತರರನ್ನು ನಂಬುವಂತೆ ಮಾಡಿತ್ತು. ಈಗಲೂ ತನಗೇನೋ ಭ್ರಮೆಯಾವರಿಸಿ ದಂತಾಗಿದೆ !

ನೂಪುರಳ ಬದಲು ಲಲಿತಮ್ಮನೇ ಕಾಫಿ ತಿಂಡಿ ತಂದರು.

"ಮಾನೂ, ಏನು ಯೋಚ್ನೆ ಮಾಡ್ತಾ ನಿಂತಿದ್ದಿ ?"

"ಏನಿಲ್ಲಮ್ಮ, ಯಾಕೋ ಮನೆ ಹೊಸತರಹ ಕಾಣ್ತಾ ಇದೆ-ಅದಕ್ಕೇ ಏನಾಗಿರಬಹುದು ಅಂತ ಯೋಚ್ನೆ ಮಾಡ್ತಾ ಇದ್ದೆ"

ವರ್ಧಮಾನ ಹೇಳಿದ.

ಲಲಿತಮ್ಮ ಅವನ ಕೈಗೆ ಕಾಫಿ ತಿಂಡಿಯಿತ್ತು ಅವನ ಮುಂದೆಯೇ ಕುಳಿತರು.

"ನಾನು ಹೇಳ್ತೀನಿ ಇರು. ರುದ್ರಣ್ಣ ಬಂದು ಭೂತೋಚ್ಚಾಟನೆ ಮಾಡಿ ಪ್ರೇತಾತ್ಮನ್ನ ದಿಗ್ಬಂಧಿಸಿ ತೊಗೊಂಡು ಹೋಗಿದ್ದಾನೆ. ಇನ್ಮೇಲೆ ನೂಪುರಳಿಗೆ ಏನೂ ಆಗೋಲ್ಲ. ಮನೇಲೂ ಏನೂ ಆಗೊಲ್ಲ. ಸಧ್ಯ, ಎಲ್ಲಾ ಪರಿಹಾರವಾಯ್ತಲ್ಲಾ ಅಷ್ಟು ಸಾಕು !"

"ಯಾರಮ್ಮ ಆ ರುದ್ರಣ್ಣ. ಅದೇ ತಾತ ಒಂದೆರಡ್ಸಲ ಹೇಳಿದ್ರಲ್ಲಾ ಅವ್ನಾ ?"

"ಹೂಂ ಕಣೋ ಅಪ್ಪ್ನೇ ! ತುಂಬಾ ಶಕ್ತಿವಂತ ಕಣೋ. ಅವನ ಮಂತ್ರ ಶಕ್ತಿ ಬಹಳ ಬಲವಾಗಿದೆ."

"ಅವ್ವಾ, ನಂಗೆ ಏನ್ಹೇಳ್ಬೇಕೂಂತಾ ನಂಗೆ ಗೊತ್ತಾಗ್ತಾ ಇಲ್ಲ-ಅಲ್ಲಾವ್ವಾ ಆ ರುದ್ರಣ್ಣನ್ನೇ ಒಂದ್ಸಲ ಪೊಲೀಸ್ನೋರು ಹಿಡ್ಕೊಂಡು ಹೋಗಿರ್ಲಿಲ್ವಾ ? ಯಾರ ಮೇಲೋ ಮಾಟಾ ಮಾಡೋಕ್ಹೋಗಿ ಏನೋ ಗಲಾಟೆ ಮಾಡಿಕೊಂಡಿದ್ದ. ನಾಲ್ಕು ಒದ್ದು ಬುದ್ದಿ ಹೇಳಿಕಳಿಸಿದ್ರು ಅಂತ ಯಾರೋ ಹೇಳಿದ ಜ್ಞಾಪಕ. ನೀನು ತಾತಾ ಅವನ್ನ ಕರಕೊಂಡು ಬಂದು ಮನೇಲಿ ಏನೇನೋ ಮಾಡಿದ್ದೀರಿ, ನಾಳೆ ಹೆಚ್ಚು ಕಡಿಮೆಯಾದ್ರೆ ನಾನು ಸುಮ್ಮನಿರೋಲ್ಲ !"

"ಹೋಗ್ಹೋಗೋ, ನಂಗೇ ಬುದ್ದಿ ಹೇಳೋ ಹಾಗಾಗೋದೀ, ನಂಗೆ ಗೊತ್ತಿಲ್ವ ? ನೂಪುರಳ ಹಿಂಸೆ ಮಾಡ್ತಾ ಇದ್ದುದ್ದು ನೀನೇ ನೋಡಿದ್ದೀ. ಮನೇಲಿ ನಡೀತಾ ಇದ್ದದ್ದೆಲ್ಲಾ ನೋಡಿಲ್ವಾ ? ಆ ರುದ್ರಣ್ಣ ಪೊಲೀಸ್ನೋರ ಕೈಗಾದ್ರೂ ಸಿಗಲಿ. ನಮಗೇನಂತೆ. ನಮ್ಮ ಕೆಲಸ ಆಗಿದ್ದೆಲ್ಲಾ ಸಾಕು. ನೀನು ಎಲ್ಲಿದ್ರಲ್ಲೂ ಕೊಂಕು ತೆಗೀತಾ ಕೂತ್ಕೋ ಬೇಡಾ ! ಬೇಗ ಕಾಫಿ ತಿಂಡಿ ತೊಗೋ !"

ವರ್ಧಮಾನ ತಾಯಿಯನ್ನು ತೀಕ್ಷ್ಣವಾಗಿ ನೋಡಿದ.

"ಎಷ್ಟು ದುಡ್ಡು ಸುರಿದಿ ಅವನ್ಗೆ ?"

"ಅದೆಲ್ಲಾ ನಿಂಗ್ಯಾಕೇ. ನಿಂಗೆ ನಂಬ್ಕೆ ಇಲ್ಲಾಂದ್ಮೇಲ್ಲಾ. ಅದೆಲ್ಲಾ ಯಾಕೆ ?"

"ಅಂತಹ ಪೂಜೆ ಮಾಡಿದಾಗ ಕೊಡೋದ್ನ ಬಿಡೋದ್ನ ಯಾಕೆ ಎಷ್ಟೂಂತಾ ಕೇಳ್ಬಾರ್ದು-ನೂಪುರಂಗೆ ಏನೂ ಆಗಿಲ್ಲ. ಅವಳ್ನ ಸರಿಯಾಗಿ ನೋಡ್ಕೋ. ಈಗ ಎಲ್ರಂತೆ ಅವ್ಳೂ ಆಗಿದ್ದಾಳೆ. ಆದ್ರೆ ಕಟ್ಟಿರೋ ತಾಯಿತ ಮಾತ್ರ ಹುಷಾರು !"

ವರ್ಧಮಾನ ನಿಟ್ಟುಸಿರಿಟ್ಟ. ಇವರಿಗೆಲ್ಲಾ ಹೇಗೆ ಬುದ್ಧಿ ಹೇಳುವುದು ? ಅಥವಾ ಬುದ್ಧಿ ಹೇಳಲಿ. ಅವರ ನಂಬಿಕೆಯನ್ನು ತಪ್ಪೆಂದು ದೃಷ್ಟಾಂತರಿಸಿ ತೋರಲು ತನಗೇನು ಅಷ್ಟೊಂದು ತಿಳಿದಿಲ್ಲ. ಎಲ್ಲಾ ಜಿಜ್ಞಾಸೆ ಮಾತ್ರ. ಯಾರಾದರೂ ಪೂರಾ ಸೈಕಾಲಿಜಿಸ್ಟ್ ಹತ್ತಿರ ಹೋಗಿ ಎಲ್ಲಾ ಕೇಳಿ ತಿಳಿದುಕೊಳ್ಳಬೇಕು !

ಅಂದಿನಿಂದ ವರ್ಧಮಾನ ಚಿಂತೆಗೊಳಗಾದ. ನೂಪುರ ಕುಂಠಿತ

ಬದಲಾಗಿದ್ದಳು. ಬಾಯಿ ತುಂಬಾ ಮಾತಾಡುತ್ತಿದ್ದಳು. ಮನಃಪೂರ್ವಕ ವಾಗಿ ಸರಿಯಾಗಿ ನಡೆದುಕೊಳ್ಳುತ್ತಿದ್ದಳು. ತನ್ನೊಡನೆ ಎಲ್ಲಾ ವಿಧದಲ್ಲೂ ಮುಖಚರ್ಯೆಯೇ ಬದಲಾಗಿ ಅವಳಲ್ಲಿ ಹೊಸತನ, ಉತ್ಸಾಹ, ಎತ್ತಿ ಕಾಣುತ್ತಿತ್ತು. ತನ್ನ ತಾತ, ತಾಯಿ ಹಾಗಾದರೆ ಮಾಡಿದುದು ಸರಿಯೇ ? ಆ ರುದ್ರಣ್ಣನಿಗೆ ಎಷ್ಟು ಹಣ ಕೊಟ್ಟಿರಬಹುದು ? ನೂಪುರಳ ಒಡವೆಗಳೆಲ್ಲಾ ಏನಾಯಿತು. ಅಮ್ಮ ಒಡವೆಗಳನ್ನೆಲ್ಲಾ ನೂಪುರಳಿಗೇಕಿತ್ತಳು ? ಅವನು ಪ್ರತಿಯೊಬ್ಬರ ಚಲನವಲನಗಳನ್ನು ನೋಡುತ್ತಾ ಪರೀಕ್ಷಿಸತೊಡಗಿದ.

ರುದ್ರಣ್ಣ ಕೈಯಲ್ಲಿ ಹಿಡಿದು ತಂದಿದ್ದ ತಾಮ್ರದ ಬಿಂದಿಗೆಯನ್ನು ಒಡವೆಗಳನ್ನೂ ಹುಣಿಸೇ ಮರದ ಕೆಳಗೆ ಹೂತಿಟ್ಟು ಮನೆಗೆ ಬಂದ. ಬಂದವನೇ ಪೂಜಾ ಗೃಹಕ್ಕೆ ಹೋಗಿ ತೆಗೆದುಕೊಂಡು ಹೋಗಿದ್ದ ಮೂಳೆ, ಮತ್ತಿತರ ಸಾಮಾಗ್ರಿಗಳನ್ನು ತೆಗೆದಿರಿಸಿದ. ವೀರಭದ್ರನಿಗೆ ತಣ್ಣೀರಿಗೆ ಓಕಳಿ ನೀರು ಬೆರಸುವಂತೆ ಹೇಳಿ ಸಚೇಲ ಸ್ನಾನ ಮಾಡಿದ. ಒಂದು ತೊಟ್ಟು ನೀರೂ ಕುಡಿಯದೇ ಶಕ್ತಿ ಪೂಜೆಗೆ ಕುಳಿತ. ಅವನನ್ನು ಯಾರೂ ಏನೂ ಪ್ರಶ್ನಿಸುವಂತಿರಲಿಲ್ಲ. ಮಧ್ಯ ರಾತ್ರಿಯವರೆಗೆ ಪೂಜೆ ಸರಿರಾತ್ರಿಯಲ್ಲಿ ಎದ್ದು ಮನೆಬಿಟ್ಟು ಕೈಯಲ್ಲಿ ಗುದ್ದಲಿ, ಗೋಣೀ ತಾಟು ಹಿಡಿದು ಹೊರಟ ಅವನನ್ನು ವೀರಭದ್ರ ಕಣ್ಣರಳಿಸಿ ನೋಡಿದ. ರುದ್ರಣ್ಣ ಹಾಗೆ ಹೊರಟನೆಂದರೆ ಅವನಿಗೆ ಗೊತ್ತು, ಭಾರಿ ಕುಳವ್ಯಾವುದೋ ಅವನಿಗೆ ದೊರಕಿರಲೇಬೇಕು. ಹೋದ ಸಲ ಹಾಗೆ ಹೋದಾಗ ತಾನೂ ಅವನ ಹಿಂದೆಯೇ ಮೆಲ್ಲನೇ ಹೋಗಿ ನೋಡಿ ಬಂದಿದ್ದ ಏನೇನೋ ಹೂತಿಟ್ಟು ಬರುವಾಗ ಕೈ ತುಂಬಾ ಹಣ. ಚಿನ್ನದ ಒಡವೆಗಳನ್ನು ತಂದಿದ್ದ ಅಂತಹ ಒಡವೆಯ ಗಂಟು ತನಗೆ ಒಂದು ಸಲ ಸಿಕ್ಕರೆ ಸಾಕು. ತಾನಿಲ್ಲಿಂದ ತಪ್ಪಿಸಿಕೊಂಡು ಎಲ್ಲಾದರೂ ಓಡಿಹೋಗಿಬಿಡಬಹುದು. ತನಗೆ ರುದ್ರಣ್ಣ ಮಾಡಿರೋ ಅಪಚಾರವನ್ನು ಸರಿಪಡಿಸಿಕೊಳ್ಳಬಹುದು. ಬೇಕಂತಲೇ ತನಗೆ ಎಲ್ಲವೂ ಸರಿಯಿದ್ದರೂ ಬಾಯಿಲ್ಲದಂತೆ ಮಾಡಿದ್ದಾನೆ. ಗಟ್ಟಿಮುಟ್ಟಿಯಾಗಿದ್ದ ತನ್ನನ್ನು ಅರೆಜೀವ ಮಾಡಿದ್ದಾನೆ. ಸಮ್ಮೋಹನ ಶಕ್ತಿಯಿಂದ ತನ್ನನ್ನು ಅವನು ಹೇಳಿದಂತೆ ಕೇಳುವ ಹಾಗೆ ಮಾಡಿದ್ದಾನೆ. ಎರಡು ಹೊತ್ತು ಅರೆಹೊಟ್ಟೆ ಹಾಕಿ ತನ್ನ ಕೈಯಿಂದ ಗುಲಾಮಚಾಕರಿ ಮಾಡಿಸಿಕೊಳ್ಳುತ್ತಾನೆ. ಅಂದು ಆ ಶ್ರೀಮಂತ ಮುದುಕ ಬಂದಿದ್ದನಲ್ಲಾ ಅವರ ಕಡೆಯಿಂದ ತಂದುದೆಲ್ಲವನ್ನೂ ಹೂತಿಡಲು ಹೊರಟಿದ್ದಾನೆ. ತಾನು ಹೋಗಿ ಅದನ್ನು ನೋಡಿ ಬರಬೇಕು ! ಅವನ

ಮಂಕು ಬುದ್ಧಿ ಚಗುರಿತು ಈಚೀಚೆಗೆ ರುದ್ರಣ್ಣನ ಗಮನವೆಲ್ಲಾ ಬೇರೆ ಕಡೆಯಿದ್ದುದರಿಂದ ತನ್ನ ಮೇಲೆ ಮೊದಲಿನ ಹಿಡಿತವಿಲ್ಲ! ವೀರಭದ್ರ ಒಳಗೋಡಿ ಕುಂಕುಮದ ಪೊಟ್ಟಣವೊಂದನ್ನು ಕೈಗೆತ್ತಿಕೊಂಡ. ಅದರ ಅಡಿಯಲ್ಲಿ ತೂತೊಂದು ಮಾಡಿಕೊಂಡು ರುದ್ರಣ್ಣ ಹೊರಟ ದಿಕ್ಕಿನಲ್ಲಿಯೇ ದಾಪುಗಾಲು ಹಾಕುತ್ತಾ ನಡೆದ. ಕತ್ತಲಲ್ಲಿ ಕಂದೀಲಿನ ಬೆಳಕಿನ ಜಾಡನ್ನೇ ಹಿಡಿದು ರುದ್ರಣ್ಣನ ಹಿಂದೆ ಹೆಜ್ಜೆ ಹಾಕಿದ. ಇಬ್ಬರೂ ಬಹಳ ದೂರ ನಡೆದು ಊರಾಚೆಯಿದ್ದ ಹುಣಸೇ ತೋಪಿನ ಬಳಿ ಬಂದರು. ವೀರಭದ್ರ ಮರಗಳ ಹಿಂದೆ ಅಡಗಿದ. ರುದ್ರಣ್ಣ ಕಂದೀಲನ್ನು ಕೆಳಗಿಟ್ಟು ಗುದ್ದಲಿ ಯಿಂದ ಅಗೆಯ ತೊಡಗಿದ. ವೀರಭದ್ರ ಕುಂಕುಮದ ಪೊಟ್ಟಣ ಕೈಗೆತ್ತಿ ಕೊಂಡು ತೂತಿನಿಂದ ಒಂದು ಹಿಡಿಯಷ್ಟು ತೆಗೆದು ತಾನು ಅಡಗಿದ್ದ ಮರಕ್ಕೆ ಮೆತ್ತಿದ. ಕುಂಕುಮ ಅಷ್ಟಿಷ್ಟು ಮೆತ್ತಿಕೊಂಡಿತು. ಮಿಕ್ಕ ಕುಂಕುಮವನ್ನು ಆ ಮರದ ಬುಡಕ್ಕೆ ಚೆಲ್ಲಿದ. ರುದ್ರಣ್ಣನಿಗೆ ಅತ್ತ ಗಮನವೇ ಇರಲಿಲ್ಲ. ಅವನು ಮಣ್ಣು ಅಗೆಯತೊಡಗಿದ್ದ. ವೀರಭದ್ರ ಅಲ್ಲಿಂದ ಮೆಲ್ಲನೇ ಜಾರಿಕೊಂಡ. ಮಾರನೆಯ ದಿನ ರುದ್ರಣ್ಣ ಮಲಗಿದ ಹೊತ್ತಿಟ್ಟದ್ದನ್ನೆತ್ತಿ ಕೊಂಡು ಓಡಿಹೋಗಿಬಿಡಬೇಕು.

ರುದ್ರಣ್ಣ ಕಂದೀಲಿನ ಮಬ್ಬು ಬೆಳಕಿನಲ್ಲಿ ಮಣ್ಣಗೆದು ತಾನಿರಿಸಿದ್ದ ಒಡವೆ, ತಾಮ್ರದ ಬಿಂದಿಗೆಯನ್ನು ಕೈಗೆತ್ತಿಕೊಂಡು ಬೆಳಕಲ್ಲಿ ಒಡವೆಗಳನ್ನು ಪರೀಕ್ಷಿಸಿ ಸೊಂಟಕ್ಕೆ ಸಿಕ್ಕಿಸಿಕೊಂಡ. ತಾಮ್ರದ ಬಿಂದಿಗೆಯನ್ನು ಮತ್ತೆ ಹೂಳಿ ಅದರ ಮೇಲೆ ದೊಡ್ಡ ಕಲ್ಲೊಂದನ್ನು ಹೇರಿದ. ಸುತ್ತ ಮುತ್ತ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಮನೆಯತ್ತ ಹೆಜ್ಜೆ ಹಾಕಿದ. ವೀರಭದ್ರ ಒಬ್ಬನೇ ಮನೆಯಲ್ಲಿರುವುದು ಅವನಿಗೆ ಸರಿಬಂದಿರಲಿಲ್ಲ. ತನ್ನ ಭೈರವಿಯತ್ತ ಆಸೆಯಿಂದ ಆಗಾಗ ಕಣ್ಣಾಡಿಸುತ್ತಿದ್ದುದು ತನಗೆ ಗೊತ್ತಿತ್ತು. ಎಷ್ಟಾದರೂ ಅವನು ಗಂಡಲ್ಲವೇ. ಸಾಲದಕ್ಕೆ ಯೌವನಸ್ಥ! ನಾನು ಅವನ ಶಕ್ತಿಗುಂದಿಸಿ ನಿರ್ವೀರ್ಯವಂತನನ್ನಾಗಿ ಮಾಡಿರುವುದರಿಂದ ಅವನು ತಾನು ಹೇಳಿದಂತೆ ಕೇಳಿಕೊಂಡಿದ್ದಾನೆ! ತನ್ನ ಹಿಡಿತದಲ್ಲಿದ್ದಾನೆ. ಆದರೂ ಆ ಶಕ್ತಿಯಿಲ್ಲವನ್ನೂ ಮನೋವಿಗ್ರಹವೊಂದರಿಂದಲೇ ಅಡಗಿಸಿಟ್ಟರಬಹುದು! ಅದೂ ಅಲ್ಲದೇ ಮಂದ ಬುದ್ಧಿಯ ವೀರಭದ್ರನನ್ನು ಯಾರೂ ಸಂಪಡಿಸ ಲಾರರು!

ವೀರಭದ್ರ ಅರ್ಧದಾರಿ ಸವೆಸಿ ಮನೆಯತ್ತ ಹೆಜ್ಜೆ ಹಾಕಿದಾಗ, ತನ್ನ

ಹಿಂದೆಯೇ ಯಾರೋ ಬಂದಂತಾಯಿತು, ತಿರುಗಿ ನೋಡಿದ. ಯಾರೂ ಕಾಣಲಿಲ್ಲ. ಮತ್ತೆ ನಾಲ್ಕು ಹೆಜ್ಜೆ ಮುಂದೆ ನಡೆಯುವಷ್ಟರಲ್ಲಿ ಬಲವಾದ ಕೈಯೊಂದು ಅವನ ಭುಜದ ಮೇಲೆಬಿತ್ತು. ಅವನು ಬೆಚ್ಚಿ ಕೂಗುವುದರಲ್ಲಿ ಅವನ ಬಾಯನ್ನು ಯಾರೋ ಬಲವಾಗಿ ಒತ್ತಿದಂತಾಯಿತು.

"ಗಲಾಟೆ ಮಾಡಿದ್ರೆ ಕೊಂದು ಹಾಕಿಬಿಡ್ತೀನಿ ; ನೀನು ರುದ್ರಣ್ಣನ ಶಿಷ್ಯಾ ಅಲ್ವಾ ?"

ವೀರಭದ್ರ ಹೆದರಿಕೆಯಿಂದ ಹೌದೆನ್ನುವಂತೆ ತಲೆಯಾಡಿಸಿದ. "ಬಾ ನನ್ನ ಜೊತೇಲಿ, ನಿಂಗೆ ನಾನು ಏನು ಬೇಕಾದ್ರೂ ಸಹಾಯ ಮಾಡ್ತೀನಿ" ವೀರಭದ್ರನಿಗೆ ಗಂಟಲಿನ ದ್ರವವೇ ಆರಿಹೋಗಿತ್ತು. ತುಟಿಪಿಟಿಕ್ಕೆನ್ನದೇ ಆ ವ್ಯಕ್ತಿಯ ಹಿಂದೆ ನಡೆದ. ಅವರಿಬ್ಬರೂ ಊರ ಹೊರಗಿ ಮಂಟಪಕ್ಕೆ ಬಂದರು. ಕತ್ತಲಲ್ಲಿ ನನ್ನನ್ನು ರಕ್ಷಿಸಲು ಬಂದಿರುವ ವ್ಯಕ್ತಿ ಯಾರೆಂಬುದು ತಿಳಿಯಲು ಬಹಳ ಹೊತ್ತು ಬೇಕಾಗಲಿಲ್ಲ. ಗೂಬೆಯೊಂದು ಕರ್ಕಶವಾಗಿ ಕೂಗಿದಾಗ ವೀರಭದ್ರ ನಡುಗಿದ. ಆ ವ್ಯಕ್ತಿ ಎಣ್ಣೆಯಲ್ಲಿ ಬಟ್ಟೆ ಅದ್ದಿ ಬೆಂಕಿ ಹೊತ್ತಿಸಿದ್ದ. ಆ ಬೆಂಕಿಯ ಬೆಳಕಲ್ಲಿ ಆ ವ್ಯಕ್ತಿಯ ಮುಖ ಎತ್ತಿಕಂಡಿತು. ತಲೆಯ ಮೇಲೆ ಜಟೆ ಕಟ್ಟಿದಂತಿದ್ದ ಕೂದಲು, ಒತ್ತು ಹುಬ್ಬುಗಳು. ಹಣೆಯ ಮೇಲೆ ವಿಭೂತಿ ಕುಂಕುಮ ಕೆಂಗಣ್ಣುಗಳು. ಉದ್ದವಾದ ಕರಿಯ ಧಾಡಿ ಮೀಸೆ! ವೀರಭದ್ರನಿಗೆ ಆ ಮುಖ ಪರಿಚಿತವೆನಿಸಿತು. ಎಲ್ಲಿ ನೋಡಿರಬಹುದು ?

"ಏಯ್, ನೀನು ರುದ್ರಣ್ಣನ ಶಿಷ್ಯಅಲ್ಲವೇ ? ನಂಗೆ ನೀನು ಅವನ ಗುಟ್ಟೆಲ್ಲಾ ಹೇಳಿದರೆ ನಿನಗೆ ಹಣ ಕೊಡುವೆ. ನನ್ನ ವಿದ್ಯೆಯನ್ನೂ ಹೇಳಿಕೊಡುತ್ತೇನೆ. ಅನ್ಯಾಯವಾಗಿ ನಿನ್ನನ್ನು ಹಾಳುಮಾಡಿದ್ದಾನೆ. ನಿನ್ನ ಕಷ್ಟಗಳೆಲ್ಲಾ ಕೊನೆಗೊಳ್ಳುವಂತೆ ಮಾಡುತ್ತೇನೆ-" ಆ ವ್ಯಕ್ತಿ ಹೇಳಿದಾಗ ವೀರಭದ್ರನಿಗೆ ತಟ್ಟನೇ ಹೊಳೆಯಿತು. ಇವನು ವರದಾಚಾರಿ ! ಒಂದು ಸಲ ರುದ್ರಣ್ಣನನ್ನ ಭೇಟಿಯಾಗಲು ಬಂದಿದ್ದ. ಇಬ್ಬರ ನಡುವೆ ಅದೇನೋ ವಾಗ್ಯುದ್ಧ ವಾಗಿತ್ತು. ಯಾವ ವಿಷಯದಲ್ಲೋ ತನಗೆ ತಿಳಿಯದು. ತನ್ನನ್ನು ಯಾವುದೋ ಕೆಲಸದ ನಿಮಿತ್ತ ಹೊರಗೆಕಳಿಸಿದ್ದ. ರುದ್ರಣ್ಣ ಶತ್ರು ನನಗೆ ಸ್ನೇಹಿತ !

ವೀರಭದ್ರ ಆಗಲೆನ್ನುವಂತೆ ತಲೆಯಾಡಿಸಿದ.

"ನೋಡೂ ರುದ್ರಣ್ಣ ನಾನು ಕೈಗೊಂಡಿದ್ದ ಯಾವುದೋ ಮಹಾ ಕಾರ್ಯಕ್ಕೆ ಮುಳ್ಳಾಗಿದ್ದಾನೆ. ನಾನು ಏನಾಡಿದ್ದೆಲ್ಲಾ ಹಾಳು ಮಾಡಲೆತ್ನಿಸಿ

ದ್ದಾನೆ. ಇಂದು ಅವನೇನೋ ಕೆಂದು ಮಣ್ಣಲ್ಲಿ ಹುದುಗಿಸಿದ್ದಾನೆ. ಅದೆಲ್ಲಿದೆಯೆಂದು ನೀನು ತೋರಿಸಿಕೊಟ್ಟರೆ ನಿನಗೆ ನಾನು ಎಲ್ಲವನ್ನೂ ಸರಿ ಮಾಡುತ್ತೇನೆ. ನಿನ್ನ ಮೇಲಿರುವ ರುದ್ರಣ್ಣನ ಶಕ್ತಿಯನ್ನು ತೆಗೆಯುತ್ತೇನೆ."

ವೀರಭದ್ರ ತಲೆಯಾಡಿಸಿದ. ಕೈ ಸನ್ನೆ ಮಾಡಿ ಮಾರನೆಯ ದಿನ ರಾತ್ರಿ ಬರುವಂತೆ ಹೇಳಿದ. ವರದಾಚಾರಿ ಅವನ ಕಣ್ಣುಗಳನ್ನೇ ದಿಟ್ಟಿಸಿದ. "ವೀರಭದ್ರ, ನೀನು ಮಾತಾಡಬಹುದು. ನಿನಗೆ ಮಾತಾಡಲು ಬರುತ್ತದೆ. ಹೇಳು ಈ ವರದಾಚಾರಿಯ ವೈರಿ ಆ ರುದ್ರಣ್ಣ ತಾಮ್ರದ ಬಿಂದಿಗೆ ಎಲ್ಲಿ ಹುದುಗಿದ್ದಾನೆ."

ವೀರಭದ್ರನ ಮೈ ಬಿಸಿಯಾಯಿತು. ಕಣ್ಣುಗಳು ಭಗಭಗನೇ ಉರಿಯಿತು. ನಾಲಿಗೆ ಗಂಟಲು ಒಣಗಿದಂತಾಯಿತು. ಜಿಲ್ಲನೇ ಬೆವೆತ ವರದಾಚಾರಿ ಕೈಗಿಷ್ಟು ಬೂದಿ ತೆಗೆದುಕೊಂಡು ಮಂತ್ರಿಸಿ ಅವನತ್ತ ಊದಿದ.

"ನೀನು ಮಾತಾಡು- ಹೆದರಬೇಡ ನಾನಿದ್ದೇನೆ"

ವೀರಭದ್ರ ಈಗ ಶಾಂತನಾದ, ಮೈ ಗೆಲುವೆನಿಸಿತು ನಾಲಿಗೆ ಬಾಯಲ್ಲಿ. ಅಂಗಳಿನ ಅಡಿಯಲ್ಲಿ ಚಲಿಸಿತು.

"ಆಗಲಿ ತಿಳಿಸುತ್ತೇನೆ. ಆದರೆ ಒಂದು ಷರತ್ತು. ನಿಮ್ಮ ವಿದ್ಯೆ ನನಗೆ ಹೇಳಿಕೊಡಬೇಕು. ರುದ್ರಣ್ಣ ಮಾಡುವುದನ್ನು ನೋಡಿ ಸಾಕಷ್ಟು ಕಲಿತಿದ್ದೇನೆ, ಆದರೆ ನಿಮಗೆ ತಿಳಿದಿರುವಷ್ಟು ಬರುವುದಿಲ್ಲ-!"

ವರದಾಚಾರಿಯ ಮುಖ ಗಂಭೀರವಾಯಿತು. ತಾನೆಂದುಕೊಂಡಂತೆ ಈ ಚಾರಲು ಹುಡುಗ ಮಂದ ಬುದ್ಧಿಯವನಲ್ಲ-

"ಆಗಲಿ, ಹೇಳಿಕೊಡುತ್ತೇನೆ. ಮೊದಲು ಆ ಬಿಂದಿಗೆ ತೋರಿಸು."

"ಇಲ್ಲರ್ಿ, ಮೊದಲು ಹೇಳಿಕೊಡು-ಆಮೇಲೆ ತೋರಿಸುತ್ತೇನೆ"

ವರದಾಚಾರಿ ನೆಲ ನೋಡಿದ, "ಮೊದಲು ಒಂದಿಷ್ಟು ಹೇಳಿಕೊಟ್ಟುಬಿಟ್ಟು, ಆ ತಾಮ್ರದ ಬಿಂದಿಗೆ ತನ್ನ ಕೈಗೆ ಸಿಕ್ಕಸಿ ಕೂಡಲೇ ಇವನನ್ನು ಮತ್ತೇ ಮೂಕ, ಮಂದ ಬುದ್ಧಿ ಮಾಡಿ ಓಡಿಸಿಬಿಡಬೇಕು !"

"ಆಗಲಿ, ನಾಳೆಯೇ ಪ್ರಾರಂಭಿಸುತ್ತೇನೆ !"

* * * *

ನೂಪುರಳಿಗೆ ಲವಲವಿಕೆ ಮತ್ತೆ ಮೂಡಿ ಬಂದಿತ್ತು. ಈಗ ವರ್ಧಮಾನನಿಗೆ ತನ್ನ ಹೆಂಡತಿಯನ್ನು ಕಂಡರೆ ಅಮರ ಪ್ರೇಮ, ಒಂದು ಗಳಿಗೆ ಬಿಟ್ಟಿರಲಾರ!

ಲಲಿತಮ್ಮನಿಗಂತೂ ಹಿಡಿಸಲಾರದಷ್ಟು ಆನಂದವಾಗಿತ್ತು. ಸಧ್ಯ ಅಂತೂ ಕಾವೇರಿ ಹೇಳಿದಂತೆ ಅವರಿಸಿದ್ದ ಕಷ್ಟಗಳೆಲ್ಲಾ ಕರಗಿಹೋಯಿತಲ್ಲಾ ! ವರ್ಧಮಾನನ ತಲೆಯಲ್ಲಿ ಕೊರೆಯುತ್ತಿದ್ದ ಜಿಜ್ಞಾಸೆಗಳೆಲ್ಲವೂ ಆವಿಯಾಗಿ ಹೋಯಿತು ತಿಳಿದುಕೊಳ್ಳಬೇಕೆಂದಿದ್ದ ಹಂಬಲ ಮಾಯವಾಗಿ ಮುದ್ದಾದ ಹೆಂಡತಿಯೊಂದಿಗೆ ಹೆಚ್ಚು ಕಾಲ ಕಳೆಯಲಾರಂಭಿಸಿದ. ಆದುದ್ದೆಲ್ಲಾ ಕೆಟ್ಟ ಕನಸಿನಂತಾಗಿತ್ತು. ರಾಮಲಿಂಗಯ್ಯನವರು ನಿರಾಳವಾಗಿ ಉಸಿರಾಡಿದರು. ತಾವೆಣಿಸಿದಂತೆ ರುದ್ರಣ್ಣ ಭಾರೀ ಕುಳ. ತಾಂತ್ರಿಕ ವಿದ್ಯೆ, ಭಾನಾಮತಿ, ಮಾಟ, ಮಂತ್ರ, ಉಚ್ಚಾಟನೆ ಎಲ್ಲದರಲ್ಲೂ ನಿಸ್ಸೀಮ. ಅವನ ಒಂದೇ ಒಂದು ಕೆಟ್ಟಗುಣವೆಂದರೆ ಹಣದ ದುರಾಸೆ ಎಷ್ಟು ಕೊಟ್ಟರೂ ಸಾಲದು, ಎಷ್ಟಿದ್ದರೂ ಸಾಲದು-ಹಣಕ್ಕಾಗಿ ಏನು ಮಾಡಲೂ ಸಿದ್ಧನಾಗಿರುತ್ತಿದ್ದವನು ! ನೂಪುರಳ ಒಡವೆಗಳು ಹೋದರೆ ಹೋಗಲಿ ಗೌರಿ ಹಬ್ಬದ ಹೊತ್ತಿಗೆ ಹೊಸ ಒಡವೆ ಮಾಡಿಸಿಕೊಟ್ಟರಾಯಿತು ಎಂದುಕೊಂಡರು.

ಸಂಜೀವಯ್ಯ ಮಗಳನ್ನು ಮಂಗಳ ಗೌರಿ ಪೂಜೆಗೆ ಕರೆಯಲು ಬಂದಾಗ ಲಲಿತಮ್ಮ ಕಳಿಸಲೊಪ್ಪಲಿಲ್ಲ.

'ನಮ್ಮ ಮನೇಲೇ ಮಂಗಳ ಗೌರಿ ಪೂಜೆ ಮಾಡಿಸ್ತೀನಿ, ಬೇಕಾದ್ರೆ ಸಂಜೆಗೆ ಕಳಿಸಿಕೊಡ್ತೀನಿ' ಎಂದುಬಿಟ್ಟರು. ಮಗಳ ಅಸ್ವಾಸ್ಥ್ಯದ ಬಗ್ಗೆ ಒಂದಿಷ್ಟು ಒಡಕು ಸುದ್ದಿ ಕಿವಿಗೆ ಬಿದ್ದಿತ್ತು. ಮಾಂತ್ರಿಕ, ತಾಂತ್ರಿಕರನ್ನು ಕರೆಸಿದ್ದು. ತಾಯಿತ ಕಟ್ಟಿಸಿದ್ದು ಕಿವಿಗೆ ಬಿದ್ದಿತ್ತು. ಬೀಗರನ್ನು ಕೇಳಲು ಬಾಯಿರಲಿಲ್ಲ. ಮಗಳಲ್ಲೇ ಏನೋ ದೋಷವಿದೆ ಎಂದುಕೊಂಡುಬಿಟ್ಟರೆ ಎಂಬ ಭಯವಿತ್ತು. ಲಲಿತಮ್ಮ ನೂಪುರಳನ್ನು ಕಳಿಸುವುದಿಲ್ಲ ಎಂದಾಗೂ ಒತ್ತಾಯಿಸಲು ಅವರಿಗೆ ಧೈರ್ಯ ಬರಲಿಲ್ಲ.

ಮಗಳನ್ನು ಕರೆತಾರದೇ ಬಂದ ಪತಿಯನ್ನು ಕಂಡು ಕಾವೇರಮ್ಮ ಸಿಡಿಮಿಡಿಗೊಂಡರು.

"ಮದ್ವೆ ಆದ್ಮೇಲೆ ಒಂದು ದಿನವಾದ್ರೂ ನಮ್ಮನೇಗೆ ಕಳಿಸಿಕೊಟ್ಟಿದ್ದಾರಾ ? ಈ ಶ್ರೀಮಂತರ ಸಹವಾಸಾನೇ ಹೀಗೆ ! ಅವಳಿಗಾದ್ರೂ ತಾನು ಅಪ್ಪ ಅಮ್ಮನ್ನ ನೋಡ್ಬೇಕೂ ಅನ್ನೋ ಬಯಕೆ ಬರಬೇಡವೇ ? ಆ ಸಿರಿಸಂಪತ್ತಿನಲ್ಲಿ ಅವಳಿಗೂ ನಾವ್ಯಾರೂ ಬೇಕಾಗಿಲ್ಲವೇನೋ ! ಮಂಗಳ ಗೌರಿ ಪೂಜೆ ತೌರಿನಲ್ಲಿ ಮಾಡೋ ಹಬ್ಬ. ಒಂದು ದಿನ ಕಳಿಸಿದ್ರೆ ಏನು ಕಳೆದು

ಹೊಗ್ತಾ ಇತ್ತು. ನಂಗೆ ಅವಳ್ನ ನೋಡ್ಬೇಕೊಂದ್ರೆ ಅಲ್ಲಿಗೇ ಹೋಗಿ ನೋಡ್ಕೊಂಡು ಬರ್ಬೇಕೊಂದ್ರೆ ಹೀನಾಯ ಆಗುತ್ತೆ."

"ಯಾಕೇ ರೇಗಾಡ್ತೀ, ಅವ್ರು ಕಳಿಸೋಲ್ಲಾಂದ್ರೇ ನಾನು ಅವರ ಜೊತೆ ಜಗಳಾ ಆಡಿ ಕರ್ಕೊಂಡು ಬರೋಕಾಗುತ್ಯೇನೆ ? ನೀನು ಹೇಳಿದ ಹಾಗೆ ನೂಪುರಳೇ 'ನಾನು ಹೋಗ್ತೀನಿ' ಅಂದಿದ್ರೆ ಕಳಿಸಿಕೊಡುತ್ತಿದ್ದರೋ ಏನೋ ! ಅವಳಿಗೂ ನಾವು ಬೇಡವಾಗಿಬಿಟ್ಟಿದ್ದೇವೆ. ಏನು ಮಾಡೋದು ಹೇಳು !"

ಅಕ್ಕಪಕ್ಕದ ಮನೆಯವರ ಮುಂದೆ ಶ್ರೀಮಂತರ ಮನೆ ಸೊಸೆಯಾಗಿದ್ದ ತಮ್ಮ ಮಗಳನ್ನು ಪ್ರದರ್ಶಿಸಬೇಕೆಂದಿದ್ದ ಕಾವೇರಮ್ಮನಿಗೆ ನಿರಾಸೆಯಾಗಿತ್ತು. ಒಂದು ಮಂಗಳವಾರವಾದರೂ ತಾಯಿಯ ಮನೆಯಲ್ಲಿ ಪೂಜೆ ಮಾಡಲಿ ಎಂದು ಮತ್ತೆ ಹೇಳಿ ಕಳಿಸಿದರೂ ಲಲಿತಮ್ಮ ಸೊಸೆಯನ್ನು ಕಳುಹಿಸಲಿಲ್ಲ. ಅದಕ್ಕೊಂದು ಬಲವಾದ ಕಾರಣವಿತ್ತು. ನೂಪುರಳ ಕೈಗೆ ಕಟ್ಟಿದ್ದ ತಾಯಿತವನ್ನು ತೆಗೆಯಬಾರದು ಹಾಗೂ ಅದಕ್ಕೆ ಮೈಲಿಗೆ ಸೋಂಕದಂತೆ ಎಚ್ಚರವಹಿಸಬೇಕಾಗಿತ್ತು. ಅದನ್ನು ನೂಪುರಳಿಗೂ ಅವರು ಹೇಳಿರಲಿಲ್ಲ. ಕುತೂಹಲಕ್ಕಾದರೂ ತೆಗೆದುಬಿಟ್ಟಾಳೆಂಬ ಭಯವಿತ್ತು. ಅದಕ್ಕೇ ಅವರು ಅವಳಿಗೆ ಅದು ಮಾಂಗಲ್ಯದಷ್ಟೇ ಪವಿತ್ರವಾದುದೆಂದೂ ಅವಳ ಗಂಡ ವರ್ಧಮಾನನ ಒಳಿತಿಗಾಗಿ ಕಟ್ಟಿರುವುದೆಂದೇ ಹೇಳಿದ್ದರು. ಅವಳಿಗೆ ನಡೆದ ಘಟನೆಗಳ್ಯಾವುದೂ ಅಷ್ಟಾಗಿ ನೆನಪಿರಲಿಲ್ಲ.

ಯಾರಾದರೂ ಬಾರದ ಪ್ರಶ್ನೆಗಳನ್ನು ಕೇಳುವುದಾಗಲೀ ತಮ್ಮ ಮನೆಯ ಬಗ್ಗೆ ಸೊಸೆಯ ಮುಂದೆ ಟೀಕೆ ಮಾಡುವುದಾಗಲೀ ಇಷ್ಟವಿರಲಿಲ್ಲ. ಆದುದರಿಂದಲೇ ಅವಳನ್ನು ವರ್ಧಮಾನನೊಂದಿಗೆ ಕಳಿಸುತ್ತಿದ್ದರು. ಇಲ್ಲವೇ, ತಾವೇ ಕರೆದೊಯ್ಯುತ್ತಿದ್ದರು. ಅಪ್ಪಿತಪ್ಪಿಯೂ ಒಬ್ಬಳನ್ನೇ ಹೊರಗೆ ಕಳಿಸುತ್ತಿರಲಿಲ್ಲ. ಇದರಿಂದ ಸಾಕಷ್ಟು ಊಹಾಪೋಹವೆದ್ದಿತ್ತು. ಲಲಿತಮ್ಮ ಸೊಸೆಯನ್ನು ನಿರ್ಬಂಧದಲ್ಲಿಟ್ಟುವರೆಂದೂ, ಸೊಸೆಯನ್ನು ಹೆದರಿಸಿ ಬೆದರಿಸಿ ತಮ್ಮ ಕೈಯಲ್ಲಿಟ್ಟುಕೊಂಡಿರುವರೆಂದೂ, ನೂಪುರ ಅತ್ತೆಯ ಮಾತು ಮೀರುವಂತಿಲ್ಲವೆಂದೂ, ಲಲಿತಮ್ಮ ಅತೀ ಕಟ್ಟುನಿಟ್ಟಿನ ಅತ್ತೆಯೆಂದೂ ಮಾತಾಡಿಕೊಳ್ಳುತ್ತಿದ್ದರು. ಲಲಿತಮ್ಮ ಅದಕ್ಕೆಲ್ಲಾ ಸೊಪ್ಪು ಹಾಕಿರಲಿಲ್ಲ. ಏನಿದ್ದರೂ ನೂಪುರಳಿಗೆ ದುಷ್ಟಶಕ್ತಿಗಳ ಕಾಟ ಮರುಕಳಿಸಬಾರದೆಂದೇ ಅವರ ಆಶಯವಾಗಿತ್ತು.

ರಾಮಲಿಂಗಯ್ಯನವರಿಗೆ ಎಲ್ಲರಿಗಿಂತ ಹೆಚ್ಚಿನ ಆತಂಕವಿತ್ತು. ವರದಾಚಾರಿಯ ಇರುವನ್ನು ಕಂಡುಹಿಡಿದು ಗಂಗೆಯು ಶವದ ಕದ್ದ ಭಾಗಗಳನ್ನು ಕಂಡುಹಿಡಿದು ಅದಕ್ಕೆ ಮೋಕ್ಷ ಕಾಣಿಸಬೇಕೆಂಬ ಆತುರವಿತ್ತು. ಆ ಕಳೇಬರದ ಭಾಗಗಳನ್ನು ನಾಶಮಾಡುವ ತನಕ ತಮ್ಮ ಸಂತತಿಗೆ ತೊಂದರೆ ತಪ್ಪಿದ್ದಲ್ಲವೆಂದು ಗೊತ್ತಿತ್ತು. ರುದ್ರಣ್ಣ ದಿಗ್ಬಂಧಿಸಿದುದನ್ನು ಯಾರಾದರೂ ಪ್ರತಿಬಂಧನಮಾಡಿಯೋ, ಗಾಳಿಗೆಬಿಡುವುದೋ ಮಾಡಿದರೆ ಆ ದುಷ್ಟ ಶಕ್ತಿ ಮತ್ತೆ ತಮ್ಮ ಮನೆಗೆ ನುಗ್ಗುವುದೆಂದು ನಂಬಿದ್ದರು. ವರದಾಚಾರಿಯ ಸುಳಿವು ತಿಳಿಯಲು ಅವರು ಯಾರಿಗೂ ತಿಳಿಯದಂತೆ ಓಡಾಟ ಪ್ರಾರಂಭಿಸಿದ್ದರು. ಮೊದಲಿಗೆ ಅವನು ವಾಸಿಸುತ್ತಿದ್ದ ಕಾಲೋನಿಯಿಂದ ಅನ್ವೇಷಣೆ ಪ್ರಾರಂಭಿಸಿದ್ದರು. ಒಬ್ಬೊಬ್ಬರು ಒಂದೊಂದು ಉತ್ತರಕೊಡುತ್ತಿದ್ದುದರಿಂದ ಅವನಿರುವ ಸ್ಥಳದ ಸುಳಿವೇ ಸಿಕ್ಕಿರಲಿಲ್ಲ.

ಒಂದು ದಿನ ಅಕಸ್ಮಾತ್ತಾಗಿ ಸಭಾಪತಿ ಶಾಸ್ತ್ರಿಗಳು ಆಗಮಿಸಿದರು. "ಲಲಿತಾ ಸಹಸ್ರನಾಮ ಮಾಡಿಸಿ ಎಲ್ಲಾ ಅಭೀಷ್ಟಗಳನ್ನು ನೇರವೇರಿಸುವಂತೆ ಮಾಡೋಣ ಎನಿಸಿತು ಬಂದೆ. ಹೇಗಿದ್ದರೂ ಸೊಸ ಈಗ ಎಲ್ಲಾ ವಿಷಯದಲ್ಲೂ ಸರಿಯಾಗಿದ್ದಾಳಂತಾ ಕೇಳಿದೆ." ರಾಮಲಿಂಗಯ್ಯನವರಿಗೆ ಹೇಳುವಾಗ ರಾಮಲಿಂಗಯ್ಯನವರು ಅವರಿಗೆ ರುದ್ರಣ್ಣನ ದಿಗ್ಬಂಧನದ ವಿಷಯ ತಿಳಿಸಿದರು.

"ಅಯ್ಯೋ ಬಿಡಿ ದಿಗ್ಬಂಧಿಸಿ ಸರಿಯಾದ ಕಡೆ ಹೂಳೋಲ್ಲ. ಎಲ್ಲಾದ್ರೂ ಹುಣಿಸೇ ಮರದ ಬುಡದಲ್ಲಿ ಹೂತುಬಿಡುತ್ತಾರೆ. ಕುರಿಕಾಯೋರೋ, ದನ ಕಾಯೊರೋ, ಬುದ್ಧಿ ಇಲ್ಲದ ಜನ ಅದನ್ನ ಹುಗಿದಿಟ್ಟ ಹಣದ ಬಿಂದಿಗೆ ಎಂದುಕೊಂಡು ಅಗೆದು ತೆಗೆದು ನೋಡಿದರ ಮುಗಿಯಿತು. ದಿಗ್ಬಂಧನದಲ್ಲಿಟ್ಟಿದ್ದ ದುಷ್ಟಶಕ್ತಿ ಒಂದಕ್ಕೆ ಎರಡರಷ್ಟು ಬಲವಾಗಿ ಅಮರಿಕೊಳ್ಳುತ್ತೆ!"

ಆ ಮಾತು ಕೇಳುತ್ತಲೇ ರಾಮಲಿಂಗಯ್ಯನವರ ಜಂಘಾಬಲವೇ ಅಡಗಿಹೋಯಿತು. ಶಾಸ್ತ್ರಿಗಳ ಮಾತಿನಲ್ಲಿ ನಿಜವಿರುವುದು ಖಂಡಿತ. ರುದ್ರಣ್ಣ ದಿಗ್ಬಂಧಿಸಿದ ತಾಮ್ರದ ಬಿಂದಿಗೆ ಎಲ್ಲಿ ಹುದುಗಿಟ್ಟ ಎಂದು ಕೇಳಿ ತಿಳಿದುಕೊಂಡು ಅದನ್ನು ಹೊರ ತೆಗೆಯುವಂತೆ ಅದರ ಮೇಲೇನಾದರೂ ಇಡಿಸಿ ಬಿಡಬೇಕು ಎನಿಸಿತು.

ಲಲಿತಮ್ಮನವರಿಗೆ ಶಾಸ್ತ್ರಿಗಳು ಬಂದದ್ದು ಬಹಳ ಸಂತೋಷವಾಗಿತ್ತು. "ಹೇಗಿದ್ರೂ ಬಂದಿದ್ದೀರಿ. ಮಂಗಳಗೌರಿ ಪೂಜೇನ್ನ ಸುಮಂಗಲೀಸಂಗವಾಗ

ಮಾಡಿಸಿಬಿಡಿ. ಆಮೇಲೆ ಲಲಿತಾ ಸಹಸ್ರನಾಮ ಓದಿಸಿ ಪೂಜೆ ಮಾಡಿಸೋಣ"

"ಅದಕ್ಕೇನು ! ಅಗತ್ಯವಾಗಿ ಆಗಲಿ" ಎಂದರು.

ಅವರತ್ತ ಹೋಗುತ್ತಲೇ ತಲೆಗೆ ಮಫ್ಲರ್ ಸುತ್ತಿಕೊಂಡು ಲಾಂಗ್ ಕೋಟ್ ಹಾಕಿಕೊಂಡು ಬೆತ್ತಹಿಡಿದು ಹೊರಟ ತಂದೆಯನ್ನು ಲಲಿತಮ್ಮ ತಡೆದು ಕೇಳಿದರು.

"ಮೊದ್ಲೇ ಹೊರಗೆ ಥಂಡಿ. ಚಳಿ, ಇಷ್ಟು ಹೊತ್ನಲ್ಲಿ ಎಲ್ಲಿಗೆ ಹೊರಟಿ ಅಪ್ಪಾ ?"

"ಇಲ್ಲೆ ಹೀಗೆ ಹೋಗ್ಬಿಟ್ಟು ಬರ್ತೀನಿ ? ಯಾರ್ನೋ ನೋಡ್ಬೇಕಾಗಿತ್ತು." ರಾಮಲಿಂಗಯ್ಯ ಕೈಯಿನ ಬೆತ್ತ ಊರುತ್ತಾ ಮನೆಬಿಟ್ಟು ಹೊರಟಾಗ ವರ್ಧಮಾನ ರೇಗಿದ.

"ಯಾಕಮ್ಮಾ ತಾತ ಈ ವಯಸ್ನಲ್ಲಿ ಹೀಗೆ ಅಲ್ಲಿ ಇಲ್ಲಿ ಅಲೆಯೋಕ್ಕೆ ಹೋಗ್ತಾರೆ ? ಕಾರಿದೆ ಅದ್ರಲ್ಲಿ ಹೋಗ್ಬಾರ್ದಾ ?"

"ಅವರಿಗೆ ಯಾರು ಬುದ್ಧಿ ಹೇಳ್ತಾರೆ ಹೇಳು. ವಯಸ್ಸಾದವರೇ ಹೀಗೆ. ಏನೋ, ತಮ್ಮಾದೇ ಆದ ಒಂದು ನಡೆ ನಡಿ ಮಾಡ್ಕೊಂಡುಬಿಡ್ತಾರೆ. ನಾನೂ ಹೇಳಿಯಾಯ್ತು. ಆದ್ರೆ ನನ್ನ ಮಾತು ಎಲ್ಲಿ ಕೇಳ್ತಾರೆ !" ಲಲಿತಮ್ಮ ಉತ್ತರಿಸಿದರು.

"ಅದ್ಸರಿ. ತಾತಾ ಎಲ್ಲಿಗೆ ಹೋಗ್ತಾರೇಂತಾ ಪತ್ತೆ ಮಾಡ್ಬೇಕಲ್ಲಾ !"

ವರ್ಧಮಾನ ಹೇಳಿದಾಗ ಲಲಿತಮ್ಮ ಎಚ್ಚರಿಸಿದರು : "ಸಧ್ಯ ಆ ಕೆಲ್ಸ ಮಾಡೀಯಾ. ತಾತಾರಿಗೆ ಗೊತ್ತಾದ್ರೆ ರೇಗಾಡಿ ಬಿಡ್ತಾರೆ. ಎಲ್ಲಾದ್ರೂ ಹೋಗ್ಲಿ ಬಿಡೂ-"

ನೂಪುರನೊಂದಿಗೆ ಸಿನೆಮಾಗೆ ಹೊರಟಿದ್ದ ವರ್ಧಮಾನ ಕಾರು ಹತ್ತುತ್ತಾ ನೂಪುರಳಿಗೆ ಹೇಳಿದ.

"ಹೀಗೇ ಹೋಗ್ತಾ ತಾತಾ ಎಲ್ಲಿಗೆ ಹೋಗ್ತಾರೆ ನೋಡೋಣ-"

"ಬೇಡಾರೀ ಅತ್ತೆ ಹೇಳಲಿಲ್ವಾ ?"

"ಈ ವಯಸ್ನಲ್ಲಿ ಅವ್ರು ಯಾವ ಗುಟ್ಟಿನ ಸ್ಥಳಕ್ಕೆ ಹೋಗ್ತಾರೆ ನೋಡ್ಲೇ ಬೇಕು !"

"ಪಿಕ್ಚರ್‌ಗೆ ಹೊತ್ತಾಗಲ್ವಾ ?"

"ಪರ್ವಾಗಿಲ್ಲ-ಒಂದು ಚೂರು ಮಿಸ್ ಆಗ್ಬೋದೂ !"

"ವರ್ಧಮಾನ ಕಾರನ್ನು, ರಾಮಲಿಂಗಯ್ಯನವರು ಹೋದ ರಸ್ತೆಯತ್ತ

ತಿರುಗಿಸಿದ. ದೊಡ್ಡರಸ್ತೆ ಕಿರಿದಾಗುತ್ತಾ ಗಲ್ಲಿಯೊಂದರ ಬಳಿ ರಾಮಲಿಂಗಯ್ಯನವರು ತಿರುಗಿದುದನ್ನು ನೋಡಿದ–ಗಲ್ಲಿಯ ಹೆಸರನ್ನೂ ನೋಡಿಕೊಂಡು ಕಾರನ್ನು ಥಿಯೇಟರಿನತ್ತ ತಿರುಗಿಸಿದ ಅವನಿಗೆ ಚಿತ್ರ ನೋಡಲು ಮನಸ್ಸೇ ಬಾರದಾಯಿತು. ತಾತಾ ಆ ಗಲ್ಲಿಯಲ್ಲಿ ಯಾರನ್ನು ನೋಡಲು ಹೋಗಿರಬಹುದು. ಅವರ ಯೌವನದಲ್ಲಿ ಯಾರನ್ನಾದರೂ ಇಟ್ಟುಕೊಂಡಿರಬಹುದು. ಈ ವಯಸ್ಸಿನಲ್ಲಿ ಆ ಹಳೆಯ ನೆನಪನ್ನು ಕೆದಕಿಕೊಂಡು ಹೋಗಿರಬಹುದೇ ? ನಾಳೇನೋ ನಾಡಿದ್ದೊ ಹೋಗಿ ನೋಡಿ ಬರಬೇಕು. ಇಂಟರ್‌ವೆಲ್‌ನಲ್ಲಿ ನೂಪುರಳನ್ನು ಎಬ್ಬಿಸಿಕೊಂಡು ಬಂದುಬಿಟ್ಟ.

"ನಂಗ್ಯಾಕೋ ತಲೆನೋವು. ಮನೆಗೆ ಹೊರಟುಹೋಗೋಣ"

"ಸರಿ"

ನೂಪುರ ಒಲ್ಲದ ಮನಸ್ಸಿನಿಂದ ಹೊರಟಳು.

ಅವನು ಮನೆಗೆ ಬಂದಾಗ ರಾಮಲಿಂಗಯ್ಯನವರು ಇನ್ನೂ ಬಂದಿರಲಿಲ್ಲ.

ನೂಪುರ ರೂಮಿಗೆ ಬಟ್ಟೆ ಬದಲಿಸಲು ಹೊರಟಾಗ ತಾಯಿಯ ಬಳಿ ಬಂದು ಕುಳಿತ.

"ಅವಮ್ಮಾ ತಾತಾ ಆ ಗಲ್ಲಿಗೆ ಯಾಕೆ ಹೋಗ್ತಾರೆ ? ಅಲ್ಲಿ ಯಾರಿದ್ದಾರೆ. ಅವರ ಫ್ರೆಂಡು ಯಾವ್ದಾದ್ರೂ ಹಳೇ ಸ್ನೇಹ ಸಂಬಂಧ ಇದೆಯಾ ?"

"ಥೂ ಹೋಗೋ ಏನೇನೋ ಮಾತಾಡ್ಬೇಡಾ. ಅಪ್ಪಂದು ನೂರಾರು ವ್ಯವಹಾರಗಳಿದ್ದವು. ಅದ್ರಿಂದಾನೇ ಅಷ್ಟೆಲ್ಲಾ ಆಸ್ತಿ ಮಾಡಿದ್ದು ಯಾವ್ದೋ ವಸೂಲಿಗೆ ಹೋಗಿರಬಹುದು."

"ಅವರ್‍ಯಾಕೆ ಹೋಗ್ಬೇಕೂ ? ಕಳಿಸ್ಬಾರ್ದಾ ?"

"ಹಿಂದಿನ ಕಾಲ್ದೋರೇ ಹಾಗೆ. ತಮ್ಮ ಕೆಲ್ಸ ತಾವೇ ಮಾಡ್ಬೇಕೂ"

"ಅದ್ಸರಿ ಇನ್ನು ಯಾಕೆ ಬಂದಿಲ್ಲ. ಮೊದ್ಲೇ ಕಣ್ಣು ಸರಿಯಾಗಿ ಕಾಣಿಸೋಲ್ಲ. ದಾರಿ ಗೀರಿ ತಪ್ಪಿಬಿಟ್ರೊ ಗೊತ್ತಾಗೋಲ್ಲ. ನಾನು ಹೋಗಿ ನೋಡ್ಕೊಂಡು ಬರ್ತೀನಿ"

"ಬೇಡ್ಕೋ. ಅವ್ರು ಬಂದೇ ಬರ್ತಾರೆ : ನೀನು ಎಲ್ಲಿಂತ ಹುಡುಕ್ತೀ ?"

"ಇಲ್ಲಮ್ಮಾ, ನಾನು ಆ ಗಲ್ಲಿ ಕಡೆ ತಿರುಗಿದ್ದು ನೋಡ್ದೆ. ನಾಳೆ, ನಾಡಿದ್ರಲ್ಲಿ ತಾತಾ ಯಾರ್ನ ನೋಡೋಕ್ಕೆ ಹೋಗಿದ್ರೂಂತಾ ತಿಳ್ಕೋಬೇಕು. ಲಲಿತಮ್ಮನಿಗೆ ತಮ್ಮ ತಂದೆ ಗಲ್ಲಿಯತ್ತ ಹೋಗಿದ್ದರೆಂದರೆ ತಿಳಿದಿತ್ತು. ಅವರು

ರುದ್ರಣ್ಣನನ್ನು ನೋಡಲೇ ಹೋಗಿರಬೇಕು. ಆದರೆ ಏಕೆಂದು ಅವರಿಗೆ ತಿಳಿದಿರಲಿಲ್ಲ.

* * * *

ರಾಮಲಿಂಗಯ್ಯನವರು ರುದ್ರಣ್ಣನ ಮನೆಗೆ ಬಂದು ಬಾಗಿಲು ತಟ್ಟಿದರು. ರುದ್ರಣ್ಣ ದಿಗ್ಬಂಧಿಸಿ ತೆಗೆದುಕೊಂಡು ಹೋಗಿ ಆಗಲೇ ಎರಡು ತಿಂಗಳ ಮೇಲಾಗಿತ್ತು. ಮತ್ತೆ ಅವನು ಬಂದಿರಲಿಲ್ಲ. ತಾವೂ ನೋಡಲು ಹೋಗಿರಲಿಲ್ಲ. ಸಭಾಪತಿ ಶಾಸ್ತ್ರಿಗಳು ಹೇಳಿದುದನ್ನು ತಾವು ಖಚಿತಪಡಿಸಿ ಕೊಳ್ಳಬೇಕು. ಅವನು ಅದನ್ನು ಸರಿಯಾಗಿ ಹೇಳದಿದ್ದಲ್ಲಿ ಅವನಿಗೊಂದಿಷ್ಟು ಹಣ ಕೊಟ್ಟು ಆ ತಾಮ್ರದ ಬಿಂದಿಗೆಯನ್ನು ಬೇರೆಡೆ ಯಾರಿಗೂ ಸಿಗದಂತೆ ಹೂತಿಡಿಸಬೇಕು! ರುದ್ರಣ್ಣ ಒಳಗೆ ಇರಬಹುದು. ಯಾರೂ ಬಂದು ಬಾಗಿಲು ತೆಗೆಯದಿದ್ದುದು ಕಂಡು ಮತ್ತೆ ಬಾಗಿಲು ತಟ್ಟಿದರು. ಯಾರೂ ಉತ್ತರಿಸಲಿಲ್ಲ. ಅಷ್ಟು ಹೊತ್ತಿಗೆ ಪಕ್ಕದ ಮನೆಯಲ್ಲಿನ ಲಿಂಗಾಚಾರಿ ಹೊರ ಬಂದ.

"ಎಲ್ಲಿ ರುದ್ರಣ್ಣ ಮನೆಯಲ್ಲಿಲ್ಲವೇ?"

"ಇದ್ದಾನೆ ಸಾವ್ಕಾರ್ರೇ. ಆದ್ರೆ ಸಖತ್ ಕಾಯಿಲೆ ಅವನ್ಗೆ"

"ಏನಾಯ್ತು? ಹೋದ್ಸಲ ಬಂದಾಗ ಚೆನ್ನಾಗಿದ್ನಲ್ಲಾ!"

"ಏನ್ಹೇಳ್ಲಿ ಸಾವ್ಕಾರೇ, ಅವ್ನ ಜತೆಗಿದ್ದ ವೀರಭದ್ರ ಹೇಳ್ದೆ ಕೇಳ್ದೆ ಇರೋದ್‌ಲ್ಲಾ ದೋಚ್ಕೊಂಡು ಓಡಿಹೋಗ್ಬಿಟ್ಟ. ಅವ್ನ ಜೊತೆಗಿದ್ದ ಹೆಂಗ್ಸೂ ಓಡಿಹೋಗ್ಬಿಟ್ಲು, ಈಗ ರುದ್ರಣ್ಣ ಸೀಕಲು ಕಡ್ಡಿಯಾಗಿ ಬಿಟ್ಟಿದ್ದಾನೆ. ವೀರಭದ್ರ ಅವ್ನಿಂದ ಕಲಿತ ವಿದ್ಯೆಯನ್ನ ತನ್ನ ಗುರುವಿನ ಮೇಲೆ ಪ್ರಯೋಗಿಸಿಬಿಟ್ಟಿದ್ದಾನೆ. ಮಾಟ ಮಾಡಿದ್ದಾನೆ ಅಂತಾರೆ."

ರಾಮಲಿಂಗಯ್ಯನವರಿಗೆ ಒಂದು ಕ್ಷಣ ದಿಕ್ಕೇ ತೋಚದಂತಾಯಿತು. ಹಾಗಾದ್ರೆ ಮನೇಲಿ ಅವ್ನ ನೋಡ್ಕೊಳೋಕ್ಕೆ ಯಾರಿದ್ದಾರೆ?"

"ಅವ್ನ ಹೊತ್ನಾಗ ಬಂದು ಎರಡು ಹೊತ್ತು ಗಂಜಿ ಕುಡಿಸಿ ಹೋಗ್ತಾನೆ. ಯಾರೂ ಅವನ್ಜೊತೆ ಇರೋಲ್ಲ. ಅವ್ನ ಮಂತ್ರ ತಂತ್ರದ ಸಾಮಾನೆಲ್ಲಾ ಇರ್ಬೇಕಾದ್ರೆ ಯಾರೂ ಇರೋಕ್ಕೆ ತಯಾರಿಲ್ಲ! ಬಾಗ್ಲು ತೆಗ್ದೇ ಇರುತ್ತೆ"

"ನಾನು ಒಳಗ್ಹೋಗಿ ನೋಡ್ಬೋದಾ?"

"ನಿಮ್ಮಿಷ್ಟ ಸಾವ್ಕಾರ್ರೇ !"

* * * *

ರಾಮಲಿಂಗಯ್ಯನವರು ಮುಚ್ಚಿದ ಬಾಗಿಲನ್ನು ಬಲವಾಗಿ ನೂಕಿದರು. ಬಾಗಿಲು ತೆರೆದುಕೊಂಡಿತು. ಒಳಗೇನಿದೆಯೆಂದು ತಿಳಿಯದಷ್ಟು ಕತ್ತಲು. ಹೊರಗಿನ ಪ್ರಕಾರ ಬೆಳಕಿನಿಂದ ಒಳಗಿರುವುದನ್ನು ನೋಡಲು ಸಾಧ್ಯವಿರಲಿಲ್ಲ. ಕತ್ತಲಲ್ಲೇ ತಡಕಾಡುತ್ತಾ ಕೂಗಿದರು.

"ರುದ್ರಣ್ಣಾ, ರುದ್ರಣ್ಣಾ-ನಾನು ಸಾವ್ಕಾರ್ರು ಬಂದಿದ್ದೀನಿ"

ಜೋರಾಗಿ ಉಸಿರಾಡುವುದೊಂದೇ ಅವರಿಗೆ ಕೇಳಿಸಿದ್ದು, ಆ ಸದ್ದಿನ ಜಾಡು ಹಿಡಿದು ಕಣ್ಣು ಕಿರಿದು ಮಾಡಿ ನೋಡಿದರು. ಮಂಚದ ಬಳಿಗೆ ಬಂದರು. ಕತ್ತಲಿಗೆ ಅವರ ದೃಷ್ಟಿ ಹೊಂದಿಕೊಳ್ಳುತ್ತಾ ಬಂದಿತ್ತು. ಅಲ್ಲಿಯೇ ಮುರಕಲು ಸ್ಟೂಲಿನ ಮೇಲೆ ಹರಳೆಣ್ಣೆ ದೀಪ ಒಂದು ಬೆಂಕಿ ಪೆಟ್ಟಿಗೆಯಿತ್ತು. ಅವರೇ ಬೆಂಕಿ ಕಡ್ಡಿ ಗೀರಿ ದೀಪ ಹೊತ್ತಿಸಿದರು. ಆ ಮಬ್ಬು ಬೆಳಕಲ್ಲಿ ರುದ್ರಣ್ಣನನ್ನು ನೋಡಿದಾಗ ಅವರಿಗೇ ಭಯವಾಯಿತು. ಅಸ್ಥಿಪಂಜರದಂತಾಗಿಹೋಗಿದ್ದ ಕಣ್ಣುಗಳು ಪಾತಾಳಕ್ಕಿಳಿದಿದ್ದವು.

"ಯಾಕೆ ಹೀಗಾಗಿ ಹೋಗಿದ್ದೀ? ನಡೀ ಡಾಕ್ಟ್ರರನ್ನ ಕರೆಸಿ ತೋರಿಸ್ತೀನಿ"

ಅವನು ಬೇಡವೆನ್ನುವಂತೆ ತಲೆಯಾಡಿಸಿದ. ಕಣ್ಸನ್ನೆ ಮಾಡಿ ಕಿಟಕಿಯ ಮೇಲಿದ್ದ ಲೋಟ ತೋರಿದ ಅದರಲ್ಲಿ ತಣ್ಣಗೆ ಹಳಸಿದ್ದ ಗಂಜಿಯಿತ್ತು. ಬಾಯಿಗೆ ಹಾಕುವಂತೆ ಸಂಜ್ಞೆ ಮಾಡಿದ. ರಾಮಲಿಂಗಯ್ಯನವರು ಆ ಗಂಜಿಯನ್ನೇ ಅವನ ಒಣಗಿಹೋಗಿದ್ದ ಬಾಯಿಗೆ ಸುರಿದರು. ಅವನು ಸ್ವಲ್ಪ ಸುಧಾರಿಸಿಕೊಂಡ. ಕ್ಷೀಣವಾದ ದನಿಯಲ್ಲಿ ಹೇಳಿದ "ಬೆಳಗ್ನಿಂದ ಕೈಕಾಲೂ ಮರಗಟ್ಟಿಹೋಗಿದೆ. ನಾಳೆತನ್ಕ ನಾನು ಬದುಕಿ ಉಳಿಯೋಲ್ಲ-"

"ಹಾಗನ್ಬೇಡಾ-ಡಾಕ್ಟರನ್ನ ಕರೆತರ್ತೀನಿ ಎಲ್ಲಾ ಸರಿಹೋಗುತ್ತೆ"

"ಬೇಡಾ ಸಾವ್ಕಾರ್ರೇ ನನ್ನ ಕಥೆ ಮುಗೀತು" ರುದ್ರಣ್ಣ ಮೇಲುಸಿರುಡುತ್ತಾ ನುಡಿದ. "ಆ ವೀರಭದ್ರನ್ನ ಇಟ್ಕೊಂಡಿದ್ದು ವಿಷನಾಗರ ಇಟ್ಕೊಂಡಂಗಾಯ್ತು. ಒಳಗೇ ಸೇರ್ಕೊಂಡು, ಎಲ್ಲಾ ಗುಟ್ಟೂ ತಿಳ್ಕೊಂಡು ನನ್ನೆದುರು ಪಾರ್ಟಿಯವರೊಂದಿಗೆ ಸೇರ್ಕೊಂಡ್ಬಿಟ್ಟಿದ್ದಾನೆ. ನನ್ನ ಹಣ, ಅಮೂಲ್ಯ ಗ್ರಂಥಗಳು. ಮಂತ್ರಗಳು ಎಲ್ಲಾ ಕಟ್ಕೊಂಡು ಓಡಿಹೋಗ್ಬಿಟ್ಟ. ನನ್ನ ಭೈರವೀನೂ ಅವ್ನ ಹಿಂದೇನೇ ಓಡಿಹೋಗಿರ್ಬೇಕೂ. ಅವ್ರೆಲ್ಲಾ ಸೇರ್ಕೊಂಡೇ ನನ್ನ ಈ ಗತಿಗೆ ತಂದುದ್ದು!"

"ನಿನಗೆ ಎದುರು ಪಾರ್ಟಿಯವರು ಯಾರಿದ್ದಾರೆ ರುದ್ರಣ್ಣ–ನೀನು ಯಾರಿಗೂ ಕೇಡು ಬಯಸಿರಲಿಲ್ಲ–!"

"ನಿಮ್ಮ ಮನೆಯಿಂದ ದಿಗ್ಬಂಧನ ಮಾಡಿ ಮಣ್ಣಲ್ಲಿ ಹೂತಿದ್ದನ್ನ ಯಾರೋ ನೋಡಿಬಿಟ್ಟಿದ್ದಾರೆ. ನೀವು ಕೊಟ್ಟಿದ ಒಡವೆಗಳಲ್ಲಿ ಒಂದೇ ಒಂದು ಬಳೆ ಬಳಸ್ಕೊಡಿದ್ದೆ. ಮಿಕ್ಕಿದ್ದೆಲ್ಲಾ ಅಲ್ಲೇ ಇತ್ತು. ಮಾರನೇ ದಿನ ಹೋಗಿ ನೋಡೋದ್ರಲ್ಲಿ ಆ ತಾಮ್ರದ ಬಿಂದಿಗೇನೂ ಇಲ್ಲ. ಒಡವೆ ಹಣ ಯಾವ್ದೂ ಇಲ್ಲ. ಅದ್ನ ಕದ್ದಿರೋದಲ್ದೇ ನಂಗೇ ಮಾಟಮಾಡಿದ್ದಾರೆ. ನಾನೇ ಬಂದು ಹೇಳ್ಬೇಕೂಂತಾ ಇದ್ದೆ. ಕೈಲಾಗಲಿಲ್ಲ. ವರದಾಚಾರಿ ಎಲ್ಲಿದ್ರೂ ಹುಡುಕಿ ಆ ಪ್ರೇತಾತ್ಮನ್ನ ಮುಗಿಸಿಬಿಡಿ. ದಿಗ್ಬಂಧನದಿಂದ ಹೊರಗೆ ಬಂದ್ರೆ ಮತ್ತೆ ನಿಮ್ಮ ಮನೇನ್ನ ಎರಡಷ್ಟು ರೋಷದಿಂದ ಆಡಿಸೋಕ್ಕೆ ಪ್ರಾರಂಭ ಆಗುತ್ತೆ....!" ರುದ್ರಣ್ಣನಿಗೆ ಮಾತನಾಡಲು ಪ್ರಯಾಸವಾಯಿತು. ರಾಮಲಿಂಗಯ್ಯನವರು ಮತ್ತಷ್ಟು ಗಂಜಿ ಕುಡಿಸಿದರು, ಆ ಗಂಜಿ ಗಂಟಲಿಗೇ ಇಳಿಯದಾಯಿತು. ರುದ್ರಣ್ಣ ಕೇಲ್ಗಣ್ಣು ಮಾಡಿದ. ರುದ್ರಣ್ಣ ಹೇಳುವುದೆಲ್ಲಾ ಹೇಳಿಯೇ ಸಾಯಬೇಕು, ಇಲ್ಲದಿದ್ದರೆ ತಮ್ಮ ಮುಂದಿನ ದಾರಿ ಕಷ್ಟವಾಗುವುದೆಂದು ತಿಳಿದರು. ಕೂಡಲೇ ಅವರು ಪಕ್ಕದ ಮನೆಗೆ ಹೋಗಿ ಕೇಳಿಕೊಂಡರು.

"ರುದ್ರಣ್ಣಂಗೆ ತುಂಬಾ ಸುಸ್ತಾಗಿದೆ. ಈ ಕೂಡ್ಲೇ ಹೋಗಿ ಡಾಕ್ಟರ್ನ ಕರ್ಕೊಂಡು ಬರ್ತೀನಿ. ಅಲ್ಲೀವರ್ಗೂ ಯಾರಾದ್ರೂ ಅವನ್ಹತ್ರ ಇರಿ.... ಡಾಕ್ಟರ್ ಸಂಪತ್ ಮುಂದಿನ ರೋಡ್‌ನಲ್ಲಿದ್ದಾರಲ್ಲಾ ?"

"ಹೌದು ಸಾವ್ಕಾರ್ರೆ, ಆದ್ರೆ ಅವ್ರು ಹಾಗೆಲ್ಲಾ ಮನೆಗೆ ಬಂದು ನೋಡೋಲ್ಲ !"

"ನಾನು ಕರ್ಕೊಂಡು ಬರ್ತೀನಿ" ರಾಮಲಿಂಗಯ್ಯನವರು ಬೆತ್ತ ಹಿಡಿದು ಹೊರಟೇಬಿಟ್ಟರು.

ಅವರು ಡಾಕ್ಟರನ್ನು ಕರೆತಂದಾಗ ರುದ್ರಣ್ಣನಿಗೆ ಉಸಿರಾಡುವುದೇ ಪ್ರಯಾಸವಾಗಿತ್ತು. ಡಾಕ್ಟರಿಗೆ ಕೈತುಂಬಾ ಹಣವಿಟ್ಟು ಕರೆತಂದಿದ್ದರು. ಹಣವಿದ್ದರೆ ಏನು ಬೇಕಾದರೂ ಮಾಡಬಹುದೆಂದು ನಂಬಿದ್ದ ಅವರಿಗೆ ಈಗ ರುದ್ರಣ್ಣನನ್ನು ಉಳಿಸಿಕೊಳ್ಳಲು ತಾವೆಷ್ಟೇ ಖರ್ಚು ಮಾಡಿದರೂ ಸಾಧ್ಯವಿಲ್ಲವೆಂದು ಮನನವಾಯಿತು. ಡಾಕ್ಟರ್ ರುದ್ರಣ್ಣನನ್ನು ಕೂಲಂಕುಷವಾಗಿ ಪರೀಕ್ಷಿಸಿ ನೋಡಿ ತಲೆಯಾಡಿಸಿಬಿಟ್ಟರು.

"ಹೀ ಈಸ್ ಸಿಂಕಿಂಗ್. ಈಗ ನಾನೇನೂ ಮಾಡುವ ಹಾಗಿಲ್ಲ. ಬೇಕಾದರೆ ಅಂಬ್ಯುಲೆನ್ಸ್ ತರಿಸಿ ದೊಡ್ಡ ಆಸ್ಪತ್ರೆಗೆ ಕರ್‍ಕೊಂಡು ಹೋಗಿ. ಆದ್ರೆ ಆಸ್ಪತ್ರೆ ಸೇರಿಸೋವರ್‍ಗೂ ಬದ್ಕಿರ್ತಾನೇಂತಾ ಹೇಳೋಕ್ಕಾಗೋಲ್ಲ" ರಾಮಲಿಂಗಯ್ಯನವರು ರುದ್ರಣ್ಣನ ಮುಖದತ್ತ ಬಾಗಿದರು.

"ರುದ್ರಣ್ಣ ಆಸ್ಪತ್ರೆಗೆ ಸೇರಿಸ್ತೀನಿ. ಎಲ್ಲಾ ಸರಿಹೋಗುತ್ತೆ" ರುದ್ರಣ್ಣ ತಲೆಯಾಡಿಸಿದ. ಕುಡಿಯಲು ನೀರು ಕೊಡುವಂತೆ ಸಂಜ್ಞೆ ಮಾಡಿದ.

ಅವನ ಬಾಯಿಗೆ ಒಂದೆರಡು ಚಮಚ ನೀರು ಹಾಕಿದರು. ರುದ್ರಣ್ಣ ಅತಿ ಪ್ರಯಾಸದಿಂದ ತುಟಿಯಾಡಿಸಿದ.

"ಆರನೇ ಮೈಲಿಕಲ್ಲು....ಮಾವಿನ ತೋಪಿನಪಕ್ಕ....ಹುಣಿಸೇಮರ, ದೊಡ್ಡ ಕರಿ ಸೈಜು ಕಲ್ಲು...."

ಅಷ್ಟು ಹೇಳುವುದರಲ್ಲಿ ಅವನ ಉಸಿರಾಟ ಕ್ಷೀಣವಾಗುತ್ತಾ ಬಂದಿತ್ತು. ನೋಡುತ್ತಿರುವಂತೆಯೇ ಕೊನೆಯ ದೀರ್ಘ ಉಸಿರುಬಿಟ್ಟು ಕಣ್ಮುಚ್ಚಿದ. ಡಾಕ್ಟರ್ ಅವನ ಕೈ ಹಿಡಿದು ನೋಡಿದರು, ಎದೆಗೆ ಸ್ಟೆತೋಸ್ಕೋಪಿಟ್ಟು ನೋಡಿದರು. ರಾಮಲಿಂಗಯ್ಯನವರತ್ತ ತಿರುಗಿದರು.

"ಆಯ್ತು ಕತೆ ಮುಗೀತು-ಇಂತಹವರಿಗೆ ಕೊನೆ ಹೀಗೇನೇ !"

"ಯಾರೋ ಮಾಟ ಮಾಡ್ಸಿದ್ದಾರೇಂತಾ ಹೇಳಿದ ರಾಮಲಿಂಗಯ್ಯ" ಹೇಳಿದಾಗ ಡಾಕ್ಟರ್ ನಕ್ಕರು.

"ಇವ್ನು ಎಷ್ಟು ಜನಕ್ಕೆ ಏನೇನು ದ್ರೋಹ ಮೋಸ ಮಾಡಿದ್ದಾನೋ, ಯಾವ ವಿದ್ಯೆ ಕಲಿತರೂ ಸದ್ವಿನಿಯೋಗವಾದರೆ ಸರಿ. ಕಲಿತ ವಿದ್ಯೆಯಿಂದ ಇನ್ನೊಬ್ಬರನ್ನು ಹಾಳುಮಾಡೋಕ್ಕೆ ನೋಡಿದ್ರೆ ಹೀಗೇ ನೋಡಿ. ಮಾಟಾನೂ ಇಲ್ಲ ಏನೂ ಇಲ್ಲ. ನಂಗನಿಸುತ್ತೆ ಯಾರೋ ಸ್ಲೋಪಾಯ್ಸನ್ ಮಾಡಿದ್ದಾರೆ, ಆಹಾರದಲ್ಲಿ ಸ್ವಲ್ಪ ಸ್ವಲ್ಪಾನೇ ವಿಷ ಸೇರಿಸ್ತಾ ಇದ್ರೆ ಗೊತ್ತಾಗೋದೇ ಇಲ್ಲ. ಏನೋ ಮನುಷ್ಯರಿಗೆ ಕಾಯಿಲೆ ಅನ್ಕೋತಾರೆ-"

"ಅವ್ನ ಹೆಂಡ್ತಿಗಾ ಬಿಟ್ಟು ಇಲ್ಲಿಗೆ ಯಾರೂ ಬರ್‍ತಾ ಇರ್‍ಲಿಲ್ಲ ಡಾಕ್ಟರ್. ಮನೆಯಿಂದ ಎರಡು ಹೊತ್ತು ಗಂಜಿ ತರೋನೂ-!"

"ಅವ್ನೇ ಹೇಗೆ ಹೇಳೋದೂ ಅದಕ್ಕೆಲ್ಲಾ ಬೇಕಾದಷ್ಟು ತಪಾಸಣೆ ಮಾಡಿ ನೋಡ್ಬೇಕಾಗುತ್ತೆ ಹೋಗ್ಲಿ ಬಿಡಿ ಅವನ ಮನೆಯವರಿಗೆ ತಿಳಿಸಿಬಿಡಿ. ನಾನು ಬರ್ತೀನಿ"

ಡಾಕ್ಟರ್ ಹೊರಟೇಹೋದರು.

ಆಗಲೇ ರುದ್ರಣ್ಣ ಸತ್ತ ಸಮಾಚಾರ ಕೇಳಿ ಅಕ್ಕಪಕ್ಕದವರೆಲ್ಲಾ ಸೇರಿದರು.

"ಇವ್ನ ಮನೆಗೆ ಹೋಗಿ ಯಾರಾದ್ರೂ ತಿಳಿಸಿಬನ್ನಿ"

ರಾಮಲಿಂಗಯ್ಯನವರು ಹೇಳಿದಾಗ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

"ಅವರ್ಮ್ಯಾನೆ ಇರೋದೂ ಕೋಡಿಹಳ್ಳಿ ಹತ್ರ. ಇಲ್ಲಿಂದ ಎರಡು ಬಸ್ಸು ಬದ್ಲಾಯಿಸ್ಬೇಕೂ!" ಒಬ್ಬ ಹೇಳಿದ.

"ಮತ್ತೇ ಈ ಹೆಣಾನಾ ಹೀಗೇ ಬಿಟ್ಟಿರಾವಾ?" ಮತ್ತೊಬ್ಬ ಹೇಳಿದ.

"ಇನ್ನೇನು ಹೀಗೇ ಇಲ್ಲಿ. ಹೇಗಿದ್ರೂ ಮೊಮ್ಮಗ ಸಾಯಂಕಾಲ ಗಂಜಿ ತರ್ತ್ತಾನಲ್ಲಾ, ಅವ್ನು ಬಂದಾಗ ಹೇಳಿದ್ರಾಯ್ತು!"

"ಅಲ್ಲಿವರ್ಗೂ ಈ ಹೆಣ ಇಲ್ಲಿ ಕೊಳೀತಾ ಬಿದ್ದಿದ್ರೆ ನಾವೆಲ್ಲಾ ಹೇಗೆ ಇರೋದೂ, ಸಾಲದಕ್ಕೆ ಒಳಗೆ ಏನೇನೋ ಪೂಜೆ ಮಾಡ್ತಾ ಇದ್ದ. ಅವನಿಟ್ಟಿರೋ ಅಸ್ತ್ರಿಗಳು, ಪ್ರೇತ ಪೂಜಾ ಸಾಮಾಗ್ರಿಗಳು ಎಲ್ಲಾ ಇವೆ. ಅವುಗಳ್ನ ಏನು ಮಾಡೋದೂ?" ಮತ್ತೊಂದು ದನಿ.

"ಹೋದ ತಿಂಗ್ಳು ಯಾವ್ದೋ ಹೆಂಗಸಿನ ಹೆಣಾನ ಗೋಣೀಚೀಲದಲ್ಲಿ ಕದ್ದು ತಂದು ಈ ಮನೇಲೇ ಎಲ್ಲೋ ಹೂಳಿದ್ದಾನೇಂತಾ ಆಚೆ ಬೀದಿ ಸುಂದರಪ್ಪ ಹೇಳ್ತಾ ಇದ್ದ...."

ಜನರ ಮಾತು ಕೇಳಿ ರಾಮಲಿಂಗಯ್ಯನವರಿಗೆ ರೋಸಿತು. ಮಾಡಬೇಕಾದ ಕೆಲಸ ಬಿಟ್ಟು ಈ ಮಾತುಗಳೇಕೆ?

"ನಾನು ಆಟೋ ಚಾರ್ಜು ಕೊಡ್ತೀನಿ–ದಯವಿಟ್ಟು ಹೋಗಿ ಮನೆಯಿಂದ ಯಾರ್ನಾದ್ರೂ ಕರ್ಕೊಂಡ್ಬನ್ನಿ" ಯಾರೂ ತುಟಿಪಿಟಕ್ಕನ್ನಲಿಲ್ಲ.

"ಹೋಗ್ಲಿ ಬಿಡಿ. ಮನೆ ಎಲ್ಲೀಂತಾ ಸರ್ಯಾಗಿ ವಿಳಾಸ ಹೇಳಿ, ನಾನೇ ಕರ್ಕೊಂಡು ಬರ್ತೀನಿ. ನೆರೆಹೊರೆ ಅಂದ್ಮೇಲೆ ಒಬ್ಬರಿಗೊಬ್ಬರು ಆಗ್ದೆ ಇದ್ರೆ ಹೇಗೆ? ರುದ್ರಣ್ಣನ ವೃತ್ತೀನೇ ಅದು-ನೀವುಗಳು ಯಾವಾಗ್ಲಾದ್ರೂ ಅವನತ್ರ ಬಂದಿರ್ಬೋದೂ- ಇರೋವರ್ಗೂ ದ್ವೇಷ, ರೋಷ, ಹೇಸಿಗೆ, ಕೋಪ ಎಲ್ಲಾ ಸತ್ಮೇಲೇನಿದೆ?–"

"ಸಾವ್ಕಾರ್ರೇ ತುಂಬಾ ದೂರಾ. ಅದೂ ಅಲ್ದೇ ಅವನ್ಹೆಂಡ್ತೀಗೆ ಅವನ್ನ ಕಂಡ್ರೆ ಆಗ್ತಾ ಇರ್ಲಿಲ್ಲ, ಅವ್ನ ವಾವಾಚಾರಾ ಮಾಡೋದೇ ಅವಳಿಗಿಷ್ಟ ಇರ್ಲಿಲ್ಲ. ಬೈರವೀಂತಾ ಅದ್ಯಾವ್ಳೋ ಹೆಂಗಸ್ನ ಕರ್ಕೊಂಡು ಬಂದಿಟ್ಕೊಂಡಾಗ್ಲಿಂದ ಅವ್ನು ಈ ಕಡೆ ಮುಖ ಇಡ್ಲಿಲ್ಲ. ಸಾವ್ಕಾರು ಹೋಗಿ ಹೇಳಿದ್ರೆ ನಮ್ಗೇ ಉಗಿದು ಕಳಿಸ್ತಾಳೇನೋ!" ರಾಮಲಿಂಗಯ್ಯನವರು ಜೇಬಿನಿಂದ ಪೆನ್ನು ಸಣ್ಣ ಡೈರಿ ತೆಗೆದರು.

"ಹೇಳಿ ಅಡ್ರೆಸ್ಸು. ನಾನೇ ತಿಳಿಸಿಬರ್ತೀನಿ."

"ಪಾಪ, ಮುದುಕರು"ಅವರ್ನ್ಯಾಕೆ ಕಳಿಸ್ತೀರಿ–ಬೇರೆ ಯಾರಾದ್ರೂ ಹೋಗ್ತಾರ್ಾ? ಲೋ ಕರಿಸಿದ್ದ ನೀನೇ ಹೋಗಿ ಹೇಳ್ಬಾರದೋ–ಯಾವಾಗ್ಲೂ ಮಗೂಗೆ ಬಾಲಗ್ರಹಾಂತ ರುದ್ರಣ್ಣನ ಹತ್ರ ಕರ್ಕೊಂಡು ಹೋಗ್ತಿದ್ದೀ.... ನಿಂಗೆ ಪುಕ್ಕಟೇ ಅವ್ನು ಎಲ್ಲಾ ಕೊಡ್ತಾ ಇದ್ದ!"

ಕರಿಸಿದ್ದನತ್ತ ರಾಮಲಿಂಗಯ್ಯನವರು ನೋಡಿದರು. ಕೆದರಿದ ತಲೆ, ಹರಕಲು ಷರಟು, ಕುರುಚಲು ಗಡ್ಡದ ಕುಳ್ಳಗಿನ ವ್ಯಕ್ತಿ.

"ಅವನ್ಗೆ ಕುಡ್ಯಾಕೇ ದುಡ್ಡು ಸಾಲ್ದು, ರುದ್ರಣ್ಣಂಗೆ ದುಡ್ಡು ಎಲ್ಲಿಂದ ಕೊಡ್ತಾ ಇದ್ದ!"

ಕರಿಸಿದ್ದ ತಲೆಪರಪರನೇ ಕೆರೆದುಕೊಂಡ. "ಅಲ್ಲಿಗೋಗಿ ತಿಳಿಸಿ ಬರಾಕೆ ನನ್ತಾವ ದುಡ್ಡಿಲ್ಲ."

ರಾಮಲಿಂಗಯ್ಯನವರು ಅವನ ಮುಂದೆ ಹತ್ತರ ಎರಡು ನೋಟು ಹಿಡಿದರು.

"ಹೋಗು ಹೇಳಿಬಾ"

"ಅಯ್ಯೋ ಸ್ವಾಮಿ ಅಷ್ಟೊಂದು ಕೊಟ್ಬಿಟ್ರೆ ರುದ್ರಣ್ಣನ ಮನೆಗೆ ಹೋಗೋ ಬದ್ಲು ಶೇಂದಿ ಅಂಗಡಿಗೆ ಹೊರಟುಹೋಗ್ತಾನೆ. ಒಂದೆರಡು ರೂಪಾಯಿ ಕೊಟ್ಬರಿ. ಬಂದ್ಮೇಲೆ ಬೇಕಾದ್ರೆ ಖುಷಿಗೆ ಕೊಡಿ ಕುಡ್ಕೋಳ್ಲಿ"

ಅಂತೂ ಕೊನೆಗೆ ಕರಿಸಿದ್ದನನ್ನು ಕಳಿಸಿ ರಾಮಲಿಂಗಯ್ಯನವರು ಅಲ್ಲಿಯೇ ಕುಳಿತರು.

"ನೀವು ಹೋಗಿ ಸಾವ್ಕಾರ್ರೇ ನಾವಿರ್ತೀವಿ" ಅಲ್ಲಿದ್ದವರು ಹೇಳಿದರೂ ಕೇಳಲಿಲ್ಲ. ತಮ್ಮ ಕಣ್ಣೆದುರೇ, ತಮ್ಮ ಕೈಯಲ್ಲಿ ಗಂಜಿ ನೀರು ಕುಡಿದು ಸತ್ತ. ಅವನ ಮನೆಯವರಿಗೆ ಹಣ ಒಪ್ಪಿಸಿ, ಅದರ ಕರ್ಮದ ಖರ್ಚನ್ನೂ ತಾವು ಕೊಟ್ಟುಬಿಡಬೇಕೆಂದು ಅವರು ಕುಳಿತಿದ್ದರು. ಅದಕ್ಕೆ ಬಲವಾದ

ಕಾರಣವಿತ್ತು. ರುದ್ರಣ್ಣ ತಮ್ಮ ಮನೆಯಲ್ಲಿ ನಡೆಯುತ್ತಿದ್ದ ಭೂತಚೇಷ್ಟೆ ನಿಲ್ಲಿಸಿದ್ದ. ಆದರೆ ಅದು ಮತ್ತೆ ಪ್ರಾರಂಭವಾಗುವುದೆಂದರೆ ಅವನೇ ಬರ ಬೇಕಿತ್ತು. ಈಗ ಸತ್ತು ಶವವಾಗಿದ್ದಾನೆ. ಅವನಿಗಾಗದವರು ಅವನಿಗೆ ಮಾಟ ಮಾಡಿಸಿದ್ದಾರೆ ಎಂದಿದ್ದ. ಈಗ ಅವನು ಸತ್ತಿರುವುದು ಕೇಳಿ ಆ ವ್ಯಕ್ತಿ ಬಂದರೂ ಬರಬಹುದು. ಅಲ್ಲದೇ ಅವನು ಅರ್ಥಂಬರ್ಥ ತಮಗೇನೋ ಹೇಳಲು ಯತ್ನಿಸಿದ್ದ ಮೈಲಿಕಲ್ಲು–ಮಾವಿನ ತೋಪು-ಹುಣಿಸೇ ಮರ–ಸೈಜುಕಲ್ಲು....!"

* * * *

ಕರಿಸಿದ್ದ ರುದ್ರಣ್ಣನ ಇಬ್ಬರು ಗಂಡು ಮಕ್ಕಳೊಂದಿಗೆ ಬರುವಷ್ಟರಲ್ಲಿ ಆಗಲೇ ಸೂರ್ಯ ದಿಗಂತದಾಚೆಗೆ ಕೆಳಗಿಳಿಯುತ್ತಿದ್ದ. ರಾಮಲಿಂಗಯ್ಯನವರಿಗೆ ಹಸಿವು ಬಾಯಾರಿಕೆ ಆಯಾಸ ಎಲ್ಲವೂ ಮರೆತುಹೋಗಿತ್ತು. ಯಾರೋ ಅವರ ವಯಸ್ಸು, ಅಂತಸ್ತು ನೋಡಿ ಒಂದು ಲೋಟ ಪಾನಕ ತಂದಿತ್ತಿದ್ದರು. ಮತ್ಯಾರೋ ಎರಡು ಬಾಳೆಹಣ್ಣು ತಂದಿತ್ತಿದ್ದರು.

ರುದ್ರಣ್ಣನ ಮಕ್ಕಳಿಬ್ಬರೂ ತಂದೆಯ ಶವ ನೋಡಿ ಅಳಲಿಲ್ಲ. ದುಃಖಿಸಲಿಲ್ಲ.

"ನಾವು ಈ ಹೆಣ ಸಾಗ್ಸೋಕೆ ಮುಂಚೆ ಬೇರೆಯಾರಾದ್ರೂ ಮಾಂತ್ರಿಕನ್ನ ಕರೆಸಿ, ಪೂಜೆ ಸಾಮಾಗ್ರಿ ಹೊರಗೆ ತೆಗೆಸಿ, ಒಳಗಿರಾ ಶಕ್ತಿಗಳ್ನೆಲ್ಲಾ ಬಿಡಿಸಿ ಹಾಕಿಸ್ಬೇಕೂ."

"ಹಾಗಂದ್ರೆ ಹೇಗ್ರಪ್ಪಾ. ಅಷ್ಟೊತ್ತಿಂದ ಹೆಣ ಕಾಯ್ತಾ ಬಿದ್ದಿದೆ. ಕತ್ಲಾಗೋದ್ಮೇಲೆ ಯಾವಾಗ ಸುಡೋದೂ?" ಯಾರೋ ಹಿರಿಯರೊಬ್ಬರು ಹೇಳಿದರು.

"ಪಾಪ, ಆ ಮುದುಕರೂ ನೀವು ಬರ್ಲೀಂತಾ ಕಾದಿದ್ದಾರೆ! ನಾವೆಲ್ಲಾ ಇಲ್ಲಿ ಹೇಗಿರೋದೂ?"

"ನಾವೇನು ಮಾಡೋಕ್ಕಾಗುತ್ತೆ, ಈ ಹೆಣ್ನ ನಾವು ಮನೆಗೆ ತೊಗೊಂಡು ಹೋಗೋ ಹಾಗಿಲ್ಲ. ಮಾಂತ್ರಿಕನೇ ಬರ್ಬೇಕೂ-ಅವನ ಕರ್ಮ ಮಾಡೋ ರೀತೀಲೇ ಮಾಡ್ಬೇಕೂ!" ರುದ್ರಣ್ಣನ ಮಗ ಭದ್ರಣ್ಣ ಹೇಳಿದ.

"ನೀವೇ ಯಾರ್ಯಾದ್ರೂ ಕರ್ಕೊಂಡ್ಬನ್ನಿ-ಬೇಗ ಆಗ್ದೇ ಇದ್ರೆ ರಾತ್ರಿ ಯೆಲ್ಲಾ ಹೆಣ ಇಲ್ಲೇ ಇರ್ಬೇಕಾಗುತ್ತೆ"

ಅಷ್ಟು ಹೊತ್ತಿಗೆ ಸೊಪ್ಪಿನ ಚಿಕ್ಕಿ ಅತ್ತ ಬಂದಳು. ಜನಜಂಗುಳಿ ನೋಡಿ ಕಣ್ಣರಳಿಸಿ ಕೇಳಿದಳು.

"ಏನ್ರಪಾ, ಏನಾತು ? ರುದ್ರಣ್ಣ ಎಂಗವ್ನೆ ? ಓಗ್ಬುಟ್ನಾ ? ಅಯ್ಯೋ ಪಾಪಾ ಅವನ್ಗ ಸಾರಿಲ್ಲಾಂತಾ ನಾನು ನೆನ್ನೆ ತಾನೆ ಬ್ಯಾರೆಯವ್ರ ಹತ್ರ ಕರ್ಕೊಂಡೋಗಿದ್ದೆ. ಅದೇ ಆ ಊರಾಚೆ ಇರೋ ಮಂಟಪದಾಗೆ ಒಂದೊಂದ್ಸಲ ಕುಂತಿರ್ತಾನೆ ಅವ್ನು ಏಳ್ದ, ರುದ್ರಣ್ಣ ಇನ್ನು ಬದ್ಕಾಕಿಲ್ಲಾಂತಾ, ಅಂಗೇ ಆಗೋಯ್ತಲ್ಲಾ ಸಿವ್ನೇ !"

ಕೂಡಲೇ ರಾಮಲಿಂಗಯ್ಯ ಅವಳನ್ನು ಕರೆದರು. "ಬಾಮ್ಮಾ ತಾಯಿ ಆ ಬೇರೆಯವ್ನು ಈಗ ಸಿಗ್ತಾನಾ ?"

"ಊಂ-ಆಲ್ದಮ್ಮನ ಗುಡಿತಾವ ಇರ್ತಾನೆ !"

"ಅವ್ನ ಹೆಸರೇನು ?"

"ವರದಾಚಾರಿ!" ಚಿಕ್ಕಿ ಹೇಳಿದಾಗ ರಾಮಲಿಂಗಯ್ಯನವರ ಮೈ ಬಿಸಿಯಾಯಿತು. ಆ ವರದಾಚಾರಿಯೇ ರುದ್ರಣ್ಣನ ಶತ್ರುವಾಗಿರಬಹುದೇ ?

"ಹೋಗ್ರಪ್ಪಾ ಆ ವರದಾಚಾರೀನ್ನೇ ಕರ್ಕೊಂಡು ಬಂದು ಅದೇನು ಮಾಡ್ಬೇಕೋ ಮಾಡ್ಸಿ !" ರಾಮಲಿಂಗಯ್ಯನವರು ರುದ್ರಣ್ಣನ ಮಕ್ಕಳಿಗೆ ಹೇಳಿದರು. "ನಿಮ್ತಂದೆ ನಂಗೆ ತುಂಬಾ ಉಪಕಾರ ಮಾಡಿದ್ದ. ಅವನ ಉಪಕಾರ ನಾನು ಮರ್ಯೋಲ್ಲ-ತೊಗೊಳ್ಳಿ ಅವನ ಕರ್ಮಗಳಿಗೆ ಇದ್ನ ಬಳಸ್ಕೊಳ್ಳಿ" ಜೇಬಿನಿಂದ ಪರ್ಸ್ ತೆಗದು ಹಣ ಅವರ ಕೈಗಿತ್ತರು.

ಭದ್ರಣ್ಣ ಚಿಕ್ಕಿಯೊಂದಿಗೆ ಆಲದಮ್ಮನ ಗುಡಿಗೆ ಹೋಗಿ ವರದಾಚಾರಿಯನ್ನು ಕರೆತಂದಾಗ ಕತ್ತಲು ಹೆಚ್ಚಾಗಿತ್ತು. ವರದಾಚಾರಿ ತೆಳ್ಳಗೆ ಉದ್ದವಾಗಿ ಕಡ್ಡಿಯಂತಾಗಿದ್ದ-ಮುಖದಲ್ಲಿನ ಕೆಂಗಣ್ಣು ಕರಿಯ ತುಟಿ, ವಿಭೂತಿಮಯವಾದ ಹಣೆ ಬಿಟ್ಟರೆ ಮುಖವೆಲ್ಲಾ ಕೂದಲಿನಿಂದ ಅವತಾರವಾಗಿತ್ತು ಉಟ್ಟಿದ್ದ. ಕಾವಿ ಬಟ್ಟೆಯಲ್ಲಿ ಅವನನ್ನು ಸಾಧುವೆಂದು ಜನ ನಂಬುವಂತಿತ್ತು. ಬಂದವನೆ ನಿಂತಿದ್ದವರತ್ತ ಒಂದು ಸಾರಿ ಕಣ್ಣಾಡಿಸಿದ ಅವನ ದೃಷ್ಟಿ ರಾಮಲಿಂಗಯ್ಯನವರ ಮೇಲೆ ದೀರ್ಘವಾಗಿತ್ತು.

"ನಾನು ಈಗಲೇ ಶವಸಂಸ್ಕಾರಕ್ಕೆ ಆಗಬೇಕಾದ್ದೆಲ್ಲಾ ಮಾಡ್ತೀನಿ. ಆದ್ರೆ ಸಂಸ್ಕಾರ ಮುಗಿದ ಮೇಲೆ ನಾಳೇನೇ ಮಣ್ಣು ಮಾಡೋಕ್ಕಾಗೋದು-ರುದ್ರಣ್ಣನ ಮೈಲಿರೋ ಶಕ್ತಿನೆಲ್ಲಾ ನಾನು ತೊಗೊಂಡು, ಅವ್ನು ಪೂಜಿಸುತ್ತಿದ್ದ

ಶಕ್ತಿಗಳನ್ನು ನಾನು ಪೂಜೆ ಮಾಡಿ ವಿಸರ್ಜಿಸಿ ಅನಂತರ ಅವನನ್ನು ಬಿಡುಗಡೆ ಮಾಡ್ಬೇಕೂ-ರಾತ್ರಿಯೆಲ್ಲಾ ನಾನು ಈ ಮನೇ ಒಳಗಿದ್ದು ಎಲ್ಲಾ ಮಾಡಿ ಮುಗಿಸ್ತೀನಿ. ಬೆಳಿಗ್ಗೆ ಶವಕ್ಕೆ ಸ್ನಾನ ಮಾಡ್ಸಿ, ತೊಗೊಂಡು ಹೋಗಿ ಹೂಳೆ ಬೇಕು. ಆತನೊಂದಿಗೆ ಅವನ ಪೂಜಾಸಾಮಗ್ರಿಗಳೂ ಮತ್ತು ಅವನು ಉಪಯೋಗಿಸುತ್ತಿದುದೆಲ್ಲವನ್ನೂ ಸುಟ್ಟು ಹೂಳಬೇಕು. ಅದಲ್ಲದೇ ಇನ್ನು ಅನೇಕ ಸಂಪ್ರದಾಯಗಳಿವೆ, ಮೊದಲು ಎಲ್ಲಕ್ಕೂ ಸಾಕಷ್ಟು ಖರ್ಚಾಗುತ್ತದೆ. ಇಲ್ಲದಿದ್ದರೆ ಅವನು ವಶಪಡಿಸಿಕೊಂಡಿದ್ದ ಎಲ್ಲಾ ಜನರನ್ನು ಹಾಳು ಮಾಡುತ್ತವೆ. ಅವನ ಮಾತು ಕೇಳಿ ಅಲ್ಲಿದ್ದವರೆಲ್ಲಾ ನಡುಗಿದರು. ಯಾರೊಬ್ಬರಿಗೂ ಅವನಿಗೆದುರು ಹೇಳುವಂತಿರಲಿಲ್ಲ.

"ಆಚಾರಪ್ಪಾ ರುದ್ರಣ್ಣಂಗೆ ಯಾರೋ ಮಾಟ ಮಾಡ್ಸಿದ್ರಂತಲಾ - ಎಂಗಿದ್ದೋನು ಎಂಗಾಗ್ಬುಟ್ಟಲ್ಲಪ್ಪಾ !" ಕರಿಸಿದ್ದ ಧೈರ್ಯ ಮಾಡಿ ಕೇಳಿದಾಗ ವರದಾಚಾರಿ ಸುತ್ತಲೂ ನೋಡಿದ.

"ಮಾಟಾನೂ ಇಲ್ಲ ಗೀಟಾನೂ ಇಲ್ಲ. ಯಾವ್ದೋ ಪ್ರೇತಾನ ಹಿಡಿದ್ದು ದಿಗ್ಬಂಧನ ಮಾಡಿ ಉಚ್ಚಾಟಿಸಲು ಹೋಗಿದ್ದಾಗ ಏನೋ ಮಾಡಬಾರದನ್ನು ಮಾಡಿದ್ದಿರಬೇಕು, ಆ ಪ್ರೇತಾನೇ ಅವನ ಮಜ್ಜೆ, ರಕ್ತ ಮಾಂಸಾನೆಲ್ಲಾ ನೆಕ್ಕಿ ಹಾಕಿದೆ"

ಆ ಮಾತು ರಾಮಲಿಂಗಯ್ಯನವರ ಕಿವಿಗೆ ಬೀಳುತ್ತಲೇ ಅವರ ಮೈಯಲ್ಲಿ ರಕ್ತ ಹಿಮಗಂಟಿದಂತಾಯಿತು, ರುದ್ರಣ್ಣ ಏನು ತಪ್ಪು ಮಾಡಿರಬಹುದು ? ತಾವು ನಿಶ್ಚಿಂತೆಯಿಂದ ಇದುವರೆಗೂ ಕಳೆದ ಕೆಲವು ತಿಂಗಳುಗಳು ಕ್ಷಣಿಕವೇ ? ಮತ್ತೆ ನೂಪುರನನ್ನು ಮೆಟ್ಟಿಕೊಂಡರೆ ? ಆದರೆ ಈ ವರದಾಚಾರಿಯನ್ನು ನಂಬುವುದು ಹೇಗೆ ? ಅವನೇ ಗಂಗೆಯ ಶವವನ್ನು ಕದ್ದೊಯ್ದವನು. ರುದ್ರಣ್ಣ ಸಾಯುವ ಮುನ್ನ ತಮಗೆ ಹೇಳಿದ ಮಾತಿನಲ್ಲಿ ಏನೋ ಗುಟ್ಟಿರಬೇಕು.

"ನಾನು ಹೋಗಿ ಬರ್ತೀನಿ ...ನೀವಿನ್ನು ಎಲ್ಲಾ ನೋಡ್ಕೊಳ್ರಪ್ಪಾ-ನಂಗೆ ಕತ್ಲಲ್ಲಿ ಕಣ್ಣು ಸರ್‍ಯಾಗಿ ಕಾಣೋದಿಲ್ಲ."

"ಹೋಗ್ಬೀನಿ ಅನ್ನಿ ಬರ್ತೀನಿ ಅನ್ಬಾರ್ದು ಇಲ್ಲಿಗೆ" ಯಾರೋ ಹೇಳಿದರು. ರಾಮಲಿಂಗಯ್ಯನವರು ಬೆತ್ತ ಊರುತ್ತಾ ನಡೆದಾಗ ಕರಿಸಿದ್ದ ಅವರ ಹಿಂದೆ ಓಡಿದ.

"ಸಾಮ್ಯಾರ್ರೇ ಬನ್ನಿ ಆಟೋ ಇಡ್ಕೊಳ್ತೀನಿ-ಕತ್ಲಾಗೆ ಒಬ್ರೇ ಓಗ್ಬ್ಯಾಡ್ರಿ ಬೇಕಾದ್ರೆ ನಾನು ನಿಮ್ಜೊತೆಗೆ ಬಂದು ಬಿಟ್ಕೊಗ್ತೀನಿ" ಕರಿಸಿದ್ದನಿಗೆ ರಾಮ

ಲಿಂಗಯ್ಯನವರಿತ್ತ ಹಣದ ಆಸೆಯಿಂದ ಈ ಒಳ್ಳೆ ಬುದ್ಧಿ ಬಂದಿರಬೇಕು. ಅಲ್ಲಿ ಮನೆಯ ಹತ್ತಿರ ಮತ್ತೊಂದಿಷ್ಟು ಕೊಟ್ಟರೆ ಕುಡಿಯಲು ಆಗುತ್ತದೆ ಮನಸ್ಸಿನಲ್ಲೇ ನಕ್ಕರು.

ವರದಾಚಾರಿ ನಿರ್ಗಮಿಸುತ್ತಿದ್ದ ರಾಮಲಿಂಗಯ್ಯನವರನ್ನೇ ನೋಡಿದ. ಈ ವ್ಯಕ್ತಿ ಬೇಕಂತಲೇ ತನ್ನಿಂದ ದೂರವಾಗುತ್ತಿದ್ದಾನೆ! ಇವನಿಗೆ ತನ್ನನ್ನು ಕಂಡರಾಗುವುದಿಲ್ಲ. ರುದ್ರಣ್ಣ ಇವನಿಗೆ ನಿನ್ನ ಬಗ್ಗೆ ಏನೋ ಹೇಳಿರಬೇಕು. ಇಲ್ಲವೇ ಮನೆಯ ಹಿತ್ತಲಲ್ಲಿದ್ದ ಶವದ ವಿಚಾರವೆಲ್ಲಾ ತಿಳಿದಿರಬೇಕು. ಇವರೇ ಅಲ್ಲವೇ ಆ ಮನೆಕೊಂಡದ್ದು? ಇವರ ಅಳಿಯನಲ್ಲವೇ ತನಗೆ ಹಣಕೊಡಲು ಮೋಸ ಮಾಡಿದ್ದು! ಗಿಲೀಟಿನ ಒಡವೆ ಕೊಟ್ಟು ಮಣ್ಣು ತಿನ್ನಿಸಿದ್ದು! ತಾನು ಹೊಸದಾಗಿ ಮನೆ ಕಟ್ಟಿಸುವಾಗ ಕೂಲಿಯವರೊಡನೆ ಬೆರತು ಅವರ ಮನೆಯ ಮಾವಿನ ಮರದ ಬುಡದಲ್ಲಿ ಮಾಟದ ಮಡಿಕೆಯಿಟ್ಟು ಬಂದದ್ದು. ಆ ಮಾಟದ ಮಡಿಕೆಯಲ್ಲಿದ್ದ ಹಸಿಮಾಂಸ, ಬೊಂಬೆ, ಹೆಣದ ಬೂದಿ ಎಲ್ಲಾ ಕಲೆತು ಬಲಿಯಲು ಹದಿನೈದು ಇಪ್ಪತ್ತು ವರ್ಷಗಳಾದರೂ ಆಗಬಹುದು ಎಂದು ತನಗೆ ಗೊತ್ತಿತ್ತು. ಅಲ್ಲಿಯವರೆಗೆ ನಾನು ಸಾಧಿರಬೇಕಾದ್ದು ಬೇಕಾದಷ್ಟಿತ್ತು. ತಾನೂ ಮಲೆಯಾಳಕ್ಕೆ ಹೋಗಿ ಅಲ್ಲಿನ ನುಟ್ಟಿಕಾರನ ಬಳಿ ಏನೆಲ್ಲಾ ಕಲಿತು ಬರಬೇಕಾಗಿತ್ತು! ತನಗೆ ಆ ಪಾಂಡುರಂಗಯ್ಯನ ಹೆಂಡತಿಯನ್ನು ಕಾಡಿಸಿ, ಅವಳನ್ನು ಹಿಂಸಿಸಿ ಹಣ ವಸೂಲಿ ಮಾಡಬೇಕೆಂದೇ ಮಾಡಿದ್ದು, ಆದರೆ ಅದು ಆದದ್ದೇ ಒಂದು. ತನಗೆ ನೆನಪಿರುವಂತೆ ಪಾಂಡುರಂಗಯ್ಯ ಮಾವಿನ ಮರದಿಂದ ತೋರಣಕ್ಕೆ ಎಲೆ ಕೀಳುವಾಗ ಮಾಟದ ಮಡಿಕೆಯ ನೆಲ ಮೆಟ್ಟಿದ್ದ. ಅವನಿಗೆ ಬಡಿಯಿತು ಸತ್ತುಹೋದ. ಅವನ ಮನೆಯಲ್ಲಿದ್ದ ಹೆಂಗಸರು ಒಲೆಯಿಂದ ತೆಗೆದ ಬೂದಿ, ಮನೆಗಸವೆಲ್ಲವನ್ನೂ ತಂದು ಮರದ ಬುಡಕ್ಕೆ ಹಾಕುತ್ತಿದ್ದರು. ಅವರು ಅದನ್ನು ಮೆಟ್ಟಿ ನರಳಿ ಪ್ರಾಣಬಿಟ್ಟರು. ತನಗೆ ಬೇಕಾದವರಿಂದ ಏನನ್ನೂ ತೆಗೆದುಕೊಳ್ಳಲಾರದೇ ಕೊನೆಗೆ ಪಾಂಡುರಂಗಯ್ಯನ ಹೆಂಡತಿಯನ್ನು ಪೀಡಿಸಬೇಕೆಂದಿದ್ದರೆ ಅದು ಸಾಧ್ಯವಾಗಲೇ ಇಲ್ಲ. ಆ ಮಾವಿನ ಮರದ ಬಳಿ ಅವಳು ಸುಳಿಯುತ್ತಲೇ ಇರಲಿಲ್ಲ ಅಲ್ಲದೇ ಅವಳ ಗರ್ಭದಲ್ಲಿ ಹೆಣ್ಣು ಬೀಜವಲ್ಲದೆ ಗಂಡು ಬೀಜವಿದ್ದುದಲ್ಲದೇ ಆ ಬೀಜ ತನಗೆ ಶತ್ರುವಿನಂತೆ ಬೆಳೆಯತೊಡಗಿತ್ತು. ಗಂಡು ಮಗುವನ್ನಾಗಲೀ ಅದರ ತಾಯಿಯನ್ನಾಗಲೀ ತಾನು ಮುಟ್ಟ ಲಾಗಲಿಲ್ಲ. ಅದಕ್ಕೆ ಕಾದು ಕಾದು ಆ ಗಂಡು ಬೆಳೆದು ಹೆಂಡತಿಯನ್ನು ಮನೆಗೆ ಕರೆತಂದಾಗ ಕಾದು ಸಾಕಾಗಿದ್ದ ತಾನಿಟ್ಟಿದ್ದ ಮಾಟದ ಮಡಿಕೆಯೊಡನೆ ಒಳಗೆ

ಹಸಿಮಾಂಸದಲ್ಲಿ ಅಡಗಿಸಿಟ್ಟಿದ್ದುದು, ಆ ಹುಡುಗಿಯನ್ನು ನೋಡಿದ ಕೂಡಲೇ ಮೆಟ್ಟಿಕೊಂಡಿತ್ತು. ಮಾವಿನ ಮರವನ್ನು ಸೆಕ್ಕಿ ಸುಟ್ಟಿತ್ತು. ಆ ಹುಡುಗಿ ಗರ್ಭಿಣಿಯಾಗಿ ಹೆಣ್ಣು ಕೂಸಿನ ಬೀಜವನ್ನು ಹೊರುವವರೆಗೆ ಕಾಡಿಸಿ, ಆ ಗರ್ಭದ ಹೆಣ್ಣು ಭ್ರೂಣವನ್ನು ತಾನು ಮೈಯಿಂದಿಳಿಸಿಕೊಳ್ಳಬೇಕೆಂದೇ ಕಾದಿದ್ದರೆ ಯಂತ್ರ, ಪೂಜೆ ಗೀಜೆ ಮಾಡಿಸಿದುದರಿಂದ ಕೆಲವು ಕಾಲ ತಾನು ದೂರವೇ ಉಳಿಯಬೇಕಾಯಿತು. ಕೆಲವು ತಿಂಗಳವರೆಗೆ ಮಾತ್ರ ಆ ಪೂಜೆಯ ಮಂಡಲದ ಪವಿತ್ರತೆಯನ್ನು ತಾನು ಗೌರವಿಸಬೇಕಾಗಿತ್ತು. ಆದರೆ ಅದು ಜರಗುವ ಮುನ್ನ ಈ ರುದ್ರಣ್ಣ ತನ್ನ ಕೆಲಸ ಹಾಳು ಮಾಡಿ ಪ್ರೇತಾತ್ಮವನ್ನು ದಿಗ್ಬಂಧಿಸಿ, ಅವರಿಂದ ಅಪಾರ ಹಣ ದೋಚಿದ್ದ. ಅದು ಆ ದಿನವೇ ತನಗೆ ಗೊತ್ತಾಗಿದ್ದು ತಾನು ಪೂಜೆಗೆ ಕುಳಿತಾಗ ಯಾವ ಪ್ರೇತಾತ್ಮಗಳೂ ತನ್ನ ಬಳಿಗೆ ಬರಲಿಲ್ಲ. ತನಗೆ ಮೈಯೆಲ್ಲಾ ಬೆಂಕಿ ಹತ್ತಿಕೊಂಡು ಉರಿಯುವಂತಾಗಿತ್ತು. ತಾನು ಹಿಂದೊಮ್ಮೆ ಒಂದು ಹೆಣ್ಣಿಗೆ ಮಕ್ಕಳೇ ಆಗದಿದ್ದಾಗ ಎರಡು ಹೆಣ್ಣು ಮಗುವಿನ ಯೋನಿಯಿಂದ ರಕ್ತ ತೆಗೆದು ಅವಳ ಯೋನಿಗೆ ಬಳಿದು ಮಂತ್ರಿಸಿದಾಗ ಹೇಗೋ ಪೋಲೀಸಿನವರಿಗೆ ತನ್ನ ಮೇಲೆ ಗುಮಾನಿ ಬಂದುದರಿಂದ ತಾನಿದ್ದ ಜಾಗದಿಂದ ಕಣ್ಮರೆಯಾಗಬೇಕಾಗಿದ್ದಾಗ ರುದ್ರಣ್ಣ ತನಗೆ ಸಹಾಯ ಮಾಡಿದ್ದ ನಿಜ. ಆದರೆ ಅವನೆಂದಿದ್ದರೂ ತನ್ನ ಶತ್ರುವೇ. ಅವನಿಗೆ ತಾನು ಆ ಪುಟ್ಟ ಹೆಣ್ಣು ಮಕ್ಕಳನ್ನು ರಮಿಸಿ ಜನನಿಬಿಡ ಪ್ರದೇಶಕ್ಕೆ ಕರೆದೊಯ್ದು ಕತ್ತು ಹಿಸುಕಿ ಕೊಂದು ಯೋನಿಯನ್ನು ಕೊಯ್ದು ಅದರಿಂದ ರಕ್ತ ಸಂಗ್ರಹಿಸಿದ್ದು ಅವನಿಗೆ ಗೊತ್ತಿತ್ತು. ಅವನನ್ನು ಎದುರು ಹಾಕಿಕೊಂಡರೆ ಖಂಡಿತ ಅವನೇ ಪೋಲೀಸಿನವರಿಗೆ ತಾನೆಸಗಿದ ಹೀನಕೃತ್ಯದ ಬಗ್ಗೆ ಮಾಹಿತಿ ಕೊಟ್ಟು ತನ್ನನ್ನು ಜೈಲಿನೊಳಗೋ, ನೇಣುಗಂಬಕ್ಕೋ ಕಳಿಸಲು ಹಿಂಜರಿಯುತ್ತಿರಲಿಲ್ಲ. ಅವಕಾಶಕ್ಕಾಗಿಯೇ ತಾನು ಕಾದು ಕುಳಿತಿದ್ದು ಅವನ ಚಲನವಲನಗಳನ್ನು ತೀಕ್ಷ್ಣವಾಗಿ ಗಮನಿಸುತ್ತಿದ್ದುದು. ಅವನಿಂದ ದೂರವಾಗಿದ್ದುದು, ಅವನಂದು ಆ ತಾಮ್ರದ ಬಿಂದಿಗೆಯಲ್ಲಿ ದಿಗ್ಬಂಧಿಸಿ ತಂದು ಮಣ್ಣಿನಲ್ಲಿ ಹೂತಿಟ್ಟನೋ ಅಂದು ಅವನ ಕತೆ ಮುಗಿಯಿತೆನ್ನಬಹುದು ಪ್ರೇತಾತ್ಮಗಳಿಗೆ ಹೊನ್ನು ನಿಷಿದ್ಧ. ಅವನು ಆ ಬಿಂದಿಗೆಯೊಂದಿಗೇ ಪ್ರೇತಾತ್ಮ ಮೆಟ್ಟಿಕೊಂಡಿದ್ದ ಹೆಣ್ಣಿನ ಒಡವೆಗಳನ್ನು ಗಳಿಸಿದ್ದ ಹಣವನ್ನು ಹೂತಿಟ್ಟು ತಪ್ಪು ಮಾಡಿದ. ಅಲ್ಲದೇ ಅವನ ಶಿಷ್ಯ ವೀರಭದ್ರನನ್ನು ಕಟ್ಟಿ

ಹಾಕದೇ ತನ್ನ ಭೈರವಿಯೊಂದಿಗೆ ಅವನು ಕೂಡಿಕೊಳ್ಳುವಂತಾಗಿ ಅಪಚಾರ ವೆಸಗಿದ್ದ. ತನ್ನ ಅದೃಷ್ಟ ಚೆನ್ನಾಗಿತ್ತು ಆ ವೀರಭದ್ರನೂ ಕೈಗೆ ಸಿಕ್ಕಿದ, ರುದ್ರಣ್ಣನು ಹುದುಗಿಟ್ಟಿದ್ದ ಒಡವೆ, ಹಣ, ತಾಮ್ರದ ಬಿಂದಿಗೆ ಎಲ್ಲಾ ತನ್ನ ಕೈವಶವಾಗಿತ್ತು. ವೀರಭದ್ರನಿಗೆ ರುದ್ರಣ್ಣನ ಸಮಸ್ತ ವ್ಯವಹಾರವೂ ತಿಳಿದಿದ್ದರಿಂದ ಅವನಿಂದಲೇ ಮಾಟ ಮಾಡಿಸಿ ಅವನು ಪೂಜೆಗೆ ಪ್ರತಿದಿನ ಇಡುತ್ತಿದ್ದ ಕೋಳಿಯಲ್ಲಿ ಮದ್ದು ಹಾಕಿದ್ದ. ಅವನಿಗೆ ಕೋಳಿ ತಂದು ಕೊಡುತ್ತಿದ್ದ ಕರಿಸಿದ್ದನಿಂದ ಕೋಳಿ ತೆಗೆದುಕೊಂಡು ಮದ್ದು ನುಂಗಿಸಿ ಕೊಟ್ಟಿದ್ದ. ಕೋಳಿಯನ್ನು ಕಡಿದು ಅದರ ಕತ್ತಿನ ರಕ್ತ ತನ್ನ ಶಕ್ತಿಗೆ ನೇವೇದ್ಯ ಮಾಡಿ ಅದನ್ನು ಅವನೇ ಕುಡಿಯುತ್ತಿದ್ದು ವೀರಭದ್ರನಿಗೆ ತಿಳಿದುದರಿಂದಲೇ ತನ್ನ ಕೈ ಮೇಲಾದುದು. ಅವನು ಅದನ್ನು ಕುಡಿದ ದಿನದಿಂದ ಅದು ಅವನನ್ನು ನೆಕ್ಕತೊಡಗಿತು. ಕಾಯಿಲೆಯೇ ಇಲ್ಲದೇ ಅಸ್ತಿ ಪಂಜರದಂತಾಗಿ ಪ್ರಾಣನೀಗಿದ್ದ, ಅವನ ಅವರ ಕರ್ಮಗಳು ಯಥಾವತ್ತಾಗಿ ಅವನ ಮಕ್ಕಳು ಮಾಡಿದರೆ ಅವನ ಪ್ರೇತ ನನ್ನ ಕೈಗೆ ಸಿಗುವುದಿಲ್ಲ. ತಾನೇ ಸ್ಮಶಾನಕ್ಕೆ ಕೊಂಡೊಯ್ದು ಅವನ ಸಂಸ್ಕರಣ ಮಾಡಿ ಆ ಪ್ರೇತಾತ್ಮವನ್ನು ವಶಪಡಿಸಿಕೊಂಡರೆ ರುದ್ರಣ್ಣನೇ ತನ್ನ ಗುಲಾಮನಾದಂತೆ, ಅವನು ವಶಪಡಿಸಿಕೊಂಡಿದ್ದ ಶಕ್ತಿಯೆಲ್ಲವೂ ತನ್ನ ಕೈಗೆ ಸಿಕ್ಕಂತೆ....ಮುಂದಿನ ಅಮಾವಾಸ್ಯೆಯವರೆಗೆ ತಾನು ಕಾಯಬೇಕು. ಆಮೇಲೆ ತನ್ನನ್ನು ಹಿಡಿಯುವವರಿಲ್ಲ !

* * * *

ರಾಮಲಿಂಗಯ್ಯನವರು ಮನೆ ತಲುಪಿದಾಗ ರಾತ್ರಿ ಹತ್ತೂವರೆಯಾಗಿತ್ತು. ಲಲಿತಮ್ಮ ವರ್ಧಮಾನ ಇಬ್ಬರೂ ಬಾಗಿಲಲ್ಲೇ ಕಾದು ನಿಂತಿದ್ದರು.

"ಏನಪ್ಪಾ. ಇಷ್ಟು ಹೊತ್ತು ಎಲ್ಲಿಗೆ ಹೋಗಿದ್ದೀ ? ನಾನು ನಿನ್ನ ಹೊರಗೆ ಕಳಿಸಬಾರದಿತ್ತು. ಏನೋ ನಿನ್ನ ಕೆಲಸವಿರಬಹುದೆಂದು ಕಳಿಸಿದರೆ ಇಷ್ಟೊತ್ತಿಗಾ ಬರೋದು ?"

"ಅಮ್ಮ ನನ್ನ ಕಳಿಸಲಿಲ್ಲ. ನೀನು ಎಲ್ಲಿ ಹೋಗಿದ್ದೀಂತಾ ನಂಗೆ ಗೊತ್ತು. ತಾತಾ, ಅಂತಹ ಕಡೆಗೆ ಹೋಗಿ ಬಂದು ಮಾಡುವುದರಿಂದಲೇ ಇಂತಹ ಅನಾಹುತಗಳು ಆಗೋದು. ಅಲ್ಲಿ ನಿಮ್ಮನ್ನ ಹಿಪ್ನೋಟೈಸ್ ಮಾಡಿಯೋ ಮೆಸ್ಮರೈಸ್ ಮಾಡಿಯೋ ಅವರು ಹೇಳಿದಂತೆ ಕುಣಿಯುವ ಹಾಗೇ ಮಾಡುತ್ತಾರೆ. ನಿಮ್ಮಂತಹ ಅಜ್ಞಾನಿ, ಅನಾಗರೀಕ ಜನಕ್ಕೆ ಏನು

ಮಾಡಬೇಕೋ ತಿಳಿಯದು. ನಾಳೀನೇ ಹೋಗಿ ಆ ರುದ್ರಣ್ಣನ ಮೇಲೆ ಕಂಪ್ಲೇಂಟ್ ಬರೆದುಕೊಡ್ತೀನಿ. ಅವನು ಇಲ್ಲಿಗೆ ಬಂದುದಲ್ಲದೇ ನೀವು ಕೊಟ್ಟ ದುಡ್ಡಿನ ಜೊತೆಗೆ ನೂಪುರಳ ಒಡವೆಗಳನ್ನು ಅಪಹರಿಸಿದ್ದಾನೆ. ಪೋಲೀಸಿನೋರು ಲಾಕಪ್ಪಿನಲ್ಲಿ ಹಾಕ್ಕೊಂಡು ಒದ್ರೆ ಎಲ್ಲಾ ಬಾಯಿಬಿಡ್ತಾನೇ. ಅಲ್ಲಿ ಅವನ ಮಾಟ ಮಂತ್ರ ಯಾವ್ದು ಬೇಯೋಲ್ಲ !"

ರಾಮಲಿಂಗಯ್ಯನವರು ಯಾರಿಗೂ ಉತ್ತರಿಸಲಿಲ್ಲ. ಅಲ್ಲಿಯೇ ಇದ್ದ ಕುರ್ಚಿಯ ಮೇಲೆ ಕುಸಿದರು.

"ಇರೋ ಮಾನು ಅಪ್ಪಂಗೆ ತುಂಬಾ ಆಯಾಸ ಆಗಿರ್ಬೋದು" ಲಲಿತಮ್ಮ ತಂದೆಯತ್ತ ಧಾವಿಸಿದರು.

"ಅಪ್ಪಾ ತುಂಬಾ ಸುಸ್ತಾ ? ಕುಡಿಯೋಕ್ಕೆ ಏನಾದ್ರೂ ತಂದು ಕೊಡ್ಲಾ ?"

"ಒಂದ್ಲೋಟ ತಣ್ಣಗಿರೋ ನೀರು ತಂದ್ಕೊಡಮ್ಮ, ಯಾಕೋ ಹೊಟ್ಟೇ ಸಂಕಟ !" ರಾಮಲಿಂಗಯ್ಯ ತೊದಲಿದರು.

"ಡಾಕ್ಟರ್ನ ಕರೆಸ್ಲಾಪ್ಪಾ ?"

"ಬೇಡಮ್ಮ, ಮೊದಲು ನೀರು...." ಅವರು ಹೇಳುತ್ತಿರುವಂತೆಯೇ ಬಾಯಿ ಸೊಟ್ಟಗಾಯಿತು. ಕೈಕಾಲುಗಳು ತಿರುಚಿಕೊಂಡರು. ಕೆಟ್ಟದಾಗಿ ಚೀರುತ್ತಾ ಕೆಳಗೆ ಬಿದ್ದುಬಿಟ್ಟರು. ವರ್ಧಮಾನ ಅವರನ್ನು ಹಿಡಿದುಕೊಳ್ಳಲು ಮುನ್ನುಗ್ಗಿದ. ಲಲಿತಮ್ಮ ಹೆದರಿ ಕಿರುಚಿಕೊಂಡರು.

"ಅಪ್ಪ !"

ಡಾ ॥ ನಚಿಕೇತ್ ಬಂದು ನೋಡಿದರು. "ವಯಸ್ಸಾಯ್ತು, ಬ್ಲಡ್ ಪ್ರೆಶರ್ ಜಾಸ್ತಿಯಿದೆ. ಹೆಚ್ಚು ಓಡಾಡಿ ಆಯಾಸ ಮಾಡ್ಕೋಬೇಡೀಂದ್ರೆ ಕೇಳಲ್ಲ. ಸ್ಟ್ರೋಕ್ ಆಗಿರೋ ಹಾಗಿದೆ. ಈಗ ನಾನು ಟ್ರೀಟ್ ಮಾಡಿರ್ತೀನಿ. ನಾಳೆ ನ್ಯೂರೋಫಿಸಿಷಿಯನ್ ನರೋತ್ತಮ್‌ನನ್ನು ಕರೆಸಿ ತೋರಿಸಿಬಿಡಿ."

ಲಲಿತಮ್ಮನವರಿಗೆ ದಿಕ್ಕೇ ತೋಚದಂತಾಯಿತು.

"ಡಾಕ್ಟ್ರೇ ನೆನ್ನೆ ಬೆಳಿಗ್ಗೆಯೆಲ್ಲಾ ಚೆನ್ನಾಗೇ ಇದ್ದರು. ಎಲ್ಲಿಗೋ ಹೋದವರು ರಾತ್ರಿ ಹತ್ತೂವರೆಗೆ ಬಂದರು. ನಂಗನ್ನಿಸುತ್ತೆ ಯಾರೋ ಏನೋ ಮಾಡಿರ್ಬೇಕು !"

"ಛೇ, ಯಾರು ಏನು ಮಾಡ್ತಾರೆ ! ಮಾಡಿದ್ರೆ ರಸ್ತೇಲೇ ಹೀಗಾಗಿ ರೋದೂ ! ನಾನು ಹೇಳಿದ್ನಲ್ಲಾ ಮೆಂಟಲ್ ಟೆನ್ಷನ್ ಜಾಸ್ತಿಯಾಗಿರ್ಬೇಕೂ,

ಮೊದ್ಲೇ ಹೈಪರ್‌ಟೆನ್ಷನ್ ಪೇಶೆಂಟು-ಸಾಲದಕ್ಕೆ ವಯಸ್ಸು ಆಗಿದ್ಯಲ್ಲಾ ! ದೇಹ ಎಷ್ಟು ತಡೆಯುತ್ತೆ ? ಬೆಳಿಗ್ಗೆ ಡಾ|| ನರೋತ್ತಮ್ ನೋಡಲಿ ! ನಂಗೇನೋ ಇದು ಪಾರ್ಷಿಯಲ್ ಅನ್ನಿಸುತ್ತೆ. ಡಾ|| ನಚಿಕೇತ್ ಹೇಳಿದರು. "ಆಗಿದ್ದು ಆಯ್ತಲ್ಲಾ ಚೆನ್ನಾಗಿ ನೋಡಿಕೊಳ್ಳಿ. ವರ್ಧಮಾನ್. ನಾನು ಹೇಳಿದ್ದು ಮರೀಬೇಡಾ. ಡಾ|| ನರೋತ್ತಮ್ ತುಂಬಾ ಬಿಜಿ ನೀನೇ ಹೋಗಿ ಕರ್ಕೊಂಡ್ಬಂದ್ಬಿಡೂ. ನಾನು ಅವರಿಗೆ ಫೋನ್ ಮಾಡಿರ್ತೀನಿ."

ನೂಪುರ ಬಾಗಿಲಲ್ಲೇ ನಿಂತಿದ್ದಳು. ತಾತನಿಗೇಕೆ ಹೀಗಾಯಿತು ? ಅತ್ತೆ ಹೇಳಿದ ಹಾಗೆ ಯಾರೋ ಏನೋ ಮಾಡಿರ್ಬೇಕೂ ! ಬೆಳಗ್ಗೆ ತಾನೇ ಅವರು ಪೂಜೆಗೆ ಕುಳಿತಿದ್ದಾಗ ಅವರ ಮೈಕಟ್ಟು ನೋಡಿ ಮನಸ್ಸಿನಲ್ಲೇ ಅಂದು ಕೊಂಡಿರಲಿಲ್ಲವೇ ? ಈ ವಯಸ್ಸಿನಲ್ಲೂ ದೇಹಸ್ವಾಸ್ಥ್ಯವನ್ನು ಎಷ್ಟು ಚೆನ್ನಾಗಿ ಕಾಪಾಡಿಕೊಂಡು ಬಂದಿದ್ದಾರೆ ! ಮಾನೂ ತಾತನ ಹಾಗೇ ! ಅದೇ ಮೈಕಟ್ಟು, ಎತ್ತರ, ಬಣ್ಣ ಎಲ್ಲಾ. ಮುಖದ ಹೋಲಿಕೆ ಮಾತ್ರ ತಾಯಿಯದು ಅಷ್ಟೆ. ಈಗ ತಾತ ಹೀಗಾಗಿಬಿಟ್ಟಿದ್ದಾರೆ ; ಪಾಪ !

ಬಾಗಿಲಲ್ಲೇ ನಿಂತಿದ್ದ ಅವಳನ್ನು ಕಂಡು ವರ್ಧಮಾನ ಎಚ್ಚರವಹಿಸಿದ. ಮೊದಲೇ ನೂಪುರ ಬಲು ಸೂಕ್ಷ್ಮ, ಮಾತಾಡುವ ಮಾತೆಲ್ಲಾ ಕೇಳಿ ಏನಾದರೂ ಹೆದರಿಕೊಂಡಾಳು.

"ನೂಪುರ, ಹೋಗು ಇಲ್ಯಾಕೆ ನಿಂತಿದ್ದೀಯ ? ಒಳಗೆ ಹೋಗು ಮಲ್ಕೋ. ನಾನು ಅಮ್ಮ ತಾತನ ಹತ್ತಿರ ಇರ್ತೀವಿ"

"ಪರ್ವಾಗಿಲ್ಲ. ನಾನೂ ಇಲ್ಲೇ ಇರ್ತೀನಿ !"

ರೂಮ್ನಲ್ಲಿ ಒಬ್ಳೇ ಮಲಗೋಕೆ ಹೆದರಿಕೆ !

"ಹೋಗು ಮಾನು. ನೀನು ಮಲ್ಕೋ. ನಾನು ಅಪ್ಪನ ಹತ್ತಿರ ಇರ್ತೀನಿ. ಅವಳು ಹೆದರಿಕೊಂಡಾಳು. ತಾತಂಗೆ ಏನೂ ಆಗಿಲ್ಲಮ್ಮ, ಏನೋ ಮೈ ಚೆನ್ನಾಗಿಲ್ಲ ಅಷ್ಟೆ. ಬೆಳಗಿನ ಹೊತ್ಗೆ ಸರಿಹೋಗ್ತಾರೆ ಹೋಗಮ್ಮ ಮಲ್ಕೋ" ಲಲಿತಮ್ಮ ಹೇಳಿದರು.

ವರ್ಧಮಾನ ವಿಧಿಯಿಲ್ಲದೇ ಒಪ್ಪಿಕೊಂಡು ನೂಪುರಳೊಂದಿಗೆ ಹೊರಟ.

ಮಾರನೆಯ ದಿನ ವರ್ಧಮಾನ ಹೋಗಿ ಡಾಕ್ಟರ್ ನರೋತ್ತಮ್‌ನನ್ನು ಕರೆತಂದ. ಅವರು ರಾಮಲಿಂಗಯ್ಯನವರನ್ನು ಪರೀಕ್ಷಿಸಿ ಅವರಿಗೆ ಮಿದುಳಿನಲ್ಲಿ ರಕ್ತಸ್ರಾವವಾಗಿ ಪಾರ್ಶ್ವವಾಯು ತಗಲಿದೆಯೆಂದು ಹೇಳಿದರು. ಕೈ

ಕಾಲುಗಳು ಸ್ವಾಧೀನ ತಪ್ಪಿಹೋದುದಲ್ಲದೇ ನಾಲಿಗೆಯೂ ಬಿದ್ದು ಹೋಗಿತ್ತು.

"ಬೇಕಾದ್ರೆ ನರ್ಸಿಂಗ್ ಹೋಮ್‌ಗೆ ಅಡ್ಮಿಟ್ ಮಾಡಿ. ಇಲ್ಲದಿದ್ರೆ ಮನೇಲೇ ಚೆನ್ನಾಗಿ ನೋಡಿಕೊಳ್ಳಿ. ಬೆಡ್ ಸೋರ್ಸ್ ಬಾರದಂತೆ ನೋಡಿಕೊಳ್ಳಬೇಕಾಗುತ್ತದೆ. ಲಲಿತಮ್ಮ ತಂದೆಯನ್ನು ನರ್ಸಿಂಗ್ ಹೋಮ್‌ಗೆ ದಾಖಲು ಮಾಡಲು ಒಪ್ಪಲಿಲ್ಲ. ತಾವೇ ನೋಡಿಕೊಳ್ಳುವುದಾಗಿ ಹೇಳಿದರು. ಅದಕ್ಕೆ ವರ್ಧಮಾನನೂ ಅನುಮೋದಿಸಿದ.

"ಪ್ರೈವೇಟ್ ನರ್ಸ್ ಒಬ್ಬಳ್ನ ಗೊತ್ತುಮಾಡಿಬಿಡ್ತೀವಿ."

"ಸೆರಬ್ರಲ್ ಹೆಮರೇಜ್ ಪ್ರೋಗ್ರೆಸಿವ್ ಅಲ್ಲಾಂತಾ ತಿಳ್ಕೋಬೇಕು. ಒಂದ್ಸಲ ಸ್ಕ್ಯಾನ್ ಮಾಡಿಸಿಬಿಟ್ರೆ ವಾಸಿ!"

"ಆಗ್ಲಿ" ವರ್ಧಮಾನ ಒಪ್ಪಿದ.

ರಾಮಲಿಂಗಯ್ಯನವರನ್ನು ಕರೆದೊಯ್ದು ಸ್ಕ್ಯಾನ್ ಮಾಡಿಸಿ ಕರೆ ತಂದರು. ತಲೆಯಲ್ಲಿ ಆದ ಹೇಮರೇಜ್ ತಿಳಿದುಬಂದು ನರೋತ್ತಮ್ ಔಷಧೋಪಚಾರಕ್ಕೆ ಅನುವಾಯಿತು. ಪ್ರತಿದಿನಬಂದು ತಾವು ನೋಡಿ ಹೋಗುವುದಾಗಿಯೂ, ತಾವೇ ಯಾರಾದರೂ ನರ್ಸೊಬ್ಬಳನ್ನು ಗೊತ್ತು ಮಾಡಿಕೊಡುವುದಾಗಿಯೂ ಹೇಳಿ ಹೊರಟರು.

ರಾಮಲಿಂಗಯ್ಯನವರಿಗೆ ಮೈಮೇಲೆ ಜ್ಞಾನ ಬಂದಿದ್ದರೂ ಕೈಕಾಲಾಡಿಸಲಾಗದೇ ಬಾಯಿಬಿಡಲಾಗದೇ ಒಳಗೇ ನರಳುತ್ತಿದ್ದರು. ಕಣ್ಣುಗಳು ಭಯದಿಂದ ಅರಳಿದ್ದವು. ಬಾಯಿ ಬಿಟ್ಟು ಹೇಳಲಾರದುದನ್ನು ಕಣ್ಣುಗಳಲ್ಲಿ ಹೇಳಲು ಯತ್ನಿಸಿದಾಗ ಕಣ್ಣುಗಳಲ್ಲಿ ತುಂಬಿತು. ಲಲಿತಮ್ಮ ಅವರ ಕಣ್ಣುಗಳಲ್ಲಿನ ನೀರು ಒರೆಸಿದರು. "ಯಾಕಪ್ಪಾ ಅಳ್ತೀ ಏನಾಯ್ತಪ್ಪಾ?"

ರಾಮಲಿಂಗಯ್ಯನವರು ಗಂಟಲಲ್ಲೇ ಸದ್ದು ಮಾಡಿದರು.

"ನೀನು ಮಾತಾಡಿಸೋಕ್ಕೆ ಪ್ರಯತ್ನಪಡ್ಬೇಡಮ್ಮಾ – ತಾತಂಗೆ ಕಷ್ಟ ಆಗುತ್ತೆ. ಇನ್ನೊಂದು ಸ್ವಲ್ಪ ದಿನ ಹೋಗಲಿ, ಸುಧಾರಿಸಿಕೊಳ್ತಾರೆ. ಆಮೇಲೆ ಎಲ್ಲಾ ಕೇಳಿ ತಿಳಿದುಕೊಳ್ಳಬಹುದು. ಟ್ರೀಟ್‌ಮೆಂಟಾದ ಮೇಲೆ ಮಾತಾಡಲು ಆಗಬಹುದು-!" ವರ್ಧಮಾನ ತಾತನ ಬಳಿಗೆ ಬಂದು ಅವರ ಹಣೆ ಸವರಿದ.

"ತಾತಾ, ನೀನೇನೂ ಯೋಚ್ನೆ ಮಾಡ್ಬೇಡಾ-ನಾನಿದ್ದೀನಿ-ನಾನೆಲ್ಲಾ ನೋಡ್ಕೊಳ್ತೀನಿ."

ರಾಮಲಿಂಗಯ್ಯನವರ ಮುಖದಲ್ಲಿ ಕೊಂಚ ಸಮಾಧಾನ ಕಂಡಿತು.

"ನೀನು ಮಲ್ಕೊಂಡು ರೆಸ್ಟ್ ತಗೋ."

ರಾಮಲಿಂಗಯ್ಯನವರಿಗೆ ಮೈ ಒರೆಸಿ, ಬೇರೆ ಬಟ್ಟೆಗಳನ್ನು ಹಾಕಿ ಮಲಗಿರಲು ನರ್ಸ್ ರೀಟಾ ಬಂದಾಗ ವರ್ಧಮಾನ ಅಲ್ಲೇ ಇದ್ದ. ನರ್ಸೊಬ್ಬಳಿಗೇ ಅವರನ್ನೆತ್ತಲು ಕಷ್ಟವಾಗುವುದೆಂದು ಸಹಾಯ ಮಾಡುವಾಗ ಅವನ ಕಣ್ಣಿಗೆ ರಾಮಲಿಂಗಯ್ಯ ಅವರ ಜೇಬಿನಲ್ಲಿದ್ದ ಪರ್ಸು ಡೈರಿ ಕಣ್ಣಿಗೆ ಬಿತ್ತು. ಪರ್ಸ್ ತೆಗೆದು ಒಳಗಿಟ್ಟ. ಡೈರಿಯನ್ನು ಕುತೂಹಲದಿಂದ ನೋಡುತ್ತಾ ಪುಟಗಳನ್ನು ತೆರೆದ.

ಅದರಲ್ಲಿ ಯಾವುದೋ ಹಳೆಯ ಲೆಕ್ಕಗಳು ಇದ್ದವು. ಕೆಲವು ಫೋನಿನ ನಂಬರ್‌ಗಳಿದ್ದವ. ಅದರಲ್ಲಿ ರುದ್ರಣ್ಣನ ವಿಳಾಸವೂ ಇತ್ತು. ಒಂದು ಪೇಜಿನಲ್ಲಿ 'ಐದನೇ ಮೈಲಿಗಲ್ಲು ಮಾವಿನ ತೋಪು ಹುಣಸೇಪುರ' ಎಂದು ಬರೆದದ್ದು ಕಂಡು ಆಶ್ಚರ್ಯವಾಯಿತು. ತಾತನೇನಾದರೂ ಹೊಸದಾಗಿ ತೋಟ ಜಮೀನು ಕೊಂಡರೇನು? ತಾನು ಕಂಡಂತೆ ಅವರು ರುದ್ರಣ್ಣನ ಮನೆಗೇ ಹೋಗಿದ್ದಿರಬೇಕು. ತನ್ನ ತಾಯಿ ತಡೆಯದಿದ್ದರೆ ತಾನು ಹೋಗಿ ಆಗಲೇ ಕರೆತಂದುಬಿಡಲುಬಹುದಿತ್ತು. ರುದ್ರಣ್ಣ ವಾಮಾಚಾರಿ. ಮಾಂತ್ರಿಕನೆಂದು ಗೊತ್ತಿತ್ತು. ನೂಪುರಳ ಪರಿಸ್ಥಿತಿಯಲ್ಲಾದ ಬದಲಾವಣೆಗೆ ಕಾರಣ ತಾತ ತಿಳಿದಿರುವಂತೆ ರುದ್ರಣ್ಣನಿರಬಹುದೇ? ಅವನು ಮಾಡಿದ ಪೂಜೆ, ತಂತ್ರ ಮಂತ್ರದಿಂದ ಸಾಧ್ಯವೇ? ನಮ್ಮ ದೇಶದಲ್ಲಿ ಮೂಢನಂಬಿಕೆಗಳು ಎಂದು ತೊಲಗುವುದಿಲ್ಲವೋ ಅಲ್ಲಿಯವರೆಗೆ ಉದ್ಧಾರವಾಗುವುದಿಲ್ಲ. ತನ್ನ ತಾತ ತಿಳಿದವರಾದರೂ ಈ ರುದ್ರಣ್ಣನ ಮೊರೆ ಹೊಕ್ಕನೇಕೆ? ಅವರಲ್ಲಿ ಒಳಗೇ ಅಡಗಿದ್ದ ಭಯವಿರಬಹುದೇ? ಅಥವಾ ರುದ್ರಣ್ಣ ತಾತನನ್ನು ಕೈವಶಮಾಡಿಕೊಂಡಿರಬಹುದೇ? ತಾನು ರುದ್ರಣ್ಣನ ಮನೆ ಹುಡುಕಿಕೊಂಡು ಹೋಗಿ ವಿಚಾರಿಸಬೇಕು. ಅವನಿಗೆ ತನ್ನ ತಾತನ ತಂಟೆಗೆ ಬಂದರೆ ಸರಿಯಾಗಿ ಬುದ್ಧಿ ಕಲಿಸುವೆನೆಂದು ಹೆದರಿಸಬೇಕು. ಅವನೇನಾದರೂ ತಮ್ಮ ಮನೆಗೆ ಇನ್ನೆಂದಾದರೂ ಬಂದರೆ ಕೈಕಾಲು ಮುರಿದುಬಿಡುತ್ತೇನೆಂದು ಹೆದರಿಸಬೇಕು. ಡೈರಿಯನ್ನು ತೆಗೆದು ಒಳಗಿಟ್ಟುಕೊಂಡ.

ರಾಮಲಿಂಗಯ್ಯನವರು ಮಲಗಿದಂದಿನಿಂದ ಅಡಿಗೆ ಮನೆಯ ಮೇಲುಸ್ತುವಾರಿ, ಮನೆ ಜವಾಬ್ದಾರಿ ನೂಪುರಳ ಮೇಲೆ ಬಿತ್ತು. ಇದೇ ಸಮಯವೆಂದು ರಂಗಮ್ಮ ಕಾಲುನೋವು ಎಂದು ರಜದ ಮೇಲೆ ಹೊರಟೇಬಿಟ್ಟರು.

ನೂಪುರಳಿಗೆ ಮನೆ ಕೆಲಸ ಮಾಡುವುದು ತಿಳಿದಿರಲಿಲ್ಲವೆಂದಲ್ಲಾ ಆದರೆ, ಈ ದೊಡ್ಡ ಮನೆಯ ಕೆಲಸ ಮಾಡುವುದಕ್ಕೆ ಅವಳಿಗೆ ದಿಕ್ಕೇ ತೋಚಲಿಲ್ಲ. ಅತ್ತೆಗೆ ಮಡಿಯಲ್ಲಿ ಅಡಿಗೆ. ಗಂಡನಿಗೆ ಆಧುನಿಕ ರೀತಿಯ ಅಡಿಗೆಗಳು, ತಾತನಿಗೆ ಪಥ್ಯದ ಅಡಿಗೆ, ಇವುಗಳನ್ನು ಹೊಂದಿಸಿಕೊಂಡು ರುಚಿಕಟ್ಟಾಗಿ ಮಾಡುವುದಕ್ಕೆ ಕಷ್ಟವಾಗುತ್ತಿತ್ತು. ನಾಲ್ಕು ದಿನ ಮಾಡುವುದರಲ್ಲಿ ಸಾಕಾಗಿಹೋಯಿತು.

"ರೀ, ನಂಗೆ ಇದೆಲ್ಲ ಮಾಡೋಕ್ಕಾಗಲ್ಲ. ಬೇರೆ ಯಾರ್ನಾದ್ರು ಅಡ್ಗೆಯವರನ್ನ ನೋಡ್ರಿ" ಎಂದಾಗ ವರ್ಧಮಾನ ಸಮಾಧಾನ ಪಡಿಸಿದ.

"ಸ್ವಲ್ಪ ಅಡ್‌ಜಸ್ಟ್ ಮಾಡ್ಕೋ ನೂಪು. ರಂಗವ್ಮ ಹದಿನೈದು ದಿನ ಮಾತ್ರ ರಜ ತೊಗೊಂಡಿದ್ದಾರೆ. ಅಷ್ಟು ದಿನ ಮ್ಯಾನೇಜ್ ಮಾಡ್ಕೋ. ಹೊಸಬರನ್ನ ಮನೆಗೆ ಸೇರಿಸುವುದು ನನಗೇಕೋ ಸರಿ ಬರುವುದಿಲ್ಲ.

"ನಾನಲ್ಲಾ ರೀ ಅಡ್‌ಜಸ್ಟ್ ಮಾಡ್ಕೊಬೇಕಾಗಿರೋದು. ನೀವುಗಳು ಮಾಡ್ಕೊಬೇಕು. ಮನೇಲಿ ಇರೋದು ನಾಲ್ಕು ಜನವಾದ್ರೂ ನಲ್ವತ್ತು ತರಹ ಅಡಿಗೆ ಮಾಡೋದು ನನ್ನ ಕೈಲಾಗೋಲ್ಲ. ಮಾಡಿದ್ದನ್ನ ಹೇಗೋ ಹಂಚಿಕೊಂಡು ತಿಂದ್ರೆ ಎಲ್ಲಾ ಸುಲಭ ಆಗುತ್ತೆ."

"ಅದಕ್ಕಲ್ಲ ನೂಪು, ರಂಗವ್ಮನಿಗೆ ನಮ್ಮ ಮನೆ ವಿಚಾರವೆಲ್ಲಾ ಗೊತ್ತು. ಹೊರಗಿನವರು ಬಂದ್ರೆ ಮನೆ ವಿಚಾರವೆಲ್ಲಾ ಹೊರಗೆ ಮಾತಾಡ್ತಾರೆ. ಅದೇನೆಂದು ನಿಂಗೇ ಗೊತ್ತು."

ಆ ವಿಚಾರ ಬರುತ್ತಲೇ ನೂಪುರ ತೆಪ್ಪಗಾದಳು. ತನ್ನ ವಿಚಾರವನ್ನೇ ಅವನು ಹೇಳುತ್ತಿರುವುದೆಂದು ಅರ್ಥವಾಯಿತು. ಈಗ ತನಗೇನು ಆಗುತ್ತಿಲ್ಲ. ಅತ್ತೆ, ಕಾಳಿ, ರಂಗವ್ಮ ಹೇಳಿದ ಹಾಗೆ ಕೆಟ್ಟ ಗಾಳಿ ಮೆಟ್ಟಿಕೊಂಡಿದ್ದಿರ ಬೇಕು. ಈಗೆಲ್ಲಾ ವಾಸಿಯಾಗಿದೆಯಲ್ಲಾ ! ತನ್ನ ಮದುವೆಯ ಮುಂಚೆಯೇ ಅವರುಗಳು ಹೇಳಿರಲಿಲ್ಲವೇ ? ತನ್ನತ್ತೆಯ ಸವತಿಯನ್ನು ಕೊಂದು ದುರ್ಮರಣ ವನ್ನು ಅಪ್ಪುವಂತೆ ಮಾಡಿದ್ದರಿಂದ ಅವಳೇ ದೆವ್ವವಾಗಿ ತನ್ನ ಗಂಡನನ್ನೂ, ಅತ್ತೆ, ಅಜ್ಜಿಯನ್ನೂ ಕಾಡಿಸಿ ನುಂಗಿಹಾಕಿದಳೆಂದು ತನ್ನ ಹಾಗೆ ಅವಳೂ ಒಂದು ದಿನ ಈ ರೀತಿ ಮನೆಯ ಸೊಸೆಯಾಗಿ ಬಂದಿದ್ದಳು. ಆದರೆ, ಅನಾದರಣೆಯಿಂದ ಅವಳೆಷ್ಟು ನೊಂದಿದ್ದಳೋ ! ತೀರದ ಬಯಕೆಗಳನ್ನು ಹೊತ್ತೇ ಅಕಾಲ ಮರಣವನ್ನಪ್ಪಿದಳು, ಅವಳು ದೆವ್ವವಾಗಿ ಕಾಡಿದರೆ

ತನಗೆ ಆಶ್ಚರ್ಯ ಉಂಟಾಗುವುದಲ್ಲದೇ, ಮತ್ತಿನ್ನೇನು ತಾನೇ ಗಂಗೆಯ ಸ್ಥಾನದಲ್ಲಿದ್ದಿದ್ದರೆ ?!

"ನೂಪುರ, ಏನು ಯೋಚ್ನೆ ಮಾಡ್ತಿದ್ದೀಯಾ ?"

ವರ್ಧಮಾನ ಅವಳ ಮೌನವನ್ನು ಕಂಡು ಪ್ರಶ್ನಿಸಿದ.

ನೂಪುರ ಮೌನವಾಗಿದ್ದುದು ಕಂಡು ಅವನೇ ಹೇಳಿದ.

"ಅಮ್ಮನಿಗೆ ಹೇಳಿ ನೋಡ್ತೀನಿ. ಅವಳೇನು ಹೇಳ್ತಾಳೋ ನೋಡ್ತೀನಿ"

ಲಲಿತಮ್ಮ ಹೊಸಬರನ್ನು ಮನೆಗೆ ಸೇರಿಸುವುದಕ್ಕೆ ಒಪ್ಪಲಿಲ್ಲ.

"ಈಗ್ಲೇ ನಮ್ಮ ಮೇಲೆ ಜನ ಆಡ್ಕೊಳ್ಳೋದು ಸಾಕಾಗಿದೆ. ಇನ್ನೂ ಆಸ್ಪೀಲಿ ನಮ್ಮನೆ ವಿಷಯ ಎಲ್ಲಾ ಊರಿನ ಹೋಗ್ಗ ಆಗುತ್ತೆ! ಏನು ಮಹಾ ಕೆಲ್ಸಾನೋ ಪಾಪ. ಅಡಿಗೆ, ತಿಂಡಿ ಕೆಲ್ಸ ಮಾತ್ರ ತಾನೇ ಹೇಗೋ ಮಾಡ್ಕೊಂಡ್ರಾಯ್ತು. ಯಾಕೇಂದ್ರೆ ಮೈಲಿಗೆಯಾದ್ರೆ ಯಂತ್ರ, ತಂತ್ರ ಎಲ್ಲಾ ಹೋಗ್ಬಿಡುತ್ತಂತೆ ಕಣೋ! ಬೇಕಾದ್ರೆ ನಾನು ಅವಳ್ಗೆ ಸಹಾಯ ಮಾಡ್ತೀನಿ"

ಇತ್ತ ತಾಯಿಗೂ ಏನೂ ಹೇಳಲಾರದಾದ. ಅತ್ತ ಹೆಂಡತಿಗೂ ಸಮಾಧಾನವಾಗುವಂತೆ ಮಾಡಲಾರದಾದ ವರ್ಧಮಾನ.

* * * *

ಲಲಿತಮ್ಮನವರಿಗೆ ತಂದೆಯನ್ನು ಒಂದು ಕ್ಷಣ ಬಿಟ್ಟಿರಲಾಗುತ್ತಿರಲಿಲ್ಲ. ಬಾಯಿಲ್ಲದೇ ಕಟ್ಟಿಗೆಯಂತೆ ಬಿದ್ದಿರುವವರನ್ನು ನರ್ಸ್ ಸರಿಯಾಗಿ ನೋಡಿಕೊಳ್ಳುವಳೆಂದು ಯಾವ ನಂಬಿಕೆ ? ತಾವೆದುರಿಗಿದ್ದರೆ ತಮ್ಮ ಭಯದಿಂದ ಅವಳು ಸರಿಯಾಗಿ ನೋಡಿಕೊಳ್ಳಬಹುದು ಎಂಬ ನಂಬಿಕೆ ಯಿತ್ತು. ಒಂದು ಸಲ ಗಂಜಿಯನ್ನು ಕುಡಿಸುವಾಗ ಚಮಚದಲ್ಲಿ ಬಾಯಿಗೆ ಹಾಕದೇ ಲೋಟವನ್ನೇ ಬಾಯಿಗೆ ಬಗ್ಗಿಸುತ್ತಿದ್ದ ನರ್ಸನ್ನು ಕಂಡಿದ್ದ ಅವರು ಹೌಹಾರಿದ್ದರು.

"ನರ್ಸ್ ಹಾಗೆ ಹಾಕ್ಬೇಡಿ ಗಂಟಲು ಹತ್ತಿತು! ಮೊದಲೇ ವಯಸ್ಸಾಗಿದೆ. ತುಂಬಾ ವೀಕಾಗಿದ್ದಾರೆ! ಕೊಡಿ ಇಲ್ಲಿ ನಾನೇ ಕುಡಿಸು ತ್ತೀನಿ. ನೀವು ನಂಗೆ ಸಹಾಯ ಮಾಡಿ ಸಾಕು!" ಎಂದಿದ್ದರು. ತಾವು ನೂಪುರ ಒಳ್ಳೆಯ ಹುಡುಗಿಯೆಂದೇ ಅಂತಸ್ತು ನೋಡದೇ ಮಗನಿಗೆ ತಂದು

ಕೊಂಡದು ! ಅವಳಿಗೆ ಒತ್ತಾಸೆಯಾಗಿದ್ದು ಅವಳನ್ನು ಅಷ್ಟು ಆದರಿಸಿ ನೋಡಿಕೊಳ್ಳುತ್ತಿದ್ದುದ್ದು. ಸಮಯಾಂದರೆ ಅಷ್ಟು ಮಾಡಲು ಅವಳ ಕೈಯ್ಯಲಾಗುವುದಿಲ್ಲವೇ ? ಕೂಡಲೇ ಅವರಿಗೆ ತಮ್ಮ ತಪ್ಪು ಅರ್ಥ ವಾಯಿತು. ಹೊಸದಾಗಿ ಮದುವೆಯಾದ ಹುಡುಗಿ. ಹಾಯಾಗಿ ಗಂಡ ನೊಂದಿಗಿರಬೇಕೆಂಬ ಆಸೆ ಸಹಜ. ಆದರೆ ಈಗೇನು ಮಾಡುವುದು ? ನೂಪುರ ವರ್ಧಮಾನ ಇಬ್ಬರೂ ಒಟ್ಟಿಗೆ ಸುಖವಾಗಿರಬೇಕೆಂದೇ ತಮಗಾಸೆ. ನೂಪುರನನ್ನೇ ತವರಿಗೆ ಕಳುಹಿಸಿದರೆ ವಾಸಿ. ತಾವು ರಂಗಮ್ಮನ ಜೊತೆ ಆಗಾಗ್ಗೆ ಬರುತ್ತಾ ಇದ್ದ ಬನಮ್ಮನನ್ನು ಅಡಿಗೆಗೆ ಇಟ್ಟುಕೊಂಡರಾಯಿತು. ಅವರದು ಬಹಳ ಬಾಯಿ, ನೂಪುರ ಇದ್ದರೆ ಅದಕ್ಕೆಲ್ಲಾ ಅಸ್ಪದವಾಗುತ್ತದೆ. ಅವಳೇ ಇಲ್ಲದಿದ್ದರೆ ಎಲ್ಲವೂ ಸುಗಮ. ಅವಳ ತಾಯಿ-ತಂದೆ ಹೇಗಿದ್ದರೂ ಕರೆಯುತ್ತಿದ್ದರು. ವರ್ಧಮಾನನೂ ಒಪ್ಪುತ್ತಾನೆ !

"ಮಾನೂ, ಹೇಗಿದ್ರೂ ನೂಪುರನ್ನ ತವರಿಗೆ ಕಳಿಸೀಂತಾ ಅಂತಾ ಇದ್ರು. ಇಲ್ಲಿ ಅವಳಿಗೆ ಅಗಚಾಟಲು ಆಗೋದು ಬೇಡಾ ಒಂದು ಹದಿನೈದು ದಿನ ಕಳಿಸೋಣ. ನಾನು ಬನಮ್ಮನಿಗೆ ಬಂದು ಅಡಿಗೆ ಕೆಲ್ಸ ಮಾಡೂಂತಾ ಹೇಳ್ತೀನಿ."

ಆದರಂತೆಯೇ ರಾಮಲಿಂಗಯ್ಯನವರನ್ನು ನೋಡಿಹೋಗಲು ಬಂದ ಸಂಜೀವಯ್ಯ, ಕಾವೇರಮ್ಮ ಇಬ್ಬರನ್ನೂ ಆದರದಿಂದಲೇ ಸ್ವಾಗತಿಸಿ ಲಲಿತಮ್ಮ ಹೇಳಿದರು.

"ಪಾಪ, ಎಲ್ಲಾ ಜವಾಬ್ದಾರಿ ಈಗ ನಾಲ್ಕೈದು ದಿನಗಳಿಂದ ನೂಪುರಳ ಮೇಲೇ ಬಿದ್ದಿದೆ. ಅವ್ಳು ಚಿಕ್ಕ ಹುಡುಗಿ. ನಮ್ಮ ರಂಗಮ್ಮ ಆರ್ಥ್ರೈಟಿಸ್ ಅಂತ ಹದಿನೈದು ದಿನ ರಜ ಹಾಕ್ಬಿಟ್ಟಿದ್ದಾಳೆ-ಸಮಯಾಂದ್ರೆ ಹಾಗೇ ನೋಡೀ ನಮ್ಮ ಮಾನೂಗೆ ಯೋಚ್ನೆ ಆಗಿದೆ. ಈ ನೂಪುರಂಗೆ ತುಂಬಾ ಕಷ್ಟ ಆಗುತ್ತೇಂತಾ...."

"ಹಾಗಂದ್ರೆ ಹೇಗೆ ಸಮಯಾಂದ್ರೆ ಮಾಡ್ಬೇಕೂ ನೂಪುರಂಗೆ ಕೆಲ್ಸ ಎಲ್ಲಾ ಬರುತ್ತೆ. ಎರಡು ದಿನ ಕಷ್ಟ ಆಗ಼್ಬೋದೂ ಆಮೇಲೆ ಎಲ್ಲಾ ಸರಿ ಹೋಗುತ್ತೆ." ಕಾವೇರಮ್ಮ ಬೀಗರನ್ನು ಮೆಚ್ಚಿಸಲು ಹೇಳಿದರು.

"ನೀವು ಇಷ್ಟು ದಿನ ನೋಡ್ಕೊಳ್ಳಿಲ್ವೇ ? ಪಾಪ ನಿಮ್ಮಿಂದೆ ಹೀಗೆ ಮಲಗಿಬಿಟ್ಟಿರೋದು ನಿಮ್ಗೆ ಎಷ್ಟು ಕಷ್ಟ ಆಗುತ್ತೆ ಅಲ್ವಾ ?"

"ನಮ್ಗೆ ಎಲ್ಲಾ ಅಭ್ಯಾಸ ಆಗಿದೆ ಬಿಡಿ. ಈಗಿನ ಕಾಲದ ಹುಡುಗರು

ಹುಡುಗಿಯರು ಬಲು ಸೂಕ್ಷ್ಮ, ಬಲು ನಾಜೂಕು, ಕೈಲೇನೂ ಆಗೋಲ್ಲ. ಅದಕ್ಕೇ ನಾನು ಹೇಳ ಹದಿನೈದು ದಿನ ಅವ್ಳು ಅವಳ ತಾಯಿ ಮನೆಗೆ ಕಳಿಸಿಬಿಡಮ್ಮಾ-ನಾವು ಹೇಗೋ ಅಡ್ಜಸ್ಟ್ ಮಾಡ್ಕೋಳ್ಳೋಣ ಅವಳಿಗೆ ತೊಂದ್ರೆ ಮಾಡೋದು ಬೇಡಾಂತಾ.."

ಲಲಿತಮ್ಮ ನಿಲ್ಲಿಸಿದಾಗ ಕಾವೇರಮ್ಮನಿಗೆ ಒಳಗೇ ಹಿಗ್ಗಾದರೂ ಮೇಲೆ ತೋರ್ಪಡಿಸಿಕೊಳ್ಳಲಿಲ್ಲ.

"ಮನೆ ಸೊಸೆಯಾಗಿ ಅಷ್ಟೂ ಮಾಡದಿದ್ರೆ ಹೇಗಮ್ಮಾ ಮಾಡ್ಲಿಬಿಡಿ. ನಿಮ್ತೊಂದೆ ಸರಿಹೋಗಲಿ ದೇವರು ಒಳ್ಳೇದು ಮಾಡಲಿ"

ಆದರೆ ವರ್ಧಮಾನನೇ ಹೇಳಿರುವನೆಂದು ಕೇಳುತ್ತಲೇ ಸಂಜೀವಯ್ಯ ಆತುರ ತೋರಿದರು.

"ಹೌದಮ್ಮಾ, ನಿಮ್ಮದೇ ಕೆಲಸ ಜವಾಬ್ದಾರಿಯಿರುತ್ತೆ. ನಮ್ಮ ನೂಪುರಳದು ಬೇರೇ ಅಂದ್ರೆ ನಿಮಗೆ ತೊಂದ್ರೆ ಜಾಸ್ತಿ. ಅದಕ್ಕೇನು ಕಳಿಸಿಕೊಡಿ. ಹದಿನೈದು ದಿನ ನಮ್ಮನೇಲಿದ್ದು ಬರಲಿ ಅಷ್ಟು ಹೊತ್ತಿಗೆ ರಾಮಲಿಂಗಯ್ಯನವರ ಸ್ಥಿತಿಯೂ ಸುಧಾರಿಸಬಹುದು."

ನೂಪುರ ಈಗ ತವರಿಗೆ ಹೋಗುವುದು ಲಲಿತಮ್ಮನಿಗೆ ಸಮಾಧಾನ ತರುವಂತಿತ್ತು. ಮದುವೆಯಾಗಿ ಮನೆಗೆ ಬಂದಂದಿನಿಂದ ಪ್ರಕ್ಷುಬ್ಧವಾಗಿದ್ದ ಮನೆಯ ವಾತಾವರಣದಲ್ಲಿ ಎಲ್ಲರೂ ಅವಳ ಬಗ್ಗೆಯೇ ಹೆಚ್ಚಾಗಿ ಕಾಳಜಿ ವಹಿಸುತ್ತಿದ್ದುದರಿಂದಲೇ ತಮ್ಮ ತಂದೆಯೂ ಈ ಸ್ಥಿತಿಗೆ ಬಂದುದು ಎಂದೇ ಅವರ ವಾದವಾಗಿತ್ತು.

ನೂಪುರಳಿಗೂ ಅತ್ತೆ, ಗಂಡ ಇವರು ತನ್ನ ಅಂತಸ್ತಿಗಿಂತ ಹೆಚ್ಚಿನವರಾಗಿದ್ದುದರಿಂದ ಸಲಿಗೆ, ಸ್ನೇಹ ಕಡಿಮೆಯಾಗಿತ್ತು. ತನ್ನ ಮನೆಯಲ್ಲಿ ಕುಣಿಯುತ್ತಾ ಹರಟುತ್ತಾ ಇಷ್ಟಬಂದಂತಿರಬಹುದೆಂದು ಅವಳಿಗೂ ಸಂತಸವಾಯಿತು.

ನೂಪುರಳನ್ನು ತವರಿಗೆ ಕಳುಹಿಸಿಕೊಟ್ಟ ಮೇಲೆ ಬನಮ್ಮ ಅಡಿಗೆಗೆ ಬಂದು ನಿಂತರು. ಹೆಂಡತಿಯ ಸೆರಗು ಹಿಡಿದು ಓಡಾಡುತ್ತಿದ್ದ ವರ್ಧಮಾನನಿಗೆ ಅವಳಿಲ್ಲದುದರಿಂದ ಬೇಸರವೆನಿಸಿದರೂ ಇನ್ನಿತರ ಕೆಲಸಗಳನ್ನು ಮಾಡಲು ಹೆಚ್ಚು ಸಮಯ ಸಿಕ್ಕುವುದು ಖಂಡಿತವಾದುದರಿಂದ ಬೇಡವೆನಿಸಿದ್ದರೂ, ಒಲ್ಲದ ಮನಸ್ಸಿನಿಂದಲೇ ಕಳುಹಿಸಿಕೊಟ್ಟ.

ನೂಪುರ ತವರಿಗೆ ಬಂದ ದಿನವೇ ಅಕ್ಕಪಕ್ಕದವರ ಗುಸುಗುಸು ಪ್ರಾರಂಭವಾಗಿತ್ತು.

"ಏನ್ರೀ ಕಾವೇರಮ್ಮ, ಮಗಳು ಅದೇನು ತವರಿಗೆ ಬಂದಿರೋದೂ ? ಏನಾದ್ರೂ ವಿಶೇಷಾನಾ ?"

"ಯಾಕ್ರೀ ನೂಪುರ ತುಂಬಾ ತೆಗೆದುಹೋಗಿದ್ದಾಳೆ, ಅತ್ತೇ ಮನೆ ಇನ್ನೂ ಸರಿ ಹೋಗಿಲ್ವೇನೋ !"

"ಹೌದೇನ್ರೀ ಕಾವೇರಮ್ಮ ನೂಪುರ ಅತ್ತೆ ಮನೆಗೆ ಹೋದ ಕೂಡ್ಲೇ ತುಂಬಾ ಮೈ ಸರಿಯಿರ್ಲಿಲ್ವಂತೆ. ದೃಷ್ಟಿ ಗಿಷ್ಟಿ ಆಗಿತ್ತೇನೋ ! ಅದ್ಯಾರೋ ಶಾಸ್ತ್ರಿಗಳು ಬಂದು ಪೂಜೆ ಪುನಸ್ಕಾರ ಮಾಡಿದ್ಮೇಲೆ ವಾಸಿಯಾಯ್ತಂತೆ." ಅವರೆಲ್ಲರ ಹತ್ತಾರು ಕುತೂಹಲದ ಪ್ರಶ್ನೆಗಳಿಗೆ ಉತ್ತರ ಹೇಳಿ ಹೇಳಿ ಕಾವೇರಮ್ಮನವರಿಗೆ ಸಾಕಾಗಿಹೋಯಿತು.

"ಏನಿಲ್ಲ ನೂಪುರ ಸರ್ಯಾಗೆ ಇದ್ದಾಳೆ. ಎಷ್ಟಾದ್ರೂ ತಂದೆ, ತಾಯಿ, ತವರನ್ನು ತೊರೆದುಹೋಗಿದು -ಸ್ವಲ್ಪ ಜರಕೊಂಡಿದು ಅಷ್ಟೇ. ಈಗ ಎಷ್ಟೋ ವಾಸಿ."

ಆದಿನ ನೂಪುರ ತಾಯಿಯ ಬಲವಂತಕ್ಕೆ ತಲೆಗೆ ಅಭ್ಯಂಜನ ಮಾಡಿ ಬಿಸಿಲಲ್ಲಿ ತಲೆ ಒಣಗಿಸಿಕೊಳ್ಳುತ್ತಾ ನಿಂತಿದ್ದಳು.

ಎದುರುಮನೆಯ ಪಂಕಜಮ್ಮ ನೂಪುರಳನ್ನು ನೋಡುತ್ತಲೇ ಒಬ್ಬಳೇ ಕುಳಿತಿರುವುದನ್ನು ಗಮನಿಸಿ ಮೆಲ್ಲಗೆ ಬಂದು ಪಕ್ಕದಲ್ಲಿ ಕುಳಿತರು.

"ಏನೇ ನೂಪು, ನಿನ್ನ ಕೂದ್ಲೆಲ್ಲ ಯಾಕೆ ಇಷ್ಟು ಉದುರಿಹೋಯ್ತು ? ಎಷ್ಟಾದ್ರು ಅತ್ತೇ ಮನೆ, ನೀರು ನಿಡಿ ಹಾಕೋತೊ, ಇಲ್ವೋ ! ತುಂಬಾ ಇಳಿದೂ ಹೋಗ್ಬಿಟ್ಟಿದ್ಯಾ !"

ನೂಪುರ ಅವರಿಂದ ಕೊಂಚ ದೂರ ಜರುಗಿದಳು.

"ಇಲ್ವಲ್ಲ. ಕೂದ್ಲೆಲ್ಲ ಹಾಗೆ ಇದ್ಯಲ್ಲಾ ! ನಾನೇನೂ ಸಣ್ಣ ಆಗಿಲ್ಲ. ನಮ್ಮತ್ತೆ ತುಂಬಾ ಒಳ್ಳೆಯವರು"

"ಅದೇನೋ ನಿನಗೆ ಮೈ ಸರಿಯಾಗಿರಲಿಲ್ಲವಂತೆ ?"

ನೂಪುರ ಮಾತನಾಡದೆ ಎದ್ದು ನಿಂತಳು. ಮುಖದ ಮೇಲೆ ಬಂದ ಜೋಂಪೆ ಕೂದಲನ್ನು ಹಿಂದೆ ಸರಿಸುವಾಗ ಅವಳ ಕೈಯಲ್ಲಿದ್ದ ತಾಯಿತ ಕಣ್ಣಿಗೆ ಬಿತ್ತು.

"ಇದೇನು ? ಯಾವಾಗ ಕಟ್ಟಿಸಿಕೊಂಡೆ ? ಏನಾದ್ರು ಹೆದರಿಕೊಂಡಿದ್ಯಾ?

ನಮ್ಮ ಸೀನಿ ಮಗ ಹೆದರಿಕೊಂಡಿದಾಗ ನಾನೂ ಒಂದು ಕಟ್ಟಿಸಿದ್ದೆ. ಒಂದು ತಿಂಗಳಲ್ಲಿ ಎಲ್ಲಾ ವಾಸಿಯಾಯಿತು. ಜೋರಾಗಿ ಗಾಳೀ ಬೀಸ್ತಿದ್ರೂ ಹೆದರ್ತಿದ್ದ ಅವನು"

ನೂಪುರಳಿಗೆ ಏನು ಹೇಳಬೇಕೆಂದೇ ತಿಳಿಯಲಿಲ್ಲ.

"ಅಮ್ಮ ಶರೀತಿರೊ ಹಾಗಿದೆ. ಬರ್ತೀನಿ" ಎದ್ದು ಒಳಗೆ ಹೊರಟಳು. ಪಂಕಜಮ್ಮ ಆ ದಿನ ಊಟ ಮುಗಿಸಿ ಕೂತಾಗ ನೀಲವೇಣಮ್ಮನ ಹತ್ತಿರ ಗುಟ್ಟಾಗಿ ಹೇಳಿದರು.

"ಬೆಳಗ್ಗೆ ನೂಪುರಳ್ನ ನೋಡ್ದೇರೀ, ತಾಯ್ತಾ ಬೇರೆ ಕಟ್ಟಿಸಿ ಕೊಂಡಿದ್ದಾಳೆ. ಏನೋ ಕೇಳೋಣ ಅಂತ ಹೋದ್ರೆ ನಿಗರಿಕೊಂಡು ಒಳಗೆ ಹೋದ್ಲು. ನಮ್ಮ ಷಡ್ಡಕ್ಕನ ಮನೆ ಅದೇ ಬೀದೀಲಿರೋದು ಅವನು ಬರ್ಲೀ, ಎಲ್ಲಾ ವಿಚಾರಿಸ್ತೀನಿ."

ಅವರೊಂದಿಗೆ ಮಾತಿಗೆ ಸೇರಿದ ರೇಣುಕಮ್ಮ ಮೆಲುದನಿಯಲ್ಲಿ ಹೇಳಿದರು.

"ಅಯ್ಯೋ ! ಅದೇನು ಸುಮ್ನಿರಿ. ಕಾಲೇಜ್ನಲ್ಲಿ ನನ್ನ ಅವಳ ಜೊತೇನೇ ನನ್ನ ಮಗ್ಳೂ ಓದ್ತಿರಲಿಲ್ವೆ ? ಮಗಳನ್ನ ಕಳಿಸಿ ಮೆಲ್ಲಗೆ ಎಲ್ಲಾನೂ ವಿಚಾರಿಸಿಕೊಳ್ತೀನಿ."

"ರೀ, ರೇಣುಕಮ್ಮಾ ಆ ಕೆಲ್ಸ ಮಾಡಿ. ನೋಡಿದೀರ, ನೀವು ? ಈಚೀಚೆಗೆ ಕಾವೇರಮ್ಮ ಮಗಳ್ನ ಎಲ್ಲೂ ಕಳ್ಸೋದೆ ಇಲ್ಲ ? ನನಗನಿಸುತ್ತೆ ಒಳಗೇ ಏನೊ ಮಸಲತ್ತು ಮಾಡ್ತಿದ್ದಾರೆ"

"ನಮಗ್ಯಾಕ್ರೀ. ಬೇರೆಯವರ ಮಾತು ? ಬನ್ನಿ ಒಳಗೆ ಹೋಗೋಣ" ಜಯಮ್ಮ ಮಾತಿಗೆ ಪೂರ್ಣ ವಿರಾಮ ಹಾಕಿ ಎಲ್ಲರನ್ನೂ ಒಳಗೆ ಕರೆದೊಯ್ದರು.

ಎಲ್ಲರೂ ಜಯಮ್ಮನತ್ತ ನೋಡಿದರು.

ಇದೇನು ಇದ್ದಕ್ಕಿದ್ದಾಗೆ ಒಳ್ಳೆ ಬುದ್ಧಿ ಬಂದಿದೆ. ತಮಗಿಂತ ಹೆಚ್ಚಾಗಿ ಏನೋ ತಿಳಿದುಕೊಂಡಿರಬೇಕು." ಎಂದು ಒಬ್ಬರ ಮುಖ ಒಬ್ಬರು ನೋಡಿ ಕೊಂಡು ಜಯಮ್ಮನ ಹಿಂದೆ ಹೊರಟರು.

"ಏನ್ರಿ ಜಯಮ್ಮ ? ಏನು ವಿಶೇಷ ಮನೇಲಿ ? ಕಾಯಿ ಕಡುಬು ಏನಾದ್ರು ಮಾಡಿದ್ದೀರ ?"

ಎಲ್ಲರಿಗೂ ಕೇಸರಿಭಾತು, ಚಿಪ್ಸ್, ಬಾದಾಮಿ ಹಾಲು, ಶರಬತ್ತು

ಮಾಡಿದ ಜಯಮ್ಮ ಮನಸ್ಸಿನಲ್ಲೇ ನಕ್ಕರು. ಇವರೆಲ್ಲಾ ಬರಿಯ ಮಾತಿನಲ್ಲಿ ಮನೆ ಕಟ್ಟುತ್ತಾರೆ. ಆದರೆ ತಾನಾಗಲೇ ಸಾಕಷ್ಟು ವಿಷಯ ಸಂಗ್ರಹಿಸಿದ್ದಾಗಿದೆ. ಮೊನ್ನೇ ಆ ವಾಮಾಚಾರಿ ರುದ್ರಣ್ಣನ ಮನೆಯ ಹತ್ತಿರ ನೂಪುರಳ ಯಜಮಾನರ ತಾತಾ ಇದ್ದರಂತೆ. ಯಾರೂ ವಾಮಾಚಾರಿಯ ಬಳಿ ಸುಮ್ಮನೇ ಹೋಗುವುದಿಲ್ಲಾ! ಅದೂ ಅವನು ಸತ್ತ ಮೇಲೆ ಏನೇನೋ ಪೂಜೆ ಮಾಡಿ ಅವನನ್ನು ಹೂತು ಹಾಕಿದರಂತೆ. ಆದಾದ ಮೇಲೆಯೇ ನೂಪುರಳ ಯಜಮಾನರ ತಾತಾನಿಗೆ ಲಕ್ವಾ ಹೊಡೆದ್ದಿತ್ತಂತೆ ವಾಮಾಚಾರಿ ಸತ್ತರೆ, ಈ ಮುದುಕನಿಗೇನು ಕೆಲಸವಿತ್ತಪ್ಪೇ?

ಅಂದು ಸಂಜೆಯೇ ಎಲ್ಲರಿಗೂ ಜಯಮ್ಮ ಬಿಸಿ,ಬಿಸಿ ಸುದ್ದಿ ಹೇಳಿದರು. "ನೂಪುರಳಿಗೆ ದೆವ್ವ ಹಿಡಿದಿತ್ತಂತೇರೀ. ಅವಳ್ನ ಮನೆ ತುಂಬಿಸಿಕೊಳ್ಳಲು ಕರ್ಕೊಂಡು ಹೋದಾಗ್ಲೇ ಅವಳ್ನ ಹಿಡ್ಕೊತಂತೆ. ಕಿರಿಚಾಡೋಳಂತೆ ಪರಚಾಡೋಳಂತೆ. ಸಿಕ್ಕಿದ್ದೆಲ್ಲಾ ತಿಂದು ಬಿಡೋಳಂತೆ ಅದೇ ನೂಪುರಳ ಅತ್ತೆ ಸವತೀದೇಂತ ಆ ದೆವ್ವ! ರುದ್ರಣ್ಣ ಅದೇನೊ ಪೂಜೆ ಮಾಡಿ ಅದ್ನ ಬಿಡಿಸಿದ್ನಂತೆ, ಅದೇನಾಯ್ತೋ ಆಮೇಲೆ ಆ ರುದ್ರಣ್ಣನೂ ತೀರ್ಕೊಂಡ, ರಾಮಲಿಂಗಯ್ನೋರ್ಗೆ ಲಕ್ವ ಹೊಡೆದುಬಿಡ್ತು, ಯಾರ ಪಾಪ ಯಾರ ತಲೆಗೋ! ನೂಪುರಳ್ನ ಯಾಕೆ ತವರ್ಗೆ ಕಳ್ಸಿದ್ದಾರೋ ಗೊತ್ತಾಗಲಿಲ್ಲ." ರೇಣುಕಮ್ಮನಿಗೆ ಪ್ರ್ರಿಯೆಲ್ಲಾ ಕಿವಿಯಾಯಿತು.

"ಹೌದ್ರೀ ಪಂಕಜಮ್ಮ ಹೇಳಿದ ಹಾಗೆ ಅವಳು ತುಂಬಾ ಇಳಿದು ಹೋಗಿದ್ದಾಳೆ. ಮುಖದಲ್ಲಿರೋ ಕಳೇನೇ ಕೆಟ್ಟುಹೋಗಿದೆ. ನಮ್ಮ ವಿಮಲೂನ್ನ ನಾಳೆಕಳಿಸ್ತೀನಿ ಎಲ್ಲಾ ನಿಧಾನವಾಗಿ ವಿಚಾರಿಸ್ಕೊಂಡು ಬರ್ತಾಳೆ"

ಯಾರಿಗೂ ಕಾಣದಂತೆ ನೂಪುರಳನ್ನು ತಮ್ಮ ಮನೆ ಹೊಸ್ತಿಲಿನೊಳಗೇ ಇಟ್ಟುಕೊಂಡಿದ್ದ ಲಲಿತಮ್ಮನಿಗೆ ನೂಪುರಳ ತವರುಮನೆಯ ಅಕ್ಕಪಕ್ಕದವರೆಲ್ಲಾ ಅವಳ ಬಗ್ಗೆ ಮಾತಾಡಿಕೊಳ್ಳುತ್ತಿದ್ದುದು ಕಿವಿಗೆ ಬಿದ್ದಿತು. ಅಡಿಗೆ ಬನಮ್ಮನೆ ಆ ಬಿಸಿ ಬಿಸಿ ಸುದ್ದಿ ತಂದಿದ್ದರು.

"ನೋಡ್ರಿ ಅವರೆಲ್ಲಾ ನಿಮ್ಮ ಸೊಸೆ ಬಗ್ಗೆ ಏನೇನೋ ಮಾತಾಡ್ತಾರೆ. ಅವಳಿಗೆ ನಿಮ್ಮ ಸವತಿ ದೆವ್ವ ಹಿಡ್ಕೊಂಡಿತ್ತಂತೆ. ನಿಮ್ಗೆ ನೋಡ್ಕೊಂಡು ಸಾಕಾಗಿಹೋಗಿದ್ರಿಂದ ತವರಿನಲ್ಲಿ ಒಂದಿಷ್ಟು ದಿನ ಇರ್ಲೀಂತ ಕಳ್ಸಿದ್ದಾರಂತೆ. ತಾವು ಕಳುಹಿಸಬಾರದಿತ್ತು. ಕಷ್ಟವೋ, ಸಿಷ್ಠೂರವೋ ಅವಳನ್ನು ಮನೆಯಲ್ಲೇ ಇಟ್ಟುಕೊಂಡಿರಬೇಕಿತ್ತು. ಅವರೆಲ್ಲಾ ಮಾತಾಡುವುದನ್ನು

ಕೇಳಿ ನೂಪುರ ಇನ್ನೇನಾದರೂ ಮಾಡಿಕೊಂಡು ಬಂದರೆ! ಕೂಡಲೇ ವರ್ಧಮಾನನಿಗೆ ಹೇಳಿದರು.

"ಹೋಗೋ ಮಾನೂ ನೂಪುರಳ್ನ ನೋಡ್ಕೊಂಡು ಬಾ, ಬರ್‍ತೀನೀಂದ್ರೆ ಕರ್‍ಕೊಂಡು ಬಂದುಬಿಡು"

* * * *

ನೂಪುರ ತಾಯಿಯೊಂದಿಗೆ ಹುರುಳೀಕಾಯಿಯ ನಾರನ್ನು ತೆಗೆಯುತ್ತಿದ್ದಳು. ತಾಯಿಯನ್ನು ಕೇಳುವುದೋ ಬಿಡುವುದೋ ಎಂಬ ಇಬ್ಬಂದಿಯಿಂದಲೇ ಕೇಳಿದಳು.

"ಅಮ್ಮಾ, ದೆವ್ವ ಹಿಡ್ಕೊಳ್ಳೋದೂ ಅಂದ್ರೇನಮ್ಮಾ ?"

"ಹೋಗೇ ಅದೆಲ್ಲಾ ಯಾಕೆ ? ನಮ್ಮಂತೋರು ದೇವ್ರು, ದಿಂಡರು, ಪೂಜೆ ಪುನಸ್ಕಾರ ಮಾಡೋರ್‍ನ ಹಿಡ್ಕೊಳಲ್ಲ !?"

"ಹಾಗಲ್ಲಮ್ಮಾ ನಾನು ಕೇಳಿದ್ದು ದೆವ್ವ ಇರೋದು ನಿಜಾನಾ ?"

"ಏನೋಪ್ಪ ಹಾಗಂತಾರೆ, ಸಾಯುವಾಗ ಯಮಪಾಶ ಬೀಳೋವರ್‍ಗೂ ಬದುಕಿದ್ದು ಸತ್ತು ಸರಿಯಾದ ಕರ್ಮ ಮಾಡಿದ್ರೆ ದೆವ್ವ ಭೂತ ಒಂದೂ ಇರೋಲ್ವಂತೆ ಆದ್ರೆ ದುರ್ಮರಣ, ಅಕಾಲಮರಣ ಆದ್ರೆ ಆ ಶವದ ಸಂಸ್ಕಾರ ಸರಿಯಾಗಿ ಆಗ್ದೇ ಇದ್ರೆ ಅವು ಮುಕ್ತಿಯಾಗೋವರ್‍ಗೂ ಇದ್ದು ಗಾಳೀಲೇ ತಿರ್‍ಗ್ತಾ ಇರುತ್ತಂತೆ. ತನಗೇನಾದರೂ ಬೇಕಾದ್ರೆ ಯಾರನ್ನಾದರೂ ಹಿಡಿದು ಅವರಿಂದ ವಸೂಲು ಮಾಡಿಕೊಳ್ಳುತ್ತಂತೆ. ತನಗೆ ಹಿಂಸೆ ಮಾಡಿದೋರ ಮೇಲೆ ಸೇಡು ತೀರಿಸಿಕೊಳ್ಳತಂತೆ ಹಿಂಸೆ ಮಾಡಿ ಕೊಲ್ಲುತ್ತಂತೆ"

ನೂಪುರ ಬಹಳ ಹೊತ್ತು ಮೌನವಾಗಿದ್ದಳು.

"ಸಿಪಸೇನಮ್ಮಾ ನಮ್ಮತ್ತೆ ಸವತೀನ್ನ ಕೊಂದು ಹಾಕಿದ್ರಂತೆ. ಅವರ ಹೆಣಾನಾ ಸುದ್ದೀ ಇಲ್ವಂತೆ. ಯಾರೋ ಅವರ್‍ನ ಕರ್‍ಕೊಂಡು ಹೊರಟು ಹೋದ್ರಂತೆ. ಅವ್ರೇ ದೆವ್ವ ಆಗಿ ನಮ್ಮತ್ತೆ ಮನೆಯವರ್‍ನ ಕಾಡ್ತಾ ಇದ್ಯಂತೆ"

ಕಾವೇರಮ್ಮ ಸರಕ್ಕನೇ ತಲೆಯೆತ್ತಿ ನೋಡಿದರು.

"ಯಾರು ಹೇಳಿದ್ರು ನಿಂಗೆ ?"

ಭಯ ಅವರ ಕಣ್ಣುಗಳಲ್ಲಿ ಕುಣಿಯುತ್ತಿತ್ತು.

"ಯಾರು ಹೇಳಿದ್ರು ನಿಂಗೇಂತಾ ? ಅದೆಲ್ಲಾ ಸುಳ್ಳು. ನಿಮತ್ತೇಗೆ, ಯಜಮಾನರಿಗೆ, ತಾತರಿಗೆ ಏನಾಗಿದೆ ? ಎಲ್ಲಾ ಚೆನ್ನಾಗೇ ಇದ್ದಾರಲ್ಲಾ"

"ಅವರಿಗೇನೂ ಆಗಲಿಲ್ಲಮ್ಮಾ-ನನ್ನ ಅವರ ಮನೆಗೆ ಕರ್ಕೊಂಡು ಹೋದ್ರಲ್ಲಾ. ಆಗ ಆ ಕಡೆ ತಟ್ಟೆ ಹಿಡಿದು ನಮ್ಮತ್ತೆ ಪಕ್ಕದಲ್ಲಿ ಒಬ್ಳು ಹರಿದುಹೋಗಿದ್ದ ಹಸಿರು ಸೀರೆ ಉಟ್ಕೊಂಡು ಒಬ್ಳು ಬಸಿರಿ ನಿಂತಿದ್ಲು. ಅವಳ್ನ ನೋಡಿದ ತಕ್ಷಣ ನಂಗೇ ಒಂದು ತರಹ ಆಗೋಯ್ತುಮ್ಮಾ-ಆಮೇಲೆ ನಂಗೆ ಏನೇನೋ ಆಗೋದೂ-ಯಾರೋ ನನ್ನ ಎದೆ ಮೇಲೆ ಕೂತ್ಕೊಂಡಿರೋ ಹಾಗೆ ನನ್ನ ತಲೇ ಕೂದಲಲ್ಲೇ ಉಚ್ಚೀ ಉಚ್ಚೀ ತಲೆ ಒಳಗೆ ಹೋದ ಹಾಗೆ-ಏನೇನೋ ಆಗೋದೂ-ನಂಗೆ ಯಾರೋ ನೋವಿನಿಂದ ನರಳೋ ಶಬ್ದ ಕೇಳೋದೂ, ಯಾವುದೋ ಹಿಮವಂತಹ ಚಳಿ ನನ್ನ ಮೈಯ್ಯೊಳಗೆ ಹೋದ ಹಾಗೆ ಆಗೋದು. ಆಗ ನಾನೇನು ಮಾಡ್ತಾ ಇದ್ದೇನೀಂತಾನೇ ಗೊತ್ತಾಗ್ತಾ ಇರ್ಲಿಲ್ಲ. ನಮ್ಮತ್ತೆ ನವಗ್ರಹ ಶಾಂತಿ ಮಾಡ್ಸಿದ್ರು. ತಾಯಿತಾ ಕಟ್ಸಿದ್ರು-ಆಮೇಲೆ ಅದ್ಯಾರೋ ರುದ್ರಣ್ಣನಂತೆ ಅವ್ನ ಕರೆಸಿದ್ರು, ಅವ್ನು ಏನೇನೋ ಮಾಡಿ ಹೋದ. ಆಮೇಲೆ ನಂಗೆ ಮೈಯೆಲ್ಲಾ ಹಾಯಾಗಿದ್ದು-!"

ಕಾವೇರಮ್ಮನಿಗೆ ಒಳಗೆ ನಡುಕ ಪ್ರಾರಂಭವಾಯಿತು. ತನಗೆ ಒಂದು ಮಾತೂ ತಿಳಿಸದೇ ಅಳಿಯ, ಲಲಿತಮ್ಮ ಇಬ್ಬರೂ ಗುಟ್ಟಾಗಿಟ್ಟು ಬಿಟ್ಟಿರಲ್ಲಾ ತಮ್ಮ ಅನುಮಾನ ಸರಿಯಾಯಿತು.

"ನೀನ್ಯಾಕೇ ನಾನು ಬಂದಾಗ ಹೇಳಲಿಲ್ಲ ?"

"ನಿನ್ನೆ ನೋಡಿದ್ರೆ ಅಷ್ಟೊತ್ತು ನಂಗೆ ಹೆದರಿಕೆಯಾಯಿತು. ಅದಕ್ಕೇ ಹೇಳಲಿಲ್ಲ ! ನಮ್ಮತ್ತೇನೇ ಹೇಳ್ಬೋದೂ ಅಂದ್ಕೊಂಡಿದ್ದೆ."

"ಹೋಗ್ಲಿ ಬಿಡು- ಈಗ ಎಲ್ಲಾ ಸರಿಹೋಯ್ತಲ್ಲಾ ಅಕ್ಕಪಕ್ಕದವರು ಬಂದು ನಿನ್ನ ಸಿಕ್ಕ ಹಾಗೆ ಮಾತಿನೆಳೀತಾರೆ. ಹುಷಾರು- ಅವರು ಮುಂದೆ ಬಾಯಿಬಿಟ್ಟೀಯಾ !"

"ಹೋಗಮ್ಮಾ ಅದ್ರಲೆಲ್ಲಾ ಏನು ? ನಾನು ವಿಮಲ ಬಂದಿದ್ಲಲ್ಲಾ ಅವಳಿಗೆ ಎಲ್ಲಾ ಹೇಳಿದೆ. ಅವಳಿಗೆ ಅದೆಲ್ಲಾ ಕೇಳೋಕ್ಕೆ ತುಂಬಾ ಇಷ್ಟಾಂತೆ. ಅವಳೇ ಹೇಳಿದ್ದು ತಾತಂಗೂ ಅದೇ ದೆವ್ವ ಅದುಮಿಕೊಂಡಿದ್ಬೇಕೂ, ನೀನು ಆ ಮನೆಗೆ ಹೋಗ್ಬೇಡಾ-ಯಜಮಾನ್ರನ್ನಾ ಕರೆಸಿಕೊಂಡು ಬುದ್ಧಿ ಹೇಳಿ ಬೇರೆ ಹೋಗಿಬಿಡೂಂದ್ಲು."

ಕಾವೇರಮ್ಮಾ ಅವಾಕ್ಕಾದರು. "ನೂಪುರನಿಗೆ ಏನೂ ತಿಳಿಯೋಲ್ಲ. ತಾವು ಎಚ್ಚರ ಮಾಡಬೇಕಿತ್ತು. ಆ ವಿಮಲ ಹೋಗಿ ರೇಣುಕಮ್ಮನಿಗೆ

ಹೇಳಿರ್ತಾಳೆ. ಅವ್ರು ಎಲ್ಲರ ಕಿವಿಗೂ ಒಂದಕ್ಕೆ ಹತ್ತರಷ್ಟು ಮಾಡಿ ಹೇಳಿರ್ತಾರೆ. ಜಯಮ್ಮನಂತೂ ತಮ್ಮ ಬೀಗರ ಮನೆಗೇ ಹೋಗಿ ಕೇಳಿಕೊಂಡು ಬರುವುದಕ್ಕೂ ಹೇಸುವವಳಲ್ಲ !"

"ಅದ್ಯಾಕೆ ಅವಳ್ಗೆ ಹೇಳೋಕ್ಹೋದಿ. ಆಮೇಲೆ ಎಲ್ರೂ ನಿನ್ನ ದೆವ್ವ ಹಿಡಿದೋಳೂಂತಾ ಅನ್ನೋಲ್ವಾ ? ಸಂಗೊತ್ತಿಲ್ಲ ಅನ್ನೋಕ್ಕೇನಾಗಿತ್ತು. ನಿಂಗೆ ! ನಿಂಗೆ ದೆವ್ವ ಹಿಡಿದಿತ್ತೂಂತಾ ಯಾರು ಹೇಳಿದ್ದು ? ನಿಂಗೆ ಕೆಟ್ಟಗಾಳಿ ತಗಲಿತ್ತು. ದೃಷ್ಟಿ ಶಾಪ ಆಗಿತ್ತು."

"ಏನಿಲ್ಲಮ್ಮಾ ನಾನೆಲ್ಲಾ ಕೇಳ್ದೆ ರುದ್ರಣ್ಣ ದೆವ್ವ ಬಿಡಿಸೋಕ್ಕೆ ಬಂದಿದ್ದ. ಆ ದೆವ್ವಾನ ದಿಗ್ಬಂಧನ ಮಾಡಿ ತಾಮ್ರದ ಬಿಂದಿಗೇಲಿ ಹಾಕ್ಕೊಂಡು ಹೋದ ನಾನೆಲ್ಲಾ ನೋಡ್ದೆ."

"ಸಾಕು, ಸಾಕು ಎದ್ದು ಹೋಗೂ ಇಲ್ಲಸ್ದ್ದೆಲ್ಲಾ ಮಾತಾಡ್ಬೇಡಾ. ನಾನಿವೊತ್ತೇ ಹೋಗಿ ನಿಮತ್ತೆ ಹತ್ರ ಮಾತಾಡ್ಕೊಂಡು ಬರ್ತೀನಿ" ಕಾವೇರಮ್ಮ ಮಗಳನ್ನು ಒಳಗೆ ಕಳಿಸಿದರೂ ತಲೆಯ ತುಂಬಾ ಅವಳಾಡಿದ್ದೇ ತುಂಬಿತ್ತು.

ಕಾವೇರಮ್ಮ ಸಮಯ ಸಾಧಿಸಿ ಪತಿಯೊಂದಿಗೆ ಹೇಳಿದರು.

"ನಾವು ನೂಪುರಳನ್ನಾ ಎಲ್ಲೂ ಕಳಿಸಕೂಡದು. ಯಾವ ಹೊತ್ತಿನಲ್ಲಿ ಹೇಗೋ ಏನೋ."

ಅವರ ಮಾತಿಗೆ ಸಂಜೀವಯ್ಯ ಸೊಪ್ಪು ಹಾಕಲಿಲ್ಲ.

"ನಾವು ಮುಚ್ಚಟೆ ಮಾಡಿದಷ್ಟು ಜನ ಆಡಿಕೊಳ್ಳೋದು ಹೆಚ್ಚಾಗುತ್ತೆ. ಈಗೇನು, ಎಲ್ಲಾ ಸರ್ಯಾಗಿದ್ದಾಳಲ್ಲ! ಹಾಯಾಗಿ ಎಲ್ಬೇಕೊ ಅಲ್ಲಿ ಓಡಾಡಿಕೊಂಡು ಇರಲಿ." ಎಂದು ಬಿಟ್ಟರು.

ಅಂದು ಶ್ರಾವಣ ಶುಕ್ರವಾರ ಪಂಕಜಮ್ಮನ ಮನೆಯಲ್ಲಿ ಲಕ್ಷ್ಮೀಪೂಜೆ ಮಾಡಿ ಎಲ್ಲರನ್ನೂ ಅರಿಸಿನ ಕುಂಕುಮಕ್ಕೆ ಕರೆದಿದ್ದರು. ಕಾವೇರಮ್ಮ ಬೇಕಂತಲೆ ನೂಪುರಳನ್ನು ಕರೆದೊಯ್ಯದೆ ಒಬ್ಬರೇ ಹೋಗಿ ತಾಂಬೂಲ ತೆಗೆದುಕೊಂಡು ಬಂದರು. ಅಲ್ಲಿ ಅವರು ಕೇಳಿದ ಮಾತುಗಳು ಅವರ ವ್ಯವಧಾನವನ್ನು ಅಸ್ತವ್ಯಸ್ತ ಮಾಡಿತ್ತು. ರೇಣುಕಮ್ಮ ಅವರಿಗೆ ಮುಗುಮ್ಮಾಗಿ ಹೇಳಿದ್ದರು.

"ನಮ್ಮ ಯಜಮಾನ್ರಿಗೆ ಯಾರೋ ಆಗದವರು ಮದ್ದು ಹಾಕಿಸಿಬಿಟ್ಟಿದ್ದರು. ಬರ್ತಾ ಬರ್ತಾ ಅಸ್ಥಿಪಂಜರವಂತಾಗಿಬಿಟ್ಟಿದ್ದರು. ಆಗ ನಮ್ಮ ಯಜಮಾನರ ಸ್ನೇಹಿತರೊಬ್ಬರು ಕರೆದೊಯ್ದು ಅದ್ಯಾರೊ ವರದಾಚಾರಿ ಅಂತೆ, ಅವನ ಹತ್ರ ಕರ್ಕೊಂಡು ಹೋಗಿ ತೆಗಿಸಿಹಾಕಿದ್ರು, ಎರಡೇ ದಿನಗಳಲ್ಲಿ ಇವರು

ಸರಿಹೋದರು. ಅವನ್ನ ಒಳ್ಳೆ ಸಮಯದಲ್ಲಿ ತೆಗಸ್ದೇ ಇದ್ದಿದ್ರೆ, ಖಂಡಿತ ಏನಾದ್ರೂ ಅನಾಹುತವಾಗ್ತಿತ್ತು. ನೋಡಿ ಕಾವೇರಮ್ಮ, ನಾನ್ಹೀಗಂತೀನೀಂತ ಕೋಪ ಮಾಡ್ಕೋಬೇಡಿ. ಆ ವರದಾಚಾರಿ ಮಹಾ ಶಕ್ತಿವಂತಾಂತ. ನಿಮ್ಮ ನೂಪುರನಾ ಒಂದ್ಸಲ ಯಾಕೆ ತೋರಿಸಬಾರದು ?"

ಆ ಮಾತು ಕೇಳಿದ ಕಾವೇರಮ್ಮನ ಬಾಯಿಕಟ್ಟಿತು.

"ಹೌದ್ರಿ, ರೇಣುಕಮ್ಮ ಹೇಳಿದ ಹಾಗೆ ಮಾಡಿ" ಪಂಕಜಮ್ಮ ಸಾವಿತ್ರಮ್ಮ ಎಲ್ಲರೂ ದನಿ ಸೇರಿಸಿದರು. ಕಾವೇರಮ್ಮ ಗಲಿಬಿಲಿಗೊಂಡು ಸೆರಗನ್ನು ಮೈತುಂಬಾ ಹೊದ್ದುಕೊಂಡರು.

"ಅಯ್ಯೋ ಬಿಡಿ. ನಮ್ಮ ನೂಪುರಂಗೆ ಏನೂ ಆಗಿಲ್ಲ. ಜನ ಎಲ್ಲಾ ಸುಮ್ನೆ ಕತೆ ಕಟ್ತಾರೆ."

ಬಾಯಿ ಹಾಗೆ ಹೇಳಿದರೂ ಮನದಲ್ಲಿ ದೂರದ ಆಸೆ ಮೂಡಿತ್ತು. ರೇಣುಕಮ್ಮ ಹೇಳಿದ ಹಾಗೆ ವರದಾಚಾರಿಯನ್ನು ತಾವೂ ಕಂಡು ನೂಪುರ ನಿಗಾಗಿರುವ ತೊಂದರೆಯನ್ನು ತಪ್ಪಿಸಬೇಕು. ವರದಾಚಾರಿ ರುದ್ರಣ್ಣನಿಗಿಂತ ಶಕ್ತಿವಂತನಿರಬೇಕು.

ಮನೆಗೆ ಬಂದವರೇ ಯಜಮಾನರ ಕೊಠಡಿಯತ್ತ ನಡೆದರು. ತಾವು ಕೇಳಿದ್ದನ್ನೆಲ್ಲಾ ಅವರಿಗೆ ವರದಿಯೊಪ್ಪಿಸಿದರು.

"ಇಲ್ನೋಡೀಂದ್ರೆ. ಆ ವರದಾಚಾರೀನ್ನ ಪತ್ತೆ ಮಾಡಿ ನಮ್ಮ ನೂಪುರ ನಿಗಾಗಿರೋ ತೊಂದ್ರೆನಾ ನಿವಾರಿಸಬಹುದು. ತುಂಬಾ ಹಳೇದಾದ್ರೆ ಜಡ್ಡು ಕಟ್ಟಿಹೋಗಿ ಆಮೇಲೆ ಏನೂ ಮಾಡುವುದಕ್ಕೂ ಆಗುವುದಿಲ್ಲ."

ಸಂಜೀವಯ್ಯನವರು ಯೋಚನಾಕ್ರಾಂತರಾದರು.

"ಕಾವೇರಿ, ಈ ವಾಮಾಚಾರದವರ ತಾಂತ್ರಿಕರ ಬಳಿಗೆ ಹೋದ್ರೆ ಒಬ್ಬರಿಗೆ ವಾಸಿ ಮಾಡಿ ಅವರನ್ನು ಯಾವ ರೀತಿಯಿಂದ ಬಳಸಿಕೊಂಡು ಅವರಿಂದ ಹಣ ದೋಚುವುದು ಅವರಿಗೆ ಚೆನ್ನಾಗಿ ಗೊತ್ತು. ಆಗ್ಲಿ ; ನನ್ನ ಸ್ನೇಹಿತರನ್ನ ವಿಚಾರಿಸಿ ನೋಡ್ತೀನಿ."

ನೂಪುರ ಕಾಲು ಚಾಚಿಕೊಂಡು ಕುಳಿತು ಕತೆ ಪುಸ್ತಕ ಓದುತ್ತಿದ್ದಳು. ಇದ್ದಕ್ಕಿದ್ದಂತೆ ಯಾರೋ ಕರೆದಂತಾಯಿತು. ಸುತ್ತಲೂ ನೋಡಿದಳು. ಯಾರೂ ಕಾಣಲಿಲ್ಲ. ಮತ್ತೆ ಕತೆ ಪುಸ್ತಕದ ಕಡೆ ಗಮನಹರಿಸಿದಳು. ಮತ್ತೆ ಯಾರೋ ಅವಳ ಹೆಸರ ಹಿಡಿದು ಕರೆದಂತಾಯಿತು. ಅವಳು ಎದ್ದು

ಬಾಗಿಲ ಬಳಿ ಬಂದು ನೋಡಿದಳು. ಯಾರೂ ಇರಲಿಲ್ಲ. ಕಿಟಕಿಯ ಬಳಿ ಬಂದು ನೋಡಿದಳು, ಅಲ್ಲಿಯೂ ಯಾರ ಇರಲಿಲ್ಲ. ಒಳಗೆ ಹೋಗಿ ತಾಯಿ ಕರೆದಿರಬಹುದೆಂದು ನೋಡಿದಳು. ಕಾವೇರಮ್ಮ ತಲೆ ಬಗ್ಗಿಸಿಕೊಂಡು ಚಪಾತಿ ಲಟ್ಟಿಸುತ್ತಿದ್ದರು.

"ಅಮ್ಮಾ ನನ್ನ ಕರೆದ್ಯಾ ?"

ಅವರನ್ನು ಕೇಳಿದಾಗ ಅವರು ತಲೆ ಎತ್ತಿ ಅವಳತ್ತ ನೋಡಿದರು.

"ನಾನ್ಯಾಕೆ ಕರೀಲಿ ? ನನ್ಪಾಡಿಗೆ ನಾನು ಕೆಲ್ಸ ಮಾಡ್ಕೊತ್ತಿದ್ದೀನಿ"

ನೂಪುರಳಿಗೆ ಅಚ್ಚರಿಯಾಯಿತು. ಹೀಗೆಯೇ ತಾನು ಮದುವೆಯಾದ ದಿನ ಮನೆ ತುಂಬಿಸಿಕೊಳ್ಳಲು ಕರೆದೊಯ್ದಾಗ ಮಾವಿನ ಮರದ ಬಳಿ ಬಂದಾಗ ಯಾರೋ ತನ್ನನ್ನು ಕರೆದಂತಾಗಿತ್ತು ? ತಾನು ತಿರುಗಿ ನೋಡಿದಾಗ ಯಾರೂ ಇರಲಿಲ್ಲ. ಅವೆಲ್ಲ ನನ್ನ ಮನಸ್ಸಿನ ಭ್ರಾಂತಿ ಇರಬೇಕು. ಮನೆಯಲ್ಲಿ ಅಮ್ಮ ಮತ್ತು ತಾನು ಬಿಟ್ಟು ಯಾರೂ ಇರಲಿಲ್ಲ. ಅಕ್ಕ ಪಕ್ಕದವರು ಬಂದು ಕರೆದರೇ, ಬಾಗಿಲು ತಟ್ಟಿ ಕರೆವರು. ಹೀಗೆ ಪಿಸುದನಿಯಲ್ಲಿ ಕರೆಯುವುದಿಲ್ಲ ! ಅದೂ ಅಲ್ಲದೆ, ಆ ದನಿ ಕೇಳಿದರೇ ತನಗೇಕೊ ಹೆದರಿಕೆಯುಂಟಾಗುತ್ತದೆ. ಮೈಯೆಲ್ಲಾ ಹಿಮಗಟ್ಟಿದಂತಾಗುತ್ತದೆ. ತಾನು ಹೆದರಬಾರದು. ಹೇಗಿದ್ದರು ಯಂತ್ರ ಕಟ್ಟಿಕೊಂಡಿಲ್ಲವೇ ? ಇನ್ನೊಮ್ಮೆ ಕರೆದರೂ ತಾನು ಎದ್ದು ಹೋಗಿ ನೋಡಬಾರದು ಎಂದುಕೊಂಡಳು.

ಸಂಜೀವಯ್ಯ ಮನೆಗೆ ಹಿಂತಿರುಗಿದಾಗ ನೂಪುರ, ಅಲ್ಲಿಯೇ ಕೈಯಲ್ಲಿ ಕಥೆ ಪುಸ್ತಕ ಹಿಡಿದು ಹಾಗೆಯೇ ಕುರ್ಚಿಗೊರಗಿ ನಿದ್ರಿಸುತ್ತಿದ್ದಳು. ಅದೇಕೋ ಅವರಿಗೆ ಅವಳ ಮುಖ ತುಂಬಾ ಪೇಲವವಾಗಿದೆ, ಎನಿಸಿತು. ಅವಳನ್ನು ಎಬ್ಬಿಸಿ ಸ್ವಸ್ಥವಿದೆಯೇ ಎಂದು ಕೇಳುವ ತವಕವಾದರೂ ಎಬ್ಬಿಸಲು ಮನಸ್ಸು ಆಗದೆ ಸುಮ್ಮನಾದರು. ತರಕಾರಿಯ ಚೀಲವನ್ನು ಹೆಂಡತಿಗೆ ಕೊಡುತ್ತಾ ಮೆಲ್ಲನೆ ಕುಳಿತರು.

"ಯಾಕೋ ನಮ್ಮ ನೂಪುರ ತುಂಬಾ ಬಿಳಿಚಿಕೊಂಡಂತಿದೆ, ಅಲ್ಲವೆ ?"

"ಏನೋ ಅಷ್ಟು ನಾನು ಗಮನಿಸಲಿಲ್ಲ" ಕಾವೇರಮ್ಮ ನುಡಿದರು.

"ನಂಗ್ಯಾಕೋ ಅನುಮಾನ ಕಣೇ, ಮೈಸರಿಯಾಗಿರಲಿಲ್ಲ ಬೇರೆ. ಡಾಕ್ಟರ ಹತ್ತಿರ ತೋರಿಸಿ ನೋಡೋಣ"

"ಅದಕ್ಕೇನು ತೋರಿಸಿದರಾಯಿತು. ಮನೇಲೇ ಒಂದಿಷ್ಟು ಪಥ್ಯ ಮಾಡಿ ಆರೈಕೆ ಮಾಡ್ತೀನಿ"

ಸಂಜೀವಯ್ಯನವರ ತಲೆಯಲ್ಲಿ ನೂಪುರಳೇ ತುಂಬಿದ್ದಳು. ಜನ ಹೇಳುವುದು ನಿಜವೇ ? ಲಲಿತಮ್ಮ ತಮಗೇಕೆ ಹೇಳಲಿಲ್ಲ ! ವರ್ಧಮಾನನೂ ಅದನ್ನು ಮುಚ್ಚಿಟ್ಟ. ತಮ್ಮ ಮನೆಗೆ ಬಂದ ಮೇಲೆ ನೂಪುರಳಿಗೆ ಹಾಗಾಯಿತೆಂದು ಹೆದರಿ ಹೇಳಲಿಲ್ಲವೇ ? ನೂಪುರಳ ಮೈಮೇಲೆ ಗಂಗೆಯ ದೆವ್ವ ಬರುತ್ತಿದ್ದಿದು ನಿಜವೇ ? ತಾವು ಕಂಡಂತೆ ನೂಪುರಳ ಬಣ್ಣ ಹಾಲು ಗುಲಾಬಿ ಮಿಶ್ರಣ. ಆದರೆ ಈಗ ಬಿಳಿಯ ಹಾಳೆಯಂತೆ ಬಿಳಿಚಿಕೊಂಡಿದ್ದಾಳೆ. ಅವಳ ಕಣ್ಣುಗಳಲ್ಲಿ ತುಂಟತನ, ಉತ್ಸಾಹ ಚಿಮ್ಮುತ್ತಿತ್ತು. ಆದರೆ ಈಗ ಅವುಗಳು ನಿಸ್ತೇಜವಾಗಿವೆ. ಹೆಂಡತಿ ಹೇಳಿದಂತೆ ಒಮ್ಮೆ ವರದಾಚಾರಿಯ ಬಳಿಗೆ ಹೋಗಿ ನೋಡಿ ಮಾತಾಡಿಕೊಂಡು ಬಂದರೆ ತಪ್ಪೇನು ! ಅವನ ರೀತಿ, ನೀತಿ ನಡವಳಿಕೆ ನೋಡಿದರೆ ಅವನು ಎಂತಹ ವ್ಯಕ್ತಿಯೆಂದು ತಿಳಿಯುತ್ತದೆ. ಇಷ್ಟವಾದರೆ ನೂಪುರಳಿಗೆ ಚಿಕಿತ್ಸೆ ನೀಡಬಹುದು.

ಮಾರನೆಯ ದಿನವೇ ಸಂಜೀವಯ್ಯ ರೇಣುಕಮ್ಮನಿಂದ ವರದಾಚಾರಿಯು ಇರಬಹುದಾದ ಸ್ಥಳ ವಿಳಾಸ ಗುರುತು ಹಾಕಿಕೊಂಡು ಅವನ ಅನ್ವೇಷಣೆಗೆ ತೊಡಗಿದರು.

* * * *

ರಾಮಲಿಂಗಯ್ಯನವರ ಸ್ಥಿತಿ ಸುಧಾರಿಸಲಿಲ್ಲ. ಎಲ್ಲವೂ ಮಲಗಿದ್ದಲ್ಲೇ ಆಗಬೇಕಿತ್ತು. ಒಂದು ವಾರ ಅವರನ್ನು ನೋಡಿಕೊಳ್ಳುವುದರಲ್ಲಿ ಲಲಿತಮ್ಮ ಅರ್ಧವಾಗಿಹೋದರು. ವರ್ಧಮಾನನಿಗೆ ಹೊರಗಿನ ಕೆಲಸ ಬಿಟ್ಟು ಮನೆಯಲ್ಲೇ ಕುಳಿತಿರಲು ಸಾಧ್ಯವಿರಲಿಲ್ಲ. ನರ್ಸ್‌ನನ್ನು ಅವರು ಪೂರ ನಂಬುತ್ತಿರಲಿಲ್ಲ. ಒಂದು ದಿನ ಲಲಿತಮ್ಮ ಶೌಚಕ್ಕೆ ಹೋಗಿ ಬರಲು ಹೋಗಿದ್ದರು. ಟೇಬಲ್ಲಿನ ಮೇಲೆ ದೊಡ್ಡ ಲೋಟದಲ್ಲಿ ಹಾಲು, ಇನ್ನೊಂದರಲ್ಲಿ ಗಂಜಿ ಇಟ್ಟಿದ್ದರು, ಅವರು ಹಿಂದಿರುಗಿ ಬರುವಷ್ಟರಲ್ಲಿ ಹಾಲಿನ ಲೋಟ ಖಾಲಿಯಾಗಿತ್ತು.

"ಸಿಸ್ಟರ್, ಅಪ್ಪ ಹಾಲು ಕುಡಿದುಬಿಟ್ರಾ ?"

"ಹೂಂ ಈಗ್ತಾನೇ ಕುಡಿಸಿದೆ" ನರ್ಸ್ ಹೇಳಿದಳು. ಮಂಚದ ಮೇಲೆ ಮಲಗಿದ್ದ ತಂದೆಯತ್ತ ನೋಡಿದರು. ಅವರ ತುಟಿಗಳು ಒಣಗೇ ಇದ್ದವು. ಹಣೆ ಸವರುವಂತೆ ಮಾಡಿ ಬಾಯಿಯ ಬಳಿ ಬಾಗಿ ನೋಡಿದಾಗ ಹಾಲಿನ ವಾಸನೆಯೇ ಇರಲಿಲ್ಲ. ಆದರಿಂದ ಅನುಮಾನಗೊಂಡ ಲಲಿತಮ್ಮ

ಮಾರನೆಯ ದಿನ ಬೇಕಾಗಿಯೇ ಹಾಲು ಗಂಜಿ ತಂದಿಟ್ಟು ಹೊರಗೆ ಹೋಗುವ ನಾಟಕ ಮಾಡಿ ಬಾಗಿಲ ಮರೆಯಲ್ಲೇ ನಿಂತರು ನರ್ಸ್ ಲೋಟದ ಹಾಲನ್ನು ಕುಡಿದು ಬರಿಯ ಲೋಟ ಇಟ್ಟಳು. ಒಂದ್ಹತ್ತು ನಿಮಿಷ ಬಿಟ್ಟು ಬಂದು ಲಲಿತಮ್ಮ ಬೇಕಾಗಿಯೇ ಕೇಳಿದಳು.

"ಅಪ್ಪಾ, ಹಾಲು ಕುಡಿದುಬಿಟ್ರಾ ?

"ಓಹೋ-ಇಷ್ಟು ಬೇಗ ಕುಡಿದುಬಿಟ್ರಾ !" ನೀವೇ ಸರಿ ಸಿಸ್ಟರ್ ಐದು ನಿಮಿಷದಲ್ಲಿ ಕುಡಿಸಿಬಿಟ್ರಿ, ನಾನಾದ್ರೆ ಅವರಿಗೆ ಚಮಚದಲ್ಲಿ ಇಷ್ಟಿಷ್ಟೆ ಹಾಲು ಹಾಕಲು ಅರ್ಧಗಂಟೆ ತಗೋತೀನಿ." ಸಿಸ್ಟರ್ ನಸು ನಕ್ಕಳು

'ಇವರಿಗೆ ಇಂತಹ ಪೇಶೆಂಟ್ಸ್ ನೋಡಿಕೊಂಡು ಚೆನ್ನಾಗಿ ಅನುಭವ ಇದೆ. ಆದಕ್ಕೇ ಹಾಗೆ ದಷ್ಟ ಪುಷ್ಟವಾಗಿ ಮೈ ಬೆಳೆಸಿಕೊಂಡಿರುವುದು' ಎನ್ನುವ ಮನಸ್ಸಾಯಿತು ಲಲಿತಮ್ಮನಿಗೆ ಆದರೆ ತುಟಿಕಚ್ಚಿ ತಡೆದುಕೊಂಡರು. ಮಾರನೆಯ ದಿನ ಡಾಕ್ಟರಿಗೆ ಹೇಳಿ ನಮಗೆ ನರ್ಸ್‌ನ ಅಗತ್ಯವಿಲ್ಲವೆಂದೂ, ಯಾರಾದರೂ ಬಂದು ತಂದೆಗೆ ಸ್ನಾನ ಮಾಡಿಸಿ ಬಟ್ಟೆ ಬದಲಿಸಿಹೋದರೆ ಸಾಕೆಂದರೆ ಸಿಸ್ಟರ್ ಬಂದಾಗ ಅವರಿಗೆ ಒಂದು ತಿಂಗಳ ಹಣವನ್ನು ಕೈಗಿತ್ತರು.

"ನಾಳೆಯಿಂದ ನೀವು ಬರಬೇಕಾಗಿಲ್ಲ ಯಾರೋ ಗಂಡಸರೇ ಬಂದು ನೋಡ್ಕೋತಾರೆ ! ಗಂಡಸರನ್ನು ಗಂಡಸರೇ ನೋಡ್ಕೊಳ್ಳೋದು ಒಳ್ಳೇದು"

ವರ್ಧಮಾನನಿಗೆ ತಾಯಿ ವಿಪರೀತ ಆಯಾಸ ಮಾಡಿಕೊಳ್ಳುವುದು ಇಷ್ಟವಿರಲಿಲ್ಲ. "ಯಾಕಮ್ಮಾ ಕಳಿಸಿಬಿಟ್ಟೆ ! ಅವಳು ಹಾಗೆ ಮಾಡ್ತಾಳೇಂದ್ರೆ ಬೇರೆಯವಳು ಮಾಡೊಲ್ಲಾಂತ ಏನು ಗ್ಯಾರಂಟಿ ? ಹೇಗೋ ಸಾವಾರಿಸಿ ಕೊಂಡು ಹೋಗ್ಬೇಕಮ್ಮಾ. ನೀನೊಬ್ಬಳೇ ಎಷ್ಟು ಮಾಡೋಕ್ಕೆ ಸಾಧ್ಯ ! ನೂಪುರನ್ನ ಕರ್ಕೊಂಡು ಬಂದ್ಬಿಡ್ತೀನಿ ತಾಳು !"

"ನಾನೂ ಅದೇ ಹೇಳ್ಬೇಕೊಂತಾ ಇದ್ದೆ, ನೂಪುರಳ ತಂದೆ, ತಾಯಿಗೆ ನಾವು ಏನೂ ಹೇಳೇ ಇಲ್ಲ. ಏನೋ ಮೈ ಸರಿಯಾಗಿಲ್ಲ' ಎಂದಿದ್ದು. ಅಕ್ಕಪಕ್ಕದೋರು ಅವರು ಇವರೆಲ್ಲಾ ಏನೇನೋ ಮಾತಾಡ್ಕೋತಾ ಇದ್ದಾರಂತೆ, ಅದೂ ಇದೂ ಹೇಳಿ ಅವರ ಮನಸ್ಸು ನೂಪುರಳ ಮನಸ್ಸು ಕೆಡಿಸಿಬಿಟ್ರೆ ಕಷ್ಟ ! ಕರ್ಕೊಂಡುಬಂದುಬಿಡೋದೇ ವಾಸಿ. ಮನೆ ತುಂಬಿಸಿ ಕೊಂಡ ಮೇಲೆ ಅವ್ಳು ನಮ್ಮ ಮನೆಯೋಳೇ ಅಲ್ವಾ ? ಇಲ್ಲಿರೋದೇ ಮೇಲು !"

ಲಲಿತಮ್ಮ ಮನಸ್ಸಿನಲ್ಲಿದ್ದುದನ್ನು ಮಗನಿಗೆ ಹೇಳಿದರು.

ಅಂದು ಸಂಜೆ ವರ್ಧಮಾನ ನೂಪುರಳನ್ನು ಕರೆದೊಯ್ಯಲು ಸಂಜೀವಯ್ಯ ನವರ ಮನೆಗೆ ಬಂದಾಗ ಮನೆ ಬೀಗ ಹಾಕಿತ್ತು. ಅಕ್ಕ ಪಕ್ಕದಲ್ಲಿ ವಿಚಾರಿಸಿದಾಗ ಅವರು ನೂಪುರಳನ್ನು ಕರೆದುಕೊಂಡು ಹಿಂದಿನ ದಿನವೇ ಎಲ್ಲಿಗೋ ಹೋಗಿರುವರೆಂದು ತಿಳಿಯಿತು. ತಮಗೊಂದು ಮಾತು ತಿಳಿಸಿದೇ ಅವಳನ್ನು ಕರೆದೊಯ್ದಿದ್ದಕ್ಕಾಗಿ ಅವನಿಗೆ ಕೋ ಪ ಬಂ ದಿ ತಾ ದ ರೂ ತನ್ನ ತಪ್ಪರಿವಾಗಿತ್ತು. ತಾನು ಅವಳನ್ನು ತವರಿಗೆ ಕಳುಹಿಸಿದುದೇ ತಪ್ಪು! ಅದಕ್ಕೆ ಸರಿಯಾಗಿ ಹೊರಟಿದ್ದ ವರ್ಧಮಾನನನ್ನು ರೇಣುಕಮ್ಮ ಕರೆದರು.

"ಇಲ್ಬಿರ್ತಿರಾ ಸ್ವಲ್ಪ! ನೀವು ನೂಪುರಳ ಯಜಮಾನರಲ್ವಾ? ನಿಮ್ಗೆ ಮಾತ್ರ ಹೇಳ್ತೀನಿ. ನೂಪುರಳನ ವರದಾಚಾರಿಯ ಹತ್ತಿರ ಕರ್ಕೊಂಡು ಹೋಗಿದ್ದಾರೆ. ಅವಳಿಗೆ ಅದೇನೋ ನಿಮ್ಮ ಮನೆಗೆ ಬಂದಾಗ್ಲಿಂದ ಕೆಟ್ಟ ಗಾಳಿ ಹಿಡಿದಿದೆಯಂತಲ್ಲಾ....!"

ಆ ಮಾತು ಕೇಳಿದಾಗ ಅವನಿಗೆ ಮೈಯುರಿದುಹೋಯಿತು. ಅಲ್ಲದೇ ಅತ್ತೆ ಮಾವಂದಿರ ಮೇಲೆ ಕೆಂಡದಷ್ಟು ಕೋಪ ಬಂದಿತು. ಇಂತಹ ವಿಷಯಗಳನ್ನು ತನ್ನಿಂದ ಮರೆಯಲು ವರದಾಚಾರಿಯ ಬಳಿಗೆ ಕರೆದೊಯ್ದಿದ್ದಾರಲ್ಲಾ! ಏನಾದರೂ ಹೆಚ್ಚು ಕಡಿಮೆಯಾದರೆ!

ರೇಣುಕಮ್ಮನಿಗೆ ಏನು ಉತ್ತರಿಸದೇ ಕಾರಿನ ಬಾಗಿಲನ್ನು ಧಡಾರನೇ ಹಾಕಿಕೊಂಡು ಹೊರಟುಬಿಟ್ಟ.

"ನೋಡಿದ್ರಾ ಅವ್ನ ಪೊಗರ್ನ! ಚಿನ್ನದಂತಾ ಹುಡುಗೀನ್ನ ಕಟ್ಕೊಂಡು ಆ ದೆವ್ವದ ಬಾಯಿಗಿಟ್ಟಿಟ್ಟು ಮೆರಿತಾನಲ್ಲಾ!"

ರೇಣುಕಮ್ಮ ಗೊಣಗಿದರು.

ವರ್ಧಮಾನ ಬಂದು ತಾಯಿಯ ಬಳಿ ವಿಷಯ ತಿಳಿಸಿದಾಗ ಬೆಚ್ಚಿದರು. ನೂಪುರಳನ್ನು ವರದಾಚಾರಿಯ ಬಳಿಗೆ ಕರೆದೊಯ್ಯುವ ಪ್ರಮೇಯವೇನಿತ್ತು? ನಾವು ದೆವ್ವ ಬಿಡಿಸಿ ದಿಗ್ಬಂಧ ಮಾಡಿಸಿ ಯಂತ್ರ ಕಟ್ಟಿಸಿರಲಿಲ್ಲವೇ? ತಮ್ಮ ಸೊಸೆ ತಮಗೊಂದು ಮಾತು ತಿಳಿಸಬಾರದಿತ್ತೇ?

"ಮಾನೂ, ವರದಾಚಾರಿ ತುಂಬಾ ಕೆಟ್ಟವನೂಂತ ಕೇಳಿದ್ದೀನಿ. ತುಂಬಾ ದುರಾಸೆಯಂತೆ. ಏನು ಮಾಡಲೂ ಹಿಂದೂ ಮುಂದೂ ನೋಡುವುದಿಲ್ಲವಂತೆ—ನಿಂಗೇನಾದ್ರೂ ಅವನ ವಿಳಾಸ ಗೊತ್ತಾದ್ರೆ, ಹೇಗಾದ್ರೂ ಪತ್ತೆ ಹಚ್ಚಿ ಅವಳ್ನ ಬೇಗ ಕರ್ಕೊಂಡು ಬಂದ್ಬಿಡು. ಅವ್ನು ಏನೋ

ಮಾಡ್ತೀನೀಂತಾ ಇವರಿಗೆ ಹೇಳಿ ಮತ್ತೇನಾದ್ರೂ ಮಾಡ್ಲಿ! ಮೊದ್ಲೇ ಅವನ್ಗೆ ಅಪ್ಪನ ಮೇಲೆ ಒಂದು ತರಹ ರೋಷ ಇತ್ತು. ಗಂಗೆ ಕೆಲಸಕ್ಕೆ ಕೈ ತುಂಬಾ ಹಣ ಸಿಕ್ತಿಲ್ಲ, ಅಜ್ಜಿ ಕೊಡಲಿಲ್ಲ ಅನ್ನೋ ಅಸಮಾಧಾನ ಇತ್ತು. ಅವನನ್ನು ಕರೆಯದೇ ರುದ್ರಣ್ಣನನ್ನು ಕರ್‍ಕೊಂಡು ಬಂದು ನೂಪುರನಿಗೆ ಚಿಕಿತ್ಸೆ ನೀಡಿದರೂ ಅನ್ನೋ ಕೋಪ ಇದೆ. ಇದೆಲ್ಲಾ ಸೇರಿ ಅವ್ನೇನಾದ್ರೂ ಮಾಡಿದ್ರೆ!"

"ಈಗ ಎಲ್ಲೀಂತ ಹುಡ್ಕೊಂಡು ಹೋಗೋದು? ಎಲ್ಲಾ ನನ್ನ ಕರ್ಮ!" ವರ್ಧಮಾನ ರೇಗಿದ. ಆಗಲೇ ಅವನಿಗೆ ತಾನು ಡೈರಿಯಲ್ಲಿ ಬರೆದಿದ್ದ ಮಾತುಗಳು ಜ್ಞಾಪಕಕ್ಕೆ ಬಂದುದು. ಅಲ್ಲದೇ ರುದ್ರಣ್ಣನ ಮನೆಯ ವಿಳಾಸ ಗೊತ್ತಾದರೆ ವರದಾಚಾರಿಯ ವಿಳಾಸ ಗೊತ್ತುಮಾಡಿ ಕೊಳ್ಳಬಹುದು.

ವರ್ಧಮಾನ ಕಾರು ಹತ್ತಿ ರುದ್ರಣ್ಣನ ಮನೆಯತ್ತ ಧಾವಿಸಿದ. ಅಲ್ಲಿ ವಿಚಾರಿಸಿದಾಗ ರುದ್ರಣ್ಣ ಸತ್ತ ಮೇಲೆ ಅವನ ಮನೆಯನ್ನು ಬೀಗ ಹಾಕಿದ್ದಾರೆಂದೂ, ಕೆಟ್ಟ ಗಳಿಗೆಯಲ್ಲಿ ಅವನು ಸತ್ತಿದ್ದರಿಂದ ಆ ಮನೆಯ ಬಾಗಿಲು ತೆರೆಯುವಂತಿಲ್ಲವೆಂದೂ ಹೇಳಿದರು. ಅಲ್ಲಿದ್ದವರನ್ನೇ ವರದಾಚಾರಿಯ ಬಗ್ಗೆ ಕೇಳಿದ.

"ಅವ್ನೇ ಅವ್ರೇನ್ತು ಎಲ್ಲಾ ಕರ್ಮ ಮಾಡ್ಸಿದ್ದು ರುದ್ರಣ್ಣ ವಾಮಾಚಾರಿ ಯಾಗಿದ್ರಿಂದ ಅವನು ವಶಮಾಡ್ಕೊಂಡಿದ್ದ ಶಕ್ತೀನ್ನೆಲ್ಲಾ ನಿಗ್ರಹಿಸಬೇಕು ಎಂದು ಹೇಳಿದ್ದ, ಆ ಮನೇಲಿದ್ದ ಅವ್ನ ಪೂಜಾ ಸಾಮಾಗ್ರಿಗಳ್ನ ಶಕ್ತಿಗಳ್ನೂ ಉಚ್ಚಾಟನೆ ಮಾಡ್ಬೇಕಾಗಿತ್ತು-ಅವ್ನೇ ಅದೇನೇನೋ ಮಾಡಿ ಮನೆ ಬೀಗ ಹಾಕ್ಕೊಂಡು ಹೊರಟುಹೋದ."

ವರ್ಧಮಾನನಿಗೆ ಸಿಡಿಲೆರಗಿದಂತಾಯಿತು. ತಾತ ಇಲ್ಲಿಗೆ ಬಂದು ಮಾಡಬಾರದ್ದನ್ನೆಲ್ಲಾ ಮಾಡಿಸಿದ್ದಾರೆ. ಅದಕ್ಕೇ ಅವರಿಗೆ ಹಾಗಾಗಿರುವುದು. ನೂಪುರಳನ್ನು ಮೊದಲು ಯಾರಾದರೂ ಪ್ಯಾರಾ ಸೈಕಾಲಾಜಿಸ್ಟ್ ಬಳಿ ಕರೆದೊಯ್ದು ತೋರಬೇಕು!

"ನಿಮಗೆ ಆ ವರದಾಚಾರಿ ಮನೆ ವಿಳಾಸ ಗೊತ್ತಾ"

ಅಲ್ಲಿಯೇ ನಿಂತಿದ್ದ ಕರಿಸಿದ್ದನನ್ನು ತೋರಿದರು. "ಅವನಿಗೇ ಗೊತ್ತಿರಬಹುದು."

ಕರಿಸಿದ್ದ ಮೂಗಿನ ತನಕ ಹಾರಿಯೇ ನಿಂತಿದ್ದ. ವರ್ಧಮಾನ ಅವನನ್ನು ಕೇಳಿದಾಗ ತನಗೆ ಕೇಳಲೇ ಇಲ್ಲವೆಂಬಂತೆ ಅತ್ತ ಇತ್ತ ನೋಡಿದ.

"ಕೈಗೆ ಸೇಂದಿಗೆ ಎರಡುರೂಪಾಯಿ ಕೊಡಿ ಬಾಯಿಬಿಡ್ತಾನೆ" ಯಾರೋ ಹೇಳಿದರು. ವರ್ಧಮಾನ ಜೇಬಿನಿಂದ ಎರಡು ರೂಪಾಯಿ ತೆಗೆದಿತ್ತ.

"ವರದಾಚಾರಿ ಮನೆ ಎಲ್ಲಿದೆ ?"

ರೂಪಾಯಿಯನ್ನು ಕೊಳಕು ಷರಟಿನ ಜೇಬಿಗೆ ಇಳಿಸಿದ ಕರಿಸಿದ್ದ ಸೊಟ್ಟಗೆ ನಕ್ಕ.

"ಅವನ್ಗೆ ಮನೆ ಎಲ್ಲೈತೆ ! ಸ್ಮಶಾನಾನೇ ಅವ್ನ ಮನೆ. ಊರ ಹೊರಗಿನ ಸುಡುಗಾಡ್ನಲ್ಲೇ ಬಿದ್ದು ಸಾಯ್ತಾ ಇರ್ತಾನೆ."

"ಅದಿರ್ಲಿ ಮಾರಾಯಾ, ಅವ್ನ ಮನೆ, ಸಂಸಾರ ಎಲ್ಲಾ ಎಲ್ಲಿದೆ !"

"ಅದೇ ಏಳ್ತಿಲ್ವಾ ? ಇವ್ನ ಕೆಳಗೆ ಮಡಕ್ಕಂಡಿರಾ ಶತ್ರುಗಳೇ ಅವ್ನ ಎಂಡ್ತಿನ ನುಂಗಾಕಿಬಿಟ್ರು. ಒಬ್ಬ ಮಗನಿಗೆ ಹುಚ್ಚು ಹಿಡೀತು. ಎರಡ್ನೆ ಮಗ ಏಳ್ದೇ ಕೇಳ್ದೆ ಓಡೋದ ಇನ್ನು ಮಿಕ್ಕೋರು ಎಲ್ಲಾ ತಿಳಿದು ಅವ್ನ ಬೈರಿಗಟ್ಟಿ ಪಂಚಾಯ್ತಿ ಕಟ್ಟೆ ಆಕಡೆ ಮಂಟಪದಾಗೆ ಇದ್ದ. ಈಗೆಲ್ಲಿದ್ದಾನೋ ಯಾರಿಗ್ಗೊತ್ತು ? ಸೇಂದಿ ಅಂಗ್ಡಿ ತಿಮ್ಮಯ್ಯಂಗೆ ಗೊತ್ತಿರ್ಬೋದೂ ಸಾರಾಯಿ ತಗೋಳ್ಳೋಕೆ ಅಲ್ಲಿಗೆ ಆಗಾಗ ಬರ್ತಾ ಇರ್ತಾನೆ"

"ಆ ಸಾರಾಯಿ ಅಂಗ್ಡಿ ಎಲ್ಲಿದೆ ?"

"ಬನ್ನಿ ತೋರಿಸ್ತೀನಿ, ಕಾರ್ನಾಗೆ ಓಗೋಣ-"

ಅವನನ್ನು ಕಾರಿನಲ್ಲಿ ಹತ್ತಿಕೊಳ್ಳುವುದು ವರ್ಧಮಾನನಿಗೆ ಇಷ್ಟವಿಲ್ಲದಿದ್ದರೂ ವಿಧಿಯಿಲ್ಲದೇ ಹತ್ತಿಸಿಕೊಂಡ.

ತಿಮ್ಮಯ್ಯನ ಸಾರಾಯಿ ಅಂಗಡಿಯ ಬಳಿ ಕಾರು ನಿಲ್ಲಿಸಿದಾಗ ವರ್ಧಮಾನನಿಗೆ ವಾಕರಿಕೆಬಂದಂತಾಯಿತು. ಅಲ್ಲಲ್ಲಿ ಹೊರಗೆ ಒಲೆಯ ಮೇಲೆ ಮೀನು, ಮಾಂಸ ಬೇಯಿಸುತ್ತಿದ್ದ ಹೆಂಗಸರು, ಹೊರಗೆ ತೂರಾಡುತ್ತಾ ಬಾಯಿಗೆ ಬಂದಂತೆ ಹರಟುತ್ತಾ ಇದ್ದ ಕುಡಿದ ಅಮಲಿನವರು. ಪಕ್ಕದಲ್ಲೇ ಕೊಚ್ಚೆ ನೀರಿನ ಗಬ್ಬು ವಾಸನೆ ಬೀರುತ್ತಾಹರಿಯುತ್ತಿದ್ದ ದೊಡ್ಡ ಮೋರಿ ! ಸಾರಾಯಿ ಕೊಂಡು ಕುಡಿಯಲು ಬಂದಿದ್ದ ಕೂಲಿಯಾಳುಗಳ ಗುಂಪು ! ವರ್ಧಮಾನನಿಗೆ ಕಾರಿನಿಂದಿಳಿದು ಹೋಗಿ ತಿಮ್ಮಯ್ಯನನ್ನು ವಿಚಾರಿಸಲು ಇಷ್ಟವಾಗಲಿಲ್ಲ. ಕರಿಸಿದ್ದನಿಗೆ ಇನ್ನೆರಡು ರೂಪಾಯಿಯಿತ್ತು ಹೇಳಿದ,

"ಹೋಗು ಆ ತಿಮ್ಮಯ್ಯನ್ನ ಸ್ವಲ್ಪ ಹೊರಗೆ ಕರಿ."

"ಇಗಾ ಬಂದೆ"

ಕರಿಸಿದ್ದ ಇಳಿದ ಗತ್ತು ನೋಡಿ ಅವನೂ ಆ ಸಾರಾಯಿ ಅಂಗಡೀಲೇ ಕುಳಿತುಬಿಟ್ಟರೆ.

"ಬೇಗ ಕರ್ಕೊಂಡ್ಬಾ-ಇನ್ನು ಕುಡಿಯೋಕ್ಕೆ ದುಡ್ಡು ಕೊಡ್ತೀನಿ" ಕರಿಸಿದ್ದ ಹಲ್ಲು ಕಿರಿಯುತ್ತಾ ಅಂಗಡಿಯೊಳಗೆ ಹೋದ.

ತಿಮ್ಮಯ್ಯ ಒಳ್ಳೆ ಭರ್ಜರಿ ಆಸಾಮಿ. ಹುರಿಮೀಸೆ, ದಪ್ಪ ಮೂಗು, ಕೆಂಗಣ್ಣು, ವಿಭೂತಿ ಕುಂಕುಮಗಳ ನೆನಪಿನಲ್ಲಿ ಉಳಿಯಬಹುದಾದ ವ್ಯಕ್ತಿ. ಕರಿಸಿದ್ದನೊಂದಿಗೆ ಬಂದು ಕಾರಿನಲ್ಲಿ ಕುಳಿತಿದ್ದ ವರ್ಧಮಾನನನ್ನು ನೋಡಿ ಭಯ ಭಕ್ತಿಯಿಂದ ಕೈಮುಗಿದ.

"ಏನ್ಬೇಕಾಗಿತ್ತು ಸ್ವಾಮಿ ಹೊಸಾದು ನೆನ್ನೆ ತಾನೇ ಬಂದಿದೆ, ಪರವಾಯಿಲ್ಲ ಮಾಲು! ಸ್ವಾಮಿ ನಿಮ್ಮಂಗೆ ಎಷ್ಟೋ ಜನ ಕಾರ್ನಲ್ಲಿ ಬಂದು ತೊಗೊಂಡ್ಹೋಗಿ ಮನೇಲಿ ಕುಡೀತಾರೆ."

"ನಂಗದೆಲ್ಲಾ ಬೇಡಪ್ಪಾ. ವರದಾಚಾರಿ ಎಲ್ಲಿದ್ದಾನೆ ಗೊತ್ತಾ?"

"ಪೂಜೆಗೆ ಸಾರಾಯಿ ಬೇಕಾದಾಗ ಬರ್ತಾ ಇರ್ತಾನೆ. ಆದ್ರೆ ಅವ್ನ ಮನೆ ಎಲ್ಲಿದೇಂತಾ ಗೊತ್ತಿಲ್ಲ. ಇನ್ನೂ ಸಂಜೆ ತನ್ಕ ಇದ್ರೆ ಅವ್ನೇ ಬಂದ್ರೂ ಬಂದಾನು! ಸ್ವಾಮೀ, ಹೀಗೆ ಕೇಳ್ದೆ ಅಂತಾ ಬೇಜಾರು ಮಾಡ್ಕೊಬೇಡಿ. ಅವನು ಹುಚ್ಚು ಮನುಷ್ಯ! ಅವನ್ಯಾಕೆ ನಿಮಗೆ ಬೇಕು ಸ್ವಾಮೀ!?"

ವರ್ಧಮಾನ ಅವನಿಗುತ್ತರಿಸದೇ ಇದ್ದದ್ದು ಕಂಡು ಹೇಳಿದ. "ನೋಡೀ ಸ್ವಾಮಿ ಸುಡುಗಾಡಿನ ದಕ್ಷಿಣದ ಮೂಲೇಲಿ ಒಂದು ಗುಡಿ ಇದೆ. ಅದರ ಮೇಲೆ ಒಂದು ಹಳೆಯ ಮುರುಕ ಮಂಟಪ ಇದೆ. ಅಲ್ಲಿ ಸಿಕ್ಕಿದ್ರೂ ಸಿಕ್ಬೋದು!"

ಆ ಸುಡುಗಾಡಲ್ಲೇ ಎಲ್ಲಿ ಹುಡುಕಿಕೊಂಡು ಹೋಗುವುದು? ಕರಿಸಿದ್ಧನಿಗಾಗಿ ವರ್ಧಮಾನ ಸುತ್ತ ನೋಡಿದ. ಅವನೆಲ್ಲೂ ಕಾಣಲಿಲ್ಲ. ಅವನಾಗಲೇ ಅಂಗಡಿಯೊಳಗೆ ಕಳ್ಳು ಹೀರುತ್ತಾ ಕುಳಿತಿದ್ದ.

"ಹೀಗೇ ನೇರವಾಗಿ ಹೋಗಿ ಬಲಗಡೆ ತಿರುಗಿದ್ರೆ ಮಣ್ಣಿನ ರಸ್ತೆ ಸಿಗುತ್ತೆ. ಆ ಮಣ್ಣಿನ ರಸ್ತೇಲೇ ಹೋದ್ರೆ ಐದನೇ ಮೈಲಿಕಲ್ಲು ಸಿಗುತ್ತೆ- ಆ ಮೈಲಿಗಲ್ಲಿಗೇ ಎದುರಾಗಿ ಒಂದು ದೊಡ್ಡ ಮಾವಿನ ತೋಪಿದೆ. ತೋಪಿನ

ಮೂಲೇಲಿ ಒಂದು ಹುಣಿಸೇ ಮರ ಇದೆ. ಆ ಮರದ ಹಿಂದೇನೇ ಮೆಟ್ಟಿಲುಗಳಿವೆ. ಪೊದೆ ಬೆಳ್ಕೊಂಡು ಮುಚ್ಚಿಹೋಗಿದೆ. ಆ ಮೆಟ್ಟಿಲ್ಲನ್ನು ಹತ್ತಿಕೊಂಡು ಹೋದ್ರೆ ಹಾಳು ಮಂಟಪ ಸಿಗುತ್ತೆ ! ಅದರ ಬಲಗಡೆ ಇರೋ ಸಣ್ಣ ರಸ್ತೆ ಸುಡುಗಾಡಿಗೆ ಹೋಗುತ್ತೆ" ತಿಮ್ಮಯ್ಯ ಹೇಳಿದ.

ವರ್ಧಮಾನನಿಗೆ ರೋಷವುಕ್ಕಿತು. ತಾನು ಇಂತಹ ಜನರೊಂದಿಗೆ ಮಾತಾಡುವುದೇ ? ನೂಪುರ ನೆಟ್ಟಗೇ ಮನೆಯಲ್ಲೇ ಇದ್ದಿದ್ದರೆ ಏನಾಗು ತ್ತಿತ್ತು ! ಅವಳ ತಂದೆ, ತಾಯಿ ಶುದ್ಧ ಅನಾಗರೀಕ ಜನ ; ಒಲ್ಲದ ಮನಸ್ಸಿ ನಿಂದಲೇ ಕಾರು ಹತ್ತಿದ. ಕಾರು ಚಲಿಸಿದಾಗಲೇ ಆತನ ತಲೆಗೆ ಹೊಳೆದದ್ದು ಪೈಲಿಕಲ್ಲು ಹುಣಿಸೇಮರ ಮಾವಿನ ತೋಪು ಎಲ್ಲೋ ಕೇಳಿದ ಹಾಗಿದೆ ! ತಕ್ಷಣ ಹೊಳೆಯಿತು. ತಾತನ ಡೈರಿಯಲ್ಲಿ ಅದನ್ನು ಬರೆದುಕೊಂಡಿರಲಿಲ್ಲವೇ ? ತಾತನೂ ವರದಾಚಾರಿಯನ್ನು ನೋಡಿ ಬರೆದಿದ್ದಿರಬಹುದೇ ? ಮಣ್ಣಿನ ರಸ್ತೆ ಯಲ್ಲಿ ಕಾರು ತಿರುಗಿಸಿದ.

ಮಾವಿನತೋಪು ಕಣ್ಣಿಗೆ ಕಂಡಿತು. ಅದರ ಮೂಲೆಯಲ್ಲಿದ್ದ ದೊಡ್ಡ ಹುಣಿಸೇಮರ ಕಂಡಿತು. ಅದಕ್ಕೆ ಅಲ್ಲಲ್ಲಿ ಮಳೆ ಬಡಿದಿದ್ದರು. ಕುಂಕುಮ ಅರಿಸಿನ ಪೂಜೆ ಮಾಡಿದ್ದರು. ಅದರ ಬುಡದ ಪೊಟರೆಯಲ್ಲಿ ಒಂದು ಕಲ್ಲಿತ್ತು. ಅದಕ್ಕೆ ಕಣಗಿಲೆ, ಕೆಂಪುದಾಸವಾಳ ಅರಸಿನ ಕುಂಕುಮ ಹಾಕಿ ಪೂಜೆ ಮಾಡಿದ್ದರು. ಶೂಸಿನ ಕಾಲಿನಲ್ಲೇ ಪೊದೆಗಳನ್ನು ಸರಿಸಿದ–ಅಲ್ಲಿ ಮೇಲೆ ಹೋಗುವ ಮೆಟ್ಟಲುಗಳು ಕಂಡವು. ಒಂದೊಂದೇ ಮೆಟ್ಟಲು ಹತ್ತುತ್ತಾ ಹೋದ. ಸುತ್ತಲೂ ನಿರ್ಜನವಾಗಿದ್ದ ಬೀಳುನೆಲ, ಅಲ್ಲಲ್ಲಿ ಪೊದೆಗಳು, ಕ್ರಿಮಿ ಕೀಟಗಳ ಹಾರಾಟದಾಟ. ಬಲವಾಗಿ ಬೀಸುತ್ತಿದ್ದ ಗಾಳಿಯಲ್ಲಿ ನಿಶ್ಯಬ್ಧವಾಗಿ ಅಲಗಾಡುತ್ತಿದ್ದ ಮರದ ರೆಂಬೆ ಎಲೆಗಳು, ಅರೆಕ್ಷಣ ಭಯವಾದರೂ ವರ್ಧಮಾನ ಅವನ್ನತ್ತ ಸರಿಸಿ ಮೆಟ್ಟಲೇರಲಾರಂಭಿಸಿದ. ಮೇಲೆ ಹಾಳು ಮಂಟಪ ಕಂಡಿತು. ಸರಸರನೇ ಮಂಟಪದತ್ತ ನಡೆದ. ಅಲ್ಲಿ ಯಾರೂ ಇರಲಿಲ್ಲ, ಆದರೆ ಅಲ್ಲಿ ಬಿದ್ದಿದ ಹೂವು, ಗೋಣಿದಾರ ಮೂಳೆಗಳು, ರಕ್ತದ ಕಲೆ, ತಲೆಯಿಲ್ಲದ ಕಲ್ಲಿಗೆ ಬಳಿದಿದ್ದ ಅರಸಿನ ಕುಂಕುಮ ಕಲ್ಲಿಗೆ ಮೆತ್ತಿ ಕೊಂಡಿದ್ದ ಒಣಗಿದ ರಕ್ತಕ್ಕೆ ಮುತ್ತುತ್ತಿದ್ದ ನೊಣಗಳ ಗಬ್ಬುವಾಸನೆ ಮೂಗಿಗೆ ಬಡಿದಾಗ ಅತ್ತ ನೋಡಿದ, ಕೋತ ಮಾಂಸದ ತುಂಡಿಗೆ ನೊಣ ಮುತ್ತುತ್ತಿತ್ತು. ಉಸಿರು ಬಿಗಿಹಿಡಿದು ಸುತ್ತ ನೋಡಿದ, ದೂರದಲ್ಲಿ ಸ್ಮಶಾನ ಕಾಣುತ್ತಿತ್ತು. ಯಾವುದೋ ಹೆಣ ಬೆಂಕಿಯಲ್ಲಿ ಬೇಯುತ್ತಿತ್ತು. ವರ್ಧಮಾನನಿಗೆ ಎದೆ

ಜಲ್ಲೆಂದಿತು-ಇಂತಹ ಸ್ಥಳದಲ್ಲಿ ವರದಾಚಾರಿ ಪೂಜೆ ಮಾಡುವನೆಂದರೆ ಅವನೇ ಹೇಗಿರಬಹುದು ? - ಅವನ ಸುಳಿವೆಲ್ಲೂ ಕಾಣಲಿಲ್ಲ. ಮಂಟಪದ ಹಿಂದೆ ಮಣ್ಣಿನ ಕಾಲುದಾರಿ ಇಳಿಜಾರಿನಲ್ಲಿ ಹೋಗಿದ್ದು ಕಂಡಿತು. ಧೈರ್ಯಮಾಡಿ ಆ ದಾರಿಯಲ್ಲಿಳಿದು ಹೊರಟ. ಆ ದಾರಿಯು ಒಂದು ಹಳೆಯ ಪಾಚಿಕಟ್ಟಿದ್ದ ಪುಷ್ಕರಣಿಯ ಒಳಗೆ ಅವನನ್ನು ಕರೆದೊಯ್ಯಿತು. ತುಂಡು ಬಟ್ಟೆಗಳು ಸೋಪಿನ ತುಂಡು ಇವುಗಳನ್ನು ನೋಡಿದಾಗ ಪುಷ್ಕರಣಿಯನ್ನು ಯಾರೋ ಉಪಯೋಗಿಸುವರೆಂದು ತಿಳಿಯಿತು. ವರದಾಚಾರಿಯೇ ಇರಬೇಕು ! ಪುಷ್ಕರಣಿಯ ಹಿಂಭಾಗಕ್ಕೆ ಒಂದು ಕಲ್ಲಿನ ಗುಡ್ಡ ಕಾಣಿಸಿತು. ಅಲ್ಲಿಗೆ ಹೋಗಲು ಮನಸ್ಸಾಗಲಿಲ್ಲ. ನಿಧಾನವಾಗಿ ಮಂಟಪಕ್ಕೆ ಹಿಂದಿರುಗಿದ ವರದಾಚಾರಿ ಪೂಜೆಗೆ ಕುಳಿತರೂ ತನಗೆ ತಿಳಿದಂತೆ ಪೂಜೆ ಮಾಡುವುದೇ ವರದಾಚಾರಿಗಳು ಕತ್ತಲಾದ ಮೇಲೆ ! ನಾನು ಸೂರ್ಯಾಸ್ತವಾಗುವವರೆಗೆ ಇರಲು ಸಾಧ್ಯವಿಲ್ಲ. ಮಂಟಪದಿಂದಿಳಿದು ಹುಣಸೇಮರದ ಬಳಿಗೆ ಬಂದು ದೂರದಲ್ಲಿ ಯಾರೋ ಬರುತ್ತಿದ್ದುದು ಕಂಡಿತು. ಸೊಂಟದವರೆಗೆ ತುಂಡು ಪಂಚೆ, ಕಡ್ಡಿ ಕೈ ಕಾಲುಗಳು ಒಣಗಿ ಬತ್ತಿ ಹೋಗಿದ್ದ ಮುಖ ನಿಸ್ತೇಜವಾದ ಕಣ್ಣುಗಳು- ಆ ವ್ಯಕ್ತಿ ವರ್ಧಮಾನನನ್ನು ನೋಡದೇ ಮುಂದೆ ಸಾಗಿದಾಗ ಅವನೇ ಕರೆದ. ಆ ವ್ಯಕ್ತಿ ನಿಂತು ಹಿಂತಿರುಗಿ ನೋಡಿದ. ವರ್ಧಮಾನನಿಗೆ ಅವನ ಗುರುತಿರಲಿಲ್ಲ. ಅವನು ರುದ್ರಣ್ಣನ ಶಿಷ್ಯ ವೀರಭದ್ರನೆಂದು ವರ್ಧಮಾನನಿಗೆ ತಿಳಿಯಲಿಲ್ಲ.

"ಏನು ಸ್ವಾಮಿ, ಇಲ್ಲಿ ವರದಾಚಾರೀಂತಾ ಇದ್ದನಲ್ಲಾ ಅವನೆಲ್ಲಿ ?" ವೀರಭದ್ರ ಸಣ್ಣಗೆ ನಡುಗಿದ, ಬಾಯಿ ಬಿಡಲಿಲ್ಲ. ವರ್ಧಮಾನ ಜೇಬಿನಿಂದ ಪರ್ಸ್ ತೆಗೆದು ಹತ್ತರ ಒಂದು ನೋಟನ್ನು ಅವನ ಮುಂದೊಡ್ಡಿದ.

"ವರದಾಚಾರಿ ಎಲ್ಲಿದ್ದಾನೆ ?"

ವೀರಭದ್ರ ನೋಟನ್ನು ಗಬಕ್ಕನೇ ಕಿತ್ತುಕೊಂಡು ಸೊಂಟಕ್ಕೆ ಸೇರಿಸಿದ. ಅವನ ದನಿಯಲ್ಲಿ ಜೀವವಿದ್ದಂತೆ ಕಾಣಲಿಲ್ಲ-ಆದರೂ ಸ್ಪಷ್ಟವಾಗಿ ಹೇಳಿದ.

"ಅವ್ನು ದೆವ್ವ ಬಿಡಿಸೋಕೆ ಎಲ್ಲೋ ಹೋಗಿದ್ದಾನೆ."

"ಯಾವಾಗ ಬರ್ತಾನೆ ?"

"ಗೊತ್ತಿಲ್ಲ."

"ಅವನ ಮನೆ ಎಲ್ಲಿದೆ ?"

"ಗೋರೀ ತಿಮ್ಮನ ಪಾಳ್ಯದಲ್ಲಿದೆ"

"ಇಲ್ಲಿಂದ ಹೇಗೆ ಹೋಗಬೇಕು ?"

"ಸ್ಮಶಾನದ ಎಡಗಡೆ ಇರೋ ರಸ್ತೇಲಿ ಹೋಗಿ ಎಡಕ್ಕೆ ತಿರುಗಬೇಕು !"

ವರ್ಧಮಾನ ಕೂಡಲೇ ಕಾರೇರಿದ. ಕಾರು ಅತ್ತ ಚಲಿಸಿದಾಗ ವೀರಭದ್ರ ಉಬ್ಬು ಪಾಚಿ ಹಲ್ಲುಗಳನ್ನು ಬಿಟ್ಟು ನಿಶ್ಶಬ್ದವಾಗಿ ನಕ್ಕ.

* * * *

ವರದಾಚಾರಿ ಹಳದಿಯ ರೇಷಿಮೆ ಮಗುಟ ಉಟ್ಟು ಚರ್ಮದ ಹಾಸಿನ ಮೇಲೆ ಕುಳಿತಿದ್ದ. ಅವನೆದುರಿಗೆ ಕಾವೇರಮ್ಮ, ಸಂಜೀವಯ್ಯ, ನೂಪುರ, ಕುಳಿತ್ತಿದ್ದರು.

"ನೋಡೀ ಸ್ವಾಮೀ, ರುದ್ರಣ್ಣ ನಿಮಗೆ ಮೋಸ ಮಾಡಿದ್ದಾನೆ. ದಿಗ್ಬಂದನ ಮಾಡ್ತೀನಿ, ಭೂತ ಉಚ್ಚಾಟನೆ ಮಾಡ್ತೀನಿಂತಾ ಹೇಳಿ ನಿಮ್ಮ ಮುಂದೆ ಕಣ್ಣು ಕಟ್ಟು ವಿದ್ಯೆ ಮಾಡಿದ್ದಾನೆ. ಅವನ ಭೈರವಿ ಉಪಯೋಗ ವಿರಲಿಲ್ಲ. ಅವನ ಶಿಷ್ಯನೊಂದಿಗೆ ಸೇರಿದ್ದಳು ಅವನಿಗೇ ಶಕ್ತಿ ಕೈಬಿಟ್ಟು ಹೋಗುತ್ತಿತ್ತು. ಸಾಕಷ್ಟು ಸಿಕ್ಕಿದಷ್ಟು ಹಣ ಮಾಡ್ಕೊಳ್ಳೋಕೆ ನಿಮ್ಮನ್ನ ಬುಟ್ಟಿಗೆ ಹಾಕಿಕೊಂಡು, ಅಲ್ದೇ ಅವನ್ಗೆ ಹೆಂಗಸರ ಹುಚ್ಚು! ನಿಮ್ಮ ಮಗಳ ಮೇಲೆ ಕಣ್ಣುಹಾಕಿದ್ದ. ವ ಶೀ ಕ ರ ಣ ವಿದ್ಯೆ ಅವನ್ಗೆ ಕರಗತವಾಗಿತ್ತು. ಅವ್ನು ಬದುಕಿದ್ದಿದ್ರೆ ಇಷ್ಟೊತ್ತಿಗ್ಗೆ ನಿಮ್ಮ ಮಗಳನ್ನ ವಶಪಡಿಸಿಕೊಂಡುಬಿಡ್ತಾ ಇದ್ದ"

ಸಂಜೀವಯ್ಯ ನಡುಗಿದರು, ಕಾವೇರಮ್ಮ ಭಯದಿಂದ ತಲ್ಲಣಿಸಿದರು, ನೂಪುರ ಸುತ್ತ ಮುತ್ತ ನೋಡಿದಳು.

"ಇವಳಿಗೆ ತಾಯಿತ ಕಟ್ಟಿಸಿದ್ದಾರೆ, ಏನೂ ಆಗೋಲ್ಲಾಂತ ಅಂದಿದ್ದಾರೆ"

"ಆ ತಾಯಿತ ಏನು ತಡೆಯುತ್ತೆ! ಅದೇನಿದ್ರೂ ಭಯವಾಗ್ದೇ ಇರ್ಲಿ ಅಂತ ಕಟ್ಟಿಸಿರೋದೂ, ಆ ಶಕ್ತಿನ್ನೂ ರುದ್ರಣ್ಣ ತೊಗೊಂಡು ಹೋಗಿದ್ದಾನೆ. ಆ ತಾಯಿತ ಇದ್ರೂ ಒಂದೇ ಬಿಟ್ರೂ ಒಂದೇ! ನಿಮ್ಮ ಮಗಳ ಮೈ ಮೇಲಿದ್ದ ಒಡವೇನೆಲ್ಲಾ ಎತ್ಕೊಂಡು ಹೋದ, ಇಂತಹ ಕಳ್ಳನನ್ ಮಕ್ಕಳ್ನ ಸುಮ್ನೆಬಿಡ್ತಾರ್ದ್ದಾ! ಪಾಪ ರಾಮಲಿಂಗಯ್ಯನೋರ್ಗೆ ಗೊತ್ತಿಲ್ಲ. ಅವ್ರೂ ಮೋಸ ಹೋದ್ರು! ಅವ್ನು ಸತ್ತದ್ದು ನೋಡಿ ಅವನ್ನ ಮುಟ್ಕೊಂಡಿದ್ದೆ ಅವರಿಗೆ ಲಕ್ವ ಹೊಡೆಯಿತು. ದೇವರು ಪೂಜೆ, ಪುನಸ್ಕಾರ ಇಟ್ಕೊಂಡಿರೋ ಆ ಮನುಷ್ಯಂಗೆ ಅಷ್ಟೇ ಆಯಿತು. ಬೇರೆಯವರಿಗಾಗಿದ್ರೆ ರಕ್ತ ಕಾರಿಕೊಂಡು ಸತ್ತುಹೋಗಿರೋರು. ಈಗೇನು ಮಾಡ್ಬೇಕೂ ಹೇಳವ್ವ"

"ನನ್ನ ಮಗಳ ಬಾಳು ಸರಿವಾಡು. ಮದ್ವೆ ಆಗಿ ಆ ಮನೆಗೆ ಹೋದಾಗ್ಲಿಂದ ದೆವ್ವದ ಕಾಟ ಆಗೋಗಿದೆ. ನಾಳೆ ಅವರಿಗೇ ಬೇಜಾರು ಬಂದು ಇವಳ್ನ ಓಡಿಸಿದ್ರೂ ಆಯ್ತು, ಇಲ್ದೆ ಇದ್ರೆ ಅಳಿಯಂಗೆ ಬೇರೆ ಮದ್ವೆ ಮಾಡಿದ್ರೂ ಆಯ್ತು !"

ವರದಾಚಾರಿ ನೂಪುರಳತ್ತ ನೋಡಿದಾ ! ವಸಂತದ ಹೊಚ್ಚ ಹೊಸ ಹೂವಿನಂತಿದ್ದಳು.

"ನೀವೇನೂ ಹೆದರಬೇಡಿ ಎಲ್ಲಾ ಸರಿ ಮಾಡ್ತೀನಿ ! ಮೊದಲು ಅವಳ ಕೈಲಿರೋ ತಾಯಿತ ತೆಗೀರಿ, ಅದು ತೆಗೀದೇ ನಾನು ಭೂತ ಎಷ್ಟು ಆವರಿಸಿಕೊಂಡಿದೇಂತಾ ನೋಡೋಕ್ಕಾಗೋಲ್ಲ !"

ಕಾವೇರಮ್ಮನಿಗೆ ಅದು ಇಷ್ಟವಾಗಲಿಲ್ಲ, ದೇವರ ಪೂಜೆ, ಶಾಂತಿಮಾಡಿ ಕಟ್ಟಿಸಿದ ಯಂತ್ರ ! ಅದನ್ನು ತೆಗೆದುಬಿಟ್ಟರೆ ಲಲಿತಮ್ಮ ಏನೆಂದುಕೊಳ್ಳುವರೋ ಏನೋ.

"ತಾಯಿ, ನೀವು ಅನುಮಾನ ಪಡಬೇಡಿ, ನಿಮ್ಮ ಮಗಳ ಮುಖ ನೋಡಿ ಒಳಗೇ ಕಷ್ಟ ಆಗ್ತಾ ಇದೆ, ಪ್ರೇತಾತ್ಮ ಅವಳ ಮೈಯಲ್ಲಿನ ರಕ್ತನೆಲ್ಲಾ ನಂಜುಮಾಡ್ತಾ ಇದೆ, ಮೆದುಳಿನ ಜೀವ ಹಿಂಡುತ್ತಾ ಇದೆ, ಹೀಗೇ ಬಿಟ್ರೆ ನಿಮ್ಮ ಮಗಳು ಹುಚ್ಚಿ ಆದಾಗೆ ಆಗಿಬಿಡ್ತಾಳೆ, ಮೈ ಒಣಗಿ ಅಸ್ಥಿ ಪಂಜರವಾಗಿ ಬಿಡ್ತಾಳೆ."

ಸಂಜೀವಯ್ಯ ಹೆಂಡತಿಯತ್ತ ನೋಡದೇ ತಾನೇ ನೂಪುರಳ ಕೈಯಲ್ಲಿದ್ದ ತಾಯಿತ ಬಿಚ್ಚಿದರು. ಅದನ್ನ ಬಿಚ್ಚಿದ್ದಾಗ ನೂಪುರ ಗಡಗಡನೆ ನಡುಗಿದಳು. ಕೈ ಆಕಳಿಸಿದಳು. ಕಣ್ಣುಗಳನ್ನು ಗಿರಗಿರನೆ ತಿರುಗಿಸಿದಳು.

"ನೋಡೀ, ನಾನು ಏನು ಹೇಳ್ದೆ–ಆ ತಾಯಿತಾನ ದೂರ ತೊಗೊಂಡು ಹೋಗಿ ಎಸೆದು ಬನ್ನಿ."

ವರದಾಚಾರಿ ಹೇಳಿದ. ಸಂಜೀವಯ್ಯ ಅದನ್ನೆತ್ತಿಕೊಂಡು ಹೋಗಿ ಹೊರಗೆಸೆದು ಬಂದರು. ವರದಾಚಾರಿ ನೂಪುರಳನ್ನೇ ದಿಟ್ಟಿಸಿದ.

"ಏಯ್, ನನ್ನ ನೋಡೂ ! ನಿಂಗೆ ಹಿಂಸೆ ಮಾಡೋಲ್ಲ. ನಾನು ಹೇಳಿದ ಹಾಗೆ ಕೇಳಿ ಹೊರಟುಹೋಗು, ಇಲ್ಲದಿದ್ರೆ ನಿಂಗೆ ಚಿತ್ರಹಿಂಸೆ ಮಾಡ್ತೀನಿ !"

ಕೈಯ್ಯಲ್ಲಿ ಬೇವಿನ ಸೊಪ್ಪು ಕುಂಕುಮ ನೀರು ತೆಗೆದುಕೊಂಡು ಅವಳ ಮುಖಕ್ಕೆ ಎರಚಿದ.

ನೂಪುರ ಬೆಚ್ಚಿದಳು. ಬಿಗಿಯಾಗಿ ಕಣ್ಣು ಮುಚ್ಚಿಕೊಂಡಳು. ವರದಾಚಾರಿ ಏನೋ ಮಣಮಣ ಮಂತ್ರ ಹೇಳಿದ. ಹಿಡಿಯಲ್ಲಿ ಬೂದಿ ತೆಗೆದು ಗಾಳಿಯಲ್ಲಿ ಅವಳತ್ತ ತೂರಿದ, ನೂಪುರನಿಗೆ ತಾನು ದಾರಿತಪ್ಪಿ ಯಾವುದೋ ಪ್ರಪಾತದಲ್ಲಿ ಬೀಳುತ್ತಿರುವಂತೆ ಭಾಸವಾಯಿತು. ಅನಂತರ ಎಲ್ಲೆಡೆಯಿಂದಲೂ ಕತ್ತಲಾವರಿಸಿದಂತಾಯಿತು. ಮುಂದೇನಾಯಿತೆಂದು ಅವಳಿಗೆ ತಿಳಿಯಲಿಲ್ಲ.

ಸಂಜೀವಯ್ಯ, ಕಾವೇರಮ್ಮ ನೂಪುರಳನ್ನು ಮನೆಗೆ ಕರೆತಂದಾಗ ಅಕ್ಕ ಪಕ್ಕದ ಮನೆಯವರೆಲ್ಲಾ ಅವರನ್ನು ಮುತ್ತಿಕೊಂಡರು. ರೇಣುಕಮ್ಮ ಹೆಮ್ಮೆಯಿಂದ ಬೀಗಿದರು.

"ಏನಾಯ್ತಾರೀ ? ವರದಾಚಾರೀಂದ್ರೆ ಎತ್ತಿದ ಕೈ ಕಣ್ರೀ ! ಈಗ್ಲೆ ನೋಡಿ ನೂಪುರನಿಗೆ ಮೊದಲ ಕಳೆ ಬಂದು ಬಿಡ್ತು ! ನೋಡ್ತಾ ಇರಿ. ಇನ್ನು ಒಂದೆರಡು ದಿನಗಳಲ್ಲಿ ಮೈಕೈ ತುಂಬಿಕೊಂಡುಬಿಡ್ತಾಳೆ."

ಕಾವೇರಮ್ಮ ನೂಪುರಳ ಕತ್ತಿನಲ್ಲಿ ಕರಿಯ ಕಂಬಳಿ ದಾರದಲ್ಲಿ ಕಟ್ಟಿದ್ದ ಹೊಸ ತಾಯಿತಾ ನೋಡಿ ಸಮಾಧಾನದಿಂದ ಉಸಿರಾಡಿದರು.

* * * *

ವರ್ಧಮಾನ ವರದಾಚಾರಿಯ ಮನೆಗೆ ಬಂದಾಗ ಆಗತಾನೇ ಕಾವೇರಮ್ಮ ಸಂಜೀವಯ್ಯ ನೂಪುರನೊಂದಿಗೆ ಹೊರಟುಹೋಗಿದ್ದರು. ವರದಾಚಾರಿ ಹಿಂದಕ್ಕೊರಗಿ ಗುಡುಗುಡಿಯನ್ನು ಸೇದುತ್ತಾ ಅರೆ ಕಣ್ಮುಚ್ಚಿ ಮಲಗಿದ್ದ. ನೂಪುರಳಿಗೆ ಹೇಗಿದ್ದರೂ ತನ್ನ ಭಾಷೆಯಲ್ಲಿ ಹೇಳಿಯಾಗಿದೆ. ಅವಳು ಹೇಗಾದರೂ ಮಾಡಿ ಗರ್ಭಿಣಿಯಾಗಬೇಕು. ಐದು ತಿಂಗಳು ತುಂಬುತ್ತಲೇ ತಾನು ಅವಳಿಗೆ ಗರ್ಭಪಾತವಾಗುವಂತೆ ಹಸಿರೌಷಧ ಕೊಡಬೇಕು. ಅವಳ ಮನೆಯವರಿಗೆ ಅದು ಪ್ರೇತ ಶಿಶುವೆಂದು ಹೇಳಿ ಅದನ್ನು ವಾಮಕರ್ಮಗ ಳೊಂದಿಗೆ ನಾಶಮಾಡುವುದಾಗಿ ಹೇಳಿ ಅದನ್ನೊಯ್ದು ಅದನ್ನು ಬಲಿತೆತ್ತು ಆ ಶಕ್ತಿಯನ್ನು ತಾನು ಒಲಿಸಿಕೊಳ್ಳಬೇಕು. ಆ ಶಕ್ತಿ ತನ್ನದಾದರೆ ತಾನು ಅತ್ಯಂತ ಬಲಶಾಲಿಯಾದ ವಾಮಾಚಾರಿಯಾಗಬಹುದು !

ಹೊರಗೆ ಬಾಗಿಲಲ್ಲಿ ಬಂದು ನಿಂತಿದ್ದ ವರ್ಧಮಾನನನ್ನು ಅವನು ಗಮನಿಸಿರಲಿಲ್ಲ. ಅವನನ್ನು ದೂರದಿಂದಲೇ ದೀರ್ಘವಾಗಿ ವರ್ಧಮಾನ ನೋಡಿದ, ಅವನ ಗಡ್ಡ ಮೀಸೆಗಳಾಗಲೀ, ಹಣೆಯಲ್ಲಿದ್ದ ವಿಭೂತಿ ಕುಂಕುಮ

ವಾಗಲಿ, ಹೆದರಿಕೆಯನ್ನುಂಟು ಮಾಡಲಿಲ್ಲ. ಅವನೇ ಏನು ವರದಾಚಾರಿ ! ಕಳ್ಳ ಸನ್ಯಾಸಿಯ ಹಾಗಿದ್ದಾನೆ ! ಇವನ ಶಕ್ತಿಯೇನಿದ್ದರೂ ಕಣ್ಕಟ್ಟು ವಿದ್ಯೆ, ಸಮ್ಮೋಹನಾಶಕ್ತಿಯಿರಬಹುದಷ್ಟೆ. ಅವನತ್ತ ನೋಡಿದ "ಯಾರದು ?" ದಡಕ್ಕನೆದ್ದು ಬಂದ. ಅವನುಟ್ಟಿದ್ದ ಕಾವಿ ಬಟ್ಟೆಯ ಪಂಚೆ ನೆಂಗೆ ಚಿಮ್ಮುತ್ತಾ ಬಂದ. ವರ್ಧಮಾನ ನಿಂತಲ್ಲೇ ನಿಂತಿದ್ದ. ಅವನ ಸೂಟು, ಬೂಟು, ಕಾರುನೋಡಿ ಅವನು ಶ್ರೀಮಂತನೆಂದು ತಿಳಿದುಕೊಂಡ ವರದಾಚಾರಿ ಮುನ್ನೆಚ್ಚರಿಕೆ ವಹಿಸಿದ.

"ಬನ್ನಿ ಒಳಗೆ. ಹೊರಗೇ ನಿಂತುಬಿಟ್ಟಿರಲ್ಲ ! ನನ್ನಿಂದೇನಾಗ ಬೇಕಾಗಿತ್ತು ?"

"ಏನೂ ಇಲ್ಲ, ಯಾರನ್ನೋ ಹುಡುಕಿಕೊಂಡು ಇಲ್ಲಿಗೆ ಬಂದೆ...."

"ಇಲ್ಲಿ ಯಾರು ಬೇಕಿತ್ತು ?"

"ಇಲ್ಲಿಗೆ ಸಂಜೀವಯ್ಯ, ಅವರ ಕುಟುಂಬದವರು ಬಂದಿರುವರೆಂದು ಕೊಂಡು ಬಂದೆ...."

"ಅವರು ಆಗಲೇ ಹೋಗಿಯಾಯಿತು. ಅವರು ತಮಗೇನಾಗಬೇಕು ?"

"ನನ್ನ ಅತ್ತೆ ಮಾವ-"

ವರ್ಧಮಾನ ಹೇಳುತ್ತಲೇ ವರದಾಚಾರಿ ಕೊಂಚ ಹೆದರಿದ. ಇವನು ರಾಮಲಿಂಗಯ್ಯನವರ ಮೊಮ್ಮಗ ಹಾಗಾದರೆ ! "ಬನ್ನಿ ಕೂತ್ಕೊಳ್ಳಿ....ಪಾಪ ತಮ್ಮಾಕೆಗೇ ಅಲ್ಲವೇ ದುಷ್ಟ ಶಕ್ತಿಗಳ ತೊಂದರೆಗಳಿಂದ ಒದ್ದಾಡ್ತಾ ಇರೋದು."

"ನಂಗೆ ಅವ್ರಲ್ಲೆಲ್ಲಾ ನಂಬಿಕೆಯಿಲ್ಲ."

"ಅದು ಹೇಗೆ ಸ್ವಾಮಿ ನಂಬೋಲ್ಲ. ಕಾಣದ ದೇವ್ರನ್ನ ಪೂಜಿಸ್ತೀರಿ. ಅವನ ಪವಾಡಗಳ್ನ ಹಾಡಿ ಹೊಗಳ್ತೀರಾ-ನೀವು ದೇವ್ರನಲ್ಲೂ ನಂಬಿಕೆ ಯಿಟ್ಟಿಲ್ವಾ ?"

ವರ್ಧಮಾನ ಉತ್ತರಿಸಲಿಲ್ಲ.

"ದುಷ್ಟ ಗ್ರಹಗಳು ಶಕ್ತಿಗಳು ಇವೆ. ಅವುಗಳು ಇತರರಿಗೆ ತೊಂದರೆ ಕೊಡುತ್ತವೆ. ಅವುಗಳನ್ನೂ ನಿಗ್ರಹಿಸಿ ಸಂಹಾರ ಮಾಡುವವರೇ ನಮ್ಮಂತಹ ವರು ಶಕ್ತಿಗಳನ್ನು ಗೆದ್ದುಕೊಂಡು ಅವುಗಳಿಂದ ಈ ದುಷ್ಟ ಗ್ರಹ ಶಕ್ತಿಗಳನ್ನೂ ಭೂತ ಪಿಶಾಚಿಗಳನ್ನೂ ನಾಶಮಾಡ್ತೀವಿ"

"ಭೂತ-ಪ್ರೇತ....!" ವರ್ಧಮಾನ ಸಿಡಿದೆದ್ದ. "ನಾನ್‌ಸೆನ್ಸ್! ಅದೆಲ್ಲಾ ನೀವು ಹೊಟ್ಟೆಪಾಡಿಗಾಗಿ ಜನರನ್ನು ಹೆದರಿಸಿ ಹಣ ತುಂಬಿಕೊಳ್ಳಲು ನೀವೇ ಸೃಷ್ಟಿಸಿರುವ ಕಟ್ಟು ಕತೆ !"

"ಸ್ವಾಮೀ, ಇಲ್ಕೇಳಿ....ನಿಮ್ಗೆ ಪುನರ್ಜನ್ಮದಲ್ಲಿ ನಂಬಿಕೆಯಿದೆ ತಾನೇ ? ಸತ್ತವನು ಮತ್ತೆ ಹುಟ್ಟಬೇಕಾದರೆ ಜೀವಾತ್ಮ ಉಳಿಯಲೇಬೇಕು. ಸತ್ತವನ ಆತ್ಮ ಮತ್ತೊಂದು ಆಕಾರ ತೆಗೆದುಕೊಂಡು ಮತ್ತೆ ಜೀವ ಪಡೆಯುತ್ತೆ. ಹಳೆಬಟ್ಟೆ ಕಳಚಿ ಹೊಸಬಟ್ಟೆ ಹಾಕಿಕೊಂಡಂತೆ ಒಂದು ಜನ್ಮ ಹೋಗಿ ಮತ್ತೊಂದು ಜನ್ಮ ಬರುತ್ತದೆ ಅಂತ ಶ್ರೀ ಕೃಷ್ಣಪರಮಾತ್ಮನೇ ಹೇಳಿಲ್ಲವೇ ? ಈ ಆತ್ಮಗಳಲ್ಲಿ ಅನೇಕ ಆತ್ಮಗಳು ಸದ್ಗತಿ ಪಡೆಯಲಾರದೇ ನರಳುತ್ತಿರುತ್ತವೆ, ಇಲ್ಲಿ ಜೀವವೂ ಅಲ್ಲ, ನಿರ್ಜೀವವೂ ಅಲ್ಲ. ಅಂತಹ ಸ್ಥಿತಿಯಲ್ಲಿಯೇ ಉಳಿದು ಪುನರ್ಜನ್ಮ ಪಡೆಯಲೂ ಆಗದೇ ಒದ್ದಾಡುತ್ತಿರುವ ಇಂತಹ ಅರೆಜೀವಗಳೇ ಪ್ರೇತಾತ್ಮಗಳು, ಅವುಗಳಲ್ಲಿ ಕೆಲವು ಸದ್ಗುಣಗಳನ್ನು ಹೊಂದಿರುತ್ತವೆ ; ಮತ್ತೆ ಕೆಲವು ಕ್ಷುದ್ರ ಜೀವಿಗಳಾಗಿರುತ್ತವೆ. ರಕ್ತ ಪಿಪಾಸುಗಳಾಗಿರುತ್ತವೆ. ಇವುಗಳನ್ನು ಸಾಮಾನ್ಯ ಮಾನವ ಕಾಣಲಾರ. ಅತಿ ಸೂಕ್ಷ್ಮ ಮನಸ್ಸಿನವರಿಗೆ ಗೋಚರವಾಗಬಹುದು. ನಮ್ಮಂತಹವರು ಅದಕ್ಕಾಗಿ ಸಾಧನೆ ಮಾಡಿ ಆ ದುಷ್ಟ ಶಕ್ತಿಗಳನ್ನು ನಾಶ ಮಾಡಲು ಯತ್ನಿಸುತ್ತೇವೆ !"

ವರ್ಧಮಾನ ಅವನ ಮಾತಿನ ವರಸೆ ಕಂಡು ಕೈ ಕಟ್ಟಿ ಅಲ್ಲೇ ನಿಂತ. "ನಿಮ್ಮಾಕೆಗೆ ಹಿಡಿದಿರೋದು ಒಂದು ಗರ್ಭಿಣಿ ದೆವ್ವ. ಅದು ತಾನು ಹಿಂದೆ ಪಟ್ಟ ಕಷ್ಟಗಳನ್ನು ಮರೆತಿಲ್ಲ. ನಿಮ್ಮಾಕೆ ಗರ್ಭಿಣಿ ಆದಾಗ ಅವಳಿಗೆ ಮಾಡೋ ಉಪಚಾರನ್ನೆಲ್ಲಾ ತಾನೂ ಮಾಡಿಸ್ಕೊಂಡು ಅವಳ ಹೊಟ್ಟೇಲಿರೋ ಮಗು ರಕ್ತಕುಡ್ದು ಸಾಯಿಸಿಬಿಟ್ಟು, ತಾನು ಸುಖ ಕಾಣದ ಮನೇಲಿ ಯಾವ ಸೊಸೇನೂ ಬಾಳ ಬಾರ್ದು ಅಂತ ಅವಳನ್ನು ನುಂಗಿ ಹಾಕ್ಬಿಟ್ಟೇ ಹೋಗೋದು. ಆ ಬಡೀಮಗ ರುದ್ರಣ್ಣ ದುಡ್ಡು ತಿಂದು ಅದ್ಮಾಡ್ತೀತಿ, ಇದ್ಮಾಡ್ತೀನಿಂತಾ ಮೋಸ ಮಾಡಿದ. ಅವನ ಕೆಟ್ಟನ ಅವನನ್ನೇ ನುಂಗಿಹಾಕ್ತು, ನಿಮ್ಮ ತಾತಂಗೂ ಅವನ ಕೆಟ್ಟತನದಿಂದಲೇ ಲಕ್ವ ಹೊಡೆದಿರೋದೂ ! ಅದ್ನೆಲ್ಲಾ ನಾನು ಸರಿಮಾಡ್ತೀನಿ."

ವರ್ಧಮಾನ ಭುಜ ಕುಣಿಸಿದ.

"ಅಲ್ಲಯ್ಯಾ ಇಷ್ಟೆಲ್ಲಾ ನೀನು ಮಾಡೋನು ನೀನ್ಯಾಕೆ ಹೀಗಿದ್ದೀಯಾ! ನಿನಗೆ ಬೇಕಾದ ಪದಾರ್ಥಗಳನ್ನೆಲ್ಲಾ ನೀನೇ ತಂದ್ಕೊಬಹುದಿತ್ತಲಾ ? ನಿನಗೆ ನಾಳೆ ನಿನ್ನ ಗತಿ ಏನಾಗುತ್ತೆ ಅಂತ ಗೊತ್ತಿಲ್ಲ. ಇನ್ನು ಮಿಕ್ಕವರದ್ದೆಲ್ಲಾ ಹೇಳೀಯಲ್ಲಾ ! ನಿನ್ನ ಮಾತು ನಂಬಿದವರೆಲ್ಲಾ ಹೆದರಿ ನೀನು ಹೇಳಿದ್ದು ಕೇಳಿದ್ದು ಕೊಡ್ತಾ ಇದ್ದಾರೆ. ನಿಂಗೆ ನಿಜವಾಗಲು ಅಮಾನುಷ ಶಕ್ತಿಯಿದ್ರೆ ಸುತ್ತ ಮುತ್ತ ನರಳ್ತಾ ಇರೋ ಜನನ್ನ ಉದ್ಧಾರ ಮಾಡು ! ನನ್ನ ಹೆಂಡ್ತೀನ್ನ ನಾನು ನೋಡ್ಕೋತೀನಿ ! ಹುಷಾರು ! ಮನೆಗಿನೇ ಹತ್ರ ಬಂದೀಯಾ !" ಗಡುಸಾಗಿ ಹೇಳಿ ಅಲ್ಲಿಂದ ಹೊರಬಿದ್ದ.

ಅವನ ಬೆನ್ನ ಹಿಂದೆಯೇ ವರದಾಚಾರಿ ವಿಭೂತಿ ಕೈಗೆತ್ತಿಕೊಂಡು ತೂರಿದ. ಎಂತಹ ದುರಹಂಕಾರ. ಎಂತಹ ಉದ್ಧಟತನ! ನನ್ನನ್ನೇ ಅಪಹಾಸ್ಯ ಮಾಡುವನಲ್ಲ! ವರ್ಧಮಾನ ಎದುರಿಗಿದ್ದ ಕಲ್ಲು ಕಾಣದೇ ಎಡವಿದ. ಮೈಯಲ್ಲಿ ಏನೋ ಹಿಮದಂತೆ ಪ್ರವೇಶ ಮಾಡಿದಂತಾಯಿತು. ಮನಸ್ಸು ಕಗ್ಗತ್ತಲಲ್ಲಿ ಮುಳುಗಿದಂತಾಯಿತು. ಇಲ್ಲಿ ಇವನ ಕಣ್ಣುಕಟ್ಟು ವಿದ್ಯೆಗಳಿಗೆ ನಾನು ಹೆದರಬಾರದು ! ಕಾರನ್ನೇ ಒರಗಿ ನಿಂತ ಒಂದು ಕ್ಷಣ ಕಣ್ಮುಚ್ಚಿ ದೃಢವಾಗಿ ಯೋಚಿಸಿದ, ಇದೆಲ್ಲಾ ತನಗೇನೂ ಮಾಡುವುದಿಲ್ಲ. ತನಗೆ ಇದರಲ್ಲಿ ನಂಬಿಕೆಯಿಲ್ಲ. ತಾನು ಯಾವುದಕ್ಕೂ ಹೆದರಬಾರದು. ನಿಧಾನವಾಗಿ ಕಾರಿನ ಬಾಗಿಲು ತೆಗೆದು ಒಳಗೆ ಕುಳಿತ. ಡ್ಯಾಶ್ ಬೋರ್ಡಿನ ಮೇಲೆ ಇದ್ದ ದೇವರ ಚಿತ್ರಕ್ಕೆ ಮನಸ್ಸಿನಲ್ಲೇ ನಮಿಸಿದ. ಸ್ವಿಚ್ ಕೀ ತಿರುಗಿಸಿ ಕಾರು ಮುಂದೆ ನುಗ್ಗಿಸಿದ. ವರದಾಚಾರಿ ಬೆರಗಾಗಿ ನೋಡುತ್ತಲೇ ಇದ್ದಂತೆ ಕಾರು ಚಲಿಸಿತು. ತನ್ನ ಮಂತ್ರ ಇವನ ಮೇಲೇಕೆ ನಡೆಯಲಿಲ್ಲ ? ಆಗಲಿ ನೋಡಿಕೊಳ್ಳುತ್ತೇನೆ.

ಕಾರು ಮನೆಯ ಮುಂದೆ ಬಂದು ನಿಲ್ಲುವವರೆಗೆ ವರ್ಧಮಾನನಿಗೆ ತಾನು ಹೇಗೆ ಕಾರು ಚಲಿಸಿದೆ, ಹೇಗೆ ಬಂದೆ ಎಂಬುದರ ಅರಿವೇ ಇದ್ದಂತಿರಲಿಲ್ಲ. ಮನೆಯ ಮುಂದೆ ಕಾರು ನಿಲ್ಲುತ್ತಲೇ ಬೆವರಿನಿಂದ ಒದ್ದೆಯಾಗಿದ್ದ ಮುಖ, ಕತ್ತು, ತಲೆ ಒರೆಸಿಕೊಂಡು, ವರದಾಚಾರಿಗೆ ಶಕ್ತಿಯಿದ್ದ, ಆದರೆ ಅದು ಮಾಟ ಮಂತ್ರವಲ್ಲ, ಸೈಕಿಕ್ ! ಮಾನಸಿಕ ತಜ್ಞರಂತೆ ಕೆಲವು ಶಕ್ತಿಗಳನ್ನು ಪಡೆದಿದ್ದ ಅಷ್ಟೆ, ಮೊದಲು ನೂಪುರಳನ್ನು ಕರೆತಂದು ಅನಂತರ ಡಾ॥ ನಚಿಕೇತ್‌ರ ಬಳಿಗೆ ಹೋಗಬೇಕು !

ಕಾರು ನಿಲ್ಲುತ್ತಲೇ ಲಲಿತಮ್ಮ ಒಳಗಿನಿಂದೋಡಿ ಬಂದರು.

"ನೂಪುರ ಬಂದ್ಳಾ?"

"ಇಲ್ಲ. ಕರ್ಕೊಂಡು ಬರ್ತೀನಿ, ಯಾವ್ದಾದ್ರೂ ದೇವರ ಕುಂಕುಮನೋ ವಿಭೂತೀನೊ ಇದ್ರೆ ಹಚ್ಚು!"

ವರ್ಧಮಾನ ಹೇಳುತ್ತಲೇ ಲಲಿತಮ್ಮ ಹೆದರಿ ಒಳಗಿನಿಂದ ಕುಂಕುಮ ತಂದು ಅವನ ಹಣೆಗೆ ಇಟ್ಟರು. 'ದೇವರೇ ನೀನು ನಿಜವಾಗಲೂ ಇರುವುದೇ ಆದರೆ, ದುಷ್ಟನಿವಾರಕನಾಗಿರುವುದಾದರೆ ನನಗಾಗಲೀ ನೂಪುರಳಿಗಾಗಲೀ ಏನೂ ಆಗದಿದರಲಿ!'

* * * *

ಸಂಜೀವಯ್ಯ, ಕಾವೇರಮ್ಮ ನೂಪುರನನ್ನು ಕರೆತಂದಾಗ ಅವಳು ಅತೀ ಮೌನದಿಂದಲೇ ಇದ್ದಳು. ಕಾವೇರಮ್ಮ ಒಂದೆರಡು ಬಾರಿ ಮಾತಾಡಿಸಲು ಯತ್ನಿಸಿದಾಗ ಅವಳು ಅವರತ್ತ ನೋಡಿದಳೇ ವಿನಾ ಉತ್ತರಿಸಲಿಲ್ಲ.

"ಮಗೂನ್ನ ಯಾಕೆ ಕೆಣಕಿ ಮಾತಾಡಿಸ್ತೀ? ಸುಮ್ಮನಿರಬಾರದೇ? ಸಂಜೀವಯ್ಯ ಪತ್ನಿಯನ್ನು ಗದರಿಸಿದರು. ಎಷ್ಟು ಹೊತ್ತಾದರೂ ಕುಳಿತಲ್ಲೇ ಕುಳಿತಿದ್ದ ಅವಳನ್ನು ಕಾವೇರಮ್ಮ ತಾವೇ ಎಬ್ಬಿಸಿ ಕರೆದೊಯ್ದು ಮಂಚದ ಮೇಲೆ ಮಲಗಿಸಿದರು.

"ಮಲ್ಕೋಮ್ಮಾ ಆಯಾಸ ಆಗಿರ್ಬೇದು!"

ಹಾಗೆ ಮಲಗಿದ ನೂಪುರ ಎಷ್ಟು ಹೊತ್ತಾದರೂ ಏಳದೇ ಇದ್ದಾಗ ತಾಯಿ ತಂದೆ ಇಬ್ಬರಿಗೂ ಯೋಚನೆಯಾಯಿತು.

"ಏನ್ರೀ ಇದು ಹೀಗೆ? ಇವ್ಳು ಕೂತ್ಕೊಂಡ್ರೆ ಕೂತ್ಕೊಂಡ್ಬಿಡ್ತಾಳೆ- ಮಲಗಿದ್ರೇ ಮಲಗೇಬಿಡ್ತಾಳೆ!"

"ಏನೋ ಅವನು ಅದೇನೋ ತಾಯಿತ ಕಟ್ಟಿದ್ದಾನೆ ಏನೋ ಮಂತ್ರ ಹಾಕಿದ್ದಾನೆ. ಒಂದೆರಡು ದಿನ ಹೋದ್ರೆ ಸರಿಹೋಗಬಹುದು" ಸಂಜೀವಯ್ಯ ಹೇಳಿದರೂ ಅವರಿಗೆ ಏನೋ ಅಳುಕಿತ್ತು. ವರ್ಧಮಾನ ವರದಾಚಾರಿಯ ಬಳಿಗೆ ಹೋಗಿ ಬಂದಮೇಲೆ ಕಾರಿನಲ್ಲಿ ನೂಪುರಳನ್ನು ನೋಡಲು ಬಂದಾಗ ಕತ್ತಲಾಗಿತ್ತು. ಆ ಹೊತ್ತಿಗೆ ನೂಪುರ ಮಲಗಿದ್ದಳು.

ಅಸಮಾಧಾನದಿಂದಲೇ ಅವನು ಅತ್ತೆ ಮಾವಂದಿರತ್ತ ನೋಡಿದ "ಇವ್ಳನ್ನ ಯಾಕೆ ಆ ವರದಾಚಾರಿ ಹತ್ರ ಕರ್ಕೊಂಡು ಹೋದ್ರಿ? ನಂಗೊಂದು ಮಾತು ಹೇಳಿ ಹೋಗ್ಬಾರ್ದಿತ್ತಾ? ಅವಳ್ಗೆ ಏನಾಗಿದೇಂತಾ ಕರ್ಕೊಂಡು ಹೋದ್ರಿ? ಈಗ್ತಾನೇ ಸರಿಹೋಗಿದ್ಲು!"

ಸಂಜೀವಯ್ಯ ಅಳಿಯನಿಗೆ ಸಮಾಧಾನ ಮಾಡುತ್ತಾ ಹೇಳಿದರು. "ಅವ್ಳು ರುದ್ರಣ್ಣ ಮೋಸ ಮಾಡಿದ್ದಾನೆ-ಅದೂ ಇದೂ ಅಂತ ಅಂದ ಅದಕ್ಕೆ ಕರ್ಕೊಂಡು ಹೋದೆ, ಈಚೀಚೆಗೆ ಯಾರೋ ಕರೀತಾ ಇದ್ದಾರೆ, ಕರೆದ ಹಾಗೆ ಕೇಳಿಸಿತು ಎಂತೆಲ್ಲಾ ಅನ್ತಾ ಇದ್ಲು ! ಅದಕ್ಕೆ ಏನೋ ಎತ್ತೋ ಅಂತ ಕರ್ಕೊಂಡು ಹೋದ್ವಿ"

"ಈ ವಾಮಾಚಾರಿಗಳು ಬಹಳ ಕೆಟ್ಟ ಜನ. ಒಳ್ಳೇದಕ್ಕೆ ಅವ್ರೇನೂ ಮಾಡೋದೇ ಇಲ್ಲ. ಎಲ್ರೂ ಕೆಟ್ಟೋರೇ. ತಮ್ಮ ಹೊಟ್ಟೆ ಪಾಡಿಗೆ ಮಾಡ್ತಾರೆ, ಹೋಗ್ಲಿ ನೂಪುರ ಏನು ಮಾಡ್ತಾ ಇದ್ದಾಳೆ."

"ಮಲ್ಗಿದ್ದಾಳೆ-ಹಳೇ ತಾಯಿತ ತೆಗೆದುಹಾಕಿ ಹೊಸದು ಕಟ್ಟಿದ್ದೇನೆ !"

ವರ್ಧಮಾನ ಒಳಗೆ ಹೋಗಿ ನೂಪುರಳನ್ನು ನೋಡಿದ. ಹಾಯಾಗಿ ಮಲಗಿದ್ದಳು. ಅವನಿಗೆ ಸಮಾಧಾನವಾಯಿತು. ಆದರೆ ತಾಯಿ ಹೇಳಿದಂತೆ ಅವಳನ್ನು ಇಲ್ಲಿ ಬಿಡಬಾರದು, ಮನೆಗೆ ಕರೆದೊಯ್ಯಬೇಕೆಂದುಕೊಂಡ.

"ಇವತ್ತು ಇಲ್ಲಿಲ್ರಿ, ನಾಳೆ ಬಂದು ನೂಪುರಳನ್ನು ಮನೆಗೆ ಕರ್ಕೊಂಡು ಹೋಗ್ತೀನಿ. ಅಮ್ಮ ಹೇಳಿದ್ದಾಳೆ"

"ಅದಕ್ಕೇನು ಅವಸರ, ಇನ್ನೂ ಒಂದ್ವಾರ, ಹದಿನೈದು ದಿನ ಇದ್ದು ಸುಧಾರಿಸಿಕೊಳ್ಳಲಿ. ಅಲ್ಲಿ ನಿಮ್ತಾಯಿ ಇವಳ್ನ ನೋಡ್ಕೊಳ್ತಾರೋ, ನಿಮ್ತಾತನ್ನ ನೋಡ್ಕೋತಾರೋ !" ಕಾವೇರಮ್ಮ ಹೇಳಿದಾಗ ವರ್ಧಮಾನ ಒಪ್ಪಲಿಲ್ಲ.

"ಹೇಗೋ ನಾವು ಮ್ಯಾನೇಜ್ ಮಾಡ್ಕೋತೀವಿ, ಇವ್ಳನ್ನ ನೋಡ್ಕೊಳ್ಳಲಿಕ್ಕೆ ಇಳ್ಳೇನು ಎಳೇ ಮಗೂನಾ. ಇಷ್ಟು ದಿನ ಇರಲಿಲ್ವಾ ?" ಸಂಜೀವಯ್ಯ, ಕಾವೇರಮ್ಮ ಅಳಿಯನ ಮಾತಿಗೆ ಎದುರಾಡುವಂತಿರಲಿಲ್ಲ.

* * * *

ನೂಪುರ ಯಾವಾಗಲೂ ಮಂಕಾಗಿರುತ್ತಿದ್ದಳೇ ವಿನಾ ಇತ್ಯಾದಿ ತೊಂದರೆಯೂ ಇರಲಿಲ್ಲ. ಎಲ್ಲೋ ಏನೊ ಯೋಚಿಸುತ್ತಾ ಕುಳಿತುಬಿಡುತ್ತಿದ್ದಳು ನಾಲ್ಕು ಸಲ ಮಾತಾಡಿಸಿದರೆ ಒಮ್ಮೆ ಉತ್ತರಿಸುತ್ತಿದ್ದಳು. ಲಲಿತಮ್ಮ ಸೊಸೆಯಲ್ಲಾದ ಬದಲಾವಣೆ ಗಮನಿಸಿದರು. ಬನಮ್ಮ ಹೋಗಿ ರಂಗಮ್ಮ ಮತ್ತೆ ಕೆಲಸಕ್ಕೆ ಬಂದುದರಿಂದ ಅವರಿಗೆ ಮನೆಯ ಜವಾಬ್ದಾರಿ ಅಷ್ಟಿರಲಿಲ್ಲ. ತಂದೆಯ ಶುಶ್ರೂಷೆ ಬಿಟ್ಟರೆ ಹೆಚ್ಚಿನ ಕೆಲಸವಿರಲಿಲ್ಲ. ಅವಳಿಗೆ ಮಂಕು

ಕವಿದಂತಿರುವುದು ಕಂಡು ವರ್ಧಮಾನನಿಗೆ ಯೋಚನೆಗಿಟ್ಟುಕೊಂಡಿತು. ಈ ಮಂತ್ರ ತಂತ್ರ ಯಾವುದೂ ಬೇಡ ಡಾ|| ನಚಿಕೇತ್ ಹೇಳಿದಂತೆ ಯಾರಾದರೂ ಮನಶ್ಶಾಸ್ತ್ರಜ್ಞರ ಬಳಿಗೆ ಕರೆದೊಯ್ದು ತೋರಿಸಬೇಕೆಂದುಕೊಂಡ.

ಡಾ|| ನಚಿಕೇತ್ ತಮಗೆ ತಿಳಿದ ಚಿದಂಬರ್ ಬಳಿಗೆ ಕರೆದೊಯ್ಯಬೇಕೆಂದು ನೂಪುರಳ ಬಗ್ಗೆ ನಾವು ಅವರೊಂದಿಗೆ ಮಾತನಾಡಿರುವುದಾಗಿಯೂ ಹೇಳಿದರು ಲಲಿತಮ್ಮನಿಗೂ ಒಂದು ಸಲ ಡಾಕ್ಟರು ಅವಳನ್ನು ಪರೀಕ್ಷಿಸಿ ನೋಡಲಿ ಎಂದಿತ್ತು. ಎಷ್ಟು ಹೊತ್ತಾದರೂ ತಲೆಕೂದಲು ಬಿರಿದುಕೊಂಡು ಕನ್ನಡಿಯ ಮುಂದೆ ಕುಳಿತ್ತಿದ್ದ ಅವಳಿಗೆ ತಾವೇ ಹೆರಳು ಹಾಕಿ, ಅಲಂಕರಿಸಿ ವರ್ಧಮಾನ ನೊಂದಿಗೆ ಕಳುಹಿಸಿಕೊಟ್ಟರು.

ಪಕ್ಕದಲ್ಲಿ ಕುಳಿತಿದ್ದ ನೂಪುರಳನ್ನು ವರ್ಧಮಾನ ನೋಡಿದ. ಅವಳ ಮಂಕು ಕವಿದ ಮುಖ ಬಿಟ್ಟರೆ ಎಲ್ಲಾ ಸರಿಯಾಗಿದೆ ಎನಿಸಿತು. ವರದಾಚಾರಿ ಕಟ್ಟಿದ್ದ ತಾಯಿತ ಕಿತ್ತೆಸೆಯಬೇಕೆಂದು ಎಷ್ಟೋ ಬಾರಿ ಅನಿಸಿತ್ತು. ಆದರೆ ಹಿಂದಿನ ಅನುಭವದಿಂದ ಮತ್ತೆ ನೂಪುರ ಹಾಗಾಡತೊಡಗಿದರೆ ಎಂಬ ಭಯ ದಿಂದ ಸುಮ್ಮನಾಗಿದ್ದ. ಡಾ|| ಚಿದಂಬರ್ ನೋಡಿಬಿಡಲಿ ಅನಂತರ ಅವರನ್ನು ಕೇಳಿ ತಾನು ತಾಯಿತ ತೆಗೆದುಬಿಡಬೇಕು ಎಂದುಕೊಂಡ.

ಡಾ|| ಚಿದಂಬರ್‌ರವರ ಕ್ಲಿನಿಕ್ ಜನನಿಬಿಡವಾದ ಹೊಸ ಪ್ರಶಾಂತಿ ನಗರದಲ್ಲಿತ್ತು. ಕೋಲು ಮುಖದ ಕಂದುಗಪ್ಪು ಬಣ್ಣದ ಕಣ್ಣುಗಳ ಸರಳ ವ್ಯಕ್ತಿಯನ್ನು ನೋಡಿದಾಗ ಅವರ ನಗುಮುಖ ಕಂಡಾಗ ಅವನಿಗೆ ಧೈರ್ಯ ಮೂಡಿತ್ತು.

"ಬನ್ನಿ....ಡಾ|| ನಚಿಕೇತ್ ಹೇಳಿದ್ರು....ಕಮ್ ಆನ್. ವಾಟ್ ಈಸ್ ರಾಂಗ್‌ವಿತ್ ಯೂ ಯಂಗ್ ಲೇಡಿ ?" ನೂಪುರನತ್ತ ನೋಡಿ ನಕ್ಕಾಗ ಅವಳು ಅವರನ್ನೇ ದುರುಗುಟ್ಟಿಕೊಂಡು ನೋಡಿದಳು.

"ಕೂತ್ಕೋ ಬಾಮ್ಮಾ" ಅವರೆಂದಾಗ ಅವಳು ಕೂಡಲಿಲ್ಲ. ಅವರೇ ಅವಳ ಬಳಿಗೆ ಬಂದು ಅವಳ ಕೈ ಹಿಡಿದು ತಿಮ್ಮಿದುರಿದ್ದ ಆರಾಮಾಸನದ ಮೇಲೆ ಕೂಡಿಸಿದರು. ಅವಳ ದೈಹಿಕ ತಪಾಸಣೆ ಮಾಡಿದರು, ಕಣ್ಣುಗಳಿಗೆ ಟಾರ್ಚಿನ ಬೆಳಕು ಬಿಟ್ಟು ನೋಡಿದರು.

"ನೀವೇನೂ ಹೆದರಬೇಕಾಗಿಲ್ಲ. ಪ್ರತಿದಿನ ಅರ್ಧಗಂಟೆಯ ಕಾಲ ನನ್ನ ಬಳಿಗೆ ಕರೆತನ್ನಿ. ಇಂತಹ ಅನೇಕ ಕೇಸುಗಳ್ನ ನಾನು ನೋಡಿದ್ದೀನಿ. ಇಟ್ಸ್ ಫಿಯರ್ ಎಲ್ಲಾ ಹೆದರಿಕೆ ಭಯದಿಂದ ಅಷ್ಟೆ ಹೀಗಾಗಿರೋದೂ !"

ವರ್ಧಮಾನನ ತಲೆಯ ತುಂಬಾ ವರದಾಚಾರಿ ಹೇಳಿದ ಮಾತೇ ತುಂಬಿತ್ತು. ನೂಪುರ ಹೆಸರಿಗೆ ಕೈಯಲ್ಲಿ ಪುಸ್ತಕ ಹಿಡಿದು ಕುಳಿತ್ತಿದ್ದರೂ ಎತ್ತಲೊ ನೋಡುತ್ತಿದಳು. ಡಾ|| ಚಿದಂಬರ್ ಇವಳನ್ನು ಸರಿಪಡಿಸುವುದಾಗಿ ಭರವಸೆ ಯಿತ್ತಿದ್ದಾರೆ. ಅಲ್ಲಿ ವರದಾಚಾರಿ ಇದ್ದ ತಾಯಿತ ಕಿತ್ತು ಹಾಕಿ, ಬೇರೆ ತಾಯಿತ ಹಾಕಿದ್ದಾನೆ. ಒಂದು ವೇಳೆ ವರದಾಚಾರಿ ಹೇಳಿದುದು ನಿಜವಾಗಿ ತನ್ನ ಮಲತಾಯಿ ಗಂಗೆಯೇನಾದರೂ ನೂಪುರಳನ್ನು ಆಕ್ರಮಿಸಿಕೊಂಡಿರಬಹುದೇ? ಸಭಾಪತಿ ಶಾಸ್ತ್ರಿಗಳು ಬಂದು ನವಗ್ರಹ ಶಾಂತಿ ಮಾಡಿ, ತಾಯಿತ ಕಟ್ಟಿದ ಮೇಲೆ ಮುದ್ದಪ್ಪಯ್ಯ ಕಾರಿನಲ್ಲಿ ಅವಳನ್ನು ಕರೆದೊಯ್ಯಲಾಗಿರಲಿಲ್ಲ.

ರುದ್ರಣ್ಣ ಬಂದು ಉಚ್ಚಾಟನೆ ಮಾಡುವೆನೆಂದು ಹೇಳಿ, ಹಣ ಒಡವೆ ಕೊಂಡೊಯ್ದಾಗ ಒಂದಿಷ್ಟು ದಿನ ಹಾಯಾಗಿದ್ದಳಷ್ಟೆ. ರುದ್ರಣ್ಣ ಸತ್ತಮೇಲೆ ಅವನ ಶಕ್ತಿಯೂ ಅಡಗಿತು ಎಂದು ಕೆಲವರು ಹೇಳಿದ್ದರು.

ಹಾಗೇನಾದರೂ ಆಯಿತೇ. ತಾತ ಬರೆದಿದ್ದ ಮೈಲಿಕಲ್ಲು, ಹುಣಿಸೇಮರ, ಮಾವಿನತೋಪು ಇವುಗಳನ್ನು ನಾನು ನೋಡಿ ಬಂದಿಲ್ಲ. ಒಮ್ಮೆ ಹೋಗಿ ನೋಡಿ ಬಂದುಬಿಡಬೇಕು. ಅಲ್ಲೇನಾದರೂ ತನಗೆ ಸುಳಿವು ಸಿಗಬಹುದು. ದಡಕ್ಕನೆದ್ದು ತಾತ ಮಲಗಿದ್ದ ರೂಮಿಗೆ ಹೋದ. ಜೇಬಿನಿಂದ ಕಾಗದದ ಚೂರು ತೆಗೆದು ಅದರ ಮೇಲೆ ಡೈರಿಯಲ್ಲಿದ್ದ ಮೈಲಿಗಲ್ಲು, ಹುಣಿಸೇ ಮರ, ಮಾವಿನತೋಪು ಎಂದು ಬರೆದು ರಾಮಲಿಂಗಯ್ಯನವರ ಬಳಿಗೆ ಬಂದ. ಲಲಿತಮ್ಮ ಪ್ರಶ್ನಾರ್ಥಕವಾಗಿ ನೋಡಿದರು. "ಅಮ್ಮಾ, ಸ್ವಲ್ಪ ಇರು, ತಾತನ್ನ ಒಂದ್ಮಾತು ಕೇಳ್ಬೇಕು!"

ರಾಮಲಿಂಗಯ್ಯನವರ ಮುಂದೆ ಬರೆದಿದ್ದ ಕಾಗದದ ಚೂರು ಹಿಡಿದ, ಅವರ ಮಂಪರು ತುಂಬಿದ ಕಣ್ಣುಗಳಿಗೆ ಮೊದಲಿಗೆ ಅದೇನೆಂದು ಕಾಣಲಿಲ್ಲ. ವರ್ಧಮಾನ ಮತ್ತೆ ಅದನ್ನೇ ಒತ್ತಿಬರೆದು ತೋರಿದ. ರಾಮಲಿಂಗಯ್ಯನವರ ಮುಖ ಕೆಂಪಗಾಯಿತು, ಬಾಯಿ ಸೊಟ್ಟಗಾಯಿತು, ನಾಲಿಗೆ ಹೊರಳಿಸಿ ಮಾತನಾಡಲು ಯತ್ನಿಸಿ ಸೋತು ಕೆಮ್ಮಲಾರಂಭಿಸಿದರು.

"ಅದಕ್ಕೆ ಹಿಂಸೆ ಮಾಡ್ಬೇಡಾ ಹೋಗೋ, ಅವರ ಪಾಡಿಗೆ ಅವರ್ನ ಬಿಟ್ಬಿಡು!"

ಲಲಿತಮ್ಮ ಆತಂಕದಿಂದ ನೀರು ಕುಡಿಸುತ್ತಾ ಹೇಳಿದಳು.

'ಮೊದಲೇ ವಯಸ್ಸಾದವರು, ಕೆಮ್ಮಿ ಗಂಟಲು ಸಿಕ್ಕಿಕೊಂಡು ಏನಾದರೂ ಆದರೇನು ಗತಿ!' ವರ್ಧಮಾನ ತಾಯಿಯನ್ನು ತಡೆದ.

"ಇರಮ್ಮ ತಾತ ಏನೋ ಹೇಳೋಕ್ಕೆ ಪ್ರಯತ್ನ ಮಾಡ್ತಾ ಇದ್ದಾರೆ, ಆಗ್ತಾ ಇಲ್ಲ. ಇದ್ರಲ್ಲಿ ಏನೋ ಗುಟ್ಟು ಅಡಗಿರಬೇಕು !"

ರಾಮಲಿಂಗಯ್ಯನವರು ಮತ್ತೆ ಏನೋ ಹೇಳಲು ಯತ್ನಿಸಿದರು. ಕಣ್ಣುಗಳಲ್ಲಿ ನೀರುಕ್ಕಿತು. ಅವರ ಸಂಕಟ ನೋಡದೆ ವರ್ಧಮಾನ ಅವರ ಕೈ ತಟ್ಟಿದ.

"ನೀನೇನೂ ಹೇಳ್ಬೇಡಾ ತಾತ, ನಾನೇ ಹೋಗಿ ಎಲ್ಲಾ ನೋಡಿ ಕೊಂಡು ಬರ್ತೀನಿ !"

ರಾಮಲಿಂಗಯ್ಯ ಹೆದರಿಕೆಯಿಂದ ಕಣ್ಣರಳಿಸಿ ಬೇಡವೆನ್ನುವಂತೆ ತಲೆಯಾಡಿಸಿದರು.

"ಅಪ್ಪಯ್ಯಂಗೆ ಯಾಕೆ ಹಿಂಸೆ ಮಾಡ್ತೀಯೋ. ಅದೇನು ಬೇಕೋ ಮಾಡ್ಕೊಹೋಗು, ಅದೇನಿದ್ರೂ ಸಭಾಪತಿ ಶಾಸ್ತ್ರಿಗಳ್ನ ಕೇಳು. ಅವರಿಗೆ ಅದೆಲ್ಲಾ ಗೊತ್ತಿರುತ್ತೆ !" ಲಲಿತಮ್ಮ ತಂದೆಯ ಕಷ್ಟ ನೋಡಲಾರದೆ ಹೇಳಿದರು. ವರ್ಧಮಾನ ಮೆಲ್ಲನೆ ಅಲ್ಲಿಂದ ಎದ್ದು ಹೊರಗೆ ಬಂದಾಗ ನೂಪುರ ತನ್ನಷ್ಟಕ್ಕೆ ತಾನು ನಗುತ್ತಿದ್ದಳು.

"ನೂಪುರ ಯಾಕೆ ನಗ್ತಾ ಇದ್ದೀ ?"

ಅವಳು ಜೋರಾಗಿ ನಕ್ಕಳು. ಅವಳನ್ನು ಹಿಡಿದಲುಗಿಸಿ ಕೇಳಿದ. 'ಯಾಕೆ ಹಾಗೆ ನಗ್ತೀ ?'

"ಕೋಳಿ ಕತ್ತು ಹಿಸುಕಿಬಿಟ್ರು ಅದಕ್ಕೆ !"

ಅವಳ ನಗು ತಟ್ಟನೆ ನಿಂತಿತು "ನಂಗೆ ತಿನ್ನೋಕೆ ಕೋಳಿಬೇಕು, ಕುಡಿಯೋಕೆ ಅದರ ರಕ್ತಬೇಕು !" ವರ್ಧಮಾನ ನೋಡುತ್ತಿರುವಂತೆಯೇ ಅವಳ ಮುಖ ಗಡಸಾಯಿತು. 'ರಕ್ತ ಬೇಕು ಹಸಿ ಮಾಂಸ ಬೇಕು !' ಅವಳು ಅವನ ಕೈ ಕಿತ್ತೊಗೆದಳು. ಅವಳ ಕೈಯಲ್ಲಿದ್ದ ಬಲ ಕಂಡು ಅವನು ಬೆಚ್ಚಿದ. ಅವಳ ದೃಷ್ಟಿ ಕ್ರೂರವಾಗಿ ಅವನ ಮೇಲೆಗರಿದಳು. ಅವನು ಕೂಡಲೇ ತಪ್ಪಿಸಿಕೊಳ್ಳದಿದ್ದರೆ ಅವನನ್ನು ಕೆಳಗೆ ಕೆಡವಿ ಏನು ಮಾಡುತ್ತಿದ್ದಳೋ ! ಕೈಗೆ ಸಿಗದೇ ಬಾಗಿಲತ್ತ ಧಾವಿಸಿ ಹೊರಬಂದು ಬಾಗಿಲು ಭದ್ರಪಡಿಸಿದ. ಅವನೆದೆ ಹಾರುತ್ತಿತ್ತು. ಒಳಗಿನಿಂದ ಚಿತ್ರ ವಿಚಿತ್ರವಾದ ಶಬ್ದಗಳು ಕೇಳಿ ಬಂದರೂ ಸಾಮಾನುಗಳು ಕೆಳಗೆ ಬೀಳುವ ಸದ್ದು ಕೇಳಿತು. ಒಳಗೆ ಇಣುಕಿ ನೋಡಲು ಹೆದರಿದ. ತಾಯಿಯನ್ನು ಕರೆಯಬೇಕೆಂದು ಕೊಂಡವನು ತಡೆದ. ಇದೆಲ್ಲಾ ವರದಾಚಾರಿಯ ಕೈವಾಡವಿರಬೇಕು !

ತಾನು ಅವನನ್ನು ಆದಷ್ಟು ಬೇಗ ತಡೆಯಬೇಕು ! ಇದ್ದಕ್ಕಿದ್ದ ಹಾಗೆ ಸದ್ದು ನಿಂತಾಗ, ಬಾಗಿಲ ಬೀಗದ ಸಂದಿನಿಂದ ಇಣುಕಿದ. ಅವನ ಮುಖ ಒಳುಪೇರಿ ಬಿವರಿಳಿಯುತ್ತಿತ್ತು. ನೂಪುರ ಪುಸ್ತಕದ ಹಾಳೆಗಳನ್ನು ಕಿತ್ತು ಕಿತ್ತು ತಿನ್ನುತ್ತಿದ್ದಳು. ಅವನಿಗೆ ದಿಕ್ಕೇ ತೋಚದಾಯಿತು. ಬಾಗಿಲಿನ ಬೀಗ ಬಡಿದು ತಾಯಿಯತ್ತ ನಡೆದ. ಅವನು ಹೇಳಿದುದನ್ನು ಕೇಳಿ ಲಲಿತಮ್ಮನ ಮುಖ ಗಂಭೀರವಾಯಿತು.

"ನೀನು ಹೇಳಿದ ಹಾಗೆ ವರದಾಚಾರಿಯ ಕೈವಾಡ ಇರ್ಬೇಕು. ಅವನಿಗೆ ನಮ್ಮ ಮನೆಯವರ ಮೇಲೆ ತುಂಬಾ ರೋಷ ಇದೆ. ಸುಲಭವಾಗಿ ನೂಪುರ ಅವನ ಕೈಗೆ ಸಿಕ್ಕಿಬಿದ್ದಳು. ಏನು ಮಾಡ್ತಾನೋ ಏನೋ ! ಅವಳ ತಂದೆ ತಾಯಿ ಬುದ್ಧಿ ಇಲ್ದೇ ಅವನ ಹತ್ತಿರಾನೇ ಕರ್ಕೊಂಡು ಹೋಗಿದ್ದಾರೆ."

ಯಾವುದಕ್ಕೂ ತಂದೆಯನ್ನು ಒಂದು ಮಾತು ಕೇಳಲೆಂದುಕೊಳ್ಳುವ ಎಂದರೆ ಅವರಿಗೆ ಬಾಯಿ, ಕೈ ಕಾಲು ಬಿದ್ದುಹೋಗಿದೆ ! ಲಲಿತಮ್ಮನಿಗೆ ಎಲ್ಲರಿಗಿಂತ ಹೆಚ್ಚಿನ ನಂಬಿಕೆಯಿದ್ದುದೆಂದರೆ ಸಭಾಪತಿ ಶಾಸ್ತ್ರಿಗಳ ಶಕ್ತಿ. ಅವರು ದೈವಭಕ್ತರು. ಏನು ಮಾಡಿದರೂ ಸಾಂಗಿತವಾಗಿ ಮಾಡುವವರು ಒಬ್ಬರಿಗೆ ಕೆಟ್ಟದ್ದು ಬಯಸಿದವರಲ್ಲ. ಅವರು ತಾಯಿತ ಕಟ್ಟಿದ ಮೇಲೆ ನೂಪುರ ಎಷ್ಟೋ ಸುಧಾರಿಸಿದ್ದಳು.

"ನೀನು ಯಾವ ಡಾಕ್ಟರಿಗಾದ್ರೂ ತೋರಿಸಿಕೋ, ಆದ್ರೆ ನನ್ನ ಮಾತು ನಡೆಸಿಕೊಡು, ಸಭಾಪತಿ ಶಾಸ್ತ್ರಿಗಳ ಮನೆಗೆ ಹೋಗಿ ಅವರನ್ನು ಬರಹೇಳು, ಅವರು ಬಂದರೆ ನಂಗೆ ಏನೋ ಒಂದು ತರಹ ಧೈರ್ಯಬರುತ್ತೆ."

ವರ್ಧಮಾನ ತಲೆಯ ಮೇಲೆ ಕೈಯ್ಯಾಡಿಸಿಕೊಂಡ. "ಯಾಕಮ್ಮ ನಂಗೆ ಮದ್ವೆ ಮಾಡೋಕೆ ಹೋದೆ. ನಾನು ಹಾಯಾಗಿದ್ದೆ, ಮದ್ವೆ ಆದಾಗ್ಲಿಂದ ಇದೇ ಆಗೋಯ್ತು !"

"ಏನೋ ನೀನು ಚೆನ್ನಾಗಿರ್ಲಿ ಅಂತ ಮಾಡ್ದೆ. ಪಾಪ ಹುಡುಗಿ ಏನಾಗಿದ್ಲು ? ಏನೋ ನಮ್ಮ ಕರ್ಮ ! ಮೊದಲು ಸಭಾಪತಿ ಶಾಸ್ತ್ರಿಗಳ್ನ ಕರ್ಕೊಂಡು ಬಾ"

ವರ್ಧಮಾನ ತಾಯಿಯ ಕೈಗೆ ರೂಮಿನ ಬೀಗದ ಕೈ ಕೊಟ್ಟ.

"ಇದು ನಿನ್ನ ಹತ್ತಿರಾನೇ ಇರ್ಲಿ. ನಾನು ಸಭಾಪತಿ ಶಾಸ್ತ್ರಿಗಳಿಗೆ ಹೇಳಿ ಡಾ!! ಚಿದಂಬರ್ ಹತ್ತಿರ ಹೋಗಿ ಬರ್ತೀನಿ"

ವರ್ಧಮಾನನಿಂದ ವಿಷಯ ಕೇಳಿದ ಸಭಾಪತಿ ಶಾಸ್ತ್ರಿಗಳ ಮುಖ ಗಂಭೀರ

ವಾಯಿತು, "ಅದಕ್ಕೇನು ಬಿಡಿ. ಸಾಂಗೋಪಾಂಗವಾಗಿ ನವಗ್ರಹ ಶಾಂತಿ ಮಾಡಿಬಿಡೋಣ. ಒಂದು ತಿಂಗಳು ಲಲಿತ ಸಹಸ್ರನಾಮ ಪಠಣ ಮಾಡೋಣ. ಆ ತಾಯೀನ್ನ ನಂಬಿ ಕೆಟ್ಟವರಿಲ್ಲ. ಎಲ್ಲಾ ಒಳ್ಳೇದಾಗುತ್ತೆ, ಹಾಗೇ ಹುಡುಗಿ ಹೆಸರಿನಲ್ಲಿ ಎಳ್ಳಿನ ದೀಪ ಹಚ್ಚಿಸೋಣ."

"ಅದೇನು ಬೇಕೋ ಅಮ್ಮನನ್ನು ಕೇಳಿ, ನನಗೆ ಅದ್ಯಾವುದರ ಮೇಲೆಯೂ ನಂಬಿಕೆಯಿಲ್ಲ. ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದ ಹಾಗೆನ್ನಿಸುತ್ತೆ. ಅವಳಿಗೆ ಮೈ ಮನಸ್ಸಿನಲ್ಲಿ ಏನಿದ್ಯೋ ! ಅನ್ನ ವಾಸಿಮಾಡ್ದೆ ಪೂಜೆ ಪುನಸ್ಕಾರ. ಯಂತ್ರ ಮಂತ್ರ ಏನು ಮಾಡಕ್ಕಾಗುತ್ತೆ !"

"ಹಾಗನ್ನಬಾರದಯ್ಯ, ದೇವರಲ್ಲಿ ನಂಬಿಕೆಯಿಡದಿದ್ದರೆ ಹೇಗೆ ? ಎಲ್ಲಾ ಅವನಿಚ್ಛೆ, ಅವನ ಮೇಲೆ ಭಾರ ಹಾಕಿ ನಾವು ಯಾವ ಕೆಲಸ ಮಾಡಿದರೂ ಒಳ್ಳೆಯದಾಗುತ್ತೆ. ನಿನ್ನ ಚಿಕಿತ್ಸೆ ನೀನು ಕೊಡಿಸು, ನಮಗೆ ತೋರಿದಂತೆ ನಾವು ಪೂಜೆ ಮಾಡಿಸುತ್ತೇವೆ. ಹೇಗೋ ಅಂತೂ ಹುಡುಗಿಗೆ ಒಳ್ಳೆಯಾದಾದರೆ ಸಾಕು !" ಅವನ ಸ್ವಭಾವವನ್ನರಿತ ಸಭಾಪತಿ ಶಾಸ್ತ್ರಿಗಳು ಹೇಳಿದರು.

ಡಾ॥ ಚಿದಂಬರ್ ವರ್ಧಮಾನ ಹೇಳಿದುದನ್ನೆಲ್ಲಾ ಕೇಳಿದರು.

"ಮಿಸ್ಟರ್ ವರ್ಧಮಾನ. ಅವರನ್ನ ಮನೆಯಲ್ಲಿಟ್ಟುಕೊಳ್ಳುವುದರ ಬದಲು ನನ್ನ ನರ್ಸಿಂಗ್ ಹೋಂಗೆ ಅಡ್ಮಿಟ್ ಮಾಡಿಬಿಡಿ, ನನ್ನ ಅಬ್ಸರ್ವೇಷನಿಗೆ ಸರಿಹೋಗುತ್ತೆ. ತಕ್ಷಣ ಏನಾದ್ರೂ ಟ್ರೀಟ್‌ಮೆಂಟ್ ಕೊಡೋಕ್ಕೂ ಸರಿ ಹೋಗುತ್ತೆ !"

"ನಮ್ತಾಯಿ ಒಪ್ತಾರೋ ಇಲ್ವೋ ! ಅವರಿಗೆ ಮನೆ ಬಿಟ್ಟು ನರ್ಸಿಂಗ್ ಹೋಂಗೆ ಬಂದು ಹೋಗಿ ಮಾಡೋಕ್ಕಾಗಲ್ಲ. ನಮ್ತಾತ ಬೆಡ್‌ರೆಸ್ಟ್‌ನಲ್ಲಿದ್ದಾರೆ."

"ಯಾರೂ ಬರೋದು ಬೇಡ, ನೀವು ಬಂದು ಹೋಗ್ತಿರ್ತೀರಲ್ಲ. ನಾವೇ ಇಲ್ಲಿ ಊಟ, ತಿಂಡಿ ಎಲ್ಲಾ ನೋಡ್ಕೋತೀವಿ. ನನ್ನ ಹತ್ತಿರ ಇರೋ ಪೇಶೆಂಟ್ಸ್ ಎಷ್ಟೋ ಜನ ಅಸೈಲಮ್‌ನಲ್ಲಿರಬೇಕಾದವರು. ಅಲ್ಲಿ ನೂರಾರು ರೋಗಿಗಳೊಡನೆ ಇದ್ದರೆ, ಪರ್ಸನಲ್ ಅಟೆನ್‌ಷನ್ ಸಿಕ್ಕೋದು ಕಷ್ಟ ಆಗ್ಬೋದೂ, ಒಬ್ಬೊಬ್ಬ ಪೇಶೆಂಟ್‌ಗೂ ಒಬ್ಬೊಬ್ಬ ನರ್ಸ್ ಆಯಾ ಇದ್ದಾರೆ ಇಲ್ಲಿ. ಏನಿದ್ರೂ ಎಲ್ಲದಕ್ಕೂ ಚಾರ್ಜ್ ಮಾಡ್ತೀವಿ ಅಷ್ಟೆ"

"ಎಷ್ಟಾದ್ರೂ ಚಾರ್ಜ್ ಮಾಡಿ. ಖರ್ಚಿನ ಯೋಚನೆ ನನಗಿಲ್ಲ. ನನಗೆ ಇರೋ ಯೋಚ್ನೆ ಅಂದ್ರೆ ನೂಪುರ ಸರಿಹೋಗ್ತಾಳೋ ಇಲ್ವೋಂತಾ !"

"ಲೆಟ್ ಅಸ್ ಸ್ಟಡಿ ಹರ್ ! ನೋಡಿ ಹೇಳ್ತೀನಿ. ವಾಸಿ ಆಗೇ ಆಗುತ್ತೆ, ಆದ್ರೆ ಎಷ್ಟು ಬೇಗ ಅನ್ನೋದು ನೋಡ್ಬೇಕೂ !"

"ಅವ್ಳ ತಂದೆ ತಾಯಿಗೂ ತಿಳಿಸ್ಬಿಟ್ಟು ಅವಳ್ನ ಕರ್ಕೊಂಡ್ಬಂದು ಅಡ್ಮಿಟ್ ಮಾಡ್ತೀನಿ" ವರ್ಧಮಾನ ಹೇಳಿದ: "ವಾರ್ಡ್‌ಬುಕ್ ಮಾಡಿಬಿಡ್ತೀನಿ, ಅಡ್ವಾನ್ಸ್ ಕೂಡ ಕೊಟ್ಬಿಡ್ತೀನಿ" ವರ್ಧಮಾನ ವಾರ್ಡಿಗೆ ದುಡ್ಡು ಕಟ್ಟಿ ಅಲ್ಲಿಂದ ಹೊರಟ.

* * * *

ನೂಪುರನ ಮುಖ ವಿಕಾರವಾಗಿತ್ತು. ಇದ್ದಿಲಿನ ಕರಿಯ ಬಣ್ಣ ಮುಖಕ್ಕೆ ಕುಂಕುಮ; ವಿಭೂತಿ ರಕ್ತ ಮಾಂಸ ತಿಂದ ಬಾಯಿ ! ಅವಳು ಕುಳಿತಲ್ಲೇ ಕುಳಿತಿದ್ದರಿಂದ ವರದಾಚಾರಿ ಬೆಂಕಿಯಿಂದ ನಾಲ್ಕು ಇದ್ದಿಲಿನ ಚೂರು ತೆಗೆದು ಉರಿ ಕೆಂಡಮಾಡಿದ.

"ಕೊನೇ ಸಲ ಹೇಳ್ತಾ ಇದ್ದೀನಿ ಬರ್ತೀಯೋ ಇಲ್ವೋ !"

ನೂಪುರ, ಕುಳಿತಲ್ಲೇ ಕುಳಿತಿದ್ದಳು. ವರದಾಚಾರಿ ಕೆಂಡಕ್ಕೆ ಮೆಣಸಿನ ಕಾಯಿಯ ಪುಡಿ ಹಾಕಿದ. ಎಲ್ಲರೂ ಕೆಮ್ಮುತ್ತಾ ದೂರ ದೂರ ಹೋದರು. ವರದಾಚಾರಿ ಬೇವಿನ ಬರಲು ತೆಗೆದುಕೊಂಡ. ನೂಪುರ ಘಾಟಿಗೆ ಕೆಮ್ಮು ತಡೆಯಲಾರದೇ ಎದ್ದು ಓಡಲು ಯತ್ನಿಸಿದಾಗ ಅವನು ಅವಳನ್ನು ಎಳೆದು ಕೂಡಿಸಿಕೊಂಡು ಅವಳ ಮುಖವನ್ನು ಮೆಣಸಿನಕಾಯಿ ಘಾಟಿಗೆ ಹಿಡಿದ. ಅವಳು ಕೊಸರಾಡಿ ಅವನ ಹಿಡಿತದಿಂದ ಪಾರಾಗಲು ಯತ್ನಿಸಿದಷ್ಟೂ ಅವಳನ್ನು ಮತ್ತೂ ಬಿಗಿಯಾಗಿ ಹಿಡಿದ. ಅವಳು ಕೆಮ್ಮುತ್ತಾ ಒದ್ದಾಡುತ್ತಾ ಕೊನೆಗೊಮ್ಮೆ ಅವನನ್ನು ಝಾಡಿಸಿ ದೂರಸರಿಸಿ ಎದ್ದು ಓಡಲೆತ್ನಿಸಿದಾಗ ವರದಾಚಾರಿ ಅವಳ ಹಿಂದೆಯೇ ಓಡಿ ಹಿಡಿದುಕೊಂಡ.

"ಆಟ ಆಡಿಸ್ತೀಯಾ ? ನನ್ಗೇ ಆಟ ಕಲಿಸ್ತೀಯಾ ?" ಬೇವಿನ ಬರಲಿನಿಂದ ಹೊಡೆಯತೊಡಗಿದ. ಘಾಟಿನಿಂದ ಬಂದಿದ್ದ ಕೆಮ್ಮು, ಏಟಿನ ಹೊಡೆತ. ಹಾಕಿದ್ದ ಬರೆಯ ಉರಿಯಿಂದ ನೂಪುರ ಸೋತು ಸೊರಗಿದಳು. ಅಲ್ಲಿಯೇ ಕುಸಿದಳು.

"ನೀರೂ ...!" ಒಣಗಿದ್ದ ನಾಲಿಗೆ ಚಾಚಿದಳು.

"ಹೊರಗೆ ಬರ್ತೀಯಾ ? ಬಂದ್ರೆ ಕೊಡ್ತೀನಿ" ವರದಾಚಾರಿ ಹೇಳಿದ.

"ಬಾಯಾರಿಕೆ ನೀರೂ....!" ನೂಪುರಳ ದನಿ ಆಗಲೇ ಕೆಟ್ಟಿತ್ತು. ಗೊರಗೊರ ದನಿ ಪ್ರಾರಂಭವಾಯಿತು.

"ಬರ್ತೀಯಾ ?" ವರದಾಚಾರಿ ಕೇಳಿದ.

"ಬರ್ತೀನಿ !" ನೂಪುರ ಉಸಿರಾಡಲೇ ಒದ್ದಾಡುತ್ತಿದ್ದಳು.

"ಈ ನಿಂಬೆ ಹಣ್ಣಿಗೆ ಬಾ .."

"ಬರ್ತೀನಿ !" ನೂಪುರಳಿಗೆ ಪ್ರಜ್ಞೆ ತಪ್ಪಿತು. ವರದಾಚಾರಿ ಕೈಯಲ್ಲಿದ್ದ ನಿಂಬೆ ಹಣ್ಣನ್ನು ಅವಳಿಗೆ ನೀವಾಳಿಸಿ ಕೈಯಲ್ಲೇ ಹಿಂಡಿ, ಹಿಸುಕಿದ.

"ಈಗ ನೀರು ಕೊಡಿ ಕುಡೀಲಿ –ನಿಂಬೆ ಹಣ್ಣಲ್ಲಿ ಹೊಸಕಿ ಹಾಕ್ಬಿಟ್ಟಿದ್ದೀನಿ, ಇನ್ನು ಸರಿಹೋಗ್ತಾಳೆ !" ವರದಾಚಾರಿ ತನ್ನ ಸಾಮಾನುಗಳನ್ನು ಗಂಟು ಕಟ್ಟತೊಡಗಿದ. ಮಗಳು ಅನುಭವಿಸಿದ ಘೋರ ಶಿಕ್ಷೆ ಕಣ್ಣಾರೆ ಕಂಡು ಕಾವೇರಮ್ಮ ಸಂಜೀವಯ್ಯ ಭಯದಿಂದ ತತ್ತರಿಸಿಹೋಗಿದ್ದರು. ವರದಾಚಾರಿ ದೆವ್ವಬಿಡಿಸುವ ನೆಪದಲ್ಲಿ ಮಗಳ ಜೀವವನ್ನೇ ತೆಗೆದುಬಿಟ್ಟರೆ ! ಅವನು ಹೊರಡಲು ಸಂಜೀವಯ್ಯ ಅವನ ಕೈಗೆ ಮತ್ತಿಷ್ಟು ಹಣ ಹಾಕಿದರು,

"ಹೋಗಪ್ಪಾ !"

"ಮತ್ತೆ ಏನಾದ್ರೂ ತೊಂದ್ರೆ ಆದರೆ ನಂಗೆ ಹೇಳಿ ಕಳ್ಸಿ !" ವರದಾಚಾರಿ ದುಡ್ಡು ಜೇಬಿಗೆ ಬಿಟ್ಟು, ನಡುರಾತ್ರಿಯ ಮಬ್ಬು ಕತ್ತಲಲ್ಲಿ ಮರೆಯಾದ.

ಕಾವೇರಮ್ಮ ನೂಪುರಳ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ತಣ್ಣೀರಿನಿಂದ ಮುಖ ಒರೆಸಿದರು. ಅವಳ ಬಾಯಿಗೆ ಕುಡಿಯಲು ನೀರು ಹಾಕಿದರು, ಗಂಟಲಿಗೆ ತಣ್ಣಗಿನ ದ್ರವ ಬೀಳುತ್ತಲೇ ನೂಪುರ ಕಣ್ತೆರೆದಳು.

"ಅಮ್ಮಾ, ನಂಗೆ ಸಂಕಟ ಆಗ್ತಾ ಇದೆ, ನನ್ನ ಕೈಲಿ ತಡೊಯೋಕ್ಕಾಗೋಲ್ಲ !"

"ಅದೆಲ್ಲಾ ಹೊರಟುಹೋಗುತ್ತಮ್ಮಾ, ತಾಳು ಹಾಲು ತಂದ್ಕೊಡ್ತೀನಿ. ಕುಡಿ, ಸಂಕಟ ಕಡಿಮೆ ಆಗುತ್ತೆ !"

ಕಾವೇರಮ್ಮ ಮಗಳಿಗೆ ಹಾಲು ತಂದಿತ್ತರು. ಬರೆ ಹಾಕಿದ ಭಾಗ ಕೆಂಪಗಾಗಿತ್ತು. ಅದಕ್ಕೆ ಜೇನು ತುಪ್ಪ ಸವರಿದರು. ಸೋರಗಿ ಸೊಪ್ಪಾಗಿದ್ದ ಮಗಳ ತಲೆ ನೇವರಿಸಿದರು. ಇನ್ನು ಮುಂದೆ ತಾವು ಯಾವ ಮಾಮದೇವಿಯ ಕೈಗೂ ಮಗಳನ್ನೊಪ್ಪಿಸಬಾರದು. ಅವಳ ಹಣೆಯ ಬರಹವಿದ್ದಂತಾಗಲಿ ! ನಾಳೆಯೊಳಗೆ ಅವಳನ್ನು ಸುಧಾರಿಸಬೇಕು. ನರ್ಸಿಂಗ್ ಹೋಂನಲ್ಲಿ ಸಾವಿರಾರು ರೂಪಾಯಿ ಖರ್ಚುಮಾಡಿ ವಾಸಿ ಮಾಡಲು ಸಿದ್ಧರಿರಬೇಕಾದಲ್ಲಿ ಅಳಿಯ ನಾವು

ಆ ವಿಷಯಕ್ಕಾಗಿ ಮಗಳನ್ನೇ ಇಂತಹ ಶಿಕ್ಷೆಗೊಳಪಡಿಸಿಬಿಟ್ಟೆವು ! ಮೌನವಾಗಿ ಕಣ್ಣೀರಿಟ್ಟರು. ಬೆಳಗಿನ ಝಾವದ ಹೊತ್ತಿಗೆ ನೂಪುರ ಕೊಂಚ ಸುಧಾರಿಸಿ ಕೊಂಡು ನಿದ್ರೆಹೋದಳು. ಸಂಜೀವಯ್ಯ ಕಾವೇರಮ್ಮ ಅವಳನ್ನು ಅರೆ ಕ್ಷಣವೂ ಬಿಟ್ಟು ಹೋಗದೇ ನೋಡಿಕೊಂಡರು.

ಸಭಾಪತಿ ಶಾಸ್ತ್ರಿಗಳು ಬೆಳಕು ಮೂಡುವ ಹೊತ್ತಿಗೆ ಹಾಜರಾದುದು ಕಂಡು ಲಲಿತಮ್ಮನಿಗೆ ಸಂತಸವಾಯಿತು. ಸಧ್ಯ ಇವೊತ್ತೇ ಲಲಿತಾ ಸಹಸ್ರ ನಾಮ ಪ್ರಾರಂಭಿಸಲಿ. ಹೇಗಿದ್ದರೂ ನೂಪುರನಿಗೆ ನರ್ಸಿಂಗ್ ಹೋಂನಲ್ಲಿ ಟ್ರೀಟ್‌ಮೆಂಟ್ ಪ್ರಾರಂಭ ಆಗುತ್ತೆ-

"ಬನ್ನಿ ಶಾಸ್ತ್ರಿಗಳೇ, ನೀವು ಬಂದರೆ ನಂಗೆ ಧೈರ್ಯ ಬಂದ ಹಾಗಾಗುತ್ತೆ ! ನೀವು ಯಂತ್ರ ಕಟ್ಟಿದ್ಮೇಲೆ ಸರಿಯಾಗಿದ್ಲು ! ಅಪ್ಪಂದ್ಯ ಹೋಗಿ ರುದ್ರಣ್ಣನ ಹತ್ತಿರ ಏನು ಮಾಡ್ಸಿದ್ರೋ ಏನೋ, ಅವರ ಕೈ ಕಾಲು ಬಾಯಿ ಬಿದ್ದು ಹೋಯ್ತು, ನೂಪುರಳಿಗೂ ಜಾಸ್ತಿಯಾಗೋಯ್ತು !"

ಸಭಾಪತಿ ಶಾಸ್ತ್ರಿಗಳು ಪದ್ಮಾಸನ ಹಾಕಿ ಕುಳಿತರು. ಕತ್ತಿನಲ್ಲಿದ್ದ ರುದ್ರಾಕ್ಷಿ ಮಾಲೆಯನ್ನು ಕೈಗೆ ತೆಗೆದುಕೊಂಡರು.

"ಅಮ್ಮಾ ದೇವರನ್ನು ನಂಬಿ, ಆ ತಾಯಿ ಎಲ್ಲಾ ಸರಿಮಾಡ್ತಾಳೆ"

"ಅಲ್ಲಾ ಶಾಸ್ತ್ರಿಗಳೇ, ದೇವರಿದ್ದೂ ಇಂತಹ ದೆವ್ವ ಭೂತಗಳ ಕಾಟ ಇರುತ್ತದೆಯೇ ?"

"ಎಲ್ಲಾ ದ್ರೂ ಉಂಟೇ ? ದೇವರು ಇರೋದ್ರಿಂದ್ಲೇ ಅಂತಹ ಕಾಟ ಗಳೆಲ್ಲಾ ಬಹಳ ದಿನ ನಡೆಯೋಲ್ಲ. ನೋಡಿಮ್ಮ ನಮ್ಮ ಹಿಂದಿನವರು ಬಹಳ ಬುದ್ಧಿವಂತರು. ದೈವಭಕ್ತಿ, ದೈವಶಕ್ತಿ ಎರಡನ್ನೂ ಮನೋನಿಗ್ರಹಕ್ಕೆ ಮಾನಸಿಕ ಶಿಸ್ತಿಗಾಗಿ ಉಪಯೋಗಿಸಿಕೊಂಡವರು, ಇದುವರೆಗೂ ದೇವರನ್ನು ಹೀಗೆ ಇಂತಹವರೆಂದು ಯಾರೂ ಸ್ಪಷ್ಟವಾಗಿ ಹೇಳಿಲ್ಲ. ನರಕ ಸ್ವರ್ಗಗಳ ಬಗ್ಗೆ ಸತ್ತವರು ಬಂದು ನಮಗೆ ತಿಳಿಸಿಲ್ಲ. ಆದರೆ ದೇವರಿದ್ದಾನೆ. ನಮ್ಮನ್ನು ಕಾಪಾಡುತ್ತಾನೆ. ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ ಎಂಬ ಒಂದು ನಂಬಿಕೆಯಿಂದ ಮನುಷ್ಯ ಸುಧಾರಿಸುತ್ತಾನೆ. ಕೊನೆಗೆ ಎಲ್ಲವೂ ಮಾನವ ಕಲ್ಯಾಣಕ್ಕಾಗಿಯೇ ಅಲ್ಲವೇ, ಧರ್ಮ ಎನ್ನುವುದು ಒಂದು ನಂಬಿಕೆ ಮಾತ್ರ. ಅದನ್ನು ನಂಬಿದವರು ದಾರಿಗೆಡುವುದಿಲ್ಲ. ಧರ್ಮೋ ರಕ್ಷತಿ ರಕ್ಷಿತಃ ! ಎನ್ನುವುದಿಲ್ಲವೇ ? ನಾವು ನಾಸ್ತಿಕರು, ದೇವರನ್ನು ಒಲಿಸಿಕೊಳ್ಳಲು ಹಣ್ಣು ಹೂವು, ಹಾಲು ತುಪ್ಪ ಬಳಸುತ್ತೇವೆ. ನಾವೇ

ಆಹಾರ ಸೇವಿಸುತ್ತೇವೆ. ಇದರಿಂದ ಮನಸ್ಸು ಅತಿರೇಕಕ್ಕೊಳಗಾಗದೇ ಸಮಾಧಾನಚಿತ್ತರಾಗಿರಲು. ತಾಳ್ಮೆ, ಸಹನಾಶಕ್ತಿ ಬೆಳೆಸಿಕೊಳ್ಳಲು ಸಹಾಯವಾಗುತ್ತವೆ ವಾಮಾಚಾರದವರು ಕ್ಷುದ್ರ ಶಕ್ತಿಗಳನ್ನು ಒಲಿಸಿಕೊಳ್ಳಲು ಮಾಂಸ, ಸಾರಾಯಿ, ಬಲಿ, ಇಂತವುಗಳನ್ನು ಬೆಳಸಿಕೊಂಡು ತಾವೂ ಕ್ಷುದ್ರ ಮಾನವರಾಗುತ್ತಾರೆ. ರಾಕ್ಷಸೀಯ ಮೃಗೀಯ ಸ್ವಭಾವ ಅವರಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಮೃಗೀಯ ಶಕ್ತಿಯನ್ನು ಬಳಸಿಕೊಂಡು ಇತರರಿಗೆ ತೊಂದರೆ ಮಾಡುವುದರಿಂದ ಖಂಡಿತ ಅವರಿಗೆ ಒಳ್ಳೆಯದಾಗದು. ಅಂತಹ ಜೀವನ ನಡೆಸಿದವರು ದುರ್ಮರಣವನ್ನು ಹೊಂದ್ತಾರೆ ಎನ್ನುವುದಕ್ಕೆ ರುದ್ರಣ್ಣನೇ ಇಲ್ಲವೇ . ?"

ಸಭಾಪತಿಗಳು ಹೇಳತೊಡಗಿದಾಗ ಲಲಿತಮ್ಮನ ಹೃದಯ ಹಗುರ ವಾಯಿತು.

"ನಮ್ಮ ಕೈಲಾದಷ್ಟು ನಾವು ಮಾಡಿ ಮಿಕ್ಕಿದ್ದನ್ನು ದೇವರಿಗೆ ಬಿಡೋಣ. ಒಳ್ಳೆಯ ಕೆಲಸ ಮಾಡಲು ಅಡ್ಡಿ ಆತಂಕಗಳೇನೇ ಬಂದರೂ ಕೊನೆಗೆ ಅದು ಒಳ್ಳೆಯದೇ ಆಗುತ್ತದೆ. ಕೆಟ್ಟ ಕೆ ಲ ಸ ಗ ಳು ಎಷ್ಟೇ ಮೇಲುಗೈಯಂತೆ ತೋರಿದರೂ ಕೊನೆಗೆ ಅದರ ಪರಿಣಾಮ ಕೆಟ್ಟದೆ ! ನೀವು ಡಾಕ್ಟರ ಕೈಲಿ ಚಿಕಿತ್ಸೇನೋ ಕೊಡಿಸಿ, ಬೇಗ ವಾಸಿಯಾಗಲಿ. ದುಷ್ಟಶಕ್ತಿಗಳ ಪ್ರಾಬಲ್ಯ ನಿವಾರಣೆಯಾಗೋತನಕ ನಾನೂ ಸಹಸ್ರನಾಮ ಇವೊತ್ತಿನಿಂದಲೇ ಪ್ರಾರಂಭಿಸುತ್ತೇನೆ. ಪೂಜೆಯಿಂದ ಮನಸ್ಸು ನಿರ್ಮಲವಾಗಿ, ಮನಸ್ಥೈರ್ಯ ಹೆಚ್ಚುತ್ತದೆ. ಎಂತಹ ಕಷ್ಟವನ್ನಾದರೂ ಎದುರಿಸುವ ಶಕ್ತಿ ನಮಗೆ ಕೊಡುತ್ತದೆ....!" ಸಭಾಪತಿ ಶಾಸ್ತ್ರಿಗಳು ಎದ್ದು ನಿಂತರು. "ಸ್ನಾನಕ್ಕೆ ನೀರು ಬೇಕು. ಬಾವಿಯಯಲ್ಲಿನ ನೀರು ಸಹಸ್ರನಾಮ ಪೂಜೆ ಮುಗಿಯವವರೆಗೆ ನಾನು ತಣ್ಣೀರಿನಲ್ಲೇ ಸ್ನಾನ ಮಾಡಿ ಬರಿಯ ಫಲಾಹಾರ ಸ್ವೀಕರಿಸುತ್ತೇನೆ."

ಲಲಿತಮ್ಮ ಒಪ್ಪಿದರು.

"ನಿಮಗೇನು ಸೌಕರ್ಯ ಬೇಕಾದ್ರೂ ಮಾಡಿಕೊಡ್ತೀನಿ"

"ಪ್ರತಿ ಝಾಾವಕ್ಕೆ ಒಂದೊಂದು ಸಲ ಸ್ನಾನ ಮಾಡ್ಬೇಕೂ. ಮೈಲಿಗೆ ಇರೋರು ಯಾರೂ ಎದುರಿಗೆ ಬರಬಾರ್ದು. ಪ್ರತಿ ಪೂಜೆಗೂ ಹೊಸದಾಗಿ ಹಣ್ಣು, ಹೂವು ತರಿಸಿಡ್ಬೇಕೂ"

"ಹಾಗೆ ಆಗ್ಲಿ. ಶಾಸ್ತ್ರಿಗಳೇ ಏನೋ ಅವಳು ಸರಿಹೋದ್ರೆ ಸಾಕು"

ವರ್ಧಮಾನ ನೂಪುರಳನ್ನು ನರ್ಸಿಂಗ್ ಹೋಂಗೆ ಕರೆತಂದಾಗ ಅವಳ ಸ್ಥಿತಿ ನೋಡಿ ಡಾ॥ ಚಿದಂಬರ್ ಸಿಸ್ಟರಿಗೆ ಹೇಳಿದ.

"ಸಿಸ್ಟರ್ ಇವರ್ಗೆ ಡ್ರಿಪ್ ಹಾಕಿ ನೋಡ್ಕೊತಾ ಇರಿ. ಆಮೇಲೆ ಈ ಡ್ರೆಸ್ ತೆಗೆದು ನಮ್ಮದೇ ಯಾವ್ದಾದ್ರೂ ಗೌನ್ ಹಾಕ್ಬಿಡಿ."

ಸಿಸ್ಟರ್ ಮಾಲಾ ನೂಪುರಳನ್ನು ಕರೆದೊಯ್ದಳು. ವರ್ಧಮಾನ ಡಾ॥ ಚಿದಂಬರನೊಡನೆ ನೂಪುರಳ ಬಗ್ಗೆ ಮಾತನಾಡುತ್ತಾ ಕುಳಿತ್ತಿದ್ದರೆ ಸಂಜೀವಯ್ಯ ಕಾವೇರಮ್ಮ ಆತಂಕದಿಂದ ಕಾಯುತ್ತಾ ಕುಳಿತಿದ್ದರು.

"ಮಿ॥ ವರ್ಧಮಾನ್, ಇಂಥಹ ಕೇಸುಗಳಲ್ಲಿ ಆತುರಪಡಬಾರದು. ಇಟ್ ಟೇಕ್ಸ್ ಟೈಂ. ನೀವು ತಾಳ್ಮೆಯಿಂದ ನಮ್ಮ ಜೊತೆ ಸಹಕರಿಸಬೇಕು. ನಿಮ್ಮಾಕೆಯ ಬಾಲ್ಯ, ಅವಳ ಅಪ್ ಬ್ರಿಂಗಿಂಗ್ ಎಲ್ಲಾ ಡಿಟೈಲಾಗಿ ತಿಳಿಸಬೇಕು."

ವರ್ಧಮಾನ ತನ್ನ ಅತ್ತೆ, ಮಾವಂದಿರತ್ತ ಕೈ ತೋರಿದ.

"ನೋಡಿ ಅವಳ ತಂದೆ, ತಾಯಿಯನ್ನೇ ಕರ್ಕೊಂಡು ಬಂದಿದ್ದೀನಿ. ಅದೇನು ಬೇಕೋ ಕೇಳಿ ತಿಳಿದುಕೊಳ್ಳಿ"

"ಮೊದ್ಲು ಪೇಷಂಟ್ನ ಒಂದ್ಸಲ ನೋಡ್ಕೊಂಡು ಬಂದುಬಿಡ್ತೀನಿ, ಇಲ್ಲೇ ಕಾಯ್ತಾ ಇರಿ"

ಡಾ॥ ಚಿದಂಬರಂ ಎದ್ದು ವಾರ್ಡಿನತ್ತ ನಡೆದರು. ಕಾವೇರಮ್ಮ ಒಳಗೇ ಅಳುಕು, ಡಾಕ್ಟರಿಗೆ ನವು ನೂಪುರಳಿಗೆ ವರದಾಚಾರಿ ಕೈಯಲ್ಲಿ ಕೊಡಿಸಿದ 'ಶಿಕ್ಷೆ'ಯ ಬಗ್ಗೆ ತಿಳಿದರೆ ಏನು ಗತಿ? ಅವರು ಸುಮ್ಮನೆ ಬಿಟ್ಟಾರೆಯೇ? ಅಳಿಯ ಸುಮ್ಮನಿರುತ್ತಾನೆಯೇ?

ಡಾಕ್ಟರ್ ಐದು ನಿಮಿಷದಲ್ಲೇ ಹಿಂತಿರುಗಿ ಬಂದರು.

"ಮಿ॥ ವರ್ಧಮಾನ ಒಂದ್ನಿಮಿಷ ಇಲ್ಲಿ ಬನ್ನಿ."

ಅವರ ಗಂಭೀರ ಮುಖ ಭಾವ ಕಂಡು ವರ್ಧಮಾನನ ಎದೆ ಧಸಕ್ಕೆಂದಿತು.

"ನೂಪುರಳಿಗೆ ಇನ್ನೇನಾಯ್ತು?"

ವರ್ಧಮಾನ ಅವರನ್ನು ಹಿಂಬಾಲಿಸಿದ.

"ಇಲ್ಲಿ ಕೂತ್ಕೋಳಿ ಮಿ॥ ವರ್ಧಮಾನ, ನೀವು ಎಜುಕೇಟೆಡ್,

ಕಲ್ಚರ್ಡ್ ಅಂದುಕೊಂಡಿದ್ದೆ. ವಾಟ್ ಹ್ಯಾವ್ ಯೂ ಡನ್ ಟು ಯುವರ್ ವೈಫ್? ಇಂತಹ ಅಮಾನುಷ ರೀತಿಯಲ್ಲಿ ಅವರ್ನ ಹಿಂಸೆ ಮಾಡ್ತೀರೀಂತ ನಂಗೆ ಗೊತ್ತಿರ್ಲಿಲ್ಲ. ಷಿ ಈಸ್ ಇನ್ ಎ ಸ್ಟೇಟ್ ಆಫ್ ಶಾಕ್! ಕಾಲ ಮೇಲೆಲ್ಲ ಬರೆ ಎಷ್ಟು ಜೋರಾಗಿವೆ ಅಂದ್ರೆ ಒಂದೆರಡು ಕಡೆ ಮೂಳೆ ಸಹ ವಿಸಿಬಲ್ ಆಗಿದೆ. ಬರೆ ಎಲ್ಲಾ ಯಾಕೆ ಹಾಕೋಕೆ ಹೋದ್ರಿ? ಮೈ ಮೇಲೆ ಬಿದ್ದಿರೋ ಏಟಿಗಂತೂ ಅಲ್ಲಲ್ಲಿ ಚರ್ಮ ಕಿತ್ತು ಬಂದಿವೆ. ಅವಳ್ನ ಕಂಟ್ರೋಲ್ ಮಾಡೋಕೆ ಆಗೊಲ್ಲಾಂತ ಹೀಗೆ ಮಾಡೋದಾ? ಛೀ! ನಾನು ಇದನ್ನ ನಿಮ್ಮಿಂದ ಎಕ್ಸ್‌ಪೆಕ್ಟ್ ಮಾಡಿರ್ಲಿಲ್ಲ."

"ಏನು ಡಾಕ್ಟರ್ ನೀವು ಹೇಳ್ತಾ ಇರೋದು ಬರೆ ಹಾಕಿದ್ದೀನಾ? ನನ್ನ ಮನೇಲೇ ಇರ್ಲಿಲ್ಲ ಅವಳು! ಅವಳ ತಾಯಿ ಮನೇಲಿ ಬಿಟ್ಟಿದ್ದೆ. ಬರೆ ಹಾಕಿ ಹೊಡ್ದು ಬಡ್ದು ಸರಿಮಾಡೋ ಹಾಗಿದ್ದಿದ್ರೆ ನಿಮ್ಮ ನರ್ಸಿಂಗ್ ಹೋಂ ವರ್ಗೂ ಬರೋ ಅವಶ್ಯಕತೆಯೇ ಇರ್ಲಿಲ್ಲ! ಐ ಜಸ್ಟ್ ಕಾಂಟ್ ಬಿಲೀವ್ ಇಟ್! ನಾನು ನೋಡಿದಾಗ ಅವೇನೂ ಇರ್ಲಿಲ್ಲ. ಷೀ ವಾಸ್ ಪರ್‌ಫೆಕ್ಟ್‌ಲೀ ಆಲ್‌ರೈಟ್!"

"ನೀವು ನಂಬ್ದೇ ಇದ್ರೆ ನಂಜೊತೆ ಬನ್ನಿ ತೋರಿಸ್ತೀನಿ."

ವರ್ಧಮಾನ ಡಾಕ್ಟರರನ್ನು ಹಿಂಬಾಲಿಸಿದ. ವಾರ್ಡಿನ ಮಂಚದ ಮೇಲೆ ನೂಪುರ ಮಲಗಿದ್ದಳು. ಡಾಕ್ಟರ್ ಬರುತ್ತಲೇ ಅವಳ ಬಳಿ ಇದ್ದ ಸಿಸ್ಟರ್

ದೂರ ಸರಿದು ನಿಂತಳು.

"ಸಿಸ್ಟರ್ ಇವರ್ಗೆ ಪೇಷಂಟ್ ಮೈ ಮೇಲಿರೋ ಗಾಯ ತೋರಿಸಿ."

ನೂಪುರಳಿಗೆ ನಿದ್ರೆ ಔಷಧಿ ಕೊಟ್ಟಿದ್ದರಿಂದ ಮಲಗಿದ್ದಳು. ಸಿಸ್ಟರ್ ಮೆಲ್ಲನೆ ಅವಳ ಗೌನ್ ಸರಿಸಿ ಬೆನ್ನು, ಸೊಂಟ, ತೊಡೆ. ಕಾಲಿನ ಮೇಲಿದ್ದ ಗಾಯಗಳನ್ನು ತೋರಿಸಿದಳು.

"ಮೈ ಗಾಡ್! ಹೌ ಡಿಡ್ ದಿಸ್ ಹ್ಯಾಪೆನ್?" ವರ್ಧಮಾನ ಉದ್ಗರಿಸಿದ.

"ಡಾಕ್ಟರ್! ನಿನ್ನೆ ರಾತ್ರಿ ಏನೋ ನಡೆದಿದೆ! ಒಂದ್ನಿಮಿಷ ಬಂದೆ...." ಎಂದವನೇ ಅವನು ಹೊರಗೆ ಧಾವಿಸಿದ. ಸಂಜೀವಯ್ಯನ ಮುಂದೆ ಬಂದು ನಿಂತಾಗ ಕೋಪದಿಂದ ಅವನ ಮುಖ ಕೆಂಪೇರಿತ್ತು.

"ನಿಮ್ಮನೇಲಿ ನಿನ್ನೆ ನೂಪುರಳನ್ನ ಬಿಟ್ಮೇಲೆ ಏನ್ಮಾಡಿದ್ರಿ? ನೀವು ಮನುಷ್ಯರಾ?"

"ಏನಪ್ಪಾ ನೀನು ಹೇಳ್ತಾ ಇರೋದು? ನೂಪುರನಿಂಗೆ ಹೆಂಡ್ತಿ ಯಾಪ್ರೆ ನಮ್ಗೆ ಮಗಳು. ನಾವೇನು ಮಾಡ್ತೀವಿ?"

ಸಂಜೀವಯ್ಯ ಹೇಳಿದಾಗ ವರ್ಧಮಾನ ಅವರ ಶರಟಿನ ಕಾಲರ್ ಹಿಡಿದು ಬೆದರಿಸಿದ.

"ನೀವೇನು ಮಾಡಿದ್ರಿ ಅಂತ ಹೇಳ್ದೆ ಇದ್ರೆ ಈ ಕ್ಷಣ ನಿಮ್ಮನ್ನ ಪೋಲೀಸರಿಗೆ ಒಪ್ಪಿಸಿ, ಮಗಳ್ನ ಕೊಲೆ ಮಾಡೋಕೆ ಯತ್ನಿಸಿದ್ರೂಂತ ರಿಪೋರ್ಟ್ ಮಾಡ್ತೀನಿ. ಏನ್ಮಾಡಿದ್ರಿ ಹೇಳಿ?"

ಕಾವೇರಮ್ಮ ನಡುಗಿಹೋದರು. ಮೊದಲೇ ವಯಸ್ಸಾದ ತಮ್ಮ ಪತಿ ದೈಹಿಕವಾಗಿ ನಿಶ್ಶಕ್ತರು ಎಂದು ತಿಳಿದಿದ್ದ ಆಕೆ ವರ್ಧಮಾನ ಕೋಪದ ಭರದಲ್ಲಿ ಏನಾದರೂ ಮಾಡಿಬಿಟ್ಟಾನೆಂದು ಹೆದರಿ ಅವನಲ್ಲಿ ಬೇಡಿಕೊಂಡರು.

"ಅವರ್ನ ಬಿಟ್ಬಿಡಪ್ಪಾ ಮಾನೂ-ಅವರ್ದೇನೂ ತಪ್ಪಿಲ್ಲ. ಎಲ್ಲಾ ಆ ವರದಾಚಾರೀದು. ರಾತ್ರಿ ಬಂದು ಮೈ ಮೇಲೆ ಇರೋ ದೆವ್ವ ಬಿಡಿಸ್ತೀನಿ ಅಂತ ಅವಳ್ನ ತುಂಬಾ ಹಿಂಸೆ ಮಾಡಿದ. ನೋಡಲಾರ್ದೇ ನಾವೇ ಅವನ್ಗೆ ದುಡ್ಡ ಕೊಟ್ಟು ಕಳಿಸಿಬಿಟ್ವಿ."

"ಅವನ್ಯಾಕೆ ನಿಮ್ಮನೆಗೆ ಬರ್ತಾನೆ? ನೀವೇ ಕರೆಸಿಕೊಂಡಿರ್ಬೇಕೂ! ನನ್ನ ಕಣ್ಣಿಗೆ ಮಣ್ಣೆರಚಿ ರಾತ್ರಿಯೋ ರಾತ್ರಿ ಅವನ್ನ ಕರೆಸಿ ನೀವೇ ಇದೆಲ್ಲಾ ಮಾಡಿಸಿರ್ಬೇಕೂ! ನೀವು ಮನುಷ್ಯರಲ್ಲ, ಮೃಗಗಳು! ತಿಳುವಳಿಕೆಯಿಲ್ಲದ ಮನುಷ್ಯ ಮೃಗಕ್ಕಿಂತ ಕಡೆ!"

ಸಂಜೀವಯ್ಯ ನಡುಗುತ್ತ ಆದುದೆಲ್ಲಾ ಹೇಳಿಬಿಟ್ಟರು. "ಏನೋ ತಿಳುವಳಿಕೆ ಇಲ್ದೇ ಮಾಡಿಬಿಟ್ವೆವು! ಆದ್ರೆ ಅವ್ನು ಮಾಡ್ತಾ ಇದ್ದದ್ದು ನೋಡಿ ಹೆದರಿಕೆಯಾಗಿ ಅವನ್ನ ಕಳಿಸಿದೆವು. ಅವಳ್ನ ಹಿಂಸೆ ಮಾಡ್ಬೇಕೂಂತ ಖಂಡಿತ ಹೇಳಲಿಲ್ಲ. ಅವಳ ಮೈ ಮೇಲಿರೋ ದೆವ್ವ ಬಿಟ್ಟುಹೋಗಲೀಂತ ಅವ್ನು ಮಾಡಿದ್ದೆಲ್ಲ ನೋಡ್ತಾ ಇದ್ವಿ. ಆದ್ರೆ ಆ ಹಿಂಸೆ ನೋಡಲಾರದೆ ಕೊನೆಗೆ ನಾವೇ ಅವ್ನ ಕಳಿಸಿಬಿಟ್ವೆವು. ನಿಂಗೆ ಹೇಳೋಣಾಂದ್ರೆ ನೀನು ಕೋಪ ಮಾಡ್ಕೋತೀಯಾಂತ ಹೇಳ್ಲಿಲ್ಲ." ವರ್ಧಮಾನ ಅವರ ಶರಟಿನ ಕಾಲರ್‌ನಿಂದ ಕೈ ತೆಗೆದ.

"ನಿಮ್ಮನ್ನ ಅಂದು ಪ್ರಯೋಜನವೇನು? ತಪ್ಪೆಲ್ಲಾ ನನ್ನದೇ.

ನಾನೇ ಮನೇಲಿ ಇಟ್ಕೊಂಡಿದ್ರೆ ಹೀಗೆಲ್ಲಾ ಆಗ್ತಾ ಇರ್ಲಿಲ್ಲ. ನೋಡಿ ಹೋಗಿ, ಅವಳ ಮೈಯೆಲ್ಲಾ ರಣ ಆಗಿಹೋಗಿದೆ."

ಕಾವೇರಮ್ಮ ಮುಸು ಮುಸು ಅಳುತ್ತಲೇ ವಾರ್ಡಿನತ್ತ ನಡೆದರು. ಸಂಜೀವಯ್ಯ ನಡುಗುತ್ತಾ ಹೆಂಡತಿಯನ್ನು ಹಿಂಬಾಲಿಸಿದರು. ವರ್ಧಮಾನ ಅಲ್ಲೇ ಇದ್ದ ಕುರ್ಚಿಯಲ್ಲಿ ಕುಸಿದು ಕೈಗಳಲ್ಲಿ ಮುಖ ಮುಚ್ಚಿಕೊಂಡ. ಇದು ತನ್ನ ತಾಯಿಗೆ ತಿಳಿದರೆ ! ಒಂದು ದಿನ ಅವರು ನೂಪುರನನ್ನು ಒರಟಾಗಿ ನಡೆಸಿಕೊಂಡಿರಲಿಲ್ಲ. ಬೇರೆಯವರಾಗಿದ್ದರೆ ಸೊಸೆಗೆ ದೆವ್ವ ಹಿಡಿದಿದೆ ಎಂದು ಮನೆ ಬಿಟ್ಟು ಅಟ್ಟುತ್ತಿದ್ದರೋ ಏನೋ ! ಮನೆ ತುಂಬಿಸಿಕೊಂಡ ದಿನದಿಂದ ಹೀಗಿದ್ದ ನೂಪುರಳನ್ನು ಒಂದು ದಿನವಾದರೂ ತನ್ನ ತಾಯಿ ದನಿಯೆತ್ತಿ ಕೂಡ ಮಾತನಾಡಿಸಿರಲಿಲ್ಲ. ಈಗ ನೋಡಿದರೆ ದನ ಬಡಿದಂತೆ ಬಡಿದು ಹಿಂಸೆ ಮಾಡಿ ಅವಳ ತಂದೆ, ತಾಯಿ ಅವಳನ್ನು ಈ ಸ್ಥಿತಿಗೆ ತಂದಿದ್ದನ್ನು ನೋಡಿದರೆ ಅಜ್ಞಾನದ ಎಲ್ಲೆ ಎಲ್ಲಿಯವರೆಗೆ ಇದೆ ಎಂದು ತಿಳಿಯಬಹುದು !

ಸಿಸ್ಟರ್ ಬಂದು "ಡಾಕ್ಟರ್ ಕರೀತಾ ಇದ್ದಾರೆ."

ವರ್ಧಮಾನ ಡಾಕ್ಟರ್ ಕೊಠಡಿಯತ್ತ ಬಂದ. "ಕೂತ್ಕೊಳಿ ವರ್ಧಮಾನ್. ಇಟ್ ಈಸ್ ಎ ವೆರಿ ಸ್ಯಾಡ್ ಥಿಂಗ್ ಟು ಹ್ಯಾಪೆನ್. ಸಧ್ಯಕ್ಕೆ ನಾವೇನೂ ಟ್ರೀಟ್‌ಮೆಂಟ್ ಕೊಡೋಕ್ಕಾಗೋಲ್ಲ. ಗಾಯಗಳೆಲ್ಲಾ ವಾಸಿ ಆಗ್ಬೇಕೂ, ಮೆಂಟಲ್ ಷಾಕಿನಿಂದ ಚೇತರಿಸಿಕೊಳ್ಳಬೇಕು. ಅಲ್ದೇ ಬಾಡಿಗೂ ಸ್ವಲ್ಪ ಸ್ಟಾಮಿನಾ ಬೇಕು. ತುಂಬಾ ವೀಕಾಗಿದ್ದರೆ. ಒನ್ ಮೋರ್ ಥಿಂಗ್ ನೀವು ನನಗೆ ಅವರು ಗರ್ಭಿಣಿ ಅಂತ ಹೇಳ್ಲೇ ಇಲ್ವಲ್ಲ."

ವರ್ಧಮಾನ ಅಚ್ಚರಿಗೊಂಡ 'ವಾಟ್ ?'

"ಯಾಕೆ ಮಿ|| ವರ್ಧಮಾನ್ ? ನಿಮ್ಮ ಹೆಂಡ್ತಿಗೆ ಎರಡೂವರೆ ತಿಂಗಳಾಗಿದೆ ಅಂತ ನಿಮ್ಗೇ ಗೊತ್ತಿಲ್ವಾ"

"ಮೈ ಗಾಡ್ ! ನೀವು ನಂಬೋಲ್ಲ ಡಾಕ್ಟರ್, ನಿಜವಾಗ್ಲೂ ನಂಗೆ ಗೊತ್ತಿರ್ಲಿಲ್ಲ ? ಅವಳ ಮನಸ್ಥಿತಿಯೇ ಚೆನ್ನಾಗಿರ್ಲಿಲ್ಲ. ಅವಳ್ಗೆ ಏನಾಗಿದೆ. ಏನಾಗ್ತಾ ಇದೆ ಅಂತ ತಿಳ್ಕೊಳೋಕೂ ಸಾಧ್ಯ ಇರ್ಲಿಲ್ಲ. ಅವಳು ಏನೂ ಬಾಯಿಬಿಟ್ಟು ಹೇಳ್ತಾ ಇರ್ಲಿಲ್ಲ."

ಡಾ|| ಚಿದಂಬರಂ ಅವನತ್ತ ನೋಡಿದಾಗ ಅನುಕಂಪ ಉಕ್ಕಿತು. ಪಾಪ ಈತನೊಬ್ಬನೇ ಎಲ್ಲಕ್ಕೂ ಹೆಗಲು ಕೊಟ್ಟು ನಿಂತಿದ್ದಾನೆ. ಅವನ ಕೈ ಮೀರಿ ಹೋದ ಎಷ್ಟೋ ವಿಷಯದ ಬಗ್ಗೆ ಕಂಗಾಲಾಗಿದ್ದಾನೆ.

"ಇಟ್ಸ್ ಆಲ್‌ರೈಟ್. ನಾವು ನೋಡಿಕೊಳ್ತೀವಿ. ಇನ್ನೊಂದ್ವಾರ ಬರೀ ಸೆಡೆಷನ್‌ನಲ್ಲಿ ಇಟ್ಟಿರ್ತೀವಿ. ಅವರು ರಿಕೂಪ್, ಆದ್ಮೇಲೆ ಮುಂದಿನ ಚಿಕಿತ್ಸೆ ಕೊಡಲು ಯೋಚಿಸ್ತೀನಿ."

* * * *

ನೂಪುರ ಏಳು ದಿನಗಳು ಪೂರಾ ನಿದ್ರೆಯಲ್ಲಿದ್ದಳು. ಆಹಾರವನ್ನು ಕೊಡಲು ಆಗಾಗ ಎಬ್ಬಿಸಲಾಗುತ್ತಿತ್ತು. ಅವಳನ್ನು ನೋಡಿಕೊಳ್ಳಲು ವರ್ಧಮಾನ ಇಬ್ಬರು ಸ್ಪೆಷಲ್ ನರ್ಸ್‌ಗಳನ್ನು ಗೊತ್ತು ಮಾಡಿದ್ದ, ಯಾರೂ ಅವಳನ್ನು ನೋಡಲು ಬರಬಾರದೆಂದು ಡಾಕ್ಟರ್ ಚಿದಂಬರ್ ಆದೇಶ ಇತ್ತಿದ್ದರು. ಪ್ರತಿದಿನ ಬೆಳಿಗ್ಗೆ, ಸಂಜೆ ವರ್ಧಮಾನ ಮಾತ್ರ ನೋಡಿ ಬರುತ್ತಿದ್ದ. ಅವಳ ಗಾಯಗಳು ಮಾಯತೊಡಗಿದ್ದವು. ನಿದ್ರೆಯಲ್ಲಿ ಅವಳ ಮನಸ್ಸು ಪ್ರಶಾಂತ ವಾಗಿತ್ತು. ಯಾವ ಉದ್ರೇಕವೂ ಇರಲಿಲ್ಲ.

ಆರನೆಯ ದಿನ ಡಾ॥ ಚಿದಂಬರ್‌ರವರು ಡಾಕ್ಟರ್ ಚಂಪಕ ಸೋನಿಯನ್ನು ಕರೆತಂದರು.

"ಮಿಸ್ಟರ್ ವರ್ಧಮಾನ್, ನಾನು ಟ್ರೀಟ್‌ಮೆಂಟ್ ಪ್ರಾರಂಭಿಸುವ ಮುನ್ನ ಎಲ್ಲಾ ವಿವರಣೆಯನ್ನು ಮಾಡಿ ಮುಗಿಸಬೇಕು. ನಾಳೆ ನ್ಯೂರೋ ಫಿಸಿಷಿಯನ್, ಸರ್ಜನ್ ಇಬ್ರೂ ಬಂದು ನೋಡ್ತಾರೆ. ಎಲ್ಲಾ ಪಾಸಿಬಿಲಿಟೀನೂ ರೂಲ್‌ಔಟ್ ಮಾಡಿಬಿಡೋಣ !"

ವರ್ಧಮಾನ ಒಪ್ಪಿದ. ಡಾಕ್ಟರ್ ಸೋನಿ ನೂಪುರಳ ದೈಹಿಕ ತಪಾಸಣೆ ಪ್ರಾರಂಭಿಸಿದಳು. ನಿದ್ರೆಯ ಮಂಪರಿನಲ್ಲೇ ನೂಪುರನಿಂದ ಅಸಮಂಜಸ ಉತ್ತರ ಪಡೆದರು, ಎರಡು ಗಂಟೆಗಳ ತಪಾಸಣೆಯಾದ ನಂತರ ಸೋನಿಯವರು ವರ್ಧಮಾನ್‌ನನ್ನು ಕರೆದರು.

"ನಿಮ್ಮ ಪತ್ನಿಗೆ ಈಗೆಷ್ಟು ತಿಂಗಳು ?"

ವರ್ಧಮಾನ ಕಕ್ಕಾಬಿಕ್ಕಿಯಾದ.

"ನನಗೆ ಗೊತ್ತಿಲ್ಲ."

"ಒಳ್ಳೇ ಚೆನ್ನಾಯ್ತು, ಹೋಗಲಿ ಬಿಡಿ, ನಿಮಗೆ ಮದುವೆಯಾಗಿ ಎಷ್ಟು ತಿಂಗಳಾಯ್ತು ?"

"ಐದು ತಿಂಗಳಾಗುತ್ತೆ."

ವರ್ಧಮಾನ ಹೇಳಿದ. ಮದುವೆಯಾದಾಗಲಿಂದ ಅವಳಿಗೆ ಏನಾದ

ರೊಂದು ತೊಂದರೆಯಿದ್ದೇ ಇರುತ್ತಿತ್ತು. ಅವಳ ಪ್ರೆಗ್ನೆನ್ಸಿ ವಿಷಯ ನನಗೇನೂ ತಿಳಿಯದು. ಅವಳ ತಂದೆ ತಾಯಿಗೆ ಗೊತ್ತಿರಬಹುದು."

ಡಾಕ್ಟರ್ ಸೋನಿ ನಸುನಕ್ಕರು. "ಬಿಡಿ ನಾವೇ ಗ್ರಾವಿಂಡೆಕ್ಸ್ ಟೆಸ್ಟ್ ಮಾಡಿ ನೋಡ್ತೀವಿ. ಪ್ರೆಗ್ನೆನ್ಸಿ ಪಾಸಿಟಿವ್ ಆದ್ರೆ ಆಮೇಲೆ ಹದಿನೆಂಟನೆಯ ವಾರದಲ್ಲಿ ಅಲ್ಟ್ರಾಸೌಂಡ್ ಮಾಡಿ ನೋಡಿದರಾಯಿತು. ನಾನು ಯಾಕೆ ಹೇಳಿದೆ ಅಂದರೆ ಪ್ರೆಗ್ನೆನ್ಸಿ ಕನ್‌ಫರ್ಮ್ ಆದ್ಮೇಲೆ ಲಂಬರ್ ಪಂಕ್ಚರ್ ಮಾಡೋದು ಬೇಡಾಂತ ನನ್ನ ಅನಿಸಿಕೆ! ಐ ವಿಲ್ ಹ್ಯಾವ್ ಎ ಟಾಕ್ ವಿತ್ ಡಾಕ್ಟರ್ ಚಿದಂಬರ್!" ಆಕೆ ಹೊರಟುಹೋದಳು. ವರ್ಧಮಾನನಿಗೆ ದಿಕ್ಕೇ ತೋಚದಾಯಿತು. ನೂಪುರ ಗರ್ಭಿಣಿಯಾಗಿದ್ದರೆ ಈ ಸ್ಥಿತಿಯಲ್ಲಿ ಮಗುವಿಗೆ ತೊಂದರೆಯಾಗಬಹುದೇನೋ! ಹುಟ್ಟುವ ಮಗು ಅಂಗವಿಕಲವಾಗಿಯೋ ಬುದ್ಧಿಭ್ರಮಿತವಾಗಿಯೋ ಆದರೆ! ವಿಕೃತಾಕೃತಿಯ ಮಗುವಾದರೆ! ತನಗೆ ದೆವ್ವ ಭೂತಾದಿಗಳಲ್ಲಿ ನಂಬಿಕೆಯಿಲ್ಲ. ಆದರೂ....!

ಹೊರಗೆ ತಲೆಯ ಮೇಲೆ ಕೈಹೊತ್ತು ನಿಂತುಬಿಟ್ಟ. ಡಾಕ್ಟರ್ ಚಿದಂಬರ್ ಬಂದು ಅವನ ಹೆಸರು ಹಿಡಿದು ಕರೆದಾಗಲೇ ಎಚ್ಚರವಾದುದು.

"ಮಿಸ್ಟರ್ ವರ್ಧಮಾನ್, ಇನ್ನೊಂದಷ್ಟು ಹೊತ್ತು ಕಾದಿದ್ದರೆ ಪ್ರೆಗ್ನೆನ್ಸಿ ಟೆಸ್ಟ್‌ನ ರಿಸಲ್ಟೂ ತಿಳಿಯುತ್ತೆ. ಮನೆಗೆ ಹೋಗಿ ಬರುತ್ತೀರಯೋ? ಹೇಗೆ?" ವರ್ಧಮಾನ ತಲೆಯಾಡಿಸಿದ. "ಇದ್ದು ರಿಸಲ್ಟ್ ತಿಳಿದೇ ಹೋಗುತ್ತೇನೆ!" 'ತಾನು ನೂಪುರಳೊಂದಿಗೆ ಕಳೆದ ರಾತ್ರಿಗಳೇನಿದ್ದರೂ ಬೆರಳೆಣಿಸಿದಷ್ಟು, ಶಾಸ್ತ್ರಿಗಳು ತಾಯಿತ ಕಟ್ಟಿದ ಮೇಲೆ ಆನಂತರ ರುದ್ರಣ್ಣ ಬಂದು ಹೋದ ಮೇಲೆ, ತನಗೆ ದಾಂಪತ್ಯ ಜೀವನದ ಸವಿ ದೊರಕಿದುದೇ ಕನಸಿನಂತಾಗಿದೆ. ಹೀಗಿರುವಾಗ ನೂಪುರ ಗರ್ಭಿಣಿಯೆಂದರೆ ತನಗೇಕೋ ಹೆದರಿಕೆಯಾಗುತ್ತಿದೆ! ಅವಳು ತನ್ನೊಡನೆ ನಗುನಗುತ್ತಾ ಮಾತಾಡುತ್ತಿದ್ದುದೇ ಕಡಿಮೆ. ದೇಹದ ಕಾಮನೆಗಳಿಗಾಗಿ ತಾನೇನೋ ಅವಳನ್ನು ಕೂಡಿರಬಹುದು. ಆದರೆ ಮಗು ತಮ್ಮಿಬ್ಬರ ಒಲವಿನ ಫಲವಾಗಿಲ್ಲ! ಒಂದು ವೇಳೆ ನೂಪುರ ಗರ್ಭಿಣಿಯೇ ಆಗಿದ್ದಲ್ಲಿ ಮಗು ಭೂತಪ್ರೇತಗಳದ್ದಾಗಿರಬಹುದೇ?' ವರ್ಧಮಾನನ ಮೈ ಬೆವರತೊಡಗಿತು.

ಅಷ್ಟು ಹೊತ್ತಿಗೆ ಡಾ॥ ಚಿದಂಬರ್, ಡಾ॥ ಸೋನಿ ಇಬ್ಬರೂ ಬಂದರು. "ಕಂಗ್ರಾಜುಲೆಷನ್ಸ್ ಮಿಸ್ಟರ್ ವರ್ಧಮಾನ್, ನೀವು ತಂದೆಯಾಗಲಿದ್ದೀರಿ!

ನಾವು ಪರೀಕ್ಷಿಸಿ ನೋಡಿದಂತೆ ನಿಮ್ಮ ಪತ್ನಿಗೆ ಮೂರು ತಿಂಗಳಾಗಿದೆ ಯೆನಿಸುತ್ತದೆ."

"ಡಾಕ್ಟರ್ ಪ್ಲೀಸ್ ಆ ಮಗೂನ್ನ ತೆಗೆದುಬಿಡಿ. ನನಗೆ ಆ ಮಗು ಬೇಡ."

"ಯಾಕೆ, ವರ್ಧಮಾನ್ ಹಾಗೆಲ್ಲಾ ಕಾರಣವಿಲ್ಲದೇ ತೆಗೆಯಬಾರದು. ಅದೂ ಅಲ್ಲದೆ ಮೂರು ತಿಂಗಳಾಗಿಹೋಗಿದೆ. ಈಗ ತೆಗೆಯುವುದು ಸರಿಯಲ್ಲ!" "ಪ್ಲೀಸ್ ಡಾಕ್ಟರ್, ಆ ಮಗು ಬೇಡಾ. ಆ ಮಗು ಹುಟ್ಟುವುದರಲ್ಲಿ ನೂಪುರ ಸತ್ತುಹೋಗ್ತಾಳೆ ಅಷ್ಟೆ. ಅದು ದೆವ್ವ, ಭೂತದ ಮಗು! ನಮಗೆ ಖಂಡಿತಾ ಬೇಡಾ!" ಉದ್ವೇಗದಿಂದ ಹೇಳಿದ.

ಡಾ॥ ಚಿದಂಬರ್ ವರ್ಧಮಾನನ ಕೈಹಿಡಿದು ಕುಳ್ಳಿರಿಸಿದರು. "ಮಾನೂ, ಸ್ವಲ್ಪ ಸಮಾಧಾನ ತಂದ್ಕೊಳ್ಳಿ. ನೀವೂ ಭೂತ, ಪ್ರೇತ ಅದ್ರಲ್ಲೆಲ್ಲಾ ನಂಬಿಕೆ ಇಡ್ತಿರಾಂದ್ರೆ ನಂಗೆ ನಂಬೋಕ್ಕೇ ಆಗ್ತಾ ಇಲ್ಲ. ಮಗು ಈಗ ಬೆಳೀತಾ ಇರೋದು ನಾಚ್ಯುರಲ್ ಪ್ರೊಸೆಸ್ಸ್, ಪ್ರಕೃತಿ ಸಹಜವಾದುದು. ನಿಮ್ಮಿಬ್ಬರ ಸಂಯೋಗದಿಂದ ಬೆಳೀತಾ ಇರೋದೇ ಹೊರತು ಯಾವ ಭೂತ ಪ್ರೇತಾನೂ ಇಲ್ಲ! ನಿಮ್ಮ ಪತ್ನಿಯನ್ನು ನಾವು ಕ್ಯೂರ್ ಮಾಡಿದ ಮೇಲೆ ನೀವೇ ಒಪ್ಕೋತೀರಿ. ಷೀ ಈಸ್ ಜಸ್ಟ್ ಎ ಸ್ಕೈಲಿಕ್ ಪೇಶಂಟ್. ನಾಳೆಯಿಂದ ನನ್ನ ಟ್ರೀಟ್‌ಮೆಂಟ್ ಪ್ರಾರಂಭಿಸ್ತಾ ಇದ್ದೀನಿ. ಜೊತೆಗೆ ನ್ಯೂರೋ ಸರ್ಜನ್ ವಿಠ್ಠಲ್ ಹಾಗೂ ನ್ಯೂರೋ ಫಿಜಿಷಿಯನ್ ದಾಮೋದರ್ ಬಂದು ನೋಡಿ ಅವರ ಎಕ್ಸ್‌ಪರ್ಟ್ ಒಪಿನಿಯನ್ ಕೊಟ್ಟುಹೋಗ್ತಾರೆ, ನಾವು ಪರೀಕ್ಷೆ ನಡೆಸಿ ನೋಡಿದಂತೆ ನಿಮ್ಮ ಪತ್ನಿ ನಾರ್ಮಲ್ ಆಗಿದ್ದಾರೆ. ಷೀ ಈಸ್ ಮೆಂಟಲೀ ಸಿಕ್ ಅಷ್ಟೆ. ಮನಸ್ಸು ಪ್ರಚೋದಿತವಾಗಿದೆ ಅಷ್ಟೇ!"

ವರ್ಧಮಾನ ಮುಖದ ಬೆವರು ಒರೆಸಿಕೊಂಡ. "ಡಾಕ್ಟರ್ ನಂಗೇನೂ ಮಾಡೋಕ್ಕೆ ತೋರ್ತಾ ಇಲ್ಲ. ನಿಮ್ಮಿಷ್ಟ ಬಂದಂತೆ ಮಾಡಿ." ಎದ್ದು ಹೊರಟೇಬಿಟ್ಟ.

ಮಾರನೆಯ ದಿನ ಡಾ॥ ವಿಠ್ಠಲ್, ಡಾ॥ ದಾಮೋದರ್ ಇಬ್ಬರೂ ನೂಪುರನ ತಪಾಸಣೆ ಮಾಡಿದರು. "ಷೀ ಈಸ್ ಪರ್‌ಫೆಕ್ಟ್‌ಲೀ ಆಲ್‌ರೈಟ್. ಬ್ರೈನ್‌ನಲ್ಲಿ ಯಾವ ದೋಷವೂ ಇಲ್ಲ!" ಎಂದುಬಿಟ್ಟರು. "ಅವಳಿಗೆ ಬೇಕಾಗಿರೋದು ಸೈಕಿಯಾಟ್ರಿಸ್ಟ್, ಸರ್ಜನ್ ಅಲ್ಲ!"

ಡಾ॥ ಚಿದಂಬರ್ ನಿರಾಳವಾಗಿ ಉಸಿರಾಡಿದರು. ಮೊದಲ ಪ್ರಿಲಿಮಿನರಿ ಟೆಸ್ಟಿಗಾಗಿ ನೂಪುರನನ್ನು ತಮ್ಮ ಕೊಠಡಿಗೆ ಕರೆತರಲು ನರ್ಸ್‌ಗೆ

ಹೇಳಿದರು. ನೂಪುರನಿಗೆ ನಿದ್ದೆಯ ಮಂಪರಿನ್ನೂ ಕಳೆದಿರಲಿಲ್ಲ. ಅವಳನ್ನು ಆರಾಮಾಸನದ ಮೇಲೆ ಸಿಸ್ಟರ್ ಮಲಗಿಸಿದರು.

ಡಾ॥ ಚಿದಂಬರ್‌ರವರ ಕೊಠಡಿಯಲ್ಲಿ ಮಸುಕಾದ ಕಣ್ತಂಪಾದ ನೀಲಿ ಬೆಳಕಿತ್ತು. ರೂಮಿನ ಟೆಂಪರೇಚರ್ ಸುಖೋಷ್ಣವಾಗಿತ್ತು. ಎಲ್ಲಿಂದಲೋ ಮಧುರವಾದ ಸಂಗೀತ ಕೇಳಿಬರುತ್ತಿತ್ತು. ಚಿದಂಬರ್ ನೂಪುರನ ಬಳಿಗೆ ಬಂದು ಕೈಯನ್ನು ತಮ್ಮ ಕೈಯಲ್ಲಿ ಹಿಡಿದರು.

"ನೂಪುರಾ, ಕಣ್ತೆರೆದು ನೋಡು. ಎಲ್ಲಾ ಎಷ್ಟು ಸುಂದರವಾಗಿದೆ. ನೂಪುರ ಕಣ್ತೆರೆದಳು. ಸುತ್ತಲೂ ನೋಡಿ ಮತ್ತೆ ಕಣ್ಮುಚ್ಚಿದಳು."

"ನೂಪುರ, ನೀನು ಹೆದರಿದ್ದೀ ಅಷ್ಟೆ. ನಿನಗೇನೂ ಆಗಿಲ್ಲ. ನಿನಗೆ ಏಕೆ ಹೆದರಿಕೆ ನನಗೆ ಹೇಳ್ತೀಯಾ ?"

ನೂಪುರ ತಲೆಯಾಡಿಸಿದಳು.

"ನಂಗೆ ಹೇಳೋಕ್ಕಾಗೋಲ್ಲ ! ನನಗೇನಾಗಿದೆಯೆಂದು ನನಗೇ ಗೊತ್ತಿಲ್ಲ !"

ಡಾ॥ ಚಿದಂಬರ್ ಕ್ಷಣಕಾಲ ಯೋಚಿಸಿದರು.

"ನೂಪುರಾ, ನಿನ್ನ ಬಾಲ್ಯ, ನಿನ್ನ ಸ್ನೇಹಿತರು, ನೀನು ಶಾಲೆಯಲ್ಲಿ ಕಲಿತಿದ್ದು, ನಿನ್ನ ತಂದೆ ತಾಯಿ ಎಲ್ಲರ ವಿಷಯ ನನಗೆ ಹೇಳುತ್ತೀಯಾ ?"

"ನನಗೆ ಅವರ್‍ಯಾರಲ್ಲೂ ಇಂಟರೆಸ್ಟ್ ಇಲ್ಲ !"

ಚಿದಂಬರ್ ಕೈಯ್ಯಲ್ಲಿದ್ದ ಎಲೆಕ್ಟ್ರಾನಿಕ್ ವಾಚು ತೆಗೆದು ನೂಪುರನ ಮುಖದ ಮುಂದೆ ಹಿಡಿದರು.

"ನೂಪುರ, ಕಣ್ತೆರೆ. ಇಲ್ಲಿ ನೋಡು ! ವಾಚನ್ನು ಅವಳ ಕಣ್ಮುಂದೆ ಆಡಿಸಿದರು."

"ನೂಪುರ, ಈಗ ನೀನು ಕಣ್ಣು ಮುಚ್ಚು. ನಿದ್ರೆ ಹೋಗಲೂ ಬಹುದು ನೀನು ನಾನು ಕೇಳಿದ್ದಕ್ಕೆಲ್ಲಾ ಉತ್ತರ ಹೇಳಬೇಕು ಆಯ್ತಾ ?"

ನೂಪುರ ವಾಚನ್ನೇ ದಿಟ್ಟಿಸುತ್ತಾ ಕಣ್ಣು ಮುಚ್ಚಿದಳು.

"ನೂಪುರಾ, ನಿನ್ನ ಬೆಸ್ಟ್ ಫ್ರೆಂಡ್ ಯಾರು ?"

"ಯಾರೂ ಇಲ್ಲ."

"ನೀನು ಮದುವೆಯ ಮುಂಚೆ ಹೇಗಿದ್ದೀ ? ಹರಟೆ, ಅಲಂಕಾರ ಎಲ್ಲಾ ತುಂಬಾ ಇಷ್ಟ ಇತ್ತಾ ?"

"ಹೌದು-ನಂಗೆ ತುಂಬಾ ಒಡವೆ ಹಾಕ್ಕೋಬೇಕು, ಭಾರೀ ಸೀರೆ ಉಡಬೇಕು, ದೊಡ್ಡ ಶ್ರೀಮಂತರ ಮನೆಯವಳಂತೆ ಇರಬೇಕು ಅನ್ನಿಸುತ್ತಿತ್ತು. ಅಪ್ಪ, ಅಮ್ಮ ನನಗೆ ಬೇಕಾದ್ದೇನೂ ತೆಗೆದುಕೊಡುತ್ತಿರಲಿಲ್ಲ. ಹಾಸಿಗೆ ಯಿದ್ದಷ್ಟು ಕಾಲು ಚಾಚಬೇಕು ಅನ್ನುತ್ತಿದ್ದರು."

"ಅಂದ್ರೆ ನಿನ್ನನ್ನು ವರ್ಧಮಾನನ ಮನೆಯವರು ಮದುವೆಯಾಗಲು ಬಂದಾಗ ಇಷ್ಟವಾಯಿತೇ ?"

"ಹೌದು-ಅವರು ತುಂಬಾ ಶ್ರೀಮಂತರು. ಅವರ ತಂದೆ ತಾಯಿಗೆ ಒಬ್ಬನೇ ಮಗ ಎಂದು ಗೊತ್ತಿತ್ತು !"

ಚಿದಂಬರ್ ನೂಪುರ ನಿಧಾನವಾಗಿ ಮನ ಬಿಚ್ಚುತ್ತಿರುವಳೆಂದು ಗ್ರಹಿಸಿದರು.

"ನಿನಗೆ ಮದುವೆಯಾಗಲು ಇಚ್ಛೆಯಿತ್ತೇ ?"

"ನನಗೆ ಅಂತಹ ಆಸೆಯೇನೂ ಇರಲಿಲ್ಲ. ಆದರೆ ಅಪ್ಪ, ಅಮ್ಮ ನನಗಾಗಿ ಸುಮಾರಾದ ಗಂಡನ್ನು ಹುಡುಕತೊಡಗಿದಾಗ ನಿರಾಶೆಯಾಗಿತ್ತು."

"ಯಾಕೆ ?"

"ನಾನೂ ಅವರಂತೆ ಬಡತನದಲ್ಲಿ ಬದುಕಬೇಕಾಗುವುದು ಎಂಬ ಭಯ ಇತ್ತು."

"ವರ್ಧಮಾನ ಮನೆಯವರೇ ನಿನ್ನ ಮದುವೆಯಾಗಲು ಮುಂದೆ ಬಂದರೇ ?"

"ಇಲ್ಲ. ಒಂದು ದಿನ ದೇವಸ್ಥಾನಕ್ಕೆ ಹೋದಾಗ ಅಮ್ಮನಿಗೆ ಯಾರೋ ಹೇಳಿದರು. ವರ್ಧಮಾನನ ತಾಯಿ ನೋಡಿದ್ದರಂತೆ, ಹುಡುಗಿ ಚೆನ್ನಾಗಿದ್ದಾಳೆ. ಅವಳು ಶ್ರೀಮಂತಳಲ್ಲದಿದ್ದರೆ ಬೇಡಾ-ನಮ್ಮಲ್ಲೇ ಇದೆ, ಎಂದರಂತೆ-! ಆದರೆ ನಮ್ಮ ತಾಯಿ ಮುಂದೆ ಒಪ್ಪಲಿಲ್ಲ."

"ಯಾಕೆ ಒಪ್ಪಲಿಲ್ಲ ?"

ನೂಪುರ ಮಾತಾಡಲಿಲ್ಲ. ಅವಳು ಮಲಗಿದ್ದಲ್ಲೇ ಬೆಚ್ಚಿದಳು. ಕೈ ಕಾಲು ಬಡಿದಳು. ತಲೆಗೂದಲನ್ನು ಮುಷ್ಟಿಯಲ್ಲಿ ಹಿಡಿದಳು. ಕಣ್ಣು ಗಳನ್ನು ತೆರೆದು ಗಿರಗಿರನೆ ತಿರುಗಿಸಿದಳು.

"ನೂಪುರಾ, ಇಲ್ಲಿ ನೋಡು....ನಿನಗೇನೂ ಆಗಿಲ್ಲ. ನೀನು ಹೆದರಿದ್ದೀ ಇಷ್ಟೆ ! ಕಣ್ತೆರೆ- ಇಲ್ಲಿ ನೋಡೂ. ಹಾಂ ಹಾಗೆ-ನಿನಗೇನೂ ಆಗಿಲ್ಲ !

ಇಗೋ ತೊಗೋ ನೀರು ಕುಡಿ. ಸುಧಾರಿಸಿಕೊ-" ನೂಪುರ ನಿಧಾನವಾಗಿ ಕಣ್ತೆರೆದಳು. ಅನಂತರ ನೀರು ಕುಡಿದಳು.

"ತುಂಬಾ ಸುಸ್ತಾಗುತ್ತಾ ಇದೆ" ನೂಪುರ ಮೆಲ್ಲನುಸುರಿದಳು.

"ಹೌದು, ಆಯಾಸವಾಗಿರಬೇಕು !" ಚಿದಂಬರ್ ದೊಡ್ಡ ದೀಪ ಹಾಕಿದರು. ಸಿಸ್ಟರನ್ನು ಕರೆದು ನೂಪುರನನ್ನು ವಾರ್ಡಿಗೆ ಕರೆದ್ಯೊಯಲು ಹೇಳಿದರು.

ಇತ್ತ ವರ್ಧಮಾನನಿಂದ ಸುದ್ದಿ ತಿಳಿದ ಲಲಿತಮ್ಮ ಬೆಚ್ಚಿದರು. ಶಾಸ್ತ್ರಿಗಳು ಲಲಿತಾ ಸಹಸ್ರನಾಮದ ಮಧ್ಯಾಹ್ನದ ಪೂಜೆ ಪ್ರಾರಂಭಿಸಿದ್ದರು. ಅವರಲ್ಲಿಗೆ ಬಂದರು. ಪೂಜೆ ಮಾಡುವಾಗ ಮಧ್ಯೆ ಪೂಜೆ ಕೆಡಿಸುವಂತಿಲ್ಲ. ಅಲ್ಲೇ ಪೂಜಾ ಗೃಹದ ಬಾಗಿಲಲ್ಲೇ ನಿಂತರು. ಶಾಸ್ತ್ರಿಗಳಿಗೆ ಅವರು ಬಂದು ನಿಂತಿರುವುದು ತಿಳಿದರೂ ಪೂಜೆ ಮುಗಿಯುವವರೆಗೆ ಅತ್ತ ನೋಡಲಿಲ್ಲ. ಸಹಸ್ರನಾಮ ಪಠನ ಮುಗಿಸಿ ದೇವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ತೀರ್ಥವನ್ನು ಕಣ್ಣಿಗೊತ್ತಿಕೊಂಡು ಕುಡಿದು ಅನಂತರ ಹೇಳಿದರು.

"ಯಾಕೆ ಲಲಿತಮ್ಮ ಏನಾಯಿತು ?"

"ಶಾಸ್ತ್ರಿಗಳೇ ಆಗಬಾರದ್ದೇ ಆಗಿದೆ. ನೂಪುರ ಬಸುರಿಯಂತೆ. ಮೂರು ತಿಂಗಳಾಗಿದೆಯಂತೆ. ಡಾಕ್ಟರ್ ಪರೀಕ್ಷೆ ಮಾಡಿ ಹೇಳಿದರಂತೆ. ಈಗೇನು ಮಾಡೋದು ? ದೆವ್ವ ಮೈಮೇಲೆ ಬರ್ತಾ ಇದ್ದಿದ್ದರಿಂದ ಮಗು ಏನಾಗಿರುತ್ತೋ ಹುಟ್ತಾನೇ ಸತ್ತುಹೋದ್ರೆ ಸರಿ-ಅಥವಾ ಹುಟ್ಟೋಕ್ಕೆ ಮುಂಚೇನೇ ಅದಕ್ಕೆ ಏನಾದ್ರೂ ಆಗಿ ಹೊರಗೆ ಬಂದು ಪ್ರಾಣಬಿಟ್ರೆ ಸರಿ, ಇಲ್ಲದಿದ್ರೆ ಏನು ಗತಿ ಶಾಸ್ತ್ರಿಗಳೇ ?"

ಶಾಸ್ತ್ರಿಗಳು ಸಮಾಧಾನಚಿತ್ತರಾಗಿ ನುಡಿದರು.

"ಎಲ್ಲಾ ಅಮ್ಮನವರ ಇಚ್ಛೆ. ದೇವರ ಮೇಲೆ ಭಾರ ಹಾಕಿ, ಮಗು ಅವಳ ಕೊಡುಗೆ, ಅವಳ ಸೃಷ್ಟಿ. ಅವಳು ಜಗನ್ಮಾತೆ, ಅವಳೆಂದೂ ದುಷ್ಟ ಶಕ್ತಿಗಳು ಮಗುವಿನ ಸೃಷ್ಟಿಗೆ ಅಡ್ಡಿಯಾಗುವಂತೆ ಮಾಡುವುದಿಲ್ಲ. ಧೈರ್ಯವಾಗಿರಿ!" ಲಲಿತಮ್ಮ ಅಳಲು ಪ್ರಾರಂಭಿಸಿದರು. "ಒಂದು ವೇಳೆ ಮಗು ವಿಕಾರವಾಗಿ ಹುಟ್ಟಿದರೆ !"

"ಅಯ್ಯೋ ಲಲಿತಮ್ಮ ! ದೇವರ ಸೃಷ್ಟಿ ವಿಕಾರವಾಗುವುದಾದರೂ ಹೇಗೆ ! ದೇವರ ಸೃಷ್ಟಿಯಲ್ಲಿ ವಿಕಾರವಿರುವುದೇ ಇಲ್ಲ. ಅವನ ಸೃಷ್ಟಿಯಲ್ಲಿ ಎಲ್ಲವೂ ಸುಂದರ !"

ಲಲಿತಮ್ಮ ತಮ್ಮ ಅಳಲನ್ನು ತೋಡಿಕೊಳ್ಳಲು ತಂದೆಯಾದರೂ ಸರಿಯಾಗಿದ್ದಿದ್ದರೆ ಚೆನ್ನಾಗಿರುತ್ತಿತ್ತು ಎನ್ನಿಸಿತು. ತಂದೆಯ ಬಳಿಗೆ ಹೋಗಿ ಖಾಲಿ ಕಾಗದದ ಮೇಲೆ ಬರೆದು ತೋರಿಸಿದರು. "ನೂಪುರ ಬಸರಿಯಂತೆ" ರಾಮಲಿಂಗಯ್ಯ ಅದನ್ನೋದಿ ಏನೋ ಹೇಳಲು ಯತ್ನಿಸಿ ವಿಫಲರಾಗಿ ಗಂಟಲಲ್ಲೇ 'ಗರಗರ' ಸದ್ದು ಮಾಡಿದರು. ಅವಳ ಕಣ್ಣುಗಳಲ್ಲಿ ನೀರುಕ್ಕಿತು.

"ತೆಗೆಸಿಬಿಡೋಣವೇ ?" ಲಲಿತಮ್ಮ ಬರೆದು ಕೇಳಿದರು. 'ಬೇಡ' ವೆನ್ನುವಂತೆ ತಲೆಯಾಡಿಸಿದರು.

ಲಲಿತಮ್ಮನಿಗೆ ಅವರೇನು ಹೇಳಬೇಕೆಂದಿರುವರೋ ತಿಳಿಯುದಾಯಿತು.

ಮೊದಲನೆಯ ದಿನದ ಚಿಕಿತ್ಸೆಯ ನಂತರ ನೂಪುರ ಹಾಯಾಗಿ ನಿದ್ರಿಸಿದಳು. ಉನ್ಮಾದ ಬರಲಿಲ್ಲ. "ಷೀ ಈಸ್ ಆಲ್‌ರೈಟ್. ನಂಗೆ ಅನ್ನಿಸುತ್ತೆ. ಮದುವೆಗೆ ಮುಂಚೆ ಯಾವುದೋ ಘಟನೆ ನಡೆದು ಅವಳ ಮನಸ್ಸು ವ್ಯಗ್ರವಾಗಿದೆ, ಮೆಂಟಲಿ ತುಂಬಾ ಡಿಸ್ಟರ್ಬ್ ಆಗಿದ್ದಾಳೆ. ಅವರ ಆ ಮೇಲಿನ ಪ್ರತಿಕ್ರಿಯೆಯೇ ಈ ಉನ್ಮಾದ, ಎಲ್ಲಾ ಅನ್ನಿಸುತ್ತೆ. ನಾಳೆ ಮತ್ತೆ ಸೈಕೋ ಅನಾಲಿಸಿಸ್ ಪ್ರಾರಂಭಿಸುತ್ತೇನೆ" ವರ್ಧಮಾನನಿಗೆ ತಿಳಿಸಿದರು.

* * * *

ಎರಡನೆಯ ದಿನ ಚಿದಂಬರಂರವರು ನೂಪುರ ಸಮ್ಮೋಹನಾ ಸ್ಥಿತಿಯಲ್ಲಿರುವಾಗ ಪ್ರಶ್ನಿಸಿದರು. ನಿನ್ನ ಮದುವೆಗೆ ಮುಂಚೆ ಯಾವುದಾದರೂ ಅಹಿತಕರವಾದ ಘಟನೆ ನಡೆಯಿತೇ ?

"ಅಂತಹುದೇನೂ ನಡೆಯಲಿಲ್ಲ."

"ಮದುವೆಗೆ ವಿರುದ್ಧವಾಗಿ ಏನಾದರೂ ನಡೆಯಿತೆ ?"

"ಹೌದು ಪಕ್ಕದ ಮನೆ ರೇಣುಕಮ್ಮ, ಅಮ್ಮನ ಬಳಿ ಬಂದು ಹೇಳಿದರು. ನಿಮ್ಗೆ ಗೊತ್ತಿಲ್ವಾ ಕಾವೇರಮ್ಮ ? ಆ ಮನೆಯವ್ರು ಭಾರಿ ಶ್ರೀಮಂತರಿರಬಹುದು. ಅವರೇ ಬಂದು ಮಗಳ್ನ ಕೇಳಿ ಮದ್ವೆ ಮಾಡ್ಕೋತಾ ಇರೋದು ನೋಡಿದ್ರೆ ಏನೋ ಗುಟ್ಟಿರಬಹುದು ಅಂದರು."

"ನೀನು ಆಗ ಅಲ್ಲೆ ಇದ್ಯಾ ?"

"ಇಲ್ಲ ನಾನು ಪಕ್ಕದ ರೂಮಿನಲ್ಲಿ ಕಥೆ ಓದುತ್ತಿದ್ದರೂ ಅವರ ಮಾತು ಕೇಳುತ್ತಿದ್ದೆ."

"ಅವರೇನೇನು ಹೇಳಿದರು ಜ್ಞಾಪಕ ಇದೆಯೆ ?"

"ಚೆನ್ನಾಗಿ ಜ್ಞಾಪಕ ಇದೆ. ಅವರು ನನ್ನ ಮದುವೆ ನಿಲ್ಲಿಸಲು ಯತ್ನಿಸಿದರು. ಅವರ ಸ..ತ್ತಿನ ಹುರಿದು ಮುಕ್ಕಿ, ಅತ್ತೆ ಅವಳ ತಾಯಿ ಇಬ್ರು ಸೇರಿ ಮಾಟ ಮಾಡ್ಸಿ ತುಂಬಿದ ಬಸುರೀನ ಕೊಲ್ಲಿಸಿದ್ರಂತೆ. ಯಾರ್ಗೂ ತಿಳಿದೇ ಇರ್ಲಿಲ್ಲಂತ ಹಿತ್ತಲಲ್ಲಿ ಹೂತುಬಿಟ್ರಂತೆ. ಎರಡು ದಿನ ಬಿಟ್ಟು ನೋಡಿದ್ರೆ ಹೂತಿದ್ದ ಹೆಣನೇ ಇರಲಿಲ್ಲವಂತೆ. ಅವಳೇ ಪಿಶಾಚಿಯಾಗಿ ಆ ಮನೇಲಿ ಸೇಡು ತೀರಿಸ್ಕೊಳ್ಳೋಕೆ ಕಾಯ್ತಾ ಇದ್ದಾಳಂತೇರಿ ! ಅವಳ ಅತ್ತೆ ಗಂಡ, ಆ ಮುದುಕಿ ಎಲ್ರೂ ದುರ್ಮರಣದಿಂದಲೇ ಸತ್ತಿದ್ದು. ಲಲಿತಮ್ಮನ ಪುಣ್ಯ ಅವರ್ನ ಏನೂ ಮಾಡಿಲ್ಲ. ಆದ್ರೆ ಆ ಮನೆಗೆ ಹೋಗೋ ಸೊಸೇನ ಖಂಡಿತ ಬಿಡೋದಿಲ್ರಿ. ನೋಡ್ತಾ ಇರೀ ಸಂಕಟಪಟ್ಟು ನರಳಿ ನರಳಿ ದುರ್ಮರಣ ಬರೋರ್ಗೆ ಅಂತ್ಯಕ್ರಿಯೆ ಸರಿಯಾಗಿ ಮಾಡಿ ಸುಡ್ದೇ ಬಿಟ್ರೋರೆ ಪಿಶಾಚಿಗಳಾಗಿ ಹೋಗೋದೂರಿ ! ನಾಳೆ ನಿಮ್ಮ ಮಗ್ಳು ಸುಖವಾಗಿರ್ಬೇಕೊಂದ್ರೆ ಈ ಮದುವೆಗೆ ಒಪ್ಪಬೇಡಿ. ನೂಪುರನಿಗೇನು ಯಾರಾದ್ರೂ ಕಣ್ಣೊತ್ತಿಕೊಂಡು ಮದುವೆಯಾಗ್ತಾರೆ ಅಂದರು. ನಮ್ಮ ತಾಯಿ ಬಹಳ ಹೆದರಿಬಿಟ್ಟರು. ತಂದೆಗೆ ಕೂಡಲೇ ಹೋಗಿ ಮದುವೆ ನಿಲ್ಲಿಸಿಬಿಡಬೇಕೆಂದೂ ಆ ಸಂಬಂಧ ನಮಗಿಷ್ಟವಿಲ್ಲವೆಂದೂ ಹೇಳಿದರು. ಆದರೆ, ತಂದೆ ಒಪ್ಪಲಿಲ್ಲ. ಅದೃಷ್ಟ ಬಾಗಿಲಿಗೆ ಬಂದಾಗ ಒದ್ದುಬಿಡ್ತಿಯಲ್ಲಾ ! ಆ ಪಿಶಾಚಿ ಅದೆಲ್ಲಾ ಇದ್ದಿದ್ರೆ ಇಷ್ಟೊತ್ತಿಗೆ ಏನೇನೊ ಆಗೋದು ! ಆ ಹುಡುಗನ್ನ ನೋಡದೊರೆ ಮಗ ಇದ್ದ ಹಾಗಿದ್ದಾನೆ. ಲಲಿತಮ್ಮ ರಾಮಲಿಂಗಯ್ಯ ಎಲ್ಲಾ ದೇವರಂತ ಮನುಷ್ಯರು. ಬೇರೆಯವರಿಗೆ ಹೊಟ್ಟೆಕಿಚ್ಚು. ಇಲ್ಲ ಸಲ್ಲದ್ದೆಲ್ಲಾ ಹೇಳ್ತಾರೆ ಅಂದುಬಿಟ್ಟರು."

"ನಿನಗೆ ಆ ವಿಷಯ ಕೇಳಿ ಹೆದರಿಕೆ ಆಗಲಿಲ್ಲವೆ ?"

"ತುಂಬ ಹೆದರಿಬಿಟ್ಟಿದ್ದೆ. ನಾನು ಅಜ್ಜಿಯ ಹಳ್ಳಿಗೆ ಹೋದಾಗ ಅಲ್ಲಿ ಒಬ್ಬಳ ಮೇಲೆ ದೆವ್ವ ಹಿಡಿದದ್ದು ನೋಡಿದ್ದೆ. ಹಾಗೆ ನನ್ನ ಮೇಲೂ ಬಂದು ಬಿಟ್ಟರೆ ಎಂಬ ಭಯದಿಂದ ತತ್ತರಿಸಿದೆ. ಆದರೆ ಶ್ರೀಮಂತ ಜೀವನ ಕೈಬಿಡಲು ನನಗಿಷ್ಟವಿಲ್ಲ. ಹುಡುಗನ ರೂಪ, ಗುಣ ನೋಡಿ ಮೆಚ್ಚಿದ್ದೆ. ಮದುವೆಯಾದರೆ ಅವರನ್ನೇ ಆಗುವುದೆಂದುಕೊಂಡಿದ್ದೆ. ಆಮೇಲೆ ಜ್ವರ ಕಾಣಿಸಿತು. ಕಾರಣವೇ ಇಲ್ಲದೇ ಬಂದ ಜ್ವರನೋಡಿ ನಮ್ತಾಯಿ ಹೆದರಿದರು. ಯಾವ ಔಷಧಿಗೂ ಬಗ್ಗಲಿಲ್ಲ. ನಮ್ತಾಯಿ ಯಾರ್ನೋ ಕರೆಸಿ ಪೂಜೆ ಮಾಡಿಸಿ, ಭಸ್ಮ ಇಸ್ಕೊಂಡು

ದಿನಾ ಹಚ್ಕೊಳ್ಳಕ್ಕೆ ಶುರು ಮಾಡಿದ್ಮೇಲೆ ವಾಸಿ ಆಯ್ತು! ಹುಡುಗಿ ಏನನ್ನೋ ಕಂಡು ಹೆದರಿದ್ದಾಳೆ ಅಂತ ಆ ಪೂಜೆ ಮಾಡಿದವನು ಹೇಳಿದ."

"ಇದೆಲ್ಲಾ ಆದುದು ಯಾವಾಗ ?"

"ಮದುವೆಗೆ ಒಂದು ತಿಂಗಳ ಮುಂಚೆ"

"ಏನಾದರೂ ಭಯಂಕರವಾದದ್ದನ್ನು ನೋಡಿದ್ದೇಯಾ ?"

"ಹೌದು ಬಸ್ಸಿನಲ್ಲಿ ಬರುವಾಗ ಮುತ್ತೈದೆ ಹೆಣವೊಂದನ್ನು ಬಸ್ಸಿನ ಪಕ್ಕದಲ್ಲಿ ಕೊಂಡೊಯ್ದಾಗ ಕಿಟಕಿಯಿಂದ ನೋಡಿದೆ. ಮುಖದ ತುಂಬಾ ಅರಿಸಿನ, ಹಣೆಯಲ್ಲಿ ದೊಡ್ಡ ಕುಂಕುಮ ಹೂವಿನಿಂದ ಅಲಂಕರಿಸಲ್ಪಟ್ಟಿದ್ದ ಆ ಹೆಣ ನೋಡಿ ಹೆದರಿದ್ದೆ. ಹೆಣದ ಬಾಯಿತುಂಬಾ ಅಕ್ಕಿ ತುಂಬಿದ್ದರು. ಕಣ್ಣುಗಳು ಅರೆ ಮುಚ್ಚಿದ್ದವು. ಆಗ ನನಗೆ ನಮ್ಮತ್ತೆಯ ಸವತಿ ಹೀಗಿದ್ದಿರ ಬಹುದೇ ಎಂಬ ಅನುಮಾನ ಬಂದು ಸಣ್ಣಗೆ ನಡುಗಿದೆ. ಆ ದಿನ ರಾತ್ರಿಯೇ ಚಳಿ ಬಂದಂತಾಗಿ ಆಮೇಲೆ ಜ್ವರ ಬಂದದ್ದು !

ಡಾ|| ಚಿದಂಬರ್ ನಿಟ್ಟುಸಿರಿಟ್ಟರು. "ಸರಿ ನೀನು ಯಾವಾಗಲಾದರೂ ದೆವ್ವ ಮೈ ಮೇಲೆ ಬರೋದನ್ನ ನೋಡಿದ್ಯಾ ? !!"

"ಹೂಂ ಅಜ್ಜಿ ಹಳ್ಳಿಗೆ ಹೋದಾಗ ಅಲ್ಲಿ ಅಕ್ಕಮ್ಮಂತಾ ಒಬ್ಬಳಿದ್ದಳು. ಅವಳಿಗೆ ಮೈ ಮೇಲೆ ದೆವ್ವ ಬರುತ್ತಿತ್ತು. ನಾನೇ ನೋಡಿದ್ದೇನೆ"

"ಹೇಗೆ ಬರುತ್ತಿತ್ತು ?"

"ಮೊದಲು ಅವಳ ಮುಖ ಗಂಭೀರವಾಗುತ್ತಿತ್ತು. ಆಮೇಲೆ ಸಣ್ಣಗೆ ನಡುಕ ಬರುತ್ತಿತ್ತು. ಆಮೇಲೆ ವಿಕಾರವಾಗಿ ಕಿರಿಚೋಳು. ಕೈಗೆ ಸಿಕ್ಕಿದ್ದೆಲ್ಲಾ ತಿನ್ನುತ್ತಿದ್ದಳು, ಇದ್ದಿಲು ತಿನ್ನೋಳು, ಕಾಗದ ಹರಿದು ತಿನ್ನೋಳು, ಅವಳ ದನಿಯೇ ಬದಲಾಯಿಸಿಬಿಡುತ್ತಿತ್ತು. ನನಗೆ ರಕ್ತ ಬೇಕು, ಹಸಿ ಮಾಂಸ ಬೇಕು ಅಂತೆಲ್ಲಾ ಕೂಗಾಡ್ತಾ ಇದ್ದಳು. ತಲೆ ಕೆದರಿಹೋಗುತ್ತಿತ್ತು ಒಂದೊಂದು ಸಲ ಬಂದಾಗ ಒಂದೊಂದು ತರ ನಡ್ಕೊಳ್ಳೋಳು"

"ಆಮೇಲೆ ಹೇಗೆ ಸರಿಹೋಗುವವಳು ?"

"ಮಂತ್ರವಾದಿ ಬರ್ತಾ ಇದ್ದ ನಿಂಬೆಹಣ್ಣು ಮಂತ್ರಿಸಿ ಹಿಂಡೋನು, ಬೇವಿನ ಸೊಪ್ಪಿನಿಂದ ಹೊಡೆಯೋನು ! ಹೋಗ್ತಿಯೋ ಇಲ್ವೋ ಅಂತ ಬರೆಹಾಕೋನು, ಅವಳು ಕೆಟ್ಟದಾಗಿ ಕಿರುಚಿ, ಒದ್ದಾಡಿ, ವಾಂತಿ ಮಾಡಿಕೊಳ್ಳುತ್ತಾ ಇದ್ದಳು. ಹೋಗ್ತೀನಿ, ಹೋಗ್ತೀನಿ ಅಂತ ಕಿರುಚೋಳು. ಆಮೇಲೆ ಜ್ಞಾನತಪ್ಪಿ ಬೀಳೋಳು. ಆದಾದ ಮೇಲೆ ಸರಿಹೋಗೋಳು"

"ಅದು ನೋಡಿದ ನಿನಗೆ ನನಗೂ ಹೀಗಾಗಬಹುದೂಂತ ಹೆದರಿಕೆಯಾಗಿತ್ತಾ ?"

"ಆಗ ಆಗಲಿಲ್ಲ. ಆದರೆ ರೇಣುಕಮ್ಮನ ಮಾತು ಕೇಳಿದ ಮೇಲೆ ನನಗೆ ಹೆದರಿಕೆಯಾಗಿತ್ತು. ಮಧ್ಯರಾತ್ರಿ ಒಂದು ಹೊತಿನಲ್ಲಿ ನನಗೆ ನಡುಕ ಬಂದಿತ್ತು. ಆಗಲೇ ಪಿಶಾಚಿ ನನ್ನ ಹಿಡ್ಕೊಂಬಿಡ್ತು ಅಂತ ಭಯವಾಗಿತ್ತು."

"ನಿನ್ನ ತಾಯಿಗೆ ಇದೆಲ್ಲಾ ಹೇಳಿದೆಯಾ ?"

"ಇಲ್ಲ"

"ಯಾಕೆ ಹೇಳಲಿಲ್ಲ."

"ಮದುವೆ ನಿಲ್ಲಿಸಿಬಿಡ್ತಾರೆಂಬ ಭಯ ಇತ್ತು."

"ನಿನಗೆ ದೆವ್ವ, ಭೂತಗಳಲ್ಲಿ ನಂಬಿಕೆ ಇದೆಯಾ ?"

"ಒಂದೊಂದು ಸಲ ನಂಬಿಕೆ ಬರೋದು. ದೆವ್ವ ಮೈಮೇಲೆ ಬಂದಿದ್ದು ನೋಡಿದಾಗ ನಂಬಿದೆ. ಆದರೆ ಆಳವಾಗಿ ಯೋಚಿಸಿದಾಗ ಇದೆಲ್ಲಾ ಇರಲಾರದು ಅನ್ನಿಸುತ್ತಿತ್ತು"

"ನೀನು ಮದುವೆಯಾಗಿ ಅತ್ತೆಯ ಮನೆಗೆ ಬಂದಾಗ ಏನು ನಡೆಯಿತು. ಹೇಳುತ್ತೀಯಾ ?" ನೂಪುರ ಬಹಳಷ್ಟು ಸುಮ್ಮನಿದ್ದಳು.

"ಯಾಕೆ ಹೇಳೋಕೆ ಇಷ್ಟವಿಲ್ಲವೆ ?"

"ನನಗೆ ಹೆದರಿಕೆಯಾಗುತ್ತೆ."

"ಯಾಕೆ ಹೆದರಿಕೆ. ಆಗ ಏನು ನೋಡಿದೆ ?"

"ನಾನು ಕಾರಿನಿಂದ ಇಳಿಯುತ್ತಲೇ ಮಾವಿನ ಮರದ ತುದಿ ಕೊಂಬೆಯಿಂದ ಬೊಂಬೆಯೊಂದನ್ನು ದಾರದಲ್ಲಿ ಕತ್ತಿಗೆ ನೇಣುಹಾಕಿದ್ದಿದು ಕಂಡಿತು ...!" ಅವಳು ನಡುಗಲಾರಂಭಿಸಿದಳು. ಡಾ॥ ಚಿದಂಬರ್ ಕೂಡಲೆ ಅವಳ ತಲೆ ಸವರಿದಳು.

"ನೂಪುರ ಏಳಮ್ಮಾ ಇವತ್ತಿಗೆ ಸಾಕು." ನೂಪುರಳನ್ನು ವಾರ್ಡಿಗೆ ಸೇರಿಸಿದ ನಂತರ ಡಾ॥ಚಿದಂಬರ್ ಯೋಚನೆಯಲ್ಲಿ ಮುಳುಗಿದರು. ವರ್ಧಮಾನನಿಗೆ ಕರೆಕಳ-ಹಿಸಿದರು.

ಅವನು ಬರುತ್ತಲೇ ಅವನೊಂದಿಗೆ ದೀರ್ಘವಾಗಿ ಆಲೋಚಿಸಿದರು.

"ಐಥಿಂಕ್ ಷಿ ನೀಡ್ಸ್ ಸೈಕೋಥೆರಫಿ ಹಿಪ್ನಾಟಿಕ್ ಸಜೆಸನ್ಸ್ ಕೊಟ್ಟು ಅವಳ ತಲೆ ತುಂಬ ತುಂಬಿರುವ ಕೆಟ್ಟ ನೋಷನ್ಸ್ ಎಲ್ಲಾ ಅಳಿಸಿ ಹಾಕಬೇಕು.

ಅದೆಲ್ಲಾ ಬರಿಯ ಅವಳ ಮನೋವಿಕಾರತೆಯಷ್ಟೆ ಸುಪ್ತವಾಗಿರುವ ಮನಸ್ಸಿನ ವ್ಯಾಪಾರವೆಂದು ತಿಳಿದಿದ್ದೇನೆ. ಟ್ರೀಟ್‌ಮೆಂಟ್ ಪ್ರಾರಂಭಿಸಬೇಕು.

* * * *

"ನೂಪುರ ನೀನು ಆ ದಿವಾನ್ ಮೇಲೆ ಹಾಯಾಗಿ ಮಲಗು. ಈ ಪ್ರಖರವಾದ ದೀಪಗಳು ಬೇಡಾ, ಮಲಗು ನಿಧಾನವಾಗಿ ಉಸಿರಾಡು ವಿಶ್ರಮಿಸು." ಚಿದಂಬರ್ ಹೇಳಿದಳು. ನೂಪುರ ದಿವಾನ್ ಮೇಲೆ ಮಲಗಿದಳು. ಅವಳು ವಿಶ್ರಾಂತಳಾದ ಮೇಲೆ ಅವರು ಅವಳು ತಲೆಯ ಬಳಿ ನಿಂತು ತಲೆಗೂದಲನ್ನು ನಯವಾಗಿ ಸವರಿದಳು.

"ನೂಪುರಾ, ನೀನು ತುಂಬಾ ಭಾವುಕಳು. ನಿನ್ನ ಕಲ್ಪನೆಗಳು ಅನೇಕ. ಅಲ್ಲವೇ ? ನಿನ್ನ ಮುಂದೆ ನಾನು ಕೀ ಚೈನ್ ಹಿಡಿಯುತ್ತೇನೆ. ಅದರಲ್ಲಿ ಆರು ಸೆಕೆಂಡುಗಳನ್ನು ಎಣಿಸು. ನೂಪುರ ಸೆಕೆಂಡಿನ ಮುಳ್ಳನ್ನು ಎಣಿಸ ತೊಡಗಿದಳು. "ಒಂದು, ಎರಡು, ಮೂರು, ನಾಲ್ಕು, ಐದು, ಆರು...." ಅವಳ ಕಣ್ಣುಗಳು ಮುಚ್ಚಿಕೊಂಡವು.

"ನೂಪುರಾ ನೌ ಯು ಆರ್ ವಿತ್ ಮಿ, ನೀನು ನನ್ನ ಬಳಿ ಇದ್ದೀಯ. ನಾನು ಹೇಳಿದಂತೆ ಕೇಳಬೇಕು !"

"ಆಗಲಿ"

"ನೂಪುರ ನೀನು ಭ್ರಮಾಧೀನೆ ನೀನು ಹಳ್ಳಿಯಲ್ಲಿ ನೋಡಿದ ದೆವ್ವ ಬಂದವಳೂ ಭ್ರಮಾಧೀನೆ, ಇದಕ್ಕೆ ಕಾರಣ ಸೂಕ್ತ ಮನಸ್ಸಿನಲ್ಲಿರುವ ಭಯ ! ಭಯದಿಂದ ಮನಸ್ಸು ವಿಕಾರವಾಗುತ್ತದೆ. ಅದರಿಂದ ದೆವ್ವ ನಿನ್ನನ್ನು ಹಿಡಿದಿದೆಯೆಂಬ ಭಾವನೆ ಬರುತ್ತದೆ. ನಿನ್ನ ವಿಕಾರ ಮನಸ್ಸು ನಿನ್ನನ್ನು ಹಾಗೆ ಮಾಡುತ್ತದೆ. ಯಾರ ದೆವ್ವವೂ ಯಾರ ಮೇಲೂ ಬರುವುದಿಲ್ಲ. ಜೀವವಿರುವವರೆಗೆ ಮಾತ್ರ ಮನಸ್ಸಿನ ವೈಪರೀತ್ಯಗಳಂತೆ ದೇಹ ನಡೆದು ಕೊಳ್ಳುವುದು. ಸತ್ತವರಿಗೆ ಮನಸ್ಸು ಸತ್ತುಹೋಗಿರುತ್ತದೆ. ಹೃದಯದ ಬಡಿತ ನಿಂತ ನಾಲ್ಕು ನಿಮಿಷಗಳವರೆಗೆ ಮೆದುಳು ಬದುಕಿರಬಹುದಷ್ಟೆ. ರಕ್ತ ಚಲನೆ ನಿಂತುಹೋದರೆ ಮೆದುಳಿನ ಜೀವಾಣುಗಳು ಸಾಯುತ್ತದೆ. ಗಂಗೆಯೂ ಅಷ್ಟೆ. ಅವಳನ್ನು ಅಮಾನುಷ ರೀತಿಯಲ್ಲಿ ಕೊಲೆ ಮಾಡಿರ ಬಹುದು. ಆದರೆ ಅವಳು ಸತ್ತಮೇಲೆ ಪ್ರೇತಾತ್ಮವಾಗಿ ಬರಲು ಸಾಧ್ಯವಿಲ್ಲ. ಸತ್ತವರೆಂದೂ ಎದ್ದು ಮರಳಿ ಬರುವುದಿಲ್ಲ. ಎಲ್ಲಾ ನಿನ್ನ ಕಲ್ಪನೆಗಳು.

ನಿನ್ನ ಭ್ರಮೆಗಳು ನಿನಗೇನೂ ಆಗಿಲ್ಲ. ನೀನು ಎಲ್ಲರಂತೆಯೇ ಇದ್ದೀಯಾ ನಿನ್ನ ಮನಸ್ಸಿನಲ್ಲಿ ಇರುವ ಭಾವನೆಗಳನ್ನು ಹೊರಗೆ ಹಾಕು. ನಿನಗೇನೂ ಆಗಿಲ್ಲ. ಯಾವ ದೆವ್ವವೂ ಹಿಡಿದಿಲ್ಲ. ಎಲ್ಲರಂತೆಯೇ ನೀನೂ ಸಹ ಇರುವುದು ತಿಳಿಯಿತೇ ? ನೀನು ಭಯವನ್ನು ಮನಸ್ಸಿನಿಂದ ಕಿತ್ತೊಗೆ. ನಿನಗೆ ಯಾವುದೇ ಆಗಲೀ ಯಾರೇ ಆಗಲಿ ಕೆಡಕು ಮಾಡುವುದಿಲ್ಲ. ಮನಸ್ಸಿನ ಭಯ ಹೊಡೆದೋಡಿಸು. ಭಯವನ್ನು ಬಿಡು. ಬಿಡು..!"

ಡಾ|| ಚಿದಂಬರ್ ಅವಳಿಗೆ ಒತ್ತಿ ಒತ್ತಿ ಹೇಳಿದರು. ಅರ್ಧ ಗಂಟೆಯ ಕಾಲ ಅವಳ ಭಯಕ್ಕೆ ಕಾರಣಗಳನ್ನು ತಿಳಿಸಿ ಅವೆಲ್ಲ ಅವಳ ಮನಸ್ಸಿನಲ್ಲಿ ಸುಪ್ತವಾಗಿದ್ದು ಕೆಲವು ಸಮಯದಲ್ಲಿ ಆ ವಿರಳ ಭಾವನೆಗಳೇ ಆವೇಶವಾಗಿ ಬಂದು ಅವಳನ್ನು ದೆವ್ವ ಹಿಡಿದಂತೆ ನಟಿಸುವಂತೆ ಮಾಡುವುದು ಎಂದರು. ನೀನು ಎಲ್ಲರಂತೆ ಇರಬೇಕು ! ನಿನಗೇನೂ ಆಗಿಲ್ಲ!" ಒತ್ತಿ ಹೇಳಿದರು. ನಿಧಾನವಾಗಿ ಅವಳ ತಲೆಗೂದಲು ಸವರಿದರು. ಅವಳ ಕೈ ಹಿಡಿದು ಮೆಲ್ಲನೆ ದೃಢವಾಗಿ ಹೇಳಿದರು. ನೂಪುರ ಕಣ್ತೆರೆ, ನಿದ್ರೆ ಸಾಕು.... ಹಾಂ ಹಾಗೇ. ನಿಧಾನವಾಗಿ ಉಸಿರಾಡು....ಹಾಂ ಹಾಗೇ .. ಮೆಲ್ಲನೆ ಎದ್ದು ಕುಳಿತುಕೋ. ಹಾಂ ಹಾಗೆ....! ಕುಡಿಯಲು ನೀರು ಬೇಕೆ ?"

"ಬೇಕು !" ನೂಪುರ ಕೇಳಿದಳು. ಕುಡಿಯಲು ಅವರಿಗೆ ನೀರಿತ್ತರು. ಅವಳು ಕುಡಿದ ನಂತರ ಅವಳನ್ನು ಕೊಂಚ ವಿಶ್ರಮಿಸಿಕೊಳ್ಳಲು "ಹೇಳಿ ಅನಂತರ ಅವಳನ್ನು ನರ್ಸ್‌ನೊಂದಿಗೆ ವಾರ್ಡಿಗೆ ಕಳುಹಿಸಿಕೊಟ್ಟರು. ಅವರಿಗಾಗಿ ವರ್ಧಮಾನ ಹೊರಗೆ ಕಾಯುತ್ತಿದ್ದ. ಅವರು ಹೊರಗೆ ಬರುತ್ತಲೇ ಎದ್ದುನಿಂತ.

* * * *

"ನನ್ನ ರೂಮಿಗೇ ಬನ್ನಿ ವರ್ಧಮಾನ್ . ನಿಮ್ಮ ಹೆಂಡತಿಗೆ ಖಂಡಿತ ಗುಣವಾಗುತ್ತದೆ. ಇನ್ನೂ ಒಂದು ವಾರ ಟ್ರೀಟ್‌ಮೆಂಟ್ ಕೊಡುತ್ತೇನೆ. ಆಮೇಲೆ ನರ್ಸಿಂಗ್ ಹೋಂನಲ್ಲೇ ನ್ನು ವಿಶ್ರಾಂತಿ ತೆಗೆದುಕೊಳ್ಳಲಿ. ಅಷ್ಟು ಹೊತ್ತಿಗೆ ದೇಹಸ್ಥಿತಿ ಉತ್ತಮ ಪಡಿಸಲು ಟಾನಿಕ್ಕು, ಇಂಜೆಕ್ಷನ್‌ಗಳನ್ನು ಕೊಡುತ್ತೇನೆ. ನರಗಳ ದೌರ್ಬಲ್ಯಕ್ಕಾಗಿ ಇಂಜೆಕ್ಷನ್‌ಗಳನ್ನು ಕೊಡುತ್ತೇನೆ. ಮನಸ್ಸಿನಲ್ಲಿ ಭಯ ಅಗಾಧವಾಗಿ ಹರಡಿಕೊಂಡು ಅವರ ನರಗಳನ್ನು ದೇಹವನ್ನು

ಜಾಗೃತ ಮನಸನ್ನು ದುರ್ಬಲಗೊಳಿಸಿದೆ. ಷೀ ವಿಲ್ ಬಿ ಪರ್‌ಫೆಕ್ಟ್‌ಲೀ ಆಲ್ ರೈಟ್. ಆದರೆ ನೀವು ತಾಳ್ಮೆಯಿಂದಿರಬೇಕು!"

ವರ್ಧಮಾನ ಆಚ್ಚರಿಯಿಂದ ಅವರನ್ನು ಕೇಳಿದ-

"ಡಾಕ್ಟರ್, ನೀವು ದೆವ್ವ ಭೂತಗಳೆಂದರೆ ನಂಬುವುದೇ ಇಲ್ಲವೇ ?"

"ಇಲ್ಲ."

"ಹಾಗಾದರೆ, ಎಷ್ಟೋ ಜನ ಕಣ್ಣಾರೆ ಕಂಡುದಾಗಿ ಹೇಳಿರುವರಲ್ಲ !"

"ವರ್ಧಮಾನ್, ಮನಸ್ಸು ಎಷ್ಟು ಪ್ರಬಲವಾದ ಅಂಗವೆಂದು ನಿಮಗೆ ಗೊತ್ತಿದೆಯೇ ? ವಿಜ್ಞಾನಿಗಳು ಇನ್ನೂ ಮನಸ್ಸಿನ ವ್ಯಾಪಾರಗಳ ಬಗ್ಗೆ ಅದರ ಅಗಾಧಶಕ್ತಿಯ ಬಗ್ಗೆ ವಿಚಾರ ಮಾಡುತ್ತಾನೇ ಇದ್ದಾರೆ. ಮನ ಶಾಸ್ತ್ರದಲ್ಲಿ ನಾವು ಪ್ರಯೋಗಿಸುವ ಹಿಪ್ನಾಟಿಸಂ ಮೂಲಕ ಮನಸ್ಸಿನ ಅಂತರಾಳವನ್ನು ಸುಪ್ತ ಮನಸ್ಸಿನಲ್ಲಿ ಏನೇನು ಅಡಗಿರುವುದೋ ! ಹಿಪ್ನಾಟಿಕ್ ರಿಗ್ರೆಷನ್ ಮೂಲಕ ಹಿಂದಿನ, ಕೊನೆಗೆ ಬಾಲ್ಯದ ಆಗುಹೋಗುಗಳನ್ನು ನೆನಪಿಗೆ ತರಬಹುದು, ಹಿಂದಿನ ಜನ್ಮದ ನೆನಪನ್ನು ಜಾಗೃತಗೊಳಿಸಬಹುದು"

"ಡಾಕ್ಟರ್ ದೆವ್ವ ಭೂತ ಎಲ್ಲ ಮರಣಿಸಿದ ನಂತರ ಆಗುವ ರಾಸಾಯನಿಕ ಪ್ರತಿಕ್ರಿಯೆಗಳೆನ್ನುತ್ತಾರೆ. ಮರಣಿಸಿದ ನಂತರ ಯಾರೂ ಎದ್ದು ಬರುವುದಿಲ್ಲ. ಎನ್ನುವ ನಿಮಗೆ ಪುನರ್ಜನ್ಮದಲ್ಲಿ ನಂಬಿಕೆಯಿದೆಯೇ ? ನಂಬುತ್ತೀರಾ ?"

"ಅದರ ಬಗ್ಗೆ ಬಹಳ ಹೇಳುವುದಿದೆ. ಮತ್ತೆ ಯಾವಾಗಲಾದರೂ ಬಿಡುವಾದಾಗ ಹೇಳುತ್ತೇನೆ. ನೀವು ನಂಬುವಿರೋ ಇಲ್ಲವೋ! ಲುಪಿನೋ ಮೇನಿಯಾ ಎಂಬ ಮನಸ್ಸಿನ ವಿರಳ ಕಾಯಿಲೆಯಿದೆ. ಅದರಲ್ಲಿ ಮನುಷ್ಯ ಪ್ರಾಣಿಯಾಗಿಬಿಡುತ್ತಾನೆ. ವಿಜ್ಞಾನಿಗಳು ಈ ಅದ್ಭುತವನ್ನು ನೋಡಿ ಅಚ್ಚರಿ ಪಡುತ್ತಾರೆ. ಮನಸ್ಸಿಗೆ ಅಂತಹ ಶಕ್ತಿಯಿರುವುದೇ ಅಂತಾ ! ಮನಸ್ಸಿನಲ್ಲಾಗುವ ಬದಲಾವಣೆಯಿಂದ ದೇಹದಲ್ಲೂ ಬದಲಾವಣೆ ಪ್ರಾರಂಭವಾಗುತ್ತದೆ. ತೋಳಮಾನವರೆಂದು ಹಿಂದೆ ಗ್ರೀಸ್ ದೇಶದಲ್ಲೂ ಬ್ರಿಟನ್ನಿನಲ್ಲೂ ಐರೋಪ್ಯ ರಾಷ್ಟ್ರಗಳಲ್ಲೂ ಕೇಳಿಬರುತ್ತಿತ್ತು. ಆ ತೋಳ ಮಾನವನ ಮುಖವು ತೋಳದ ಮುಖದಂತೆಯೇ ಇರುತ್ತಿತ್ತು, ಬಾಯಲ್ಲಿ ಜೊಲ್ಲು ಸೋರುತ್ತಿತ್ತು, ಉಗುರುಗಳು ನೀಳವಾಗುತ್ತಿತ್ತು. ನಡೆಯುವ ಬದಲು ಕೈಗಳನ್ನು ಬಳಸಿ, ಅಂಬೆಗಾಲಿಡುವಂತೆ ನಡೆಯುತ್ತಾ ತೋಳದಂತೆಯೇ ನಟಿಸುತ್ತಾ ಮಕ್ಕಳನ್ನು ಹೆಂಗಸರನ್ನು ಆಕ್ರಮಿಸಿ, ಅವರನ್ನು ಕೊಂದು ತಿಂದು ಹಾಕುತ್ತಿತ್ತು. ಕೆಲವರನ್ನು ಹಿಡಿದು ನ್ಯಾಯಾಲಯಕ್ಕೊಪ್ಪಿಸಿದಾಗ ಅವರೇ ಹೇಳಿದಾರೆ- "ನನಗೆ ಮಾನವನ ರಕ್ತ,

ಮಾಂಸ ಬೇಕೆನಿಸುತ್ತದೆ." ಆದರೆ ಮಾನವ ತೋಳ ಮಾನವನಾಗಲು ಅವನ ವಿಕೃತ ಭಾವನೆಗಳು ಸುಪ್ತಮನಸ್ಸಿನಲ್ಲಿ ನೆಲೆಸಿ, ಜಾಗೃತ ಮನಸ್ಸನ್ನು ಉಪೇಕ್ಷಿಸುತ್ತದೆ. ಜಾಗೃತ ಮನಸ್ಸನ್ನು ಮೆಟ್ಟಿನಿಲ್ಲುತ್ತದೆ.

ಅಮೇರಿಕಾದ ಕ್ಲಿನಿಕಲ್ ಸೈಕಾಲಜಿಸ್ಟ್ ಲೆಸ್ಲೀ ಎಂ. ಲಿಕ್ರೋನ್ ಹೇಳುತ್ತಾನೆ, ಸುಪ್ತ ಮನಸ್ಸಿನ ಕರ್ತವ್ಯವೇನಿದ್ದರೂ ದೇಹದ ಚಲನವಲನ ಗಳನ್ನು ಮೆದುಳಿನ ಮೂಲಕ ಕಂಟ್ರೋಲ್ ಮಾಡುವುದು. ಬ್ರೈನ್‌ನ ಒಂದು ಭಾಗ ಆಟೋಮೆಟಿಕ್ ನರ್ವಸ್ ಸಿಸ್ಟಂ. ಇದರಿಂದ ಪ್ರತಿಯೊಂದು ಅಂಗಾಂಗ, ಗ್ರಂಥಿಗಳನ್ನು ಕೆಲಸಮಾಡುವಂತೆ ಮಾಡುತ್ತದೆ. ಇದು ದೇಹದ ರಾಸಾಯನಿಕ ಸಮತೋಲನವನ್ನು ಕಾಪಾಡುತ್ತದೆ. ಅದು ವಿರಳವಾದಾಗ ದೇಹದ ಪ್ರತಿಯೊಂದು ಅಂಗಗಳು, ಗ್ರಂಥಿಗಳು ಅದರ ವಶವಾಗುತ್ತದೆ. ರಾಸಾಯನಿಕ ಬದಲಾವಣೆಗಳಾಗಿ, ಗ್ರಂಥಿಗಳಲ್ಲಿ ಸ್ರಾವ ಜಾಸ್ತಿಯಾಗುತ್ತದೆ. ಮೈಮೇಲೆ ಕೂದಲು ಜಾಸ್ತಿಯಾಗಿ ಬೆಳೆಯತೊಡಗುತ್ತದೆ. ಉಗುರುಗಳು ಬೆಳೆಯತೊಡಗುತ್ತದೆ. ಜೊಲ್ಲು ಸುರಿಸಬಹುದು. ಹಲ್ಲುಗಳು ವಿಕಾರವಾಗಿ ಹೊಳೆಯುತ್ತವೆ. ಕಣ್ಣುಗಳಲ್ಲಿ ವಿಕೃತ ಹೊಳಪು ಬರುತ್ತದೆ, ಮೂಗಿಗೆ ವಾಸನೆ ಹಿಡಿಯುವ ಶಕ್ತಿ ಮತ್ತೂ ಸೂಕ್ಷ್ಮವಾಗುತ್ತದೆ, ದೇಹದ ಕಾಮನೆಗಳೂ ವಿರಳವಾಗುತ್ತವೆ. ಹೀಗಾಗಿ ತೋಳಮಾನವ ಮತ್ತಾರೂ ಅಲ್ಲ. ಸಾಧಾರಣ ಮಾನವನ ವಿಕೃತ ಸ್ವರೂಪ ಮಾತ್ರ. ಅಂತಹವರನ್ನು ಬಹಳ ತೀಕ್ಷ್ಣವಾದ ಮನೋಚಿಕಿತ್ಸೆಗೊಳಪಡಿಸಿದರೆ ಸರಿಹೊಂದಬಹುದು" ಏಕೆಂದರೆ ಗ್ರೆನಿಯರ್ ಎಂಬ ಫ್ರಾನ್ಸ್‌ದೇಶದ ತೋಳಮಾನವನನ್ನು ವಿಚಾರಣೆಗೊಳಪಡಿಸಿದಾಗ ಅವನೇ ಹೇಳಿಕೊಳ್ಳುತಾನೆ-'ನಾನು ಮೊದಲು ಸಣ್ಣಗೆ ನಡುಗುತ್ತೇನೆ. ಆಮೇಲೆ ಮೈಬಿಸಿಯಾದ ಹಾಗಾಗುತ್ತದೆ. ಬಾಯಿಯಲ್ಲಿ ಜೊಲ್ಲು ಸುರಿಯಲಾರಂಭ ವಾಗುತ್ತದೆ, ನಾಲ್ಕು ಕಾಲುಗಳಂತೆ ಅಂಬೆಗಾಲಿಡುತ್ತಾ ಓಡಾಡುವಂತಾಗುತ್ತದೆ. ನನ್ನ ಮೂಗಿಗೆ ಪ್ರಾಣಿ, ಮನುಷ್ಯರ ವಾಸನೆ ಬೇರೆ ಬೇರೆಯಾಗಿ ತಿಳಿಯುತ್ತದೆ, ನಾಲಿಗೆ ಹೊರಚಾಚುವಂತಾಗುತ್ತದೆ. ಮನುಷ್ಯನ ರಕ್ತ ಮಾಂಸ ತಿನ್ನಲು ಹಾಗೆಯೇ ನೂಪುರನೂ ಅಷ್ಟೆ. ಅವಳ ಸುಪ್ತ ಮನಸ್ಸಿನಲ್ಲಿ ದೆವ್ವ ಹಿಡಿದಿರುವವರು ಮಾಡುವುದನ್ನು ನೋಡಿದ್ದಳಾದ್ದರಿಂದ ಆ ನೆನಪು ಅಲ್ಲಿ ಅಡಗಿ ಕೆಲವು ಸಮಯದಲ್ಲಿ ಜಾಗೃತವಾಗಿ ಅವಳ ದೇಹದ ಮೇಲೆ ಹತೋಟಿ ಪಡೆಯುತ್ತದೆ. ಆಗಲೇ ಅವಳ ದನಿ ಬೇರೆಯಾಗುತ್ತದೆ. ಅವಳ ನಡವಳಿಕೆ ಬದಲಾಗುತ ದೆ....!"

ವರ್ಧಮಾನ ಎದ್ದುನಿಂತ, "ಥ್ಯಾಂಕ್ಸ್ ಡಾಕ್ಟರ್. ನಿಮ್ಮ ಜೊತೆ ಮಾತಾಡಿದ್ದು ಮನಸ್ಸಿಗೆ ಎಷ್ಟೋ ಹಿತವೆನಿಸಿದೆ. ನಾನು ಬರುತ್ತೇನೆ" ಹೊರಟು ನಿಂತ. ಮನೆಯಲ್ಲಿ ಶಾಸ್ತ್ರಿಗಳು ಏನು ಮಾಡುತ್ತಿರುವರೋ!

ಶಾಸ್ತ್ರಿಗಳ ಪೂಜೆ ನಡೆದಿತ್ತು. ಕೊರೆಯುವ ಚಳಿಯನ್ನು ಲಕ್ಷಿಸದೆ ಹೊತ್ತು ಮೂಡುವ ಮುಂಚೆಯೇ ತಣ್ಣೀರಿನಲ್ಲಿ ಸ್ನಾನಮಾಡಿ ಪೂಜೆಗೆ ಕುಳಿತುಕೊಳ್ಳುತ್ತಿದ್ದರು. ಅವರ ನಿಷ್ಠಾವಂತ ಬದುಕಿನಲ್ಲಿ ತಮ್ಮ ಬದುಕಿನ ಭರವಸೆಯನ್ನು ಲಲಿತಮ್ಮ ಕಂಡಿದ್ದರು. ಅವರ ಪೂಜೆ, ಪುನಸ್ಕಾರಗಳಿಂದ ತಮ್ಮ ಮನೆಯಲ್ಲಿ ಶಾಂತಿ, ಸುಖ ನೆಲಸುವುದೆಂದೇ ನಂಬಿದ್ದರು. ಅಂದು ಬೆಳಗ್ಗಿನಿಂದ ಒಂದು ತೊಟ್ಟು ನೀರೂ ಸೇವಿಸದೆ ಪೂಜೆಯಲ್ಲಿ ನಿರತರಾಗಿದ್ದ ಶಾಸ್ತ್ರಿಗಳನ್ನು ಎಚ್ಚರಿಸಿ ಹಾಲು, ಹಣ್ಣು ಕೊಡಲು ಲಲಿತಮ್ಮನಿಗೆ ಹೆದರಿಕೆ. ಶಾಸ್ತ್ರಿಗಳ ಮುಖದಲ್ಲಿ ಆಗಲೇ ಏಳುದಿನದ ಗಡ್ಡಮೀಸೆ ಬೆಳೆದು ನಿಂತಿತ್ತು. ಕೊರೆಯುವ ಚಳಿಯಲ್ಲಿ ಅಡ್ಡಪಂಚೆಯೊಂದನ್ನು ಬಿಟ್ಟು ಏನೂ ಧರಿಸದ ಅವರ ಕೈ ಚಳಿಯಿಂದ ಕಟ್ಟಿಟ್ಟುಹೋಗಿತ್ತು. ಬಿಟ್ಟಿದ ಮುಡಿಯ ಕೂದಲೆಲ್ಲಾ ಗಂಟಾಗಿತ್ತು. ಹಣೆಯಲ್ಲಿ ಎತ್ತಿ ಕಾಣುವ ವಿಭೂತಿ, ಕುಂಕುಮ ಬಾಯಲ್ಲಿ ಬರುತ್ತಿದ್ದ ಮಂತ್ರೋಚ್ಛಾರಣೆ ಇವು ಲಲಿತಮ್ಮನಿಗೆ ಏನೋ ಒಂದು ವಿಧವಾದ ಅವ್ಯಕ್ತ ಆನಂದ ತರುತ್ತಿದ್ದವು. ದೇವರಿಗೆ ನಮಸ್ಕರಿಸಲು ಬಂದವರು ಶಾಸ್ತ್ರಿಗಳಿಗೇ ನಮಿಸಿ ನಿರ್ಗಮಿಸಿದರು. ಖಂಡಿತಾ ಇವರ ಪೂಜೆಯಿಂದ ನೂಪುರನಿಗೆ ಗುಣವಾಗುತ್ತದೆ.

* * * *

ವೀರಭದ್ರನಿಗೆ ತೂಕಡಿಸಿ ತೂಕಡಿಸಿ ಬೇಸರವಾಯಿತು. ವರದಾಚಾರಿ ಈಚೆಗೆ ಏನೋ ಯೋಚನೆಯಲ್ಲಿದ್ದ. ಯಾವುದರಲ್ಲೂ ಅಷ್ಟು ಗಮನವಿರಲಿಲ್ಲ. ಇದು ವೀರಭದ್ರನಿಗೆ ಒಂದು ವಿಧದಲ್ಲಿ ಸಂತಸ ತಂದಿತ್ತು. ತನ್ನನ್ನು ಹೊಡೆದು, ಬಡಿದು ಕೆಲಸ ಮಾಡುವುದಿಲ್ಲ, ತಾನೇನು ಮಾಡಿದರೂ ಗದರುವುದಿಲ್ಲ, ಬರೆ ಹಾಕುವುದಿಲ್ಲ! ಇವನು ಹೀಗೆ ಇದ್ದು ಬಿಟ್ಟರೆ ತಾನು ಹಾಯಾಗಿರಬಹುದು. ಒಳಗೆ ವರದಾಚಾರಿ ಭಾರಿ ಯೋಜನೆಯಲ್ಲಿ ಮುಳುಗಿದ್ದ. ಅದಕ್ಕೆ ಕಾರಣವೂ ವೀರಭದ್ರನಿಗೆ ತಿಳಿದಿತ್ತು. ವರದಾಚಾರಿ ಸಾಮಾನ್ಯನಂತೆ ಉಡುಪು ಧರಿಸಿ ಕೈಯಲ್ಲಿ ಕಿತ್ತಲೆಹಣ್ಣು. ಮಲ್ಲಿಗೆ ಹೂವು ಹಿಡಿದು ಹೊರಬಿದ್ದಾಗ ವೀರಭದ್ರ ಅವನನ್ನು ಹಿಂಬಾಲಿಸಿದ್ದ. ವರದಾಚಾರಿ ನೇರವಾಗಿ ನೂಪುರಳಿದ್ದ ನರ್ಸಿಂಗ್ ಹೋಂನ ಒಳಹೊಕ್ಕಿದ್ದ ಅಲ್ಲಿದ್ದ ಸಿಸ್ಟರ್‌ನನ್ನು ತಾನು ನೂಪುರನನ್ನು

ನೋಡಬೇಕು, ತಾನು ಬಹಳ ದೂರದ ಸಂಬಂಧಿ ಎಂದು ಹೇಳಿದ್ದ. ಸಿಸ್ಟರ್ ಒಳಗೆ ಹೋಗಿ ಡಾಕ್ಟರ್‌ನನ್ನು ಕೇಳಿಬಂದು ಹೇಳಿದ್ದಳು.

"ಯಾರನ್ನೂ ನೋಡಲು ಬಿಡುವುದಿಲ್ಲ" ವರದಾಚಾರಿ ಮುಖ ಸಪ್ಪಗಾಗಿತು.

"ಈಗ ಹೇಗಿದ್ದಾಳೆ ? ಪಾಪ ಮಗು ತುಂಬಾ ಕಂಗೆಟ್ಟುಹೋಗಿತ್ತು"

"ಈಗ ವಾಸಿ ಸುಧಾರಿಸಿಕೊಳ್ಳುತ್ತಿದ್ದಾರೆ !" ಸಿಸ್ಟರ್ ಹೇಳಿದಳು.

"ಬಸುರೀಯಂತೆ ಹೌದಾ ಸಿಸ್ಟರ್ ?"

"ಹೌದು, ಮೂರು ತಿಂಗಳಾಗಿದೆ !"

ವರದಾಚಾರಿಯ ಮುಖ ಅರಳಿತ್ತು. "ಈ ಹೂವೂ, ಹಣ್ಣು ಒಳಗೆ ಕೊಟ್ಟುಬಿಡಿ. ಮತ್ತೆ ಬಂದು ನೋಡ್ತೀನಿ. ನಿನ್ನ ಚಿಕ್ಕಪ್ಪ ತುಂಬಾ ಕೇಳಿದರು ಅಂತಾ ಹೇಳಿ !" ವರದಾಚಾರಿ ಸಿಸ್ಟರ್ ಕೈಗೆ ಹೂವು ಹಣ್ಣು ಇತ್ತು ಹೊರಬಿದ್ದಿದ್ದು, ಹೊರಬಂದವನೇ ಮನೆಗೆ ಬಾರದೇ ಮಾವಿನ ತೋಟದತ್ತ ನಡೆದಿದ್ದ. ವೀರಭದ್ರನಿಗೆ ಅವನಲ್ಲಿಗೆ ಹೋಗುವನೆಂದು ತಿಳಿದಿತ್ತು. ಅವನನ್ನು ಹಿಂಬಾಲಿಸದೇ ಮನೆಗೆ ಹಿಂತಿರುಗಿದ್ದ.

ವರದಾಚಾರಿ ಮನೆಗೆ ಹಿಂತಿರುಗಿದಾಗ ಅವನ ಮುಖ ವಿವರ್ಣವಾಗಿತ್ತು. ಮನೆಯ ಮೂಲೆಯಲ್ಲಿದ್ದ ಸಾಮಾನನ್ನೆಲ್ಲಾ ಕಿತ್ತು ಏನೋ ಹುಡುಕಾಡುತ್ತಿದ್ದ. ವೀರಭದ್ರ ಮೂಲೆಯಲ್ಲಿ ಕಣ್ಣು ಮುಚ್ಚಿ ತೂಕಡಿಸುತ್ತಿದ್ದರೂ ಅವನು ಒಳಗೇ ನಗುತ್ತಿದ್ದ. ಅವನಿಗೆ ವರದಾಚಾರಿ ಏನು ಹುಡುಕುತ್ತಿರುವನೆಂದು ತಿಳಿದಿತ್ತು. ಅವನ ಪೂಜೆಯ ಕೊಠಡಿಯಲ್ಲಿ ಕಂಚಿನ ಕೊಡದಲ್ಲಿ ಇಟ್ಟಿದ್ದ ಗಂಟು ಅವನನ್ನು ಆಕರ್ಷಿಸಿತ್ತು. ಅದರಲ್ಲೇನಿದೆಯೆಂದು ನೋಡುವ ತವಕ ಹೆಚ್ಚಿತ್ತು. ಆದರೆ ವರದಾಚಾರಿಗೆ ಹೆದರಿ ಅದನ್ನು ತೆಗೆದು ನೋಡಿರಲಿಲ್ಲ. ಎರಡುದಿನಗಳ ಕೆಳಗೆ ವರದಾಚಾರಿ ಎಲ್ಲಿಗೋ ಹೋದಾಗ ವೀರಭದ್ರನ ಕುತೂಹಲ ಕೆರಳಿತ್ತು. ಮೆಲ್ಲನೆ ಪೂಜಾಗೃಹಕ್ಕೆ ನಡೆದು ಕಂಚಿನ ಕೊಡವನ್ನು ಕೈಗೆತ್ತಿಕೊಂಡಿದ್ದ. ಮನೆಯ ಮುಂಬಾಗಿಲು ಭದ್ರಪಡಿಸಿ ಕಂಚಿನ ಕೊಡದ ಮುಚ್ಚಳವನ್ನು ಹಾರೆಯಿಂದ ಕುಟ್ಟಿ ತೆಗೆದ. ಅವನೆಂದುಕೊಂಡಂತೆ ಅದು ಚಿನ್ನ, ಬೆಳ್ಳಿ, ಹಣವಾಗಿರಲಿಲ್ಲ. ಒಳಗೆ ಕೆಂಪುಬಟ್ಟೆಯಲ್ಲಿ ಏನೋ ಸುತ್ತಿಡಲಾಗಿತ್ತು. ಅದನ್ನು ಕೈಗೆತ್ತಿಕೊಂಡಾಗ ಮೂಗಿಗೆ ಗಬ್ಬುವಾಸನೆ ಹೊಡೆಯಿತು. ಕೊಳೆತ ಆ ವಾಸನೆಯಿಂದ ವೀರಭದ್ರನಿಗೆ ವಾಕರಿಕೆ ಬಂದು ಎದ್ದು ಹೋಗಿ ಬಚ್ಚಲಲ್ಲಿ ವಾಂತಿ ಮಾಡಿ ಬಂದ. ಮೂಗು ಮುಚ್ಚಿಕೊಂಡು ಬಟ್ಟೆಯಲ್ಲಿದ್ದ

ಗಂಟು ಬಿಚ್ಚಿದ. ಅದರೊಳಗೆ ಇದ್ದುದ್ದು ಮೂಳೆಗಳು, ಕೊಳೆತ ವಾಸನೆ ಬರುತ್ತಿದ್ದ ದೇಹದ ಯಾವುದೋ ಅಂಗಗಳು ! 'ಥೂ' ದೂರ ಎಸೆದ. ಆದರೆ ಕೂಡಲೇ ಅವನಿಗೆ ಹೊಳೆಯಿತು. ವರದಾಚಾರಿಯೇಕೆ ಇಷ್ಟು ಆಸಕ್ತಿಯಿಂದ ಜತನದಿಂದ ಆ ಗಂಟನ್ನು ಮುಚ್ಚಿಟ್ಟಿದ್ದ ? ಇದರಲ್ಲೇನೋ ಗುಟ್ಟಿರಬೇಕು ? ಅವನಿಗೇನು ಗೊತ್ತು ಅದು ಗಂಗೆಯ ಅನಳ ಭ್ರೂಣಸ್ಥ ಶಿಶುವಿನ ಅಂಗಗಳೆಂದು ಗಂಟನ್ನು ಕೂಡಲೇ ತೆಗೆದು ಹೊರಗಿದ್ದ ಗಿಡದ ಬುಡದಲ್ಲಿ ಮಣ್ಣು ತೆಗೆದು ಮನೆಯ ಹೂತಿಟ್ಟು ಕಂಚಿನ ಕೊಡದ ಮುಚ್ಚಳ ಭದ್ರಮಾಡಿ ಅದರ ಸ್ವಸ್ಥಾನ ಲ್ಲಿಟ್ಟಿದ್ದ. ವರದಾಚಾರಿ ಹಿಂತಿರುಗಿ ಬಂದಾಗ ಅವನಿಗೆ ಅದರ ಬಗ್ಗೆ ಅನುಮಾನವೇ ಬರಲಿಲ್ಲ. ಎಂದಿನಂತೆ ತನ್ನ ದಿನಚರಿಯಲ್ಲಿ ಮುಳುಗಿದ್ದ. ವೀರಭದ್ರನಿಗೆ ಇದ್ದ ಒಂದೇ ಒಂದು ಹೆಬ್ಬಯಕೆಯೆಂದರೆ ವರದಾಚಾರಿ ಎಲ್ಲೋ ಹುದುಗಿಸಿಟ್ಟಿದ್ದ ಚಿನ್ನ, ಬೆಳ್ಳಿ, ಹಣ ರಾಮಲಿಂಗಯ್ಯನವರ ಮನೆಯಲ್ಲಿ ರುದ್ರಣ್ಣನಿಂದಲೇ ಕದಿಯಬೇಕೆಂದುಕೊಂಡಿದ್ದ ತನಗೆ ಏನೂ ಸಿಕ್ಕಿದ ಹಾಗೆ ಮೋಸಮಾಡಿದ್ದ. ತನಗೆ ಬೇಕಾದಷ್ಟು ಹಣ ಕೊಡುವನೆಂದೂ ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುವನೆಂದೂ ಭರವಸೆಯಿತ್ತು ಕರೆ ತಂದು ತನ್ನನ್ನು ದನಾ ಬಡಿಯುವಂತೆ ಬಡಿಯುತ್ತಿದ್ದ. ಕೂಲಿಯಾಳಿಗಿಂತ ಕೀಳಾಗಿ ಕಾಣುತ್ತಿದ್ದ. ಬೇಕಾದಷ್ಟು ಹಣ ಕೊಡುವುದಿರಲಿ ಹೊಟ್ಟೆತುಂಬಾ ಊಟವನ್ನು ಹಾಕುತ್ತಿರ ಲಿಲ್ಲ. ವರದಾಚಾರಿಯನ್ನು ಮನಸ್ಸಿನಲ್ಲೇ ನೂರಾರು ಬಾರಿ ಕೊಂದಿದ್ದ. ತಾನು ಅವನನ್ನು ಕತ್ತು ಹಿಸುಕಿಕೊಂದಂತೆ, ಚೂರಿ ಹಾಕಿ ಕೊಂದಂತೆ, ಬೆಂಕಿ ಹಚ್ಚಿ ಸುಟ್ಟುಹಾಕಿದಂತೆ ಏನೆಲ್ಲಾ ಯೋಚಿಸಿ ಮನಸ್ಸಿನಲ್ಲಿ ಆ ಕಾರ್ಯ ಮಾಡಿ ತೃಪ್ತಿಪಡುತ್ತಿದ್ದ.

ನಸ್ಸಂಗ್ ಹೋಂನಿಂದ ಬಂದಮೇಲೆ ವರದಾಚಾರಿ ಕಂಚಿನ ಕೊಡ ಕೈಗೆತ್ತಿಕೊಂಡಿದ್ದ. ಅವನ ಬಳಿಯಲ್ಲಿದ್ದ ಸಣ್ಣ ಚಾಕುವಿನಿಂದ ಮುಚ್ಚಳ ತೆಗೆದು ಅದರೊಳಗೆ ಕೈ ಹಾಕಿದ. ಅವನೆದೆ ಜಗ್ಗೆಂದಿತು. ಒಳಗೇನೂ ಇಲ್ಲ. ಮುಚ್ಚಳ ಹಾಕಿದ ಹಾಗೆಯೇ ಇದೆ. ಒಂದೆರಡು ಕಡೆ ಜಜ್ಜಿದ ಗುರುತಿದೆ. ಅದು ತಾನೇ ಆಗಾಗ ತೆಗೆಯುವಾಗ ಮಾಡಿದ್ದಿರಬಹುದು. ಅವನಿಗೆ ಅನುಮಾನ ಬರಲು ಸಾಧ್ಯವಿರಲಿಲ್ಲ, ವೀರಭದ್ರನತ್ತ ನೋಡಿದ. ಅವನು ತೂಕಡಿಸುತ್ತಾ ಕುಳಿತಿದ್ದ. ವರದಾಚಾರಿಗೆ ಚೆನ್ನಾಗಿ ಗೊತ್ತಿತ್ತು. ವೀರ ಭದ್ರನಿಗೆ ಬೇಕಾದದ್ದು ಹಣ ಮಾತ್ರ. ಈ ಕಂಚಿನ ಕೊಡದಲ್ಲಿದ್ದ ವಸ್ತು ಗಳಲ್ಲ ! ಅವನು ತೆಗೆದು ನೋಡಿದ್ದರೆ ಅವುಗಳು ಒಳಗೇ ಇರುತ್ತಿತ್ತು ! ತಾನೇ

ಎಲ್ಲೂ ಮರೆತು ಇಟ್ಟಿರಬಹುದೇ? ಮನೆಯೆಲ್ಲಾ ಪರದಾಡಿದ. ತಾನಿಲ್ಲದ ಹೊತ್ತಿನಲ್ಲಿ ಯಾರಾದರೂ ಬಂದಿದ್ದಿರಬಹುದೇ.

* * * *

"ಏನೋ, ವೀರಭದ್ರಾ ಯಾರಾದ್ರು ನಾನಿಲ್ಲದ ಹೊತ್ನಲ್ಲಿ ಬಂದಿದ್ರಾ?" ವರದಾಚಾರಿ ಕೇಳಿದ.

"ಇಲ್ಲಾ ಯಾರೂ ಬಂದಿಲ್ಲ. ಈ ಮನೇಲಿ ನಾನೊಬ್ನೆ ದೆವ್ವ ಬಿದ್ದಂಗೆ ಬಿದ್ದಿದ್ದೀನಿ!"

"ನೀನೇನಾದ್ರು ಕಂಚಿನ ಕೊಡ ತೆಗೆದಿದ್ಯಾ!" ಕಣ್ಣು ಕೆಂಪಗೆ ಮಾಡಿಕೊಂಡ ವರದಾಚಾರಿ. ಈಚೀಚೆಗೇ ವೀರಭದ್ರಾ ಅತಿಯಾಗಿ ಮಾತಾಡುವುದು ಕಲಿತಿದ್ದಾನೆ.

"ನಾನ್ಯಾಕೆ ತೆಗೀಲೀ ಅದ್ನ ಕಟ್ಕೊಂಡು ನಂಗೇನು!"

"ಏಯ್ ಕೇಳಿದ್ದಷ್ಟಕ್ಕೆ ಉತ್ತರ ಕೊಡು"

"ತೆಗೀಲಿಲ್ಲ."

"ಹಾಗಾದ್ರೆ ಅದರೊಳಗಿದ್ದುದು ಏನಾಯ್ತು?"

"ನಂಗೇನು ಗೊತ್ತು? ಅದರಲ್ಲೇನಿತ್ತು?" ವೀರಭದ್ರ ತಲೆಯನ್ನು ಪರಪರನೆ ಕೆರೆದುಕೊಂಡು ಕೇಳಿದಾಗ ವರದಾಚಾರಿಗೆ ರೇಗಿತು ತನ್ನ ಕೋಪವನ್ನು ಅಸಮಾಧಾನವನ್ನು ಅವನ ಮೇಲೆ ತೀರಿಸಿಕೊಂಡ. ವೀರಭದ್ರನ ಜುಟ್ಟು ಹಿಡಿದೆಳೆದು ಬೆನ್ನಿನ ಮೇಲೆ ಗುದ್ದಿದ.

"ಬೊಗಳು, 'ಅದರಲ್ಲಿದ್ದುದು ಏನಾಯ್ತು?"

"ನಂಗೊತ್ತಿಲ್ಲ. ಅಯ್ಯಯ್ಯಪ್ಪೋ!" ಕೂಗಿದ. ವರದಾಚಾರಿ ಮತ್ತೆ ನಾಲ್ಕು ಒದ್ದ. ವೀರಭದ್ರ ಕಿರುಚಿಕೊಂಡ. "ಹೊಡಿಬೇಡಾ..ನಂಗೊತ್ತಿಲ್ಲ! ನನ್ನ ಹಣ ನಂಗೆ ಕೊಟ್ಬಿಡು ನಾನು ಹೊರಟುಹೋಗ್ತೀನಿ, ಇಲ್ಲಿರೋಲ್ಲ."

"ಎಲ್ಲಿಗೆ ಹೋಗ್ತೀಯಾ ಸೂಳೆಮಗ್ನೇ! ಕಾಲು ಮುರಿದುಬಿಡ್ತೀನಿ!" ವರದಾಚಾರಿ ಅವನ ಕಡ್ಡಿಯಂತಿದ್ದ ಕಾಲು ತಿರುವಿದ.

"ಅಯ್ಯಯ್ಯಪ್ಪೋ ಸತ್ತೇ!" ವೀರಭದ್ರ ಚೀರಿದ.

"ಬರ್‍ತಾಬರ್‍ತಾ ಬಾಯಿಕೊಬ್ಬು ಜಾಸ್ತಿ ಆಗ್ತಾ ಇದೆ ನಿಂದೂ!" ಬಾಯಿಯ ಮೇಲೆ ದಪ್ಪನೇ ಹೊಡೆದ. "ಬಡ್ಕೋತೀಯಾ-ನಾಲ್ಕು ಮನೆಗೆ ಕೇಳೋ ಹಾಗೆ ಕಿರುಚುತ್ತೀಯಾ?"

ವೀರಭದ್ರನ ತುಟಿ ಹಲ್ಲಿಗೆ ತಗಲಿ ರಕ್ತ ತೊಟ್ಟಿಕ್ಕಲಾರಂಭಿಸಿತು. ವರದಾಚಾರಿಯ ಕೋಪ ಅಡಗಲಿಲ್ಲ. ತನ್ನ ಅಮೂಲ್ಯ ವಸ್ತುಗಳು ಕಳುವಾಗಿವೆ! ಅದರ ಕೋಪವನ್ನೆಲ್ಲಾ ವೀರಭದ್ರನ ಮೇಲೆ ತೀರಿಸಿಕೊಂಡ. ಕೈಗೆ ಸಿಕ್ಕ ಸೌದೆ ತುಂಡು ತೆಗೆದುಕೊಂಡು ಬಾರಿಸಿದ. ಮಚ್ಚನ್ನು ಕೆಂಪಾಗೆ ಕಾಯಿಸಿ ಕಾಲುಗಳ ಮೇಲೆ ಬರೆಹಾಕಿದ. ವೀರಭದ್ರ ಕಿರುಚುವಷ್ಟು ಕಿರುಚಿ, ನೋವು ತಡೆಯಲಾರದೇ ಪ್ರಜ್ಞೆತಪ್ಪಿಬಿಟ್ಟ. ವರದಾಚಾರಿ ನಗುತ್ತಾ ಬಂದು ಮೂಲೆಯಲ್ಲಿ ಕುಳಿತ. ತಾನು ಏನೆಲ್ಲಾ ಯೋಚಿಸಿದ್ದೆ. ಗಂಗೆ, ಅವಳ ಹೊಟ್ಟೆಯಲ್ಲಿದ್ದ ಮಗು ಬೇಕು. ಅವರಿಬ್ಬರ ಅಂಗಾಂಗಗಳನ್ನು ಪ್ರೇತಕ್ಕೆ ನೈವೇದ್ಯಕ್ಕಿಟ್ಟು, ಹಳಸಿದ ಮೇಲೆ ಪ್ರೇತಶಕ್ತಿ ತನ್ನ ಕೈಬಿಟ್ಟು ಹೋಗಬಹುದು, ಭ್ರೂಣ ಪ್ರೇತಕರ್ಪಿಸಿ ತಾನು ಅತೀವ ಶಕ್ತಿ ಪಡೆಯಬೇಕು. ಹಳೆಯದನ್ನು ಪ್ರೇತಕ್ಕೆ ನಿವಾಳಿಸಿ, ಹೂತುಬಿಡಬೇಕು. ಅವುಗಳಿಗೆ ಇರುವ ಶಕ್ತಿ ಕುಂದುವಂತೆ ಮಾಡಿದ ಮೇಲೆ ಏನು ಹೊಸದನ್ನು ನೀಡಬಹುದು. ನೂಪುರನಿಗೆ ಮೂರು ತಿಂಗಳು, ಎರಡು ತಿಂಗಳು ಕಳೆಯುವಷ್ಟರಲ್ಲಿ ಆ ಭ್ರೂಣವನ್ನು ಹೊರ ತೆಗೆಯಬೇಕು. ಅವಳನ್ನು ಹೇಗಾದರು ಕೈವಶಮಾಡಿಕೊಂಡು ಅವಳ ಗರ್ಭದಲ್ಲಿರುವ ಭ್ರೂಣ ಹೊರಬರುವಂತೆ ಮಾಡಿ ಅದನ್ನು ತೆಗೆದುಕೊಂಡು ಬಂದು ಪ್ರೇತಕ್ಕೊಪ್ಪಿಸಿಬಿಡಬೇಕು! ನಾನು ಅಗಾಧ ಶಕ್ತಿ ಸಂಪಾದಿಸಬೇಕು! ಹಣ ಸಂಪಾದಿಸಬೇಕು! ಆದರೆ ಹಳೆಯದನ್ನು ನಾಶಮಾಡದೇ ಹೊಸದನ್ನು ನೀಡುವಂತಿಲ್ಲ. ಕಂಚಿನ ಕೊಡದಲ್ಲಿ ಜತನವಾಗಿಟ್ಟು ಇಪ್ಪತ್ತು-ಮೂವತ್ತು ವರ್ಷಗಳೇ ಆಗಿತ್ತು ಇದ್ದಕ್ಕಿದ್ದಂತೆ ಅದು ತನ್ನದು. ಶಕ್ತಿ ಹಾಳಾದರೆ ತಾನು ಹಾಳಾದಂತೆ! ಅದರಿಂದ ತನ್ನ ಶಕ್ತಿಗಳೆಲ್ಲಾ ಕುಂದುತ್ತಾ ಬರುತ್ತದೆ. ವೀರಭದ್ರ ತೂಕಡಿಸುತ್ತಾ ಕುಳಿತರೆ ವೈರಿಮೇಲೆ ಪರಿವೇ ಇರುವುದಿಲ್ಲ. ಯಾರು ಬಂದು ಕದ್ದರೋ! ಕದ್ದಿರುವುದಕ್ಕೂ ಸಾಧ್ಯವಿಲ್ಲ. ಮುಚ್ಚಳ ಹಾಗೆ ಇವೆಯಲ್ಲಾ! ಅವನಿಗೆ ಒಳಗೇ ಹೆದರಿಕೆಯುಂಟಾಯಿತು. ತನ್ನ ಕೈವಶವಾಗಿರುವ ದುಷ್ಟಶಕ್ತಿಗಳೇ ಈ ರೀತಿ ಮಾಡಿರಬಹುದೇ? ಅವುಗಳನ್ನು ತಣಿಸುವುದಕ್ಕೆ ತಾನೇನು ಮಾಡಿಲ್ಲ! ಮೊದಲು ಉಗ್ರವಾಗಿರುವ ಶಕ್ತಿಗಳನ್ನು ಸಮಾಧಾನ ಮಾಡಿರುವೆನೋ! ಭಯದಿಂದ ತತ್ತರಿಸಿದ. ವೀರಭದ್ರನಿಗಿನ್ನೂ ಪ್ರಜ್ಞೆ ಬಂದಿರಲಿಲ್ಲ. ತಣ್ಣೀರು ತಂದು ಮುಖಕ್ಕೆರೆಚಿದ.

"ಏಳೋ ವೀರಭದ್ರ!"

ವೀರಭದ್ರ ಸಣ್ಣಗೆ ನರಳುತ್ತಾ ಕಣ್ಣುಬಿಟ್ಟ.

"ಏಳು, ನಾನೀಗ ಪೂಜೆಗೆ ಕೂತ್ಕೊಂತ್ತಿನಿ. ಎರಡು ಕೋಳಿ ಒಂದು ಹುಂಜ, ಹಸಿಮಾಂಸ ತೊಗೊಂಡ್ಬಾ!"

ವೀರಭದ್ರ ಹೊರಳಿದ. ಕಾಲಿನ ಮೇಲಿದ್ದ ಬರೆಗಳು ಉರಿಯುತ್ತಿತ್ತು. ಒಡೆದ ಜಾಗವೆಲ್ಲಾ ನೋಯುತ್ತಿತ್ತು. ಬಾಯಿಯಲ್ಲಿ ಬಂದಿದ್ದ ರಕ್ತ ಆಗ್ಲೇ ಗಟ್ಟಿಯಾಗಿತ್ತು.

"ಬೇಗ ಎದ್ದು ತಣ್ಣೀರು ಸುರ್ಕೊ. ಎಲ್ಲಾ ಸರಿ ಹೋಗುತ್ತೆ!"

ವೀರಭದ್ರ ಮಿಸುಗಾಡಲಿಲ್ಲ.

"ಏಳಪ್ಪ ವೀರಭದ್ರ ನಂಗೆ ಯಾಕೆ ಕೋಪ ಬರಿಸ್ತೀ. ಹೋಗಪ್ಪಾ ಬೇಗ ತೊಗೊಂಡ್ಬಾ ನಿಂಗೆ ಕೋಳಿಕಾಲಿನ ಊಟ ಹಾಕ್ತೀನಿ. ಕೈತುಂಬಾ ದುಡ್ಡು ಕೊಡ್ತೀನೀ!"

ವೀರಭದ್ರ ಹೊರಳಿದ "ನನ್ನ ಕೈಲಾಗೊಲ್ಲ. ಬೆನ್ನು, ಕಾಲು, ತಲೆ ಯೆಲ್ಲಾ ನೋಯ್ತಾ ಇದೆ!"

"ಹೋಗಿ ತಂದ್ಬಿಡು. ಅದಕ್ಕೆಲ್ಲಾ ಮುಲಾಮು ಹಾಕ್ತಿನಿ!" ಅವನ ತಲೆ ಸವರಿದ. ವೀರಭದ್ರ ಅನುಮಾನಿಸಿದ. "ಏಯ್ ಏಳ್ತಿಯಾ ಇಲ್ಲಾ ತಿರ್ಗಾ ಒದೀಲೊ?" ವರದಾಚಾರಿ ತಾಳ್ಮೆ ಕೆಟ್ಟು ಅಬ್ಬರಿಸಿದಾಗ ವೀರಭದ್ರ ನರಳುತ್ತಾ ಬಚ್ಚಲ ಮನೆಯತ್ತ ಹೊರಟ. ತಣ್ಣೀರಿನಲ್ಲಿ ಮುಖ ತೊಳೆದುಕೊಂಡ. ಬರೆ ಹಾಕಿದ್ದ ಭಾಗಗಳಿಗೆ ಎಣ್ಣೆ ಸವರಿಕೊಂಡ. ಯಾರೂ ತನ್ನ ಮಾತನ್ನು ನಂಬುವುದಿಲ್ಲ. ವರದಾಚಾರಿ ಅವರಿಗೆಲ್ಲಾ ತನಗೆ ಹಿಡಿದಿರುವ ದೆವ್ವ ಬಿಡಿಸಲು ಹಾಗೆ ಮಾಡುವೆನೆಂದು ಹೇಳಿಕೊಂಡಿದ್ದ. ಈ ವರದಾಚಾರಿಗೆ ಬುದ್ಧಿ ಕಲಿಸಬೇಕು! ಗೋಡೆ ಹಿಡಿದು ಮೆಲ್ಲಗೆ ಎದ್ದು ನಿಂತ. ಪಂಚೆ ಸರಿ ಮಾಡಿಕೊಂಡ.

"ಆಯ್ತೇನೋ ತೊಗೋ ದುಡ್ಡು!" ವರದಾಚಾರಿ ಕೂಗಿದ. ವೀರಭದ್ರ ಅವನ ಕೈಯಿಂದ ದುಡ್ಡು ತೆಗೆದುಕೊಂಡ.

"ನಾನು ಸ್ನಾನಮಾಡಿ ಪೂಜೆಗೆ ಕುತ್ಕೊತೀನಿ ತೊಂದರೆ ಮಾಡಬೇಡಾ. ತಂದಿದ್ದನ್ನು ಗಲಾಟೆ ಮಾಡದೇ ಪೂಜೆಯ ಸಾಮಾಗ್ರಿಗಳ ಮಧ್ಯೆ ಇಟ್ಬಿಡೂ, ನ್ಮೈಮೇಲೆ ಶಕ್ತಿ ಬಂದಿರುತ್ತೆ, ಅದ್ಕೆ ರೇಗಿಸಿದ್ರೆ ನೀನು ನಾಶವಾಗಿಹೋಗ್ತಿ!"

ವೀರಭದ್ರ ಮೌನವಾಗಿ ತಲೆಯಾಡಿಸಿ ಹೊರಟ. ಆದರೆ ಅವನೊಳಗೆ ಬೆಂಕಿ ಹೊಗೆಯಾಡುತ್ತಿತ್ತು. ತನ್ನನ್ನು ಹಿಂಸಿಸಿ, ಸಾಯುಸುತ್ತಾನಲ್ಲ! ತನಗೆ ಹಣ ಕೊಡದೆ ಮೋಸ ಮಾಡಿದನಲ್ಲಾ! ಅಷ್ಟು ದೂರ ಹೋಗಿ ನಿಂತು

ಮತ್ತೆ ಮೆಲ್ಲನೇ ಹೆಜ್ಜೆಯಿಟ್ಟು ಮನೆಯ ಒಳಗೆ ಬಂದು ನಿಂತು ಸಣ್ಣ ಕಿಟಕಿಯಲ್ಲಿ ಇಣುಕಿದ. ವರದಾಚಾರಿ ಪೂಜೆಮಾಡುವ ಜಾಗದಲ್ಲಿ ಏನನ್ನೊ ಅಗೆಯುತ್ತಿದ್ದ. ಅಲ್ಲೇಕೆ ಅಗೆಯುತ್ತಿದ್ದಾನೆ. ಏನನ್ನು ಅಗೆಯುತ್ತಿದ್ದಾನೆ? ಕುತೂಹಲದಿಂದ ನಿಂತು ನೋಡಿದ. ಅಗೆದ ಮಣ್ಣು ಹೊರತೆಗೆದು ಒಳಗಿನಿಂದ ಸಣ್ಣ ಪೆಟ್ಟಿಗೆಯೊಂದನ್ನು ತೆಗೆದು ನೋಡಿದ. ಆ ಪೆಟ್ಟಿಗೆಯಲ್ಲೇ ಅವನು ಚಿನ್ನ, ಬೆಳ್ಳಿ, ಹಣ ಅಡಗಿಸಿಟ್ಟಿರಬೇಕು! ಅದನ್ನು ತಾನು ಕದಿಯಬೇಕು! ಜಾಗ ತಿಳಿಯಿತಲ್ಲಾ! ಮತ್ತೆ ಮೆಲ್ಲನೇ ಅಂಗಡಿಯತ್ತ ನಡೆದ.

ವೀರಭದ್ರ ಕೋಳಿಗಳನ್ನು ಹಸಿಮಾಂಸವನ್ನು ತಂದು ಪೂಜಾ ಸಾಮಾಗ್ರಿಗಳ ಮಧ್ಯೆ ಇಟ್ಟ. ವರದಾಚಾರಿ ಬರಿಯ ನೆಲ್ಲದಲ್ಲಿ ಕಣ್ಮುಚ್ಚಿ ಕುಳಿತು ಏನನ್ನೊ ಮಣಮಣ ಹೇಳುತ್ತಿದ್ದ. ವೀರಭದ್ರ ನೋಡಿದ ಪೆಟ್ಟಿಗೆ ಅಲ್ಲಿರಲಿಲ್ಲ. ಅಗೆದ ಜಾಗವನ್ನು ಹೂವು, ಕುಂಕುಮ. ವಿಭೂತಿಗಳಿಂದ ತುಂಬಿದ್ದ ವೀರಭದ್ರ ಕಣ್ಣಲ್ಲಿ ಕಣ್ಣಾಗಿ ಅಲ್ಲೇ ಕುಳಿತ. ತಾನು ಬಚ್ಚಿಟ್ಟಿರುವ ವಸ್ತುಗಳನ್ನು ತಂದು ಎಲ್ಲಾದರೂ ಮೂಲೆಯೊಂದರಲ್ಲಿ ಮನೆಯಲ್ಲಿಟ್ಟು ಬಿಡಬೇಕು. ಅದು ಸಿಕ್ಕಿದ ಸಂತಸದಿಂದ ವರದಾಚಾರಿ ಹೊರಗೆ ಹೋದಾಗ ಪೆಟ್ಟಿಗೆಯನ್ನು ಕದ್ದುಕೊಂಡು ಓಡಿಹೋಗಿ ಬಿಡಬೇಕು! ಮೈಮರೆತು ವರದಾಚಾರಿ ಪೂಜೆಯಲ್ಲಿದ್ದುದೇ ಗಮನಿಸಿ ಮೆಲ್ಲನೇ ಹೊರಗೆ ಹೊರಟು, ಗಿಡದ ಬುಡದಲ್ಲಿ ಅಡಗಿಸಿಟ್ಟಿದ್ದ ಆ ಬಟ್ಟೆಯ ಗಂಟನ್ನು ಕೈಗೆತ್ತಿಕೊಂಡು ಬಂದು ವರದಾಚಾರಿ ಮಲಗುತ್ತಿದ್ದ ದಿಂಬಿನ ಕೆಳಗಿಟ್ಟು ಏನೂ ತಿಳಿಯದಂತೆ ಕುಳಿತ. ಮಧ್ಯರಾತ್ರಿಯವರೆಗೂ ಪೂಜೆ ಮಾಡಿ ಕೋಳಿಗಳನ್ನು ಹಸಿಮಾಂಸವನ್ನು ನೈವೇದ್ಯಮಾಡಿ ರಕ್ತವನ್ನು ಮನೆಗೆಲ್ಲಾ ಚುಮುಕಿಸಿ ಏನೋ ಮಂತ್ರ ಹೇಳುತ್ತಾ ಹೊರನಡೆದ ವೀರಭದ್ರ ಅವನಲ್ಲಿಗೆ ಹೋಗುವನೆಂದು ತಿಳಿಯಲಾಗಲಿಲ್ಲ. ಹೋದರೆ ಹೋಗಲಿ, ತನ್ನ ಕೆಲಸ ಸುಲಭವಾಗುತ್ತದೆ! ವರದಾಚಾರಿ ಕಣ್ಮರೆಯಾಗುವವರೆಗೆ ಕಾದು ಕುಳಿತ.

* * * *

ವರದಾಚಾರಿ ಕಣ್ಮರೆಯಾದ ಮೇಲೆ ವೀರಭದ್ರ ಮೆಲ್ಲನೇ ಪೂಜಾ ಗೃಹದತ್ತ ಬಂದು ಪೂಜೆ ಮಾಡಿದ ಜಾಗದಲ್ಲಿ ಕೈಯಾಡಿಸಿದ. ಹೂವು, ವಿಭೂತಿ, ಕುಂಕುಮವನ್ನು ಸರಿಸಿದ. ಕೆತ್ತಿದ್ದ ಮಣ್ಣನ್ನು ಕೈಯಿಂದಲೇ

ಎತ್ತಿ ಹೊರಹಾಕಿದ. ಪೆಟ್ಟಿಗೆಗಾಗಿ ತಡಕಾಡಿದ. ಪೆಟ್ಟಿಗೆ ಕೈಗೆ ತಾಗುತ್ತಲೇ ಅವನಿಗೆ ಮಿಂಚು ಹೊಡೆದಂತಾಯಿತು. ಅದನ್ನೆತ್ತಿ ಕಂಕುಳಲ್ಲಿ ಸೇರಿಸಿದ. ಅಗೆದ ಜಾಗವನ್ನು ಮತ್ತೆ ಕುಂಕುಮ, ವಿಭೂತಿ ಹೂವಿನಿಂದ ಮುಚ್ಚಿದ. ಹೊರಗೆ ರಾತ್ರಿಯ ಕತ್ತಲು ದಟ್ಟವಾಯಿತು. ಈಗಲೇ ಓಡಿಹೋಗಿಬಿಡಬೇಕು. ಕಾಲು ಬೇರೆ ನೋಯುತ್ತಿದೆ. ವರದಾಚಾರಿ ಬರುವ ಮುನ್ನ ಹೋಗಿಬಿಡಬೇಕು. ಆದರೆ ಮೊದಲು ಪೆಟ್ಟಿಗೆಯಲ್ಲೇನಿದೆ ನೋಡಬೇಕು! ಮೆಲ್ಲನೇ ಪೆಟ್ಟಿಗೆಯ ಮುಚ್ಚಳ ತೆಗೆದ. ಅವನೆದೆ ಹಾರಿತು. ಒಳಗೆ ಹಳದಿ ಬಣ್ಣದ ಸಿಲ್ಕಿನ ಬಟ್ಟೆ ಮಾತ್ರ ಇತ್ತು. "ವರದಾಚಾರಿ ಇಲ್ಲಿದ್ದ ಹಣ ಒಡವೇನೂ ದೋಚಿಕೊಂಡ್ನಾ?" ಅವನೆದೆಯಲ್ಲಿ ಬೆಂಕಿ ಭುಗಿಲೆದ್ದಿತು. ರೋಷದಲ್ಲಿ ಪೆಟ್ಟಿಗೆಯನತ್ತ ಎಸೆದ. ಉರಿಯುತ್ತಿದ್ದ ಕಂದೀಲನ್ನು ಕಾಲಿನಿಂದ ಒದೆದ. ಒಳಗಿನಿಂದ ಸೀಮೆಎಣ್ಣೆ ತಂದು ಮನೆಯಲ್ಲೆಲ್ಲಾ ಚೆಲ್ಲಾಡಿದ. ಕಂದೀಲಿನ ಪುಟ್ಟ ಬೆಂಕಿ ನಾಲಿಗೆ ಚಾಚಿ ಉರಿಯಲಾರಂಭಿಸಿದಾಗ ತೆರೆದ ಬಾಗಿಲಿನಿಂದ ಹೊರ ನಡೆದ, ಕತ್ತಲಲ್ಲಿ ಕರಗಿಹೋದ.

ಸ್ಮಶಾನದಲ್ಲಿನ ಪೂಜೆ ಮುಗಿಸಿ ವರದಾಚಾರಿ ಬರುವ ವೇಳೆಗೆ ಅವನ ಮನೆ ಹೊತ್ತಿಕೊಂಡು ಉರಿಯುತ್ತಿತ್ತು. ಸುತ್ತಮುತ್ತಲಿನ ಜನ ಬೊಬ್ಬೆಯಿಡುತ್ತಿದ್ದರು.

"ಅಯ್ಯೋ, ನನ್ನ ಮನೆ ಸುಟ್ಟು ಹೋಯ್ತಲ್ಲಾ! ನನ್ನ ಪೂಜಾ ಸಾಮಾಗ್ರಿಗಳೆಲ್ಲಾ ಸುಟ್ಟು ಬೂದಿಯಾಯಿತಲ್ಲಪ್ಪೋ!!" ವರದಾಚಾರಿ ತಲೆತಲೆ ಚಚ್ಚಿಕೊಂಡು ಕೂಗಲಾರಂಭಿಸಿದ. ಒಳಗಿದ್ದ ಎಲ್ಲಾ ವಸ್ತುಗಳೂ ಬೂದಿಯಾಗಿದ್ದವು. ಗಂಗೆಯ ಅಂಗಾಂಗಗಳು, ಭೂತಾ ಎಲ್ಲಾ ಬೂದಿಯಾಗಿತ್ತು.

ವರದಾಚಾರಿಯನ್ನು ಜನ ಸಮಾಧಾನ ಮಾಡುವ ಹೊತ್ತಿಗೆ ಸಾಕಾಗಿತ್ತು. ಅವನು ಅರೆಹುಚ್ಚನಂತಾಗಿದ್ದ. ಎದೆಎದೆ ಬಡಿದುಕೊಂಡು ರಸ್ತೆಗಿಳಿದ.

* * * *

"ಅಮ್ಮಾ ಮಹಾ ಮಂಗಳಾರತಿ ಮಾಡ್ತಾ ಇದ್ದೀನಿ ಬನ್ನಿ" ಶಾಸ್ತ್ರಿಗಳು ಕರೆದಾಗ ಲಲಿತಮ್ಮ ಅತ್ತ ಧಾವಿಸಿದರು. ಸಧ್ಯ ಶಾಸ್ತ್ರಿಗಳು ಮಾತಾಡಿದರಲ್ಲಾ. ಮಂಗಳಾರತಿಯಾದ ಮೇಲೆ ಅವರು ಹಾಲು ಹಣ್ಣು ತೆಗೆದುಕೊಂಡರೆ ನೀರು

ಇದ್ದಲ್ಲಿ ನಿಷ್ಠೆಯಿಂದ ಅಮ್ಮನವರ ಪೂಜೆ ಮಾಡಿದ ಮೇಲೆ ಖಂಡಿತ ಫಲ ದೊರಕೇ ದೊರಕುತ್ತದೆ !

ನರ್ಸಿಂಗ್ ಹೋಂನಲ್ಲಿ ಗಾಢ ನಿದ್ರೆಯಲ್ಲಿದ್ದ ನೂಪುರ ಒಮ್ಮೆಗೆ ಬೆಚ್ಚಿ ಎದ್ದು ಕುಳಿತಳು. ಬೆನ್ನ ಹುರಿಯಲ್ಲಿ ಏನೋ ಚಳಕು ಬಂದಂತಾಯಿತು. ಮೆಲ್ಲನೇ ಚೀರಿದಳು. ನರ್ಸ್ ಓಡಿ ಬಂದಳು.

"ಯಾಕೆ ಏನಾಯ್ತು ?"

"ಬೆನ್ನು, ಸೊಂಟ ನೋವು !"

ಡಾಕ್ಟರ್ ಓಡಿ ಬರುವ ವೇಳೆಗೆ ಅವಳಿಗೆ ರಕ್ತಸ್ರಾವವಾಗತೊಡಗಿತು.

"ಸಿಸ್ಟರ್ ಬೇಗ ಲೇಬರ್ ವಾರ್ಡಿಗೆ ಕರ್‍ಕೊಂಡು ಬನ್ನಿ... !"

ಅರ್ಧಗಂಟೆಯೊಳಗೆ ನೂಪುರಳಿಗೆ ಗರ್ಭಪಾತವಾಗಿಹೋಯಿತು. ಡಾಕ್ಟರ್ ಚಿದಂಬರ್ ವರ್ಧಮಾನನಿಗೆ ಫೋನು ಮಾಡಿ ಕರೆಸಿದರು.

"ಸಾರಿ ವರ್ಧಮಾನ್, ನಾವು ಎಷ್ಟೋ ಪ್ರಯತ್ನಪಟ್ಟೆವು, ಆಗಲಿಲ್ಲ. ಹೋಗಲಿ ಬಿಡಿ, ಒಂದೆರಡು ತಿಂಗಳು ಚೆನ್ನಾಗಿ ರೆಸ್ಟ್ ತೊಗೊಳ್ಳಿ, ಎಲ್ಲಾದ್ರೂ ಬೇರೆ ಊರಿಗೆ ಕರ್‍ಕೊಂಡು ಹೋಗಿ ಬನ್ನಿ. ಅವರಿಗೂ ಸ್ಥಳ ಬದಲಾವಣೆಯಾಗಲಿ....ಷಿ ವಿಲ್ ಬಿ ಫರ್‌ಫೆಕ್ಟಲೀ ಆಲ್ ರೈಟ್... ಆಮೇಲೆ ಇನ್ನೊಂದಾಗತ್ತೆ ! ಇನ್ನೂ ಚಿಕ್ಕ ವಯಸ್ಸು. ಮುಂದಿನ ವರ್ಷದ ಹೊತ್ತಿಗೆ ಮಗು, ಆಗಲಿಬಿಡಿ !"

ವರ್ಧಮಾನ ನಿಟ್ಟುಸಿರುಬಿಟ್ಟ. "ನನಗೆ ಮಗುವಿಗಿಂತ ಅವಳು ಸರಿ ಹೋದರೆ ಸಾಕು !"

"ಸರಿ ಹೋಗಿದ್ದಾಳೆ. ಆದರೆ ಮನಸ್ಸು ಇನ್ನೂ ಮೆದುವಾಗಬೇಕು. ಇಲ್ಲಿ ಒಂದು ವಾರ ಇರಲಿ, ಆಮೇಲೆ ಡಿಚ್ಚಾರ್ಜ್ ಮಾಡ್ತೀವಿ. ಮನೆಗೆ ಕರ್‍ಕೊಂಡು ಹೋಗಬಹುದು ! ಬನ್ನಿ ನೋಡಿವಿರಂತೆ, ಎಚ್ಚರ ಬಂದಿದೆ !"

ಡಾ|| ಚಿದಂಬರ್ ವರ್ಧಮಾನನನ್ನು ಒಳಕೋಣೆಗೆ ಕರೆದೊಯ್ದು, ಅಲ್ಲಿಂದ ಲೇಬರ್ ವಾರ್ಡಿಗೆ ಕರೆದೊಯ್ದರು. ಮಂಚದ ಮೇಲೆ ನೂಪುರ ಕಣ್ಣುಮುಚ್ಚಿಕೊಂಡು ಮಲಗಿದ್ದಳು.

"ನೂಪುರ, ನೋಡು ಯಾರು ಬಂದಿದ್ದಾರೆ !"

ನೂಪುರ ನಿಧಾನವಾಗಿ ಕಣ್ತೆರೆದಳು. ಎದುರಿಗೆ ನಿಂತಿದ್ದ ವರ್ಧಮಾನನನ್ನು ನೋಡಿದಾಗ ಅವಳ ಕಣ್ಣುಗಳು ಮಿಂಚಿದವು. ಕೆನ್ನೆ

ಕೆಂಪೇರಿತು, ತುಟಿಗಳಲ್ಲಿ ಕಿರುನಗೆ ಮೂಡಿತು, ವರ್ಧಮಾನ ಅವಳ ಕೈಯನ್ನು ಕೈಯಲ್ಲಿ ಹಿಡಿದು ಹೇಳಿದ....

"ಮುಂದಿನವಾರ ಡಿಸ್ಚಾರ್ಜ್ ಮಾಡ್ತಾರಂತೆ !"

"ಸಧ್ಯ ಮನೆಗೆ ಹೋದ್ರೆ ಸಾಕಾಗಿದೆ ನಂಗೆ !" ನೂಪುರ ಹೇಳಿದಾಗ ಅವಳ ದನಿಯೇ ಹೊಸದಾಗಿತ್ತು. ಮದುವೆಗೆ ಮುಂಚೆ ಅವಳು ತನ್ನೊಡನೇ ಮಾತಾಡಿದಂತಿತ್ತು.

"ಒಂದು ತಿಂಗಳು ಎಲ್ಲಾದರೂ ಹೋಗಿ ಬರೋಣ- ಬರ್ತೀಯಾ ?"

ನೂಪುರ ನಸುನಕ್ಕಳು-"ಹೌದು ನಂಗೂ ಬೇಜಾರು, ಎಲ್ಲಾದರೂ ಹೋಗೋಣ....!" ಅವಳ ನಗುವಿನಲ್ಲಿ ಏನೋ ಮಾದಕತೆಯಿತ್ತು. ಆ ಮಾದಕತೆಗಲ್ಲವೇ ನಾನು ಸೋತಿದ್ದು ! ವರ್ಧಮಾನ ಬಾಗಿ ಅವಳ ಮುಂದಲೆ ನೇವರಿಸಿದ. "ಹಾಗಾದರೆ ಬೇಗ ವಾಸಿ ಮಾಡ್ಕೊ"

"ನಂಗೇನಾಗಿದೆ ? ಮೈಯ್ಯಿಳಿದುಹೋಯ್ತು ಅಷ್ಟೆ !"

ಡಾಕ್ಟರ್ ಚಿದಂಬರ್ ವರ್ಧಮಾನನ ಬೆನ್ನು ತಟ್ಟಿದರು, "ನಾನು ಹೊರಟೆ. ಒಂದೆರಡು ಕೇಸುಗಳನ್ನು ಅಟೆಂಡ್ ಮಾಡ್ಬೇಕು. ನೀವು ಗಂಡ ಹೆಂಡತಿ ಅದೇನ್ ಮಾತಾಡ್ಬೇಕೋ, ನಿಮ್ಮ ಏಕಾಂತಕ್ಕೆ ನಾನಡ್ಡಿ ಬರೊಲ್ಲ !" ನಗುತ್ತ ವಾರ್ಡಿನಿಂದ ಹೊರಬಿದ್ದರು, ಅವರತ್ತ ಹೋಗುತ್ತಲೇ ವರ್ಧಮಾನ ನೂಪುರಳ ಕೆನ್ನೆಗೆ ಮುತ್ತಿಟ್ಟ.

"ನೂಪುರ, ನಿನ್ನ ನಾನು ತುಂಬಾ ಪ್ರೀತಿಸುತ್ತೇನೆ, ನಿನಗೇನೂ ಆಗದಂತೆ ನನ್ನ ಹೃದಯದಲ್ಲಿ ಮುಚ್ಚಿಟ್ಟುಕೊಂಡು ನೋಡಿಕೊಳ್ಳುತ್ತೇನೆ ! ಆ ಮನೆ ಬೇಡ, ಬೇರೆ ಮನೆಕೊಂಡು ಅಲ್ಲಿಗೆ ಹೋಗೋಣ"

ನೂಪುರ ನಾಚಿ ಕಣ್ಣೆವೆ ಕೆಳಗೆ ಮಾಡಿದಳು.

"ಹೌದು, ಆ ಮನೆ ಬೇಡ. ಬೇರೆ ಮನೆಗೆ ಹೋಗೋಣ"

ಲಲಿತಮ್ಮ ಶಾಸ್ತ್ರಿಗಳಿಗೆ ಫಲತಾಂಬೂಲ ಕೊಟ್ಟು ಕಳುಹಿಸಿದರು. "ಶಾಸ್ತ್ರಿಗಳೇ ನೀವು ಇರೋತನ್ಕ ನಮ್ಮನೇಲಿ ಏನೂ ಕೆಟ್ಟದಾಗೋಲ್ಲ"

ವರ್ಧಮಾನ ಆ ಹೊತ್ತಿಗೆ ಅಲ್ಲಿಗೆ ಬಂದ. ವರ್ಧಮಾನನ, ಅರಳಿದ್ದ ಮುಖ, ಅವನ ಮುಗುಳ್ನಗು ಕಂಡ ಲಲಿತಮ್ಮನ ಮನಸ್ಸು ಹಿಗ್ಗಿತು.

"ಹೇಗಿದ್ದಾಳೋ ನೂಪುರ ?"

"ಚೆನ್ನಾಗಿದ್ದಾಳೆ, ಗರ್ಭಪಾತವಾಗಿಹೋಯ್ತು. ಒಳ್ಳೇದಾಯ್ತು ಬಿಡಮ್ಮಾ ಆಮೇಲೆ ಮಕ್ಕಳಾಗೊಲ್ವ ? ಒಂದು ವಾರದಲ್ಲಿ ಡಿಸ್ಚಾರ್ಜ್

ಮಾಡ್ತಾರೆ. ನಾನು ಅವಳು ಒಂದು ತಿಂಗಳು ಯುರೋಪ್ ಪ್ರವಾಸ ಮುಗಿಸಿ ಬರ್‍ತೀವಿ. ಅಷ್ಟರಲ್ಲಿ ಬೇರೆ ಮನೆ ನೋಡು. ಈ ಮನೆ ಮಾರಿಬಿಡೋಣ !"

"ಹೌದು, ಹಾಗೇ ಮಾಡಿ. ದೇವರು ಒಳ್ಳೆಯದು ಮಾಡಲಿ !" ಶಾಸ್ತ್ರಿಗಳೆಂದಾಗ ವರ್ಧಮಾನ ಅವರ ಕಾಲುಮುಟ್ಟಿ ನಮಸ್ಕರಿಸಿದ.

"ಎಲ್ಲಾ ಹಿರಿಯರ, ನಿಮ್ಮ ಆಶೀರ್ವಾದ ಶಾಸ್ತ್ರಿಗಳೇ."

* * * *

ಎರಡು ವರ್ಷಗಳು ಸಂದಿವೆ, ನೂಪುರ ವರ್ಧಮಾನರಿಗೆ ಒಬ್ಬ ಮುದ್ದಾದ ಮಗನಿದ್ದಾನೆ. ಲಲಿತಮ್ಮ ಮೊಮ್ಮಗನ ಲಾಲನೆ ಪಾಲನೆಯಲ್ಲಿ ಮುಳುಗಿ ಮನೆಯ ಸಮಸ್ತ ಜವಾಬ್ದಾರಿ ನೂಪುರಳ ಕೈಗಿತ್ತಿದ್ದಾರೆ. ರಾಮಲಿಂಗಯ್ಯನವರು ಯಥಾಸ್ಥಿತಿಯಲ್ಲಿದ್ದರೂ ಪ್ರಸನ್ನಚಿತ್ತರಾಗಿದ್ದಾರೆ. ಹೊಸ ಮನೆ ಚಿಕ್ಕದಾಗಿದ್ದರೂ ಅದರಲ್ಲಿ ಸಂತಸ ತುಂಬಿ ತುಳುಕಾಡುತ್ತಿದೆ.

ಆಗಾಗ ದಾರಿಯಲ್ಲಿ ಹುಚ್ಚನೊಬ್ಬ ಎದೆ ಎದೆ ಬಡಿದುಕೊಂಡು ತಿರುಗಾಡುತ್ತಿರುತ್ತಾನೆ, ಕೆಲವರು ಅವನು ವಾಮಾಚಾರಿಯಾಗಿದ್ದ ವರದಾಚಾರಿ ಎನ್ನುತ್ತಾರೆ

ಡಾಕ್ಟರ್ ಚಿದಂಬರ್ ತಮ್ಮಲ್ಲಿ ಸಲಹೆಗೆ ಬಂದವರಿಗೆ ಹೇಳುತ್ತಾರೆ. ಮನಸ್ಸಿನ ಆಳ ಅಗಾಧ, ಅದೊಂದು ಮರ್ಕಟವಾದಾಗ ಅದನ್ನು ಹಿಡಿತದಲ್ಲಿಟ್ಟು ಕೊಳ್ಳಲು ಯತ್ನಿಸಿದರು ವಿಜ್ಞಾನವೂ ಮುಂದುವರೆದಿದೆ, ಮಾನವನಿಗೆ ಆಗದ ಕೆಲಸವಲ್ಲ.

ಶಾಸ್ತ್ರಿಗಳು ಹೇಳುತ್ತಾರೆ, ಭಗವಂತನಲ್ಲಿ ಅನನ್ಯ ಭಕ್ತಿ ಇಟ್ಟು ಪೂಜಿಸಿದರೆ ಎಲ್ಲವೂ ಸರ್ವಮಂಗಳಕರವಾಗುವುದು.

"ವರದಾಚಾರಿ ಮನೆಯೆಲ್ಲಾ ಸುಟ್ಹೋಯ್ತು. ಅದರೊಂದಿಗೆ ಅವನ ದುಷ್ಟಶಕ್ತಿಗಳು ನಾಶವಾಗೋಯ್ತು. ಅದಕ್ಕೇ ನೂಪುರ ಸರಿ ಹೋದಳು" ಎನ್ನುತ್ತಾರೆ ಕಾವೇರಮ್ಮ ಸಂಜೀವಯ್ಯ. ವರ್ಧಮಾನ, ನೂಪುರಳ ತಲೆ ಸವರಿ ಹೇಳುತ್ತಾನೆ ; "ಮನವೆಂಬುದು ಒಂದು ಮರ್ಕಟದಂತೆ."

**
**



894.814 3083
N89
ಗ್ರಂಥ ಸ್ವಾಮ್ಯ ವಿಭಾಗ



894.814 3083
Sri N89
ಗ್ರಂಥ ಸ್ವಾಮ್ಯ ವಿಭಾಗ